ಬುಧವಾರ, ಡಿಸೆಂಬರ್ 25, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 356 | ಪುಟ 16

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ತಂತ್ರಜ್ಞಾನ
ವಾಹನಗಳ ದೇಹವು ದೃಢವೂ, ಹಗುರವೂ ಆಗಿರುವ ತಂತ್ರಜ್ಞಾನವೊಂದು ಸಂಶೋಧನೆಗೊಂಡಿದೆ.



‘ಗಾಂಧಿ ಭಾರತ’: ಅಂದಾಜು ₹20 ಕೋಟಿ ವೆಚ್ಚ 5

ಕ್ರಿಸ್‌ಮಸ್ ಶುಭಾಶಯಗಳು

ಸೆನ್ಸೆಕ್ಸ್	ನಿಫ್ಟಿ	₹/$
78,472 ▼	23,727 ▼	85.15 ▼

ಹೈಕೋರ್ಟ್ ಆದೇಶದ ಬೆನ್ನಲ್ಲೇ ‘ಮಹಾನಗರ’ ತೊರೆದ ಸಬ್‌ರಿಜಿಸ್ಟ್ರಾರ್‌ಗಳು

90 ಅಧಿಕಾರಿಗಳ ಎತ್ತಂಗಡಿ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕಾನೂನು ಹೋರಾಟದ ಜಟಾಪಟಿಯ ನಡುವೆಯೇ ಬೆಂಗಳೂರು ಹಾಗೂ ರಾಜ್ಯದ 10 ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿ ದೀರ್ಘಕಾಲದಿಂದ ಠಿಕಾಣಿ ಹೂಡಿದ್ದ ಉಪ ನೋಂದಣಾಧಿಕಾರಿಗಳನ್ನು ಸರ್ಕಾರ ವರ್ಗಾವಣೆ ಮಾಡಿದೆ.

ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ನಡೆಯುತ್ತಿದ್ದ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕಲು ಕಾವೇರಿ–2 ತಂತ್ರಾಂಶ ಅಳವಡಿಕೆ ಸೇರಿದಂತೆ ಹಲವು ಸುಧಾರಣಾ ಕ್ರಮಗಳನ್ನು ಕಂದಾಯ ಇಲಾಖೆ ಕೈಗೊಂಡಿದೆ. ದೊಡ್ಡ ನಗರಗಳಲ್ಲಿ ಹಲವು ವರ್ಷಗಳಿಂದ ಕುಳಿತು ಭೂಮಾಫಿಯಾ ಜತೆ ಶಾಮೀಲಾಗಿ ಅವ್ಯವಹಾರ ನಡೆಸುತ್ತಿದ್ದ ಆರೋಪ ಹೊತ್ತಿದ್ದ ಉಪ ನೋಂದಣಾಧಿಕಾರಿಗಳು ಹಾಗೂ ಕಚೇರಿಯ ಇತರೆ ಸಿಬ್ಬಂದಿಯನ್ನು ವರ್ಗಾವಣೆ ಮಾಡಲು ನಿರ್ಧರಿಸಿತ್ತು.

9ನೇ ಪುಟ ನೋಡಿ

ಅಂಗವಿಕಲ ಅಧಿಕಾರಿಗಳಿಗೆ ವಿನಾಯಿತಿ

ನೋಂದಣಿ ಇಲಾಖೆಯ ನೌಕರರ ವರ್ಗಾವಣೆಗೆ ರಾಜ್ಯ ಸರ್ಕಾರ ರೂಪಿಸಿದ ಹೊಸ ನಿಯಮಾವಳಿಯಲ್ಲಿ ಅಂಗವಿಕಲ ಅಧಿಕಾರಿಗಳು, ಕೇಂದ್ರ ಸ್ಥಾನ ಸಹಾಯಕರಿಗೆ ವಿನಾಯಿತಿ ನೀಡಿರಲಿಲ್ಲ. ಕಂದಾಯ ಇಲಾಖೆ ಜುಲೈ 31ರಂದು ಹೊರಡಿಸಿರುವ ಆದೇಶದಲ್ಲೂ ಮಾಹಿತಿ ಇರಲಿಲ್ಲ.

ಕರ್ನಾಟಕ ಸರ್ಕಾರದ ಸಾರ್ವತ್ರಿಕ ವರ್ಗಾವಣೆ ನಿಯಮ–2013ಕ್ಕೆ ತಿದ್ದುಪಡಿ ತಂದು ಇದೇ ಜೂನ್ 12ರಂದು ಹೊರಡಿಸಿದ್ದ ಹೊಸ ಆದೇಶದಲ್ಲೂ ಅಂಗವಿಕಲ ಅಧಿಕಾರಿಗಳು, ನೌಕರರಿಗೆ ಅಥವಾ ಅವಲಂಬಿತ ಕುಟುಂಬದ ಸದಸ್ಯರು ಅಂಗವಿಕಲರು ಇದ್ದಲ್ಲಿ ಅಂಥವರಿಗೆ ಹಲವು ವಿನಾಯಿತಿ ನೀಡಲಾಗಿದೆ. ಯಾವುದೇ ಇಲಾಖೆಯಲ್ಲಿ ಒಂದು ಸ್ಥಳದಲ್ಲಿ ಕೆಲಸ ಮಾಡುತ್ತಿರುವವರಿಗೆ ಸೇವಾ ಹಿರಿತನದ ಆಧಾರದಲ್ಲಿ ವರ್ಗಾವಣೆಗೆ ಅರ್ಹರಾಗಿದ್ದಲ್ಲಿ ಅಂಥವರಿಗೆ ತಾವು ಬಯಸಿದ ಸ್ಥಳವನ್ನು ಆಯ್ಕೆ ಮಾಡಿಕೊಳ್ಳಲು ಪ್ರಾಶಸ್ತ್ಯ ನೀಡಬೇಕು. ಅನುಕೂಲಕರ ಸ್ಥಳಗಳನ್ನು ನೀಡಲು ಕ್ರಮ ಕೈಗೊಳ್ಳಬೇಕು ಎಂಬ ಅಂಶಗಳನ್ನು ಕೋರ್ಟ್ ಎತ್ತಿಹಿಡಿದಿದೆ. ಹಾಗಾಗಿ, ಅವರನ್ನು ವರ್ಗಾವಣಾ ಪ್ರಕ್ರಿಯೆಯಿಂದ ತಾತ್ಕಾಲಿಕವಾಗಿ ಕೈಬಿಡಲಾಗಿದೆ.

ಪ್ರಜಾವಾಣಿ ವಿಶೇಷ

> **ವರ್ಗಾವಣೆಯಾದ ಅಧಿಕಾರಿಗಳು ತಕ್ಷಣ ವರದಿ ಮಾಡಿಕೊಳ್ಳಬೇಕು. ನೋಂದಣಿ ಕಾರ್ಯಕ್ಕೆ ಅಡೆತಡೆಯಾಗದಂತೆ ಲಾಗಿನ್ ಐಡಿ ಒದಗಿಸಬೇಕು ಎಂದು ಜಿಲ್ಲಾ ನೋಂದಣಾಧಿಕಾರಿಗಳಿಗೆ ಸೂಚಿಸಲಾಗಿದೆ**
> **ಕೆ.ಎ. ದಯಾನಂದ,** ನೋಂದಣಿ ಮಹಾಪರಿವೀಕ್ಷಕರು

257 ಒಟ್ಟು ಉಪ ನೋಂದಣಾಧಿಕಾರಿ ಕಚೇರಿಗಳು
51 ಬಿಎಂಆರ್‌ಡಿಎ ವ್ಯಾಪ್ತಿಯ ಕಚೇರಿಗಳು
17 ಮಹಾನಗರ ಪಾಲಿಕೆಗಳ ವ್ಯಾಪ್ತಿಯ ಕಚೇರಿಗಳು
90 ‘ಮಹಾನಗರ’ ವ್ಯಾಪ್ತಿಯಲ್ಲಿ ವರ್ಗಾವಣೆಗೊಂಡ ಅಧಿಕಾರಿಗಳು

ಚಿನಕುರುಳಿ

ಪ್ರಕಾಶ್ ಶೆಟ್ಟಿ

‘ಸಿ.ಟಿ. ರವಿ ಪ್ರಕರಣ ಸಿಐಡಿ ತನಿಖೆಗೆ’

ಪ್ರಜಾವಾಣಿ ವಾರ್ತೆ

ಜಿ.ಪರಮೇಶ್ವರ

ಹುಬ್ಬಳ್ಳಿ: ‘ಸಿ.ಟಿ. ರವಿ ವಿರುದ್ಧದ ಪ್ರಕರಣ ಬಗ್ಗೆ ಹೆಚ್ಚು ವ್ಯಾಖ್ಯಾನ ಮಾಡುವುದಿಲ್ಲ. ಸಿಐಡಿ ತನಿಖೆ ನಡೆಸುವಂತೆ ಆದೇಶಿಸಲಾಗಿದೆ. ಸತ್ಯಾಸತ್ಯತೆಯನ್ನು ಪರಿಶೀಲಿಸಿ ತನಿಖಾ ಸಂಸ್ಥೆ ವರದಿ ನೀಡಲಿದೆ’ ಎಂದು ಗೃಹ ಸಚಿವ ಜಿ. ಪರಮೇಶ್ವರ ಅವರು ಮಂಗಳವಾರ ಇಲ್ಲಿ ಹೇಳಿದರು.

‘ರವಿ ಅವರು ತಾವು ಅವಾಚ್ಯ ಪದ ಬಳಕೆ ಮಾಡಿಲ್ಲ ಎಂದಿದ್ದಾರೆ. ಅಲ್ಲಿ ನಡೆದಿರುವುದೇ ಬೇರೆ ಎಂದು ಇತರರು ಹೇಳುತ್ತಿದ್ದಾರೆ. ಅವರ ಪಕ್ಕದಲ್ಲಿದ್ದವರೂ ಹೇಳಿಕೆ ನೀಡಿದ್ದಾರೆ. ಎಲ್ಲದರ ಕುರಿತು ತನಿಖೆ ನಡೆಯಲಿದೆ’ ಎಂದರು.

ಈ ಪ್ರಕರಣ ಮುಗಿದ ಅಧ್ಯಾಯ ಎಂದಿರುವ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿಕೆಗೆ ಅವರು ಮಾಧ್ಯಮದವರಿಗೆ ಪ್ರತಿಕ್ರಿಯಿಸಿದರು.

‘ಪೊಲೀಸರು ತಮ್ಮ ಕೆಲಸ ಏನು ಮಾಡಬೇಕೋ ಅದನ್ನು ಮಾಡಿದ್ದಾರೆ. ಸಭಾಪತಿ ತಮ್ಮ ಕೆಲಸ ಮಾಡಿದ್ದಾರೆ. ಪೊಲೀಸ್ ಇಲಾಖೆಗೆ ತನ್ನದೇ ಆದ ಜವಾಬ್ದಾರಿಗಳಿರುತ್ತವೆ. ಏನೇ ಕ್ರಮ ಕೈಗೊಳ್ಳಬೇಕಿದ್ದರೂ ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಆದೇಶ ನೀಡಬೇಕು. ಇಲಾಖೆಯಲ್ಲಿ ಯಾರೂ ಹಸ್ತಕ್ಷೇಪ ಮಾಡಲು ಸಾಧ್ಯವಿಲ್ಲ’ ಎಂದರು.

ರಾಜ್ಯಪಾಲಗೆ ಮಾಹಿತಿ ಕೊಟ್ಟ ಸಭಾಪತಿ: ಪ್ರಕರಣಕ್ಕೆ ಸಂಬಂಧಿಸಿದಂತೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರು ಮಾಹಿತಿ ನೀಡಿದ್ದಾರೆ. ಬೆಳಗಾವಿ ಅಧಿವೇಶನದ ವೇಳೆ ಪರಿಷತ್ತಿನಲ್ಲಿ ನಡೆದ ವಿದ್ಯಮಾನಗಳ ಕುರಿತು ಮಾಹಿತಿ ನೀಡುವಂತೆ ರಾಜ್ಯಪಾಲರು ಸಭಾಪತಿಯನ್ನು ಕೋರಿದ್ದರು. ಸದನದೊಳಗೆ ಹಾಗೂ ಸುವರ್ಣ ವಿಧಾನಸೌಧದ ವ್ಯಾಪ್ತಿಯಲ್ಲಿ ನಡೆದ ಘಟನೆಗಳ ಕುರಿತು ಹೊರಟ್ಟಿ ಅವರು ಮಾಹಿತಿ ರವಾನಿಸಿದ್ದಾರೆ ಎಂದು ಮೂಲಗಳು ಹೇಳಿವೆ.

153.8 ಚ.ಕಿ.ಮೀ. ಅರಣ್ಯ ನಾಶ

ಪಶ್ಚಿಮ ಘಟ್ಟ ಕರಗಿದ ಕಾಡು; ಶಿವಮೊಗ್ಗದಲ್ಲೇ ಅತಿಹೆಚ್ಚು



• ಜಯಸಿಂಹ ಆರ್.

ಬೆಂಗಳೂರು: ಪಶ್ಚಿಮ ಘಟ್ಟದ ಸೆರಗಿನಲ್ಲಿರುವ ರಾಜ್ಯದ ಹತ್ತು ಜಿಲ್ಲೆಗಳ ಪೈಕಿ ಆರರಲ್ಲಿ ಅರಣ್ಯ ನಾಶ ತೀವ್ರವಾಗಿದೆ. 2013ರಿಂದ 2023ರ ನಡುವೆ ಆರು ಜಿಲ್ಲೆಗಳಲ್ಲಿ 153.80 ಚದರ ಕಿ.ಮೀ.ನಷ್ಟು ಅರಣ್ಯ ಪ್ರದೇಶ ಇಲ್ಲವಾಗಿದೆ.

ಕೇಂದ್ರ ಸರ್ಕಾರವು ಈಚೆಗೆ ಬಿಡುಗಡೆ ಮಾಡಿದ ‘ಭಾರತೀಯ ಅರಣ್ಯ ಸ್ಥಿತಿಗತಿ ವರದಿ–2023’ರಲ್ಲಿ ಈ ಮಾಹಿತಿ ಇದೆ. ಹೆಚ್ಚು ಅರಣ್ಯ ನಾಶವಾದ ಜಿಲ್ಲೆಗಳಲ್ಲಿ ಶಿವಮೊಗ್ಗ ಜಿಲ್ಲೆ ಮೊದಲ ಸಾಲಿನಲ್ಲಿದೆ. ಜಿಲ್ಲೆಯಲ್ಲಿ ಒಟ್ಟು 74.54 ಚದರ ಕಿ.ಮೀ., ಕೊಡಗಿನಲ್ಲಿ 33.40 ಚದರ ಕಿ.ಮೀ., ಬೆಳಗಾವಿಯಲ್ಲಿ 24.91 ಚದರ ಕಿ.ಮೀ. ಮತ್ತು ಮೈಸೂರಿನಲ್ಲಿ 15.28 ಚದರ ಕಿ.ಮೀ.ನಷ್ಟು ಅರಣ್ಯ ನಾಶವಾಗಿದೆ. ಹಾಸನ ಮತ್ತು ಚಾಮರಾಜನಗರದಲ್ಲಿ ಅರಣ್ಯದ ವಿಸ್ತೀರ್ಣ ಸ್ವಲ್ಪ ಕುಸಿದಿದೆ.

ಇಷ್ಟೂ ಜಿಲ್ಲೆಗಳಲ್ಲಿ ‘ಅತಿದಟ್ಟಾರಣ್ಯ’ದ ವ್ಯಾಪ್ತಿ ಹತ್ತು ವರ್ಷಗಳಲ್ಲಿ ಹೆಚ್ಚಾಗಿದೆ. ಆದರೆ ‘ದಟ್ಟಾರಣ್ಯ’ದ ವ್ಯಾಪ್ತಿ ಸ್ವಲ್ಪ ಕುಸಿದಿದೆ. ಪಶ್ಚಿಮ ಘಟ್ಟದ ಅಂಚಿನಲ್ಲಿರುವ ‘ಸಾಧಾರಣ ಅರಣ್ಯ’ವು ಜನವಸತಿ ಮತ್ತು ವಾಣಿಜ್ಯ ಬೆಳೆ ಚಟುವಟಿಕೆ ಪ್ರದೇಶಗಳಿಗೆ ಹೊಂದಿಕೊಂಡಿದ್ದು, ಇಲ್ಲೇ ಅತಿಹೆಚ್ಚು ಅರಣ್ಯ ನಾಶವಾಗಿದೆ.

ಮರಗಳ ಹಸಿರಿನ ಹೊದಿಕೆ ಶೇ 10ರಿಂದ ಶೇ40ರಷ್ಟು ಇರುವ ಕಾಡನ್ನು ‘ಸಾಧಾರಣ ಅರಣ್ಯ’ ಎಂದು ವರ್ಗೀಕರಿಸಲಾಗಿದ್ದು, ಪಶ್ಚಿಮ ಘಟ್ಟದ ಶೋಲಾ ಕಾಡುಗಳೂ ಇದರ ವ್ಯಾಪ್ತಿಗೆ ಬರುತ್ತವೆ. ವಾಣಿಜ್ಯ ಬೆಳೆ ಪ್ರದೇಶಗಳಿಗೆ ಹೊಂದಿಕೊಂಡಿರುವ ಈ ಅರಣ್ಯ ಪ್ರದೇಶಗಳಿಗೆ ಆಕ್ರಮಣಕಾರಿ ಸಸ್ಯಪ್ರಬೇಧಗಳು ದಾಟಿಕೊಂಡಿವೆ. ಇದರಿಂದ ಸ್ಥಳೀಯ ಅರಣ್ಯ ಸಸಿ, ಮರ, ಹುಲ್ಲು ಪ್ರಬೇಧಗಳಿಗೆ ಮತ್ತು ವನ್ಯಜೀವಿಗಳಿಗೆ ಕಂಟಕ ಎದುರಾಗಿದೆ ಎಂಬ ವಿವರ ವರದಿಯಲ್ಲಿದೆ.

ಅತಿ ದಟ್ಟಾರಣ್ಯ ಏರಿಕೆ ಸಾಧಾರಣ ಅರಣ್ಯ ಇಳಿಕೆ

ಜಿಲ್ಲೆ	ಅರಣ್ಯ	2013	2023	
ಶಿವಮೊಗ್ಗ	ಅತಿ ದಟ್ಟಾರಣ್ಯ	197.95	453.33	▲
	ದಟ್ಟಾರಣ್ಯ	1,991.21	1,880.65	▼
	ಸಾಧಾರಣ ಅರಣ್ಯ	675.51	456.15	▼
ಕೊಡಗು	ಅತಿ ದಟ್ಟಾರಣ್ಯ	236.80	737.38	▲
	ದಟ್ಟಾರಣ್ಯ	1,126.39	884.35	▼
	ಸಾಧಾರಣ ಅರಣ್ಯ	516.86	224.92	▼
ಬೆಳಗಾವಿ	ಅತಿ ದಟ್ಟಾರಣ್ಯ	16.26	35.03	▲
	ದಟ್ಟಾರಣ್ಯ	555.14	544.42	▼
	ಸಾಧಾರಣ ಅರಣ್ಯ	131.34	98.38	▼
ಮೈಸೂರು	ಅತಿ ದಟ್ಟಾರಣ್ಯ	3.80	108.21	▲
	ದಟ್ಟಾರಣ್ಯ	500.62	415.25	▼
	ಸಾಧಾರಣ ಅರಣ್ಯ	171.92	137.60	▼

ಅಪಘಾತದಲ್ಲಿ ಐವರು ಯೋಧರು ಮೃತ

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಪೂಂಛ್ ಜಿಲ್ಲೆಯಲ್ಲಿ ಗಡಿ ನಿಯಂತ್ರಣ ರೇಖೆ ಬಳಿ ಮಂಗಳವಾರ ಸಂಜೆ ಸಂಭವಿಸಿದ ರಸ್ತೆ ಅಪಘಾತದಲ್ಲಿ ಐವರು ಯೋಧರು ಮೃತಪಟ್ಟಿದ್ದಾರೆ. ಇತರ ಐವರು ಯೋಧರಿಗೆ ಗಾಯಗಳಾಗಿವೆ.

ಗಾಯಾಳುಗಳನ್ನು ಸೇನಾ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಒಬ್ಬ ಯೋಧನ ಸ್ಥಿತಿ ಚಿಂತಾಜನಕವಾಗಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಯೋಧರು ಸೇನಾ ವಾಹನದಲ್ಲಿ ಸಾಗುತ್ತಿದ್ದರು. ವಾಹನವು ಕಿರಿದಾದ ರಸ್ತೆಯಿಂದ ಜಾರಿ ಅಂದಾಜು 150 ಅಡಿ ಆಳದ ಕಮರಿಗೆ ಉರುಳಿತು. ವಾಹನವು ರಸ್ತೆಯಿಂದ ಜಾರಿದ್ದು ಹೇಗೆ ಎಂಬ ಬಗ್ಗೆ ತನಿಖೆ ನಡೆದಿದೆ.



ಕಮರಿಗೆ ಉರುಳಿದ ಸೇನಾ ವಾಹನ ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ — ಪಿಟಿಐ ಚಿತ್ರ

ಚಿನ್ನ ವಾಪಸ್ ಕೊಟ್ಟ ಮಾಜಿ ಸಚಿವ ವರ್ತೂರು ಪ್ರಕಾಶ್

ಬೆಂಗಳೂರು: ಚಿನ್ನಾಭರಣ ಪಡೆದು ಅಂಗಡಿ ಮಾಲೀಕರಿಗೆ ₹2.42 ಕೋಟಿ ವಂಚಿಸಿದ್ದ ಪ್ರಕರಣದ ಸಂಬಂಧ ಮಾಜಿ ಸಚಿವ ವರ್ತೂರು ಪ್ರಕಾಶ್ ಅವರನ್ನು ಪೊಲೀಸರು ಮಂಗಳವಾರ ವಿಚಾರಣೆ ನಡೆಸಿದರು. ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ವಂಚನೆ ಪ್ರಕರಣದಲ್ಲಿ ಬಾಗಲಗುಂಟೆ ನಿವಾಸಿ ಶ್ವೇತಾ ಗೌಡ ಅವರನ್ನು ಬಂಧಿಸಲಾಗಿತ್ತು.

8

ಅಂಬೇಡ್ಕರ್ ಕುರಿತ ಶಾ ಹೇಳಿಕೆ ಖಂಡಿಸಿ ಪ್ರತಿಭಟನೆ, ಪ್ರತಿಕೃತಿ ದಹನ

ಗದಗ, ಕಲಬುರಗಿಯಲ್ಲಿ ಬಂದ್

ಪ್ರಜಾವಾಣಿ ವಾರ್ತೆ

ಕಲಬುರಗಿ/ಗದಗ: ಡಾ.ಬಿ.ಆರ್.ಅಂಬೇಡ್ಕರ್ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ನೀಡಿದ್ದ ಹೇಳಿಕೆ ಖಂಡಿಸಿ ಮಂಗಳವಾರ ಕಲಬುರಗಿ ಮತ್ತು ಗದಗದಲ್ಲಿ ಬಂದ್ ನಡೆಸಲಾಗಿದೆ.

ಕಲಬುರಗಿಯಲ್ಲಿ ನಡೆದ ಪ್ರತಿಭಟನೆಯಲ್ಲಿ ಅಮಿತ್ ಶಾ ಅವರ ಅಣಕು ಶವಯಾತ್ರೆ ನಡೆಸಿ, ಭಾವಚಿತ್ರ ಹಾಗೂ ಪ್ರತಿಕೃತಿ ದಹಿಸಲಾಯಿತು. ಸಂವಿಧಾನ ರಕ್ಷಣಾ ಸಮಿತಿ ನೀಡಿದ್ದ ಕರೆಗೆ ಹಲವು ಸಂಘಟನೆಗಳು ಬೆಂಬಲಿಸಿದವು. ಬೆಳಿಗ್ಗೆ 6ರಿಂದ ಪ್ರತಿಭಟನೆ ಆರಂಭಿಸಿದ ಹೋರಾಟಗಾರರು, ಸಂಜೆ 4ರವರೆಗೆ ಬೈಕ್ ರ‍್ಯಾಲಿ, ಪಾದಯಾತ್ರೆ, ರಸ್ತೆ ತಡೆ ನಡೆಸಿ, ಟೈರ್‌ಗೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು.

ಬಹುತೇಕ ಕಡೆ ವ್ಯಾಪಾರಸ್ಥರು ಸ್ವಯಂಪ್ರೇರಣೆಯಿಂದ ಅಂಗಡಿಗಳನ್ನು ಮುಚ್ಚಿದ್ದರು. ಬಸ್‌ಗಳ ಸಂಚಾರ ಸ್ಥಗಿತಗೊಂಡಿತ್ತು. ಆಟೊ ಸಂಚಾರವೂ ವಿರಳವಾಗಿತ್ತು. ಶಾಲೆಗಳಿಗೆ ರಜೆ ನೀಡಲಾಗಿತ್ತು.

ಶಹಬಜಾರ್‌ನಲ್ಲಿ ಬಡಿಗೆಗಳನ್ನು ಹಿಡಿದ ಯುವಕರ ಗುಂಪೊಂದು ಬಲವಂತವಾಗಿ ಅಂಗಡಿ ಮುಚ್ಚಿಸಿತು. ಕಾಕಡೆ ಚೌಕ್‌ನಲ್ಲಿ ಬೈಕ್, ಬೇಲೂರ ಕ್ರಾಸ್‌ನಲ್ಲಿ ಲಾರಿ ಮೇಲೆ ಪ್ರತಿಭಟನಕಾರರಿಂದ ದಾಳಿ ನಡೆದು, ವಾಹನಗಳು ಜಖಂಗೊಂಡವು. ಎಪಿಎಂಸಿ ಆವರಣಕ್ಕೆ ನುಗ್ಗಿದ ಗುಂಪೊಂದು, ಕಾರ್ಮಿಕ ಮಲ್ಲಿಕಾರ್ಜುನ ಮೇಲೆ ಹಲ್ಲೆ ನಡೆಸಿ ಗಾಯಗೊಳಿಸಿತು. ಅಂಗಡಿಯ ಬ್ಯಾನರ್ ಸಹ ಹರಿಯಿತು. ಇದಕ್ಕೆ ವರ್ತಕರು ಆಕ್ರೋಶ ವ್ಯಕ್ತಪಡಿಸಿದಾಗ, ಸಂಘಟನೆಗಳ ಮುಖಂಡರು ಮಧ್ಯ ಪ್ರವೇಶಿಸಿ ಸಮಾಧಾನಪಡಿಸಿದರು.

ಗದಗಿನ ಮುಳಗುಂದ ನಾಕಾದಲ್ಲಿ ರಸ್ತೆ ತಡೆ ನಡೆಸಿದ ಪ್ರತಿಭಟನಕಾರರು ಅಮಿತ್ ಶಾ ಅವರ ಭಾವಚಿತ್ರಕ್ಕೆ ಬೆಂಕಿ ಹಚ್ಚಿ ಆಕ್ರೋಶ ವ್ಯಕ್ತಪಡಿಸಿದರು. ನಗರದೆಲ್ಲೆಡೆ ಬೈಕ್ ರ‍್ಯಾಲಿ ನಡೆಸಿ, ಗಾಂಧಿ ವೃತ್ತದಲ್ಲಿ ಜಮಾಯಿಸಿದರು. ಬಳಿಕ ಸಾರ್ವಜನಿಕ ಸಮಾವೇಶ ನಡೆಯಿತು.

ಕಲಬುರಗಿ ನಗರದಲ್ಲಿ ಮಂಗಳವಾರ ನಡೆದ ಪ್ರತಿಭಟನಾ ಮೆರವಣಿಗೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಅಣಕು ಶವಯಾತ್ರೆ ನಡೆಯಿತು — ಚಿತ್ರ: ತಾಜುದ್ದೀನ್ ಆಜಾದ್

ಅಣಕು ಶವಯಾತ್ರೆ

ಕಲಬುರಗಿಯ ಗಂಜ್ ಪ್ರದೇಶದ ನಗರೇಶ್ವರ ಶಾಲೆಯಿಂದ 4 ಕಿ.ಮೀ. ದೂರದಲ್ಲಿದ್ದ ಜಿಲ್ಲಾಧಿಕಾರಿ ಕಚೇರಿವರೆಗೆ ಪ್ರತಿಭಟನಕಾರರು ಅಮಿತ್ ಶಾ ಅವರ ಅಣಕು ಶವಯಾತ್ರೆ ಮಾಡಿದರು. ‘ದೇಶ ದ್ರೋಹಿ’, ‘ಸಂವಿಧಾನ ವಿರೋಧಿ’ ಎಂದು ಘೋಷಣೆ ಕೂಗಿ, ರಾಜೀನಾಮೆಗೂ ಒತ್ತಾಯಿಸಿದರು.

ಶಾ ಅವರನ್ನು ಸಂಪುಟದಿಂದ ವಜಾಗೊಳಿಸಬೇಕು, ಅಮಿತ್ ಶಾ ಅವರು ಅಂಬೇಡ್ಕರ್ ಪ್ರತಿಮೆ ಎದುರಿಗೆ ಮಂಡಿಯೂರಿ ಕುಳಿತು ದೇಶದ ಜನರ ಕ್ಷಮೆ ಕೇಳಬೇಕು’ ಎಂದು ಆಗ್ರಹಿಸಿ ದಲಿತ ಸಂಘರ್ಷ ಸಮಿತಿಯು 20ಕ್ಕೂ ಹೆಚ್ಚು ಸಂಘಟನೆಗಳ ಜತೆಗೂಡಿ ಕರೆ ನೀಡಿದ್ದ ಗದಗ ಬಂದ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

ಬೆಳಿಗ್ಗೆ 6ಕ್ಕೆ ಆರಂಭಗೊಂಡ ಬಂದ್ ಮಧ್ಯಾಹ್ನ 2 ಗಂಟೆವರೆಗೆ ನಡೆಯಿತು. ಅಂಗಡಿ, ಹೋಟೆಲ್, ತರಕಾರಿ ಮಾರುಕಟ್ಟೆ ಸೇರಿದಂತೆ ಹಲವು ವ್ಯಾಪಾರಸ್ಥರು ಸ್ವಯಂಪ್ರೇರಿತರಾಗಿ ಅಂಗಡಿಗಳನ್ನು ಬಂದ್ ಮಾಡಿ, ಬೆಂಬಲ ಸೂಚಿಸಿದರು. ನಗರ ವ್ಯಾಪ್ತಿಯ ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿತ್ತು. ಭದ್ರತೆಗೆ 500 ಮಂದಿ ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗಿತ್ತು.

ಜನಪರ ಸಂಘಟನೆಗಳ ಒಕ್ಕೂಟದಿಂದ ಹುಮನಾಬಾದ್‌ನಲ್ಲಿಯೂ ಬಂದ್‌ಗೆ ಕರೆ ನೀಡಲಾಗಿತ್ತು. ಇಲ್ಲೂ ವ್ಯಾಪಾರ ವಹಿವಾಟು ನಡೆಯಲಿಲ್ಲ.

ಮನನೊಂದ ಬಾಲಕ ಆತ್ಮಹತ್ಯೆ • ಉತ್ತರ ಪ್ರದೇಶದಲ್ಲಿ ನಡೆದ ಘಟನೆ

ದಲಿತ ಬಾಲಕನ ಮೇಲೆ ಮೂತ್ರ ವಿಸರ್ಜನೆ

• ಸಂಜಯ್ ಪಾಂಡೆ

ಲಖನೌ: ಉತ್ತರ ಪ್ರದೇಶದ ಬಸ್ತಿ ಜಿಲ್ಲೆಯಲ್ಲಿ ಜನ್ಮದಿನ ಆಚರಣೆಯೊಂದರಲ್ಲಿ ದಲಿತ ಬಾಲಕನೊಬ್ಬನ ಬಟ್ಟೆ ಬಿಚ್ಚಿಸಿ, ಥಳಿಸಿ, ಆತನ ಮೇಲೆ ಮೂತ್ರ ಮಾಡಲಾಗಿದೆ ಎಂದು ಆರೋಪಿಸಲಾಗಿದೆ. ಈ ಘಟನೆಯಿಂದಾಗಿ ಮನನೊಂದ ಬಾಲಕನು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎನ್ನಲಾಗಿದೆ.

10ನೇ ತರಗತಿಯಲ್ಲಿ ಓದುತ್ತಿದ್ದ ಬಾಲಕನು ಆತನ ಕೊಠಡಿಯಲ್ಲಿ ಸೋಮವಾರ ನೇಣು ಹಾಕಿಕೊಂಡ ಸ್ಥಿತಿಯಲ್ಲಿ ಪತ್ತೆಯಾಗಿದ್ದ, ಆತನನ್ನು ಆಸ್ಪತ್ರೆಗೆ ಕರೆದೊಯ್ಯಲಾಯಿತು. ಆದರೆ, ಆತ ಮೃತಪಟ್ಟಿರುವುದಾಗಿ ವೈದ್ಯರು ಹೇಳಿದರು ಎಂದು ವರದಿಗಳು ಹೇಳಿವೆ.

ಮುಖ್ಯಾಂಶಗಳು

- 10ನೇ ತರಗತಿಯಲ್ಲಿ ಓದುತ್ತಿದ್ದ ಬಾಲಕ
- ಪೊಲೀಸರ ನಿಷ್ಕ್ರಿಯತೆ ಸಾವಿಗೆ ಕಾರಣ: ಪೋಷಕರ ಆರೋಪ
- ಘಟನೆ ಸಂಬಂಧಿಸಿ ಮೂವರ ಬಂಧನ

ಬಾಲಕನನ್ನು ಜನ್ಮದಿನಾಚರಣೆ ಪಾರ್ಟಿಗೆ ಕೆಲವು ಯುವಕರು ಶುಕ್ರವಾರ ಆಹ್ವಾನಿಸಿದ್ದರು. ಅಲ್ಲಿ ಪರಸ್ಪರರ ನಡುವೆ ಜಗಳ ನಡೆದಿದ್ದು, ಬಾಲಕನ ಬಟ್ಟೆ ಬಿಚ್ಚಿಸಿ, ಆತನ ಮೇಲೆ ದೈಹಿಕ ಹಲ್ಲೆ ನಡೆಸಿ, ಮೈಮೇಲೆ ಮೂತ್ರ ಮಾಡಲಾಯಿತು ಎಂದು ವರದಿಗಳು ಹೇಳಿವೆ. ಈ ಕೃತ್ಯಗಳನ್ನು ಯುವಕರು ಚಿತ್ರೀಕರಿಸಿಕೊಂಡಿದ್ದರು, ದೃಶ್ಯಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ ಹರಿಬಿಡುವುದಾಗಿ ಬೆದರಿಸಿದ್ದರು. ದೃಶ್ಯಗಳನ್ನು ಅಳಿಸುವಂತೆ ಬಾಲಕ ಕೇಳಿಕೊಂಡಾಗ, ಆತ ಉಗುಳಿದ್ದನ್ನು ನೆಕ್ಕುವಂತೆ ಮಾಡಲಾಯಿತು ಎಂದು ಆರೋಪಿಸಲಾಗಿದೆ.

ಬಾಲಕನು ನಡೆದ ಘಟನೆಯನ್ನು ತನ್ನ ಮನೆಯವರಿಗೆ ತಿಳಿಸಿದ್ದ. ಇದನ್ನು ಆಧರಿಸಿ ಅವರು ಪೊಲೀಸರಿಗೆ ದೂರು ನೀಡಿದ್ದರು. ಆದರೆ ಪೊಲೀಸರು ಯಾವುದೇ ಕ್ರಮ ಕೈಗೊಳ್ಳಲಿಲ್ಲ ಎಂದು ಆರೋಪಿಸಲಾಗಿದೆ.

ಇದರಿಂದಾಗಿ ಮನನೊಂದ ಬಾಲಕನು, ಮನೆಯವರು ಹೊರಗೆ ಹೋಗಿದ್ದ ಸಂದರ್ಭದಲ್ಲಿ ತನ್ನ ಕೊಠಡಿಯಲ್ಲಿ ನೇಣು ಹಾಕಿಕೊಂಡ ಎಂದು ವರದಿಯಾಗಿದೆ.

ಪೊಲೀಸರು ಕ್ರಮ ಕೈಗೊಳ್ಳದೆ ಇದ್ದುದೇ ಬಾಲಕನ ಸಾವಿಗೆ ಕಾರಣ ಎಂದು ದೂರಿರುವ ಆತನ ಕುಟುಂಬದ ಸದಸ್ಯರು ಹಾಗೂ ಇತರ ಕೆಲವರು, ಬಾಲಕನ ಮೃತದೇಹ ಇಟ್ಟುಕೊಂಡು ಪೊಲೀಸ್ ಠಾಣೆಯ ಎದುರು ಪ್ರತಿಭಟನೆ ನಡೆಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ದೂರು ದಾಖಲಾಗಿದೆ, ಮೂವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದ್ದಾರೆ. ನಾಲ್ಕನೇ ಆರೋಪಿ ತಲೆಮರೆಸಿಕೊಂಡಿದ್ದು, ಆತನ ಪತ್ತೆ ಕಾರ್ಯ ನಡೆದಿದೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.



ತಂತ್ರಜ್ಞಾನ ಪುರವಣಿ ಓದಿರಿ...

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ. 51/2024, ದಿನಾಂಕ: 19.12.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಕೇವಲ ಐಆರ್‌ಇಪಿಎಸ್ ಪೋರ್ಟಲ್ ಮೂಲಕ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಟೆಂಡರು ಸಂ.	ಸಂಕ್ಷಿಪ್ತವಾದ ವಿವರಣೆ
ಎಲ್8246275ಬಿ	ಡಬ್ಲ್ಯೂಎಜಿ9ಹೆಚ್‌ಸಿ/ಡಬ್ಲ್ಯೂಎಪಿ7 ಎಲೆಕ್ಟ್ರಿಕಲ್ ಲೋಕೊಮೋಟಿವ್‌ಗಳಿಗೆ ಎಫ್‌ಟಿಆರ್ ಟಿಐಪಿಎಲ್ ಮಾದರಿಯ ಇ–70 ಬ್ರೇಕ್ ಉಪಕರಣದ ವಾಲ್ವ್‌ಗಳಿಗೆ ಟೆಸ್ಟ್ ರಿಗ್‌ಗಳ ಪೂರೈಕೆ, ಸ್ಥಾಪನೆ, ಪರಿಶೀಲನೆ ಮತ್ತು ಕಾರ್ಯಾರಂಭ. (ಪರಿಮಾಣ: 01 ನಂ.).

ಬಿಡ್‌ಗಳನ್ನು ಸಲ್ಲಿಸಲು/ಟೆಂಡರು ಕೊನೆಯ ದಿನಾಂಕ: **17.01.2025, 10:30 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

PUB/653/AAF/PRB/SWR/2024-25 — ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು, ಬೆಂಗಳೂರು

South Western Railway - SWR | SWRRLY | SWRRLY

ಕರ್ನಾಟಕ ಸರ್ಕಾರ

ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ನಿರ್ದೇಶಕರ ಕಾರ್ಯಾಲಯ

ಸರ್ಕಾರಿ ಕೇಂದ್ರ ಮುದ್ರಣಾಲಯ, 8ನೇ ಮೈಲಿ, ಮೈಸೂರು ರಸ್ತೆ, ಆರ್.ವಿ. ಕಾಲೇಜ್ ಅಂಚೆ, ಬೆಂಗಳೂರು–560 059. ದೂ : 080 28484515 / 28484518

ಸಂಖ್ಯೆ: ಡಿಪಿಎಸ್/ಪಿಯುಆರ್ ಎ/ಟಿಡಿಆರ್‌ಸಿ/10/2024–ಪಿಯುಆರ್/ಸ್ಟ್ರಾಪಿಂಗ್ ರೋಲ್ ದಿನಾಂಕ: 23.12.2024

ಸಂಕ್ಷಿಪ್ತ ಟೆಂಡರ್ ಅಧಿಸೂಚನೆ

(ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಸ್ಟ್ರಾಪಿಂಗ್ ರೋಲ್‌ಗಳ ಸಂಗ್ರಹಣೆಗಾಗಿ ಆನ್‌ಲೈನ್ ಟೆಂಡರನ್ನು ಆಹ್ವಾನಿಸಲಾಗಿದೆ. ಟೆಂಡರ್‌ನ ಅಂದಾಜು ಮೊತ್ತ ರೂ.4.91 ಲಕ್ಷಗಳು ಹಾಗೂ ಇ.ಎಂ.ಡಿ.ಯು ರೂ. 0.25 ಲಕ್ಷಗಳಾಗಿರುತ್ತದೆ. ಟೆಂಡರ್ ಸಲ್ಲಿಸಲು ಕಡೆಯ ದಿನಾಂಕ 07–01–2025, 17.30 ಗಂಟೆಯಾಗಿರುತ್ತದೆ. ಮಾಹಿತಿಯನ್ನು https://kppp.karnataka.gov.in ರಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಸಹಿ/–

DIPR/CP/3953/Zen/2024-25 — ನಿರ್ದೇಶಕರು (ಪ್ರಭಾರ)

ನೈಋತ್ಯ ರೈಲ್ವೆ

ಇ–(ಐಆರ್‌ಇಪಿಎಸ್) ಟೆಂಡರು ಸೂಚನೆ ಸಂ.: **05/Bridges/UBL 2024-25, ದಿನಾಂಕ: 18.12.2024**

ಕ್ರ.ಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	**ಉಪ ಕಾಮಗಾರಿ–1:** ಇಂಜಿನಿಯರ್/ಬ್ರಿಡ್ಜ್/ಹುಬ್ಬಳ್ಳಿ ವ್ಯಾಪ್ತಿಯಲ್ಲಿ ಬರುವ ಗದಗ–ಬಳ್ಳಾರಿ ವಿಭಾಗದಲ್ಲಿ ಬ್ರಿಡ್ಜ್ ಸಂ. 157ಡೌನ್ ಸ್ಪಾನ್ 1x12.20ಮೀ., ಬ್ರಿಡ್ಜ್ ಸಂ. 31/ಎ ಅಪ್ / ಡೌನ್ & ಲೂಪ್ ಲೈನ್ ಸ್ಪಾನ್ 3x12.20, ಬ್ರಿಡ್ಜ್ ಸಂ. 139/ಎ ಡೌನ್ ಸ್ಪಾನ್ 1x30.50 ಮೀ., ಬಾಗಲಕೋಟೆ–ವಿಜಯಪುರ ವಿಭಾಗದಲ್ಲಿ ಬ್ರಿಡ್ಜ್ ಸಂ. 62/ಇ ಸ್ಪಾನ್ 1x9.15ಮೀ., ಹೊಸಪೇಟೆ–ವ್ಯಾಸ ಕಾಲೋನಿ–ಕೊಟ್ಟೂರು ವಿಭಾಗದಲ್ಲಿ ಬ್ರಿಡ್ಜ್ ಸಂ. 133 ಸ್ಪಾನ್ 1x30.50ಮೀ., ಹುಬ್ಬಳ್ಳಿ–ಧಾರವಾಡ ವಿಭಾಗದಲ್ಲಿ ಬ್ರಿಡ್ಜ್ ಸಂ. 253 ಸ್ಪಾನ್ 1x45.70ಮೀ. ಗಳಿಗೆ ಸೈಡ್ ಪಾಥ್‌ವೇಯ ನಿರ್ಮಾಣ ಕಾರ್ಯಗಳು. **ಉಪ ಕಾಮಗಾರಿ–2:** ವರಿಷ್ಠ ಸೆಕ್ಷನಲ್ ಇಂಜಿನಿಯರ್/ಬ್ರಿಡ್ಜ್/ಬೆಳಗಾವಿ ವ್ಯಾಪ್ತಿಯ ಲೋಂಡಾ – ವಾಸ್ಕೋ–ಡ–ಗಾಮಾ ವಿಭಾಗದಲ್ಲಿ ಆರ್‌ಯುಬಿ ನಂ. 228ಎ ಅಪ್ ಸ್ಪಾನ್ (1x19.15 ಪಿಜಿ) & 228ಎ ಡೌನ್ (ಸ್ಪಾನ್ 1x10.35ಮೀ. ಪಿಎಸ್‌ಸಿ), ಬ್ರಿಡ್ಜ್ ಸಂ. 16 ಸ್ಪಾನ್ 1x12.20ಮೀ + 1x18.30ಮೀ. ಪಿಜಿ, ಬ್ರಿಡ್ಜ್ ಸಂ. 109 ಅಪ್ ಸ್ಪಾನ್ 2x12.20ಮೀ ಪಿಜಿ, 119ಎ ಡೌನ್ ಸ್ಪಾನ್ 1x18.30 ಮೀ ಪಿಜಿ, 128 ಡೌನ್ ಸ್ಪಾನ್ 1x12.20ಮೀ. ಪಿಜಿ., 129 ಡೌನ್ ಸ್ಪಾನ್ 1x12.20 ಮೀ. ಪಿಜಿ., ಆರ್‌ಯುಬಿ 142/ಎ ಅಪ್ ಸ್ಪಾನ್ 1x13.25ಮೀ. ಪಿಜಿ, 208 ಸ್ಪಾನ್ 1x12.20ಮೀ. ಪಿಜಿ., ಬ್ರಿಡ್ಜ್ ಸಂ. 69 ಸ್ಪಾನ್ 1x18.30ಮೀ. + 1x12.20 ಮೀ. ಪಿಜಿ ಕಾಮಗಾರಿಗಳು. **ಉಪ ಕಾಮಗಾರಿ–3:** ವರಿಷ್ಠ ಸೆಕ್ಷನಲ್ ಇಂಜಿನಿಯರ್/ಬ್ರಿಡ್ಜ್/ಹುಬ್ಬಳ್ಳಿ ವ್ಯಾಪ್ತಿಯ ಹುಬ್ಬಳ್ಳಿ – ಹಾವೇರಿ ವಿಭಾಗದಲ್ಲಿ ಕಿಮೀ. 460/700–800 ರಲ್ಲಿ ಬ್ರಿಡ್ಜ್ ಸಂ. 8 (ಸ್ಪಾನ್ 4x12.20), ಕಿಮೀ. 456/300–400 ರಲ್ಲಿ ಬ್ರಿಡ್ಜ್ ಸಂ. 11 (ಸ್ಪಾನ್ 4x12.20), ಕಿಮೀ. 446/900–447/000 ರಲ್ಲಿ ಬ್ರಿಡ್ಜ್ ಸಂ. 18 (ಸ್ಪಾನ್ 3x12.20) ಮತ್ತು ಕಿಮೀ. 403/500–800 ರಲ್ಲಿ ಬ್ರಿಡ್ಜ್ ಸಂ. 38 (ಸ್ಪಾನ್ 15x18.30) ಗಳಿಗೆ ಸೈಡ್ ಪಾಥ್‌ವೇಯ ನಿರ್ಮಾಣ ಕಾರ್ಯಗಳು.	ರೂ. 3,85,94,135.55
2	**ಉಪ ಕಾಮಗಾರಿ–1:** ವರಿಷ್ಠ ಸೆಕ್ಷನಲ್ ಇಂಜಿನಿಯರ್/ಬ್ರಿಡ್ಜ್/ಹುಬ್ಬಳ್ಳಿ ವ್ಯಾಪ್ತಿಯಲ್ಲಿ ಆರ್‌ಓಬಿ/ಆರ್‌ಯುಬಿ ಕಾಮಗಾರಿಗೆ ಬೇಕಾದ ಎರಡು ನಂ. 26.80ಮೀ. ಉದ್ದದ ತಾತ್ಕಾಲಿಕ ಗಿರ್ಡರ್‌ಗಳ ಫ್ಯಾಬ್ರಿಕೇಶನ್ ಮತ್ತು ಪೂರೈಕೆ. **ಉಪ ಕಾಮಗಾರಿ–2:** ವರಿಷ್ಠ ಸೆಕ್ಷನಲ್ ಇಂಜಿನಿಯರ್/ಬ್ರಿಡ್ಜ್/ಓ/ಹುಬ್ಬಳ್ಳಿ ವ್ಯಾಪ್ತಿಯಲ್ಲಿ 1000 ನಂ. ಕ್ರೈಸ್ಟ್ ಚರ್ಚ್ (ಸಿಸಿ) ಕ್ರಿಬ್‌ಗಳ ಫ್ಯಾಬ್ರಿಕೇಶನ್ ಮತ್ತು ಪೂರೈಕೆ.	ರೂ. 2,77,98,476.00
3	**ಉಪ ಕಾಮಗಾರಿ–1:** ವರಿಷ್ಠ ಸೆಕ್ಷನಲ್ ಇಂಜಿನಿಯರ್/ಬ್ರಿಡ್ಜ್/ಬೆಳಗಾವಿ ವ್ಯಾಪ್ತಿಯಲ್ಲಿ ಆರ್‌ಓಬಿ/ಆರ್‌ಯುಬಿ ಕಾಮಗಾರಿಗೆ ಬೇಕಾದ ಎರಡು ನಂ. 26.80ಮೀ. ಉದ್ದದ ತಾತ್ಕಾಲಿಕ ಗಿರ್ಡರ್‌ಗಳ ಫ್ಯಾಬ್ರಿಕೇಶನ್ ಮತ್ತು ಪೂರೈಕೆ. **ಉಪ ಕಾಮಗಾರಿ–2:** ವರಿಷ್ಠ ಸೆಕ್ಷನಲ್ ಇಂಜಿನಿಯರ್/ಬ್ರಿಡ್ಜ್/ಓ/ಬೆಳಗಾವಿ ವ್ಯಾಪ್ತಿಯಲ್ಲಿ 1000 ನಂ. ಕ್ರೈಸ್ಟ್ ಚರ್ಚ್ (ಸಿಸಿ) ಕ್ರಿಬ್‌ಗಳ ಫ್ಯಾಬ್ರಿಕೇಶನ್ ಮತ್ತು ಪೂರೈಕೆ.	ರೂ. 2,77,98,476.00

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **17.01.2025, 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

PUB/652/AAF/PRB/SWR/2024-25 — ವರಿಷ್ಠ ವಿಭಾಗೀಯ ಇಂಜಿನಿಯರ್/ಸಂಯೋಜನೆ/ಹುಬ್ಬಳ್ಳಿ

South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಹರಾಜು ಕಾರ್ಯಕ್ರಮ ಸೂಚನೆ ಸಂ.: S/XIII/04/2024-25

ಭಾರತದ ರಾಷ್ಟ್ರಪತಿಯವರ ಪರವಾಗಿ, ಕೆಳಗೆ ಸಹಿಮಾಡಿದವರು, ನೈಋತ್ಯ ರೈಲ್ವೆಯ ಹುಬ್ಬಳ್ಳಿ, ಮೈಸೂರು ಮತ್ತು ಬೆಂಗಳೂರು ವಿಭಾಗಗಳಲ್ಲಿ ಹಾಗೂ ಜನರಲ್ ಸ್ಟೋರ್ಸ್ ಡಿಪೋ / ಹುಬ್ಬಳ್ಳಿ ಮತ್ತು ಮೆಕ್ಯಾನಿಕಲ್ ಜನರಲ್ ಸ್ಟೋರ್ಸ್ ಡಿಪೋ / ಅಶೋಕಪುರಂ ಡಿಪೋಗಳ ಅಧಿಕಾರ ವ್ಯಾಪ್ತಿಗೆ ಒಳಪಟ್ಟಿರುವಂತೆ ಆನ್‌ಲೈನ್ ಸ್ಕ್ರ್ಯಾಪ್, ಸರ್ವಿಸಬಲ್ ಲೋಕೋಮೋಟಿವ್‌ಗಳು ಮತ್ತು ಡಿಪೋ ಸ್ಕ್ರ್ಯಾಪ್‌ಗಳ ಮಾರಾಟಕ್ಕಾಗಿ ಜನವರಿ, ಫೆಬ್ರವರಿ ಮತ್ತು ಮಾರ್ಚ್ 2025 ರ ತಿಂಗಳುಗಳಲ್ಲಿ ಇ–ಹರಾಜಿನ ವೇಳಾಪಟ್ಟಿಯನ್ನು ಕೆಳಗೆ ನೀಡಲಾಗಿದೆ.

ಹರಾಜಿನ ಮಾದರಿ	ಸ್ಥಳ	ಜನವರಿ – 2025			ಫೆಬ್ರವರಿ – 2025			ಮಾರ್ಚ್ – 2025		
ಇ-ಹರಾಜು	ಜನರಲ್ ಉಗ್ರಾಣ ಡಿಪೋ/ಹುಬ್ಬಳ್ಳಿ	3ರ	13ರ	24ರ	3ರ	13ರ	21ರ	3ರ	15ರ	29ರ
	ಮೆಕ್ಯಾನಿಕಲ್ ಜನರಲ್ ಉಗ್ರಾಣ ಡಿಪೋ, ಅಶೋಕಪುರಂ (ಮೈಸೂರು)	8ರ	17ರ	29ರ	10ರ	18ರ	27ರ	6ರ	18ರ	28ರ
	ಹುಬ್ಬಳ್ಳಿ ವಿಭಾಗ	10ರ	22ರ	30ರ	11ರ	20ರ	28ರ	7ರ	17ರ	26ರ
	ಬೆಂಗಳೂರು ವಿಭಾಗ	16ರ	23ರ	31ರ	5ರ	14ರ	24ರ	11ರ	19ರ	28ರ
	ಮೈಸೂರು ವಿಭಾಗ	6ರ	20ರ	28ರ	4ರ	12ರ	25ರ	5ರ	13ರ	27ರ

ಸರ್ವಿಸ್ ಮಾಡಲು ಯೋಗ್ಯವಾದ ಇಂಜಿನ್‌ಗಳ ಮಾರಾಟ: ಕೆಳಗಿನ ಎರಡು (2) ನಂ. ನಾಶಗೊಳಿಸಲಾದ, ಹೆಚ್ಚುವರಿ, ಕಡಿಮೆ ವಯಸ್ಸಿನ ಮತ್ತು ಸರ್ವಿಸ್ ಮಾಡಬಹುದಾದ ಲೋಕೋಮೋಟಿವ್‌ಗಳು ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು / ಬೆಂಗಳೂರು ಇವರ ನೇತೃತ್ವದಲ್ಲಿ ಇ–ಹರಾಜಿನಲ್ಲಿವೆ, ಅಂದರೆ ಡಬ್ಲ್ಯೂಡಿಜಿ3ಎ–14796, ಡಬ್ಲ್ಯೂಡಿಜಿ3ಎ–13056 (ಇ–ಹರಾಜಿನ ಪಟ್ಟಿಯಲ್ಲಿ ಎರಡು ಲೋಕೋಗಳು ಲಭ್ಯವಿದೆ).

ಮೇಲೆ ತಿಳಿಸಿರುವ ಇ–ಹರಾಜಿನಲ್ಲಿ ಸಕ್ರಿಯವಾಗಿ ಭಾಗವಹಿಸಲು ನಿಮ್ಮನ್ನು ವಿನಂತಿಸಲಾಗಿದೆ. ವಿವರಗಳಿಗಾಗಿ ದಯವಿಟ್ಟು ಉಪ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು/ಜನರಲ್ ಸ್ಟೋರ್‌ಗಳ ಡಿಪೋ/ಹುಬ್ಬಳ್ಳಿ (0836–2363466/9731668760), ಉಪ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು/ಮೆಕ್ಯಾನಿಕಲ್ ಜನರಲ್ ಉಗ್ರಾಣಗಳ ಡಿಪೋ/ಅಶೋಕಪುರಮ್ (0821–2480171/9731665756), ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು/ಹುಬ್ಬಳ್ಳಿ (0836–2363497/9731668750), ವರಿಷ್ಠ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು/ಬೆಂಗಳೂರು (080–22873081/9731666750), ಹಿರಿಯ ವಿಭಾಗೀಯ ಸಾಮಗ್ರಿ ವ್ಯವಸ್ಥಾಪಕರು/ಮೈಸೂರು (0821–2420817/9731667750).

ಲೋಕೋಗಳಿಗಾಗಿ ವರಿಷ್ಠ ವಿಭಾಗೀಯ ಮೆಕ್ಯಾನಿಕಲ್ ಇಂಜಿನಿಯರ್/ಡಿಎಸ್‌ಎಲ್/ಕೃಷ್ಣರಾಜಪುರಂ 9731666451 & ವರಿಷ್ಠ ವಿಭಾಗೀಯ ಇಂಜಿನಿಯರ್/ಡಿಎಸ್‌ಎಲ್/ಕೃಷ್ಣರಾಜಪುರಂ – 9731666482 ಇವರನ್ನು ಸಂಪರ್ಕಿಸಬಹುದು.

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

PUB/643/AAMO/PRB/SWR/2024-25 — ಉಪ ಮುಖ್ಯ ಸಾಮಗ್ರಿ ವ್ಯವಸ್ಥಾಪಕರು/ನಿರ್ಮಾಣ/ಹುಬ್ಬಳ್ಳಿ

South Western Railway - SWR | SWRRLY | SWRRLY

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ:ಕಾನಿಇಂವಿ/ಬೆಂಬೃಕಾಉವಿ/ಸಕಾನಿಇಂ–3/ಸಇಂ–2/2024–25/4781 ದಿ:21.12.2024

ಪ್ರಕಟಣೆ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ವಿದ್ಯುತ್ ಪೂರೈಕೆ ಅಧಿನಿಯಮ 2003 ಸೆಕ್ಷನ್ 67ರ ಅನುಸಾರವಾಗಿ ಯೋಜನೆಗಳನ್ನು ರೂಪಿಸಿದೆ ಹಾಗೂ ಸದರಿ ನಿಗಮದ ಪ್ರಕರಣ 67(II)ರ ಅನ್ವಯ ಈ ಮೂಲಕ ಸಾರ್ವಜನಿಕ ತಿಳುವಳಿಕೆಗಾಗಿ ಪ್ರಕಟಿಸುತ್ತಿದೆ. ಯೋಜನೆಯ ವಿವರಗಳು ಈ ಕೆಳಕಂಡಂತಿವೆ.

ಯೋಜನೆಯ ಹೆಸರು: 2x150 ಎಂವಿಎ, 220/66/11ಕೆವಿ ಹೊರಾಂಗಣ ಜಿ.ಐ.ಎಸ್. ವಿದ್ಯುತ್ ಕೇಂದ್ರದ ಯೋಜನೆಯನ್ನು ಹಾಲಿ ಇರುವ 66/11ಕೆವಿ ನೆಲಮಂಗಲ (ಬಸವನಹಳ್ಳಿ) ಉಪಕೇಂದ್ರದ ಆವರಣದಲ್ಲಿ ಸ್ಥಾಪಿಸುವುದು ಹಾಗೂ ಕೆಳಕಂಡ 220ಕೆವಿ ಮತ್ತು 66ಕೆವಿ ವಿದ್ಯುತ್ ಮಾರ್ಗಗಳನ್ನು ನಿರ್ಮಾಣ ಮಾಡುವುದು.

(i) ಪ್ರಸ್ತಾಪಿತ 220/66/11ಕೆವಿ ಜಿಐಎಸ್ ವಿದ್ಯುತ್ ಕೇಂದ್ರದಿಂದ ಹಾಲಿ ಇರುವ 400/220ಕೆವಿ ನೆಲಮಂಗಲ ವಿದ್ಯುತ್ ಕೇಂದ್ರದವರೆಗೆ ಸುಮಾರು 4.22ಕಿಮೀ, 220ಕೆವಿ ದ್ವಿ–ಮಾರ್ಗ ಭೂಗತ ಕೇಬಲ್ ಅನ್ನು ಅಳವಡಿಸುವುದು. ಸದರಿ 220ಕೆವಿ ದ್ವಿ–ಮಾರ್ಗ ಭೂಗತ ವಿದ್ಯುತ್ ಕೇಬಲ್ ಮಾರ್ಗವು ನೆಲಮಂಗಲದ ಬಸವನಹಳ್ಳಿಯಿಂದ ಕುಣಿಗಲ್ ಬೈಪಾಸ್ ರಸ್ತೆಯವರೆಗೂ ಮತ್ತು ಬೆಂಗಳೂರು–ತುಮಕೂರು ರಾಷ್ಟ್ರೀಯ ಹೆದ್ದಾರಿಯ (ಎನ್‌ಹೆಚ್–48) ಕುಣಿಗಲ್ ಬೈಪಾಸ್ ವೃತ್ತದಿಂದ ಸೊಂಡೆಕೊಪ್ಪ ವೃತ್ತದವರೆಗೂ ಮತ್ತು ಸೊಂಡೆಕೊಪ್ಪ ವೃತ್ತದಿಂದ 400/220ಕೆವಿ ನೆಲಮಂಗಲ ವಿದ್ಯುತ್ ಕೇಂದ್ರದವರೆಗೂ ನೆಲಮಂಗಲ ಸೊಂಡೆಕೊಪ್ಪ ಮುಖ್ಯರಸ್ತೆಯಿಂದ ಹಾದುಹೋಗುತ್ತದೆ.

(ii) ಪ್ರಸ್ತಾವಿತ 220/66/11ಕೆವಿ ಜಿಐಎಸ್ ಕೇಂದ್ರದಿಂದ ಹಾಲಿ ಇರುವ 66ಕೆವಿ ಎಸ್.ಬಿ.ಟಿ. ವಿದ್ಯುತ್ ಮಾರ್ಗಕ್ಕೆ (ಕುಣಿಗಲ್ ಬೈಪಾಸ್ ಹತ್ತಿರ) ಸುಮಾರು 1.845 ಕಿಮೀ 66ಕೆವಿ ಏಕ ಮಾರ್ಗ ಭೂಗತ ಕೇಬಲ್‌ನ್ನು ಅಳವಡಿಸುವುದು. ಸದರಿ 66ಕೆವಿ ಏಕ ಮಾರ್ಗ ಭೂಗತ ವಿದ್ಯುತ್ ಕೇಬಲ್ ನೆಲಮಂಗಲದ ಬಸವನಹಳ್ಳಿಯಿಂದ ಎನ್.ಹೆಚ್–48 ಕುಣಿಗಲ್ ಬೈಪಾಸ್ ರಸ್ತೆಯಲ್ಲಿ ಹಾದು ಹೋಗುತ್ತದೆ. ಮೇಲಿನ ಕಾಮಗಾರಿಯನ್ನು ಮೆ॥ ಅಮರ ರಾಜ ಇನ್ಫ್ರಾ ಪ್ರೈವೆಟ್ ಲಿಮಿಟೆಡ್ ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿರುತ್ತದೆ. ಸದರಿ ಕಾರ್ಯಾದೇಶದ ಅನ್ವಯ 220ಕೆವಿ ಮತ್ತು 66ಕೆವಿ ವಿದ್ಯುತ್ ಭೂಗತ ಕೇಬಲ್‌ನ್ನು ಅಳವಡಿಸುವ ಕಾಮಗಾರಿಯನ್ನು **ದಿನಾಂಕ:28.12.2024 ಅಥವಾ ತದನಂತರ** ಕೈಗೆತ್ತಿಕೊಳ್ಳಲಾಗುವುದು. ಆದುದರಿಂದ ಕಾಮಗಾರಿಯನ್ನು ನಿರ್ವಹಿಸಲು ಸಾರ್ವಜನಿಕರಿಂದ ಸಹಕಾರವನ್ನು ಕೋರುತ್ತಾ, ಕಾಮಗಾರಿಯಿಂದ ಉಂಟಾಗುವ ಅಡಚಣೆಗೆ ವಿಷಾದನೆಯನ್ನು ವ್ಯಕ್ತಪಡಿಸುತ್ತಾ, ಕಾಮಗಾರಿಯ ಸಮಯದಲ್ಲಿ ಸುರಕ್ಷತಾ ನಿಯಮಗಳನ್ನು ಪಾಲಿಸಲು ಸಾರ್ವಜನಿಕರಿಗೆ ಈ ಮೂಲಕ ತಿಳಿಸಲಾಗಿದೆ. ಮುಂದುವರೆದು ಸಾರ್ವಜನಿಕರ ನಿರ್ಲಕ್ಷ್ಯತನದಿಂದ ಯಾವುದೇ ಅಹಿತಕರ ಘಟನೆ ಅಥವಾ ಅವಘಡಗಳು ಸಂಭವಿಸಿದಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಜವಾಬ್ದಾರಿಯಾಗಿರುವುದಿಲ್ಲವೆಂದು ಈ ಮೂಲಕ ತಿಳಿಸಲಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೃಹತ್ ಕಾಮಗಾರಿ ಉತ್ತರ ವಿಭಾಗ, ಕ.ವಿ.ಪ್ರ.ನಿ.ನಿ., ಆನಂದರಾವ್ ವೃತ್ತ, ಬೆಂಗಳೂರು–09

ಮಚ್ಚಿನಿಂದ ಹೊಡೆದು ಸ್ನೇಹಿತನ ಕೊಲೆ

ಬೆಂಗಳೂರು: ಹಣಕಾಸು ವಿಚಾರಕ್ಕೆ ನಡೆದ ಗಲಾಟೆಯಲ್ಲಿ ಮಾಂಸದ ಅಂಗಡಿಯಲ್ಲಿ ಸ್ನೇಹಿತನನ್ನು ಹತ್ಯೆ ಮಾಡಿದ ಘಟನೆ ಬೇಗೂರು ಠಾಣೆ ವ್ಯಾಪ್ತಿಯಲ್ಲಿ ಸೋಮವಾರ ರಾತ್ರಿ ನಡೆದಿದೆ.

ಶಿವಾಜಿನಗರ ನಿವಾಸಿ ಅಫ್ಸರ್ (45) ಅವರ ತಲೆಗೆ ಮಚ್ಚಿನಿಂದ ಹೊಡೆದು ಕೊಲೆ ಮಾಡಿದ್ದು, ಆರೋಪಿ ಅಕ್ಬರ್ (47) ಪರಾರಿಯಾಗಿದ್ದಾನೆ.

‘ಎಂಟು ತಿಂಗಳ ಹಿಂದೆ ಸ್ನೇಹಿತರಾದ ಅಕ್ಬರ್ ಹಾಗೂ ಅಫ್ಸರ್ ಸೇರಿ ಆರಂಭಿಸಿದ್ದ ಮಾಂಸದಂಗಡಿಯಲ್ಲಿ ಹೆಚ್ಚಿನ ವ್ಯಾಪಾರವಾಗುತ್ತಿರಲಿಲ್ಲ. ಹಾಗಾಗಿ ಪ್ರತ್ಯೇಕ ಅಂಗಡಿ ತೆರೆಯಲು ಅಕ್ಬರ್ ನಿರ್ಧರಿಸಿದ್ದ. ಅಂಗಡಿ ಆರಂಭಿಸುವಾಗ ತಾನು ನೀಡಿದ್ದ ಬಂಡವಾಳದ ಹಣ ವಾಪಸ್ ನೀಡುವಂತೆ ಅಫ್ಸರ್‌ನನ್ನು ಕೇಳಿದ್ದ. ₹3 ಲಕ್ಷ ಹಣ ವಾಪಸ್ ನೀಡಿದ್ದ ಅಫ್ಸರ್, ₹20 ಸಾವಿರ ಬಾಕಿ ಉಳಿಸಿಕೊಂಡಿದ್ದ’ ಎಂದು ಪೊಲೀಸರು ತಿಳಿಸಿದ್ದಾರೆ.

ಈ ವಿಚಾರವಾಗಿ ತಡರಾತ್ರಿ ಅಂಗಡಿಯಲ್ಲೇ ಇಬ್ಬರ ಮಧ್ಯೆ ಗಲಾಟೆಯಾಗಿದೆ. ಕೋಪದಲ್ಲಿ ಅಕ್ಬರ್, ಅಂಗಡಿಯಲ್ಲಿದ್ದ ಮಚ್ಚಿನಿಂದಲೇ ಅಫ್ಸರ್ ತಲೆಗೆ ಹೊಡೆದಿದ್ದು, ತೀವ್ರ ರಕ್ತಸ್ರಾವವಾಗಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ’ ಎಂದು ಹೇಳಿದ್ದಾರೆ.

ಬೇಗೂರು ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಆರೋಪಿ ಅಕ್ಬರ್‌ಗಾಗಿ ಹುಡುಕಾಟ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

AstraZeneca

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್

(CIN: L24231KA1979PLC003563)

ರಿಜಿಸ್ಟರ್ಡ್ ಆಫೀಸ್: ಬ್ಲಾಕ್ ಎನ್1, 12ನೇ ಮಹಡಿ, ಮಾನ್ಯತಾ ಎಂಬಸಿ ಬಿಸಿನೆಸ್ ಪಾರ್ಕ್, ರಾಚೇನಹಳ್ಳಿ, ಔಟರ್ ರಿಂಗ್ ರೋಡ್, ಬೆಂಗಳೂರು – 560 045

ಈಮೇಲ್: comp.secy@astrazeneca.com, ವೆಬ್: www.astrazeneca.com/india

ದೂ.: +91 80 6774 8000, ಫ್ಯಾಕ್ಸ್: 080 6774 8857

ಷೇರು ಪ್ರಮಾಣಪತ್ರ ಕಳೆದಿರುವ ಬಗ್ಗೆ ಸೂಚನೆ

ಈ ಕೆಳಗೆ ತಿಳಿಸಿರುವ ಕಂಪನಿಯ ಷೇರು ಪ್ರಮಾಣಪತ್ರ ಕಳೆದಿದೆ ಎಂದು ಷೇರುದಾರ ವರದಿ ಮಾಡಿದ್ದಾರೆ ಮತ್ತು ಮುಖ ಬೆಲೆ ರೂ. 2/– ರಂತೆ ನಕಲಿ ಷೇರು ಪ್ರಮಾಣಪತ್ರ ನೀಡುವಂತೆ ಷೇರುದಾರ ಕಂಪನಿಯನ್ನು ಕೋರಿದ್ದಾರೆ ಎಂದು ಈ ಮೂಲಕ ಸೂಚನೆಯನ್ನು ನೀಡುತ್ತಿದ್ದೇವೆ.

ಖಾತೆಪುಟ ಸಂಖ್ಯೆ	ಷೇರುಗಳ ಸಂಖ್ಯೆ (ಮುಖ ಬೆಲೆ ರೂ.2)	ಕಳೆದು ಹೋಗಿರುವ ಷೇರು ಪ್ರಮಾಣಪತ್ರಗಳ ವಿವರಗಳು		ಷೇರುದಾರರ ಹೆಸರುಗಳು
		ಷೇರುಗಳ ಪ್ರಮಾಣಪತ್ರ ಸಂಖ್ಯೆ	ವಿಶಿಷ್ಟ ಸಂಖ್ಯೆಗಳು	
J000170	250	962	13866591-13866840	ಜಗದೀಶ್ ಉಬ್ರಾಣಿ ಸುರೇಶ್ ತಲ್ರೇಜಾ (ಮೃತ)

ಈ ಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಹದಿನೈದು ದಿನಗಳ ಒಳಗಾಗಿ ಸಾರ್ವಜನಿಕರಿಂದ ಯಾವುದೇ ಆಕ್ಷೇಪಣೆಯು ಸ್ವೀಕರಿಸದಿದ್ದಲ್ಲಿ, ಕಂಪನಿಯು ದಿನಾಂಕ 25ನೇ ಜನವರಿ 2022ರ ಸೆಬಿ ಸುತ್ತೋಲೆ ಸಂಖ್ಯೆ SEBI/HO/MIRSD/MIRSD_RTAMB/P/CIR/2022/8ರಂತೆ ದೃಢೀಕರಣ ಪತ್ರವನ್ನು ನೀಡಲು ಮುಂದುವರೆಯುತ್ತದೆ.

ಆಸ್ಟ್ರಾಜೆನೆಕ ಫಾರ್ಮಾ ಇಂಡಿಯಾ ಲಿಮಿಟೆಡ್ ಪರವಾಗಿ

ಸ್ಥಳ: ಬೆಂಗಳೂರು — ಮಾನಸ. ಆರ್

ದಿನಾಂಕ: 24/12/2024 — ಕಂಪನಿ ಸೆಕ್ರೆಟರಿ

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: CAO/CN/BNC/40/2024 ದಿನಾಂಕ: 19.12.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಕ್ಯಾತಸಂದ್ರ ಮತ್ತು ತುಮಕೂರು ನಿಲ್ದಾಣಗಳ ನಡುವೆ ಬಡ್ಡಿಹಳ್ಳಿ ಬದಿಯಲ್ಲಿ ರಾ.ಹೆ. 73ರ ಕಡೆಗೆ ಕಿಮೀ. 66/200–300 ರಲ್ಲಿ ಎಲ್‌ಸಿ ಸಂ. 39ಕ್ಕೆ ಬದಲಾಗಿ 1x42ಮೀ. ಬೋಸ್ಟ್ರಿಂಗ್ ಗಿರ್ಡರ್ (ರೈಲ್ವೆ ಪೋರ್ಷನ್) +08x18.71ಮೀ ಪಿಎಸ್‌ಸಿ ಗಿರ್ಡರ್‌ಗಳಿಂದ 2 ಲೇನ್ ಆರ್‌ಓಬಿ ಗಳು ಹಾಗೂ ರಾ.ಹೆ. 43 ರ ಕಡೆಗೆ 17x18.71ಮೀ ಪಿಎಸ್‌ಸಿ ಗಿರ್ಡರ್‌ನ ನಿರ್ಮಾಣ ಮತ್ತು ಆರ್‌ಓಬಿಯ ಎರಡೂ ಕಡೆಗಳಲ್ಲಿ ಮರ್ಜಿಂಗ್ ಲೆಂಗ್ತ್‌ನಲ್ಲಿ ರಿಟೇನಿಂಗ್ ವಾಲ್ ನಿರ್ಮಾಣ ಕಾರ್ಯ ಹಾಗೂ ಎಲೆಕ್ಟ್ರಿಕಲ್ ಕೆಲಸಗಳು ಸೇರಿದಂತೆ ಕಿಮೀ. 66/200–300 ರಲ್ಲಿ ಎಲ್‌ಸಿ ಸಂ. 39ಕ್ಕೆ ಬದಲಾಗಿ 1x5.5x2.5ಮೀ. ಆರ್‌ಸಿಸಿ ಬಾಕ್ಸ್‌ನಂತೆ ಪ್ರಸ್ತಾವಿತ ನಿಯಮಿತ ಎತ್ತರದ ಸಬ್‌ವೇ ಯ ನಿರ್ಮಾಣ ಕಾರ್ಯಗಳು (ಸಂಯುಕ್ತ ಕಾಮಗಾರಿ). (ಟೆಂಡರು ಉಲ್ಲೇಖ ಸಂ. ROB-LC-39-KIAT-TK)	ರೂ. 40,23,98,493/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **10.01.2025, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ **www.ireps.gov.in** ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾರ್ಯಗಳು/ಬೆಂಗಳೂರು ದಂಡು

PUB/648/AAMO/PRB/SWR/2024-25

South Western Railway - SWR | SWRRLY | SWRRLY

PUBLIC NOTICE

NOTICE is hereby given that, our client intends to transact with the lands situated in Chikkadunnasandra Village, Sarjapura Hobli, Anekal Taluk, Bangalore Urban District, measuring 59 acre 23 gunta excluding 2 acre 22 gunta kharab from the respective owners, which is more fully described in the Schedule hereunder and hereinafter to as the **“Schedule Property”**.

Any person having any subsisting claim, right, title or interest, in respect of the Schedule Property or any part thereof, in any manner including by way of easement, beneficial interest or pre-emption or under any agreement or other disposition or under any suit or award passed by any Court or Authority, arbitrator, lis-pendens, power of attorney, bequest, FSI, development rights, partnership, family arrangement or settlement or otherwise encumbrance howsoever **(“Claim”),** are hereby requested to respond with documentary proof to the undersigned within 15 (Fifteen) days from the date of publication of this notice, failing which, it shall be presumed that no such Claim exists and if it existed, the claimant has relinquished such Claim and/or waived their right to exercise such Claim.

SCHEDULE PROPERTY

SL NO	LANDOWNER	SY NO	EXTENT			BOUNDARIES			
			ACRES	GUNTAS	KHARABH	EAST BY	WEST BY	NORTH BY	SOUTH BY
1.	Akarsh	6	5	34	4	Sy. No. 11	Sy. No. 5	Sy. Nos. 7 & 8	Sy. Nos. 91 & 92
2.		11	6	15	0	Sy No. 12/1	Sy. No. 6	Sy. Nos. 8 & 10/1	Sy. Nos. 90, 13/1 & 13/2
3.	D.V.Bhuvanesh	13	1	4.5	0	Sy. Nos. 22, 14/1 & 14/2	Sy. Nos. 90 & 11	Sy.Nos. 11, 12/1, 12/2 & 12/3	Sy. Nos. 89/1A1, 89/2 & 89/1A2
4.		14/2	1	29.75	0	Sy. No. 15	Sy. Nos. 13/3 & 89/2	Sy. No. 14/1	Sy. No. 14/4
5.	P.V. Satyan	14/3	0	33.5	0	Sy. Nos. 15, 88/1 & 88/2	Sy. No. 89/2	Sy. No. 14/4	Sy. Nos. 88/2, 88/1 & 89/1A2
6.	Jayaprakash Alavala, Divya Alavala, Shalini G Krishnan & Sudarshan Anil Kumar Shastry	14/4	0	20.25	0	Sy. No. 15	Sy. No. 89/2	Sy. No. 14/2	Sy. No. 14/3
7.	Basamma d/o. Doddamuniyamma	15	1	32	8	Sy. Nos. 16/1 & 16/2	Sy. Nos. 14/1, 14/2, 14/3 & 14/4	Sy. No. 21 & Road	Sy. Nos. 88/2 & 88/3
8.	Mohammed Asadulla Khan	16/1	0	10	7	Sy. Nos. 18 & 19	Sy. Nos. 15 & 16/2	Sy. Nos. 20 & 21	Sy. Nos. 16/2, 88/3 & 17.
9.	S.Vijayaprakash	16/1	1	35					
10.	Shankar G	16/2	1	6	0	Sy. No. 16/1	Sy. No. 15	Sy. No. 16/1	Sy. No. 88/3
11.	Yellappa	18	2	0	15	Sy. Nos. 37 & 38	Sy. No. 16/1	Sy. No. 19	Sy. Nos. 38 & 17
12.		19	2	38	6	Sy. Nos. 36 & 37	Sy.Nos.20 & 16/1	Sy. Nos. 34, 36 & Road	Sy. No. 18
13.		25	6	16	0	Sy. Nos. 34, 33 & Road	Sy. Nos. 24/2 & 26	Sy. Nos. 31/2	Sy. Nos. 20 & 21
14.	Ammayyamma, Shantakumari & S.V. Muniraju	88/3	1	20	6	Sy. Nos. 16/1 & 17	Sy. No. 88/2	Sy. Nos. 15, 16/1 & 16/2	Sy. No. 88/4
15.	Y.Venkataswamy	89/1 (a)1	0	9	25	Sy. No. 89/2	Sy. No. 13/2	Sy. No. 13/3	Sy. No. 89/1(a)2
16.	Venkatesh s/o. Chikkayellamma		0	16					
17.	Shanthamma, Yellamma & Venkatamma		0	22.75					
			0	17.25					
18.	Chethan s/o. late. Ramasheshaiah	89/ 1B	3	4	0	Sy. Nos. 89/1A3 & 94/1	Hosahalli Village Boundary	Sy. No. 89/1A3	Hosahalli Village Boundary
19.	Jagdishwar K Shantha, Jagdishwar Nagaraju K, ST Vijay, Purushotham Ramadevi K, Chanchulakshmi PremKumar & SK Sujatha.G	90	1	6	0	Sy. Nos. 13/1, 89/1A2, 89/1A3 & 89/1B	Sy. No. 91	Sy. No. 11	Hosahalli Village Boundary
20.		91	1	39	0	Sy. No. 90	Sy. No. 92	Sy. No. 6	Hosahalli Village Boundary
21.	Chowdareddy	94 /1	1	21	8	Sy. Nos. 72 & 73	Sy. Nos. 89/1A2, 89/1A3 & 89/1B	Sy. Nos. 88/4 & 87	Sy. Nos. 86 & 74
22.	H.M. Krishna Reddy		1	3					
23.			1	0					
24.	S. Akarsh		2	8					
25.	Gowramma & Ravi		4	26					
26.	S.M. Paapanna		0	15					
27.	S. Akarsh	94/2	1	26	3				
28.	Naveen Chandra S	94/3	0	21	0				
29.	Naresh Kumar S	94/4	0	9	0				
30.		94/5	1	6	0				
31.	S. David	89/ 1A2	3	0	20	Sy. Nos. 88/1, 88/4 & 94/1	Sy. No. 90	Sy. Nos. 89/1A1 & 89/2	Sy. No. 89/1A3

Dated this 25th day of December 2024

Pavithra Thammaiah
Khaitan & Co LLP
Embassy Quest, 3rd Floor, 45/1, Magrath Road
Bengaluru-560 025
T: +91 80 43397000

ಚಿನ್ನದ ವ್ಯಾಪಾರಿಗೆ ₹9.82 ಕೋಟಿ ವಂಚನೆ ಆರೋಪ

ನಟ ಧರ್ಮೇಂದ್ರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಮಾಜಿ ಸಂಸದ ಡಿ.ಕೆ. ಸುರೇಶ್ ಅವರ ತಂಗಿ ಎಂದು ನಂಬಿಸಿ ಚಿನ್ನದಂಗಡಿ ಮಾಲೀಕರಿಗೆ ₹9.82 ಕೋಟಿ ವಂಚನೆ ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಐಶ್ವರ್ಯಾ ಗೌಡ, ನಟ ಧರ್ಮೇಂದ್ರ ಸೇರಿ ಮೂವರ ವಿರುದ್ಧ ಚಂದ್ರಾಲೇಔಟ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಚಂದ್ರಾ ಲೇಔಟ್‌ನ ವಾರಾಹಿ ವರ್ಲ್ಡ್ ಆಫ್ ಗೋಲ್ಡ್ ಚಿನ್ನದಂಗಡಿಯ ಮಾಲೀಕರಾದ ವನಿತಾ ಎಸ್.ಐತಾಳ್ ಅವರ ದೂರಿನ ಮೇರೆಗೆ ಐಶ್ವರ್ಯಾ ಗೌಡ, ಅವರ ಗಂಡ ಕೆ.ಎನ್. ಹರೀಶ್ ಹಾಗೂ ನಟ ಬಿ. ಧರ್ಮೇಂದ್ರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

‘ಮಾಜಿ ಸಂಸದರ ಸಹೋದರಿ, ರಾಜಕೀಯ ನಾಯಕರ ಪರಿಚಯವಿದೆ ಎಂದು ಐಶ್ವರ್ಯಾ ಗೌಡ ಹಾಗೂ ಆಕೆಯ ಪತಿ ಹರೀಶ್ ನಂಬಿಸಿದ್ದಾರೆ. ಸಾಲದ ರೂಪದಲ್ಲಿ ಚಿನ್ನ ಪಡೆದು ಆರಂಭದಲ್ಲಿ ಕೆಲವು ಬಾರಿ ಹಣ ನೀಡಿದ್ದಾರೆ. ಆದರೆ, 2023ರ ಅಕ್ಟೋಬರ್‌ನಿಂದ 2024ರ ಏಪ್ರಿಲ್‌ವರೆಗೆ ಹಂತ ಹಂತವಾಗಿ ಒಟ್ಟು 14 ಕೆ.ಜಿ. 660 ಗ್ರಾಂ. ಚಿನ್ನ ಪಡೆದುಕೊಂಡಿದ್ದಾರೆ. ಇದರ ಮೌಲ್ಯ ₹8,41,25,430. ಚಿನ್ನಕ್ಕೆ ಪ್ರತಿಯಾಗಿ ಹಣ ನೀಡಿಲ್ಲ. ಹಣ ಕೇಳಿದಾಗ ಆರೋಪಿಗಳು 2024ರ ಜುಲೈವರೆಗೂ ಸಮಯಾವಕಾಶ ಕೇಳಿದ್ದರು. ಅಲ್ಲದೇ ಡಿ.ಕೆ.ಸುರೇಶ್ ಧ್ವನಿಯಲ್ಲಿ ಧರ್ಮೇಂದ್ರ ಅವರಿಂದ ಕರೆ ಮಾಡಿಸಿ ಸಮಯ ಕೇಳಿದ್ದರು. ನಮ್ಮಿಂದ ಪಡೆದುಕೊಂಡಿದ್ದ ಚಿನ್ನದ ಬಾಬ್ತು ಹಣ ಪಾವತಿ ಸಂಬಂಧ ಒಪ್ಪಂದವನ್ನೂ ಮಾಡಿಕೊಟ್ಟಿದ್ದರು. ನಾವು ನೀಡಿರುವ ಚಿನ್ನದ ಮೌಲ್ಯ ಪ್ರಸ್ತುತ ಮಾರುಕಟ್ಟೆ ದರದಲ್ಲಿ ₹ 9,82,21,598 ಆಗುತ್ತದೆ’ ಎಂದು ವನಿತಾ ದೂರಿನಲ್ಲಿ ತಿಳಿಸಿದ್ದಾರೆ.

‘ಕಾಲಾವಕಾಶ ಮುಗಿದ ಬಳಿಕ ಹಣ ವಾಪಸ್ ಕೇಳಿದಾಗ, ಧರ್ಮೇಂದ್ರ ಮೂಲಕ ಕರೆ ಮಾಡಿಸಿ ಮಾಜಿ ಸಂಸದರ ಧ್ವನಿಯಲ್ಲಿ ಮಾತನಾಡಿಸಿದ್ದಾರೆ. ಈ ವಿಷಯ ತಿಳಿದ ಬಳಿಕ ಐಶ್ವರ್ಯಾಗೆ ಕರೆ ಮಾಡಿ ಚಿನ್ನ ಖರೀದಿಯ ಬಾಕಿ ಹಣ ನೀಡುವಂತೆ ಕೇಳಿದಾಗ, ಧರ್ಮೇಂದ್ರ ಅವರನ್ನು ಅಂಗಡಿಗೆ ಕಳುಹಿಸಿ ಬೆದರಿಸಿದ್ದಾರೆ. ’ ಎಂದು ವನಿತಾ ಅವರು ದೂರಿನಲ್ಲಿ ಆರೋಪಿಸಿದ್ದಾರೆ.

‘ಮುಂಬೈ, ಬೆಂಗಳೂರಿನ ವಿವಿಧ ಚಿನ್ನದ ವ್ಯಾಪಾರಿಗಳಿಂದ ಚಿನ್ನಾಭರಣ ಪಡೆದು ಆರೋಪಿಗಳಿಗೆ ನೀಡಲಾಗಿದೆ. ಆದರೆ, ಆರೋಪಿಗಳು ಹಣ ನೀಡದಿರುವುದರಿಂದ ದೈನಂದಿನ ವ್ಯವಹಾರ ನಡೆಸುವುದು ಕಷ್ಟವಾಗಿದೆ ’ ಎಂದು ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳ ವಿಚಾರಣೆ ನಡೆಸಲು ಪೊಲೀಸರು ಸಿದ್ಧತೆ ಮಾಡಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಆರು ಮಂದಿ ಬಂಧಿಸಿದ ಸೈಬರ್ ಠಾಣೆ ಪೊಲೀಸರು

ವಂಚನೆ ಹಣದಲ್ಲಿ ಔಡಿ ಕಾರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಫ್ಟ್‌ವೇರ್ ಕಂಪನಿಯ ಲೋಗೊ ಹಾಗೂ ವ್ಯವಸ್ಥಾಪಕ ನಿರ್ದೇಶಕರ ಡಿ.ಪಿಯಲ್ಲಿನ ಭಾವಚಿತ್ರವನ್ನು ಬಳಸಿಕೊಂಡು ಲಕ್ಷಾಂತರ ರೂಪಾಯಿ ಸುಲಿಗೆ ಮಾಡಿದ್ದ ಮಹಿಳೆ ಸೇರಿದಂತೆ ಆರು ಮಂದಿಯನ್ನು ಆಗ್ನೇಯ ವಿಭಾಗದ ಸೈಬರ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಹೈದರಾಬಾದ್ ಗ್ರೀಷ್ಮಾ ರೆಡ್ಡಿ(23), ದಿನೇಶ್(24), ಹಾರತ್(23), ಪವನ್ ಕುಮಾರ್(24), ಸಾಯಿ ಕುಮಾರ್(23), ರವಿತೇಜಾ (32) ಬಂಧಿತರು.

ಬಂಧಿತರಿಂದ ₹58 ಸಾವಿರ ನಗದು, ಔಡಿ ಕಾರು ಜಪ್ತಿ ಮಾಡಿಕೊಳ್ಳಲಾಗಿದೆ. ಎಲ್ಲ ಆರೋಪಿಗಳ ಬ್ಯಾಂಕ್ ಖಾತೆಗಳ ವಹಿವಾಟು ಸ್ಥಗಿತ ಮಾಡಲಾಗಿದೆ. ಅದರಲ್ಲಿದ್ದ ₹5 ಲಕ್ಷವನ್ನು ದೂರುದಾರರ ಖಾತೆಗೆ ವಾಪಸ್ ವರ್ಗಾಯಿಸಲಾಗಿದೆ. ವಂಚನೆ ಮಾಡಿದ್ದ ಹಣದಲ್ಲಿ ಆರೋಪಿಗಳು ಔಡಿ ಕಾರು ಖರೀದಿಸಿದ್ದರು.

ಆರೋಪಿಗಳು ಬಿಟಿಎಂ ಲೇಔಟ್‌ನ ಎರಡನೇ ಹಂತದಲ್ಲಿ ಇರುವ ಸಾಫ್ಟ್‌ವೇರ್ ಕಂಪನಿ ಮಾಲೀಕರೊಬ್ಬರಿಗೆ ವಂಚಿಸಿದ್ದರು ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ಮಾಹಿತಿ ನೀಡಿದರು.

ಗ್ರೀಷ್ಮಾ, ದಿನೇಶ್ ಕುಮಾರ್, ಪವನ್ ಕುಮಾರ್, ಹಾರತ್ ಅವರು ಲೆಕ್ಕ ಪರಿಶೋಧನಾ (ಸಿಎ) ತರಬೇತಿ ಪಡೆಯುತ್ತಿದ್ದರು. ಅಲ್ಲದೇ ಹೈದರಾಬಾದ್‌ನ ಕಂಪನಿಯೊಂದರಲ್ಲಿ ಸಹಾಯಕರಾಗಿ ಕೆಲಸ ಮಾಡುತ್ತಿದ್ದರು. ಗ್ರೀಷ್ಮಾ ಮತ್ತು ರವಿತೇಜಾ ತೆಲುಗು ಸಿನಿಮಾಗಳ ಸಹಾಯಕ ನಿರ್ದೇಶಕರಾಗಿದ್ದು, ಜತೆಗೆ ಚಿತ್ರಕತೆ ಬರೆದು ಕೊಡುತ್ತಿದ್ದರು. ಆಗ ಗ್ರೀಷ್ಮಾ ಅವರಿಗೆ ಸೈಬರ್ ವಂಚಕರ ಪರಿಚಯ ಆಗಿತ್ತು. ಅದಾದ ಮೇಲೆ ಗ್ರೀಷ್ಮಾ ಸೈಬರ್ ವಂಚನೆಗೆ ಇಳಿದಿದ್ದರು ಎಂದು ಪೊಲೀಸರು ಹೇಳಿದರು.

ಬಿಟಿಎಂ ಲೇಔಟ್‌ನ ಎರಡನೇ ಹಂತದಲ್ಲಿರುವ ಕಂಪನಿಯ ಎಂ.ಡಿಯ ಡಿಪಿ ಹಾಗೂ ಲೋಗೊ ಬಳಸಿಕೊಂಡಿದ್ದ ಆರೋಪಿಗಳು, ವಾಟ್ಸ್ ಆ್ಯಪ್ ಮೂಲಕ ಕಂಪನಿಯ ಭದ್ರತಾ ಠೇವಣಿಗಾಗಿ ₹56 ಲಕ್ಷ ವರ್ಗಾವಣೆ ಮಾಡಬೇಕಿದೆ ಎಂದು ಸಂದೇಶ ಕಳುಹಿಸಿದ್ದರು. ಅದನ್ನು ನಂಬಿದ್ದ ಕಂಪನಿಯ ಅಕೌಂಟೆಂಟ್ ಸಂದೇಶದಲ್ಲಿ ಉಲ್ಲೇಖಿಸಿದ್ದ ಬ್ಯಾಂಕ್ ಖಾತೆಗೆ ಹಣ ವರ್ಗಾವಣೆ ಮಾಡಿದ್ದರು. ಬಳಿಕ ವಂಚನೆಗೆ ಒಳಗಾಗಿರುವುದು ಗೊತ್ತಾಗಿ ದೂರು ನೀಡಿದ್ದರು ಎಂದು ಪೊಲೀಸರು ಹೇಳಿದರು.

ವಿದೇಶದಲ್ಲಿದ್ದ ವಂಚಕರು, ಆನ್‌ಲೈನ್ ಮೂಲಕ ವಂಚಿಸಿದ ಹಣವನ್ನು ಗ್ರೀಷ್ಮಾ ನೀಡಿದ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸುತ್ತಿದ್ದರು. ಕೆಲವೇ ನಿಮಿಷಗಳಲ್ಲಿ ಈ ಹಣವನ್ನು ಡ್ರಾ ಮಾಡಿ ಗ್ರೀಷ್ಮಾ ಮತ್ತು ಸಹಚರರು ಕ್ರಿಪ್ಟೊ ಕರೆನ್ಸಿ ಖರೀದಿಸುತ್ತಿದ್ದರು ಎಂದು ಮೂಲಗಳು ಹೇಳಿವೆ.

ಮದ್ಯ ಸೇವಿಸಿ ವಾಹನ ಚಾಲನೆ 120 ಪ್ರಕರಣ ದಾಖಲು

ಬೆಂಗಳೂರು: ನಗರದಲ್ಲಿ ವಿಶೇಷ ಕಾರ್ಯಾಚರಣೆ ಮುಂದುವರೆಸಿರುವ ನಗರ ಸಂಚಾರ ವಿಭಾಗದ ಪೊಲೀಸರು, ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿದ್ದ ಚಾಲಕರು ಹಾಗೂ ಸವಾರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ.

ಡಿ.23ರಂದು ಒಂದೇ 9,685ಕ್ಕೂ ಹೆಚ್ಚು ವಾಹನಗಳನ್ನು ಸಂಚಾರ ವಿಭಾಗದ ಪೊಲೀಸರು ತಪಾಸಣೆ ನಡೆಸಿದರು. ಮದ್ಯಪಾನ ಮಾಡಿ ವಾಹನ ಚಾಲನೆ ಮಾಡುತ್ತಿದ್ದ 120 ಮಂದಿ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಳ್ಳಲಾಗಿದೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

‘ನಗರದಲ್ಲಿ ಅಪಘಾತ ತಪ್ಪಿಸಲು ಹಾಗೂ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡಲು ಇದೇ ರೀತಿಯ ಕಾರ್ಯಾಚರಣೆ ಮುಂದುವರೆಸಲಾಗುವುದು’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಿಸಿಬಿ ಪೊಲೀಸರ ಕಾರ್ಯಾಚರಣೆ

ಹಣಕ್ಕಾಗಿ ಬ್ಲ್ಯಾಕ್‌ಮೇಲ್: ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಾರ್ಟಿಯಲ್ಲಿ ಬೇರೆಯವರ ಜತೆಗೆ ಆತ್ಮೀಯವಾಗಿರುವಂತೆ ಗೆಳತಿಗೆ ಒತ್ತಾಯಿಸಿದ್ದ ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿರುವ ಇಬ್ಬರು ಆರೋಪಿಗಳು, ತಮ್ಮ ಸ್ನೇಹಿತೆಯ ಅಶ್ಲೀಲ ಫೋಟೊ ಮತ್ತು ವಿಡಿಯೊ ಇಟ್ಟುಕೊಂಡು ಹಣಕ್ಕೆ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರು ಎಂಬುದು ಸಿಸಿಬಿ ತನಿಖೆಯಿಂದ ಗೊತ್ತಾಗಿದೆ.



ಹೇಮಂತ್

ಹರೀಶ್

ಎಲೆಕ್ಟ್ರಾನಿಕ್ ಸಿಟಿ ನಿವಾಸಿ ಹೇಮಂತ್ (32) ಮತ್ತು ಭದ್ರಾವತಿಯ ಹರೀಶ್(30) ಬಂಧಿತ ಆರೋಪಿಗಳು.

ಆರೋಪಿಗಳಿಂದ ಏಳು ಮೊಬೈಲ್ ಫೋನ್‌ಗಳು ಹಾಗೂ ಒಂದು ಲ್ಯಾಪ್‌ಟಾಪ್ ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

‘ಎಲೆಕ್ಟ್ರಾನಿಕ್ ಸಿಟಿಯಲ್ಲಿ ಆರೋಪಿ ಹೇಮಂತ್ ಎಲೆಕ್ಟ್ರಿಕ್ ಉಪಕರಣಗಳ ಮಾರಾಟ ಅಂಗಡಿ ನಡೆಸುತ್ತಿದ್ದಾನೆ. ಅಂಗಡಿಗೆ ಬಂದಿದ್ದ ಸಂತ್ರಸ್ತೆಯ ಪರಿಚಯವಾಗಿತ್ತು. ಇಬ್ಬರೂ ಆತ್ಮೀಯರಾಗಿದ್ದರು. ಬಳಿಕ ಇಬ್ಬರ ನಡುವೆ ಆತ್ಮೀಯತೆ ಬೆಳೆದು, ನಾಲ್ಕು ವರ್ಷಗಳ ಕಾಲ ಒಂದೇ ಮನೆಯಲ್ಲಿ ಸಹಜೀವನ ನಡೆಸುತ್ತಿದ್ದರು. ಕೆಲವು ದಿನಗಳ ಬಳಿಕ ಅತ್ತಿಬೆಲೆಯಲ್ಲಿ ಸ್ನೇಹಿತೆಯ ಹೆಸರಿನಲ್ಲಿ ಬಾರ್ ಆ್ಯಂಡ್ ರೆಸ್ಟೋರೆಂಟ್ ತೆರೆಯಲಾಗಿತ್ತು. ರೆಸ್ಟೋರೆಂಟ್ ನೋಡಿಕೊಳ್ಳಲು ಹರೀಶ್ ಅವರನ್ನು ನೇಮಿಸಿದ್ದರು. ಹೀಗಾಗಿ, ಸಂತ್ರಸ್ತೆ ಇಬ್ಬರ ಜತೆಯೂ ಆತ್ಮೀಯವಾಗಿದ್ದರು’ ಎಂದು ಮೂಲಗಳು ಹೇಳಿವೆ.

‘ಆರೋಪಿಗಳಿಬ್ಬರೂ ಪಾರ್ಟಿಗೆ ಸಂತ್ರಸ್ತೆಯನ್ನು ಕರೆದೊಯ್ದು, ಮದ್ಯದ ಅಮಲಿನಲ್ಲಿ ಬೇರೆ ಪುರುಷನ ಜತೆ ಸಹಕರಿಸುವಂತೆ ಆಕೆಗೆ ಪೀಡಿಸಿದ್ದರು. ಅದಕ್ಕೆ ಸಂತ್ರಸ್ತೆ ನಿರಾಕರಿಸಿದಾಗ ಆರೋಪಿಗಳಿಬ್ಬರೂ ಆಕೆ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದರು. ಈ ಘಟನೆಯಾದ ಮೇಲೆ ಸಂತ್ರಸ್ತೆ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದರು. ಇತ್ತೀಚೆಗೆ ಹರೀಶ್ ಬಳಿಯಿದ್ದ ಸಂತ್ರಸ್ತೆಯ ಅಶ್ಲೀಲ ಫೋಟೊ ಹಾಗೂ ವಿಡಿಯೊಗಳನ್ನು ಹೇಮಂತ್‌ಗೆ ಕಳುಹಿಸಿದ್ದ. ಆ ಫೋಟೊ ಹಾಗೂ ವಿಡಿಯೊಗಳನ್ನು ಇಟ್ಟುಕೊಂಡು ಇಬ್ಬರೂ ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರು. ಸಂತ್ರಸ್ತೆ ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಗಿತ್ತು’ ಎಂದು ಪೊಲೀಸರು ಹೇಳಿದರು.

ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರವನ್ನು ಈಶಾನ್ಯ ವಿಭಾಗದ ಡಿಸಿಪಿ ವಿ.ಜೆ. ಸಜೀತ್ ಉದ್ಘಾಟಿಸಿದರು

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: SG-SWR-PROJ-Kavach-SBC ದಿನಾಂಕ: 20.12.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
ನೈಋತ್ಯ ರೈಲ್ವೆಯ ಬೆಂಗಳೂರು ಮತ್ತು ಮೈಸೂರು ವಿಭಾಗದಲ್ಲಿ 778 ಆರ್‌ಕಿಮೀ [illegible]	ರೂ. 191,82,23,167.80

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **13.01.2025, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

PUB/654/AAF/PRB/SWR/2024-25

South Western Railway - SWR | SWRRLY | SWRRLY

1,007 ಯೂನಿಟ್ ರಕ್ತ ಸಂಗ್ರಹ

ಬೆಂಗಳೂರು: ರಾಮಯ್ಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಂಸ್ಥೆಯ ರಾಷ್ಟ್ರೀಯ ಸೇವಾ ಯೋಜನಾ (ಎನ್‌ಎಸ್‌ಎಸ್) ಘಟಕ ಹಾಗೂ ವಿವಿಧ ರೋಟರಿ ಸಂಸ್ಥೆಗಳ ಸಹಯೋಗದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರದಲ್ಲಿ ಒಟ್ಟು 1,007 ಯೂನಿಟ್ ರಕ್ತ ಸಂಗ್ರಹಿಸಲಾಯಿತು.

ಶಿಬಿರ ಉದ್ಘಾಟಿಸಿ ಮಾತನಾಡಿದ ಈಶಾನ್ಯ ವಿಭಾಗದ ಡಿಸಿಪಿ ವಿ.ಜೆ. ಸಜೀತ್, ‘ಎನ್‌ಎಸ್‌ಎಸ್ ಮತ್ತು ಎನ್‌ಸಿಸಿ ಘಟಕಗಳ ವಿದ್ಯಾರ್ಥಿಗಳು ಗ್ರಾಮೀಣ ಭಾಗದಲ್ಲಿಯೂ ಶಿಬಿರಗಳನ್ನು ಹಮ್ಮಿಕೊಂಡರೆ ಅನುಭವ ಮತ್ತಷ್ಟು ಹೆಚ್ಚಳವಾಗಲಿದೆ’ ಎಂದು ಸಲಹೆ ನೀಡಿದರು.

ಗೋಕುಲ ಶಿಕ್ಷಣ ಪ್ರತಿಷ್ಠಾನದ ಉಪಾಧ್ಯಕ್ಷ ಎಂ.ಆರ್. ಸೀತಾರಾಂ ಮಾತನಾಡಿ, ‘ಎರಡು ದಶಕಗಳಲ್ಲಿ ಸಮಾಜದಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಬೇರೆಯವರ ಬಗ್ಗೆ ಸಹನೆ, ಕಾಳಜಿ ಇಲ್ಲವಾಗಿದೆ. ಸ್ವಾರ್ಥ ಮನೋಭಾವ ಬೆಳೆದು ಸೇವಾ ಮನೋಭಾವ ಕ್ಷೀಣಿಸುತ್ತಿದೆ’ ಎಂದರು.

ಕಾಲೇಜಿನ ಒಂದು ಸಾವಿರ ವಿದ್ಯಾರ್ಥಿಗಳು ರಕ್ತದಾನ ಮಾಡಿದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಎಚ್.ವಿ. ಪಾರ್ಶ್ವನಾಥ್, ಹಣಕಾಸು ವಿಭಾಗದ ಮುಖ್ಯಸ್ಥ ಜಿ. ರಾಮಚಂದ್ರ, ಪ್ರಾಂಶುಪಾಲ ಎನ್.ವಿ.ಆರ್. ನಾಯ್ಡು, ಎನ್‌ಎಸ್‌ಎಸ್ ಘಟಕದ ಮುಖ್ಯಸ್ಥ ಪುಟ್ಟಬೋರೇಗೌಡ ಉಪಸ್ಥಿತರಿದ್ದರು.

ಚಾಮರಾಜಪೇಟೆ ವಾರ್ಡ್ ಸಂಖ್ಯೆ 140ರ ವ್ಯಾಪ್ತಿಯ ರಸ್ತೆಗಳ ವೈಟ್ ಟಾಪಿಂಗ್

ಬಿಬಿಎಂಪಿಗೆ ಹೈಕೋರ್ಟ್ ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಾಮರಾಜಪೇಟೆ ವಾರ್ಡ್ ಸಂಖ್ಯೆ 140ರ ವ್ಯಾಪ್ತಿಯ ರಸ್ತೆಗಳ ವೈಟ್ ಟಾಪಿಂಗ್ ಕಾಮಗಾರಿ ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗೆ ಸಂಬಂಧಿಸಿದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಚಾಮರಾಜಪೇಟೆ ವಿಠಲನಗರ ನಿವಾಸಿ ಶಶಾಂಕ ಜೆ. ಶ್ರೀಧರ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ನ್ಯಾಯಮೂರ್ತಿ ಬಿ.ಎಂ.ಶ್ಯಾಮ್ ಪ್ರಸಾದ್ ಹಾಗೂ ನ್ಯಾಯಮೂರ್ತಿ ವಿ. ಶ್ರೀಶಾನಂದ ಅವರಿದ್ದ ರಜಾ ಕಾಲದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಬಿಬಿಎಂಪಿ ಮುಖ್ಯ ಆಯುಕ್ತ ಸೇರಿದಂತೆ ಇತರ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 27ಕ್ಕೆ ಮುಂದೂಡಿದೆ.

ಹೈಕೋರ್ಟ್ ಸುದ್ದಿ

ಅರ್ಜಿಯಲ್ಲಿ ಏನಿದೆ?: 'ವಾರ್ಡ್ ಸಂಖ್ಯೆ 137, 138 ಮತ್ತು 140ರ ರಸ್ತೆಗಳಿಗೆ ಡಾಂಬರೀಕರಣ ಮಾಡಲು 2024ರ ಫೆಬ್ರುವರಿ 8ರಂದು ₹29.31 ಕೋಟಿ ಮೊತ್ತದ ಕಾಮಗಾರಿಗೆ ಟೆಂಡರ್ ಆಹ್ವಾನಿಸಿ, ಕಾರ್ಯಾದೇಶ ನೀಡಲಾಗಿತ್ತು. ಈ ನಿಟ್ಟಿನಲ್ಲಿ ಎರಡು-ಮೂರು ತಿಂಗಳ ಹಿಂದೆ ₹8 ಕೋಟಿಯನ್ನೂ ಪಾವತಿಸಲಾಗಿದೆ. ಏತನ್ಮಧ್ಯೆ, ಇದೇ ವಾರ್ಡ್‌ನ ರಸ್ತೆಗಳ ವೈಟ್ ಟಾಪಿಂಗ್ ಕಾಮಗಾರಿಗೆ ಟೆಂಡರ್ ಕರೆಯಲಾಗಿದೆ. ಇದರಿಂದ ಸಾರ್ವಜನಿಕರ ತೆರಿಗೆ ಹಣ ವೃಥಾ ಅಪವ್ಯಯವಾಗಲಿದೆ' ಎಂದು ಅರ್ಜಿಯಲ್ಲಿ ದೂರಲಾಗಿದೆ.

'ವಾರ್ಡ್‌ನ ಎಂಟು ಪ್ರಮುಖ ರಸ್ತೆಗಳ ಸಮಗ್ರ ಅಭಿವೃದ್ಧಿಗೆ ಆರಂಭಿಸಿರುವ ಟೆಂಡರ್ ಪ್ರಕ್ರಿಯೆಯನ್ನು ರದ್ದುಪಡಿಸಬೇಕು. ಈ ಸಂಬಂಧ ಅರ್ಜಿದಾರರು 2024ರ ಡಿಸೆಂಬರ್ 19ರಂದು ಸಲ್ಲಿಸಿರುವ ಮನವಿ ಪರಿಗಣಿಸುವಂತೆ ಮತ್ತು ವೈಟ್ ಟಾಪಿಂಗ್ ಕಾಮಗಾರಿ ಸ್ಥಗಿತಗೊಳಿಸುವಂತೆ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ನಿರ್ದೇಶಿಸಬೇಕು. ತೆರಿಗೆ ಹಣದ ದುರ್ಬಳಕೆ ಕುರಿತು ಸಮಗ್ರ ತನಿಖೆ ನಡೆಸುವಂತೆಯೂ ಸಂಬಂಧಿಸಿದವರಿಗೆ ಆದೇಶಿಸಬೇಕು' ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

ಟಾಟಾನಗರದಲ್ಲಿ ರಾಜಕಾಲುವೆ ಅಭಿವೃದ್ಧಿಗೆ ಸೂಚನೆ

ಬೆಂಗಳೂರು: ಯಲಹಂಕ ವಲಯದ ಟಾಟಾನಗರದಲ್ಲಿ ಮಳೆ ಬಂದಾಗ ಉಂಟಾಗುತ್ತಿರುವ ಅನಾಹುತಗಳನ್ನು ತಪ್ಪಿಸುವುದಕ್ಕಾಗಿ ₹ 2 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳುವಂತೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅಧಿಕಾರಿಗಳಿಗೆ ಮಂಗಳವಾರ ಸೂಚನೆ ನೀಡಿದರು.

ಯಲಹಂಕ ವಲಯ ವ್ಯಾಪ್ತಿಯಲ್ಲಿ 'ಮುಖ್ಯ ಆಯುಕ್ತರ ನಡೆ ವಲಯದ ಕಡೆ' ಕಾರ್ಯಕ್ರಮದ ಸಭೆಯಲ್ಲಿ, ಸಾರ್ವಜನಿಕರೊಬ್ಬರು ಟಾಟಾನಗರದ ಸಮಸ್ಯೆ ಕುರಿತು ಗಮನ ಸೆಳೆದರು. ಆಗ ಆಯುಕ್ತರು, ಅಧಿಕಾರಿಗಳಿಗೆ ಈ ರೀತಿ ಸೂಚಿಸಿದರು.

ಟಾಟಾನಗರ ವ್ಯಾಪ್ತಿಯಲ್ಲಿ ರಾಜಕಾಲುವೆ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಕೂಡಲೇ ಪ್ರಸ್ತಾವ ಸಿದ್ಧಪಡಿಸಿ. ಟೆಂಡರ್ ಕರೆದು ಅಭಿವೃದ್ಧಿ ಕಾಮಗಾರಿ ಆರಂಭಿಸಿ ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಕೆನರಾ ಬ್ಯಾಂಕ್ ಕಾಲೊನಿಯ ರಾಜಾರಾಂ ಮೋಹನ ರಾಯ್ ರಸ್ತೆಯಲ್ಲಿ ಅನಧಿಕೃತ ರಸ್ತೆ ಉಬ್ಬುಗಳನ್ನು ಹಾಕಿದ್ದು, ಅದನ್ನು ತೆರವುಗೊಳಿಸಬೇಕು ಎಂದು ಸಭೆಯಲ್ಲಿ ನಾಗರಿಕರೊಬ್ಬರು ಕೋರಿದರು.

ಇದಕ್ಕೆ ಪ್ರತಿಕ್ರಿಯಿಸಿದ ಆಯುಕ್ತರು, ಕೂಡಲೆ ಸ್ಥಳ ಪರಿಶೀಲಿಸಿ, ಅವೈಜ್ಞಾನಿಕವಾಗಿ ಉಬ್ಬುಗಳನ್ನು ಹಾಕಿದ್ದರೆ ಸೂಕ್ತ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ಕಳೆದ ಬಾರಿ ನಾಗರಿಕರಿಂದ ಬಂದಂತಹ ಬಹುತೇಕ ಸಮಸ್ಯೆಗಳನ್ನು ಬಗೆಹರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದರು. ಮಂಗಳವಾರದ ಸಭೆಯಲ್ಲಿ ನಾಗರಿಕರಿಂದ 35 ದೂರುಗಳು ಬಂದಿದ್ದು, ಅವುಗಳಿಗೆ ಸಂಬಂಧಿಸಿದಂತೆಯೂ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ಮುಖ್ಯ ಆಯುಕ್ತರು ತಾಕೀತು ಮಾಡಿದರು.

ವಲಯ ಆಯುಕ್ತ ಕರೀಗೌಡ, ಪ್ರಧಾನ ಎಂಜಿನಿಯರ್ ಬಿ.ಎಸ್. ಪ್ರಹ್ಲಾದ್, ವಲಯ ಮುಖ್ಯ ಎಂಜಿನಿಯರ್ ರಂಗನಾಥ್ ಸಭೆಯಲ್ಲಿದ್ದರು.

ಜಯನಗರದ ಜೆ.ಎಸ್‌.ಎಸ್‌. ಸಭಾಂಗಣದಲ್ಲಿ ನಡೆದ ರಂಗ ಪ್ರವೇಶ ಕಾರ್ಯಕ್ರಮದಲ್ಲಿ ಆದ್ಯಾ ದೇಶ್‌ಮುಖ್ ಅವರು ಭರತನಾಟ್ಯ ಪ್ರಸ್ತುತಪಡಿಸಿದರು

ಬಿಡಿಎ: ವಾಣಿಜ್ಯ ನಿವೇಶನ ಹರಾಜು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಆರ್‌ಎಂವಿ ಎರಡನೇ ಹಂತದ ಲೊಟ್ಟೆಗೊಲ್ಲಹಳ್ಳಿಯಲ್ಲಿರುವ ವಾಣಿಜ್ಯ ನಿವೇಶನಗಳ ಮಾರಾಟಕ್ಕೆ ಜನವರಿ 6 ಮತ್ತು 7ರಂದು ಇ ಹರಾಜು ನಡೆಸಲಿದೆ.

ಸರ್ವೆ ನಂಬರ್ 10/1 ಮತ್ತು 10/11 ಎಫ್‌ನಲ್ಲಿರುವ 2,380.58 ಚದರ ಮೀಟರ್ ವಿಸ್ತೀರ್ಣದ ನಿವೇಶನವನ್ನು ಹರಾಜು ಹಾಕಲಾಗುವುದು. ಪ್ರತಿ ಚದರ ಮೀಟರ್‌ಗೆ ₹2 ಲಕ್ಷ ದರ ನಿಗದಿ ಮಾಡಲಾಗಿದೆ.

ಇ ಹರಾಜಿನಲ್ಲಿ ಪಾಲ್ಗೊಳ್ಳುವ ಬಿಡ್‌ದಾರರು ಜನವರಿ 4ರ ಒಳಗೆ ಹೆಸರು ನೋಂದಾಯಿಸಿಕೊಳ್ಳಬೇಕು. ಜನವರಿ 6 ಮತ್ತು 7ರಂದು ಇ ಹರಾಜಿನ ನೇರ ಬಿಡ್ಡಿಂಗ್ ನಡೆಯಲಿದೆ. ಈ ನಿವೇಶನಗಳ ಹರಾಜು ಮತ್ತು ಮಾರಾಟವನ್ನು ಬಿಡಿಎ ವಾಣಿಜ್ಯ ನಿವೇಶನಗಳು ಮತ್ತು ಮೂಲೆ ನಿವೇಶನಗಳ ವಿಲೇವಾರಿ ನಿಯಮಾವಳಿ 1984ರ ಅನುಸಾರ ನಡೆಸಲಾಗುವುದು ಎಂದು ಬಿಡಿಎ ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: ದೂರವಾಣಿ ಸಂಖ್ಯೆ 080-23368435/ 23368036 ಅಥವಾ ವೆಬ್‌ಸೈಟ್ https://kppp.karnataka.gov.in ಸಂಪರ್ಕಿಸಬಹುದು.

ವಕ್ಫ್ ಜೆಪಿಸಿಗೆ ನಾಳೆ ರಾಜ್ಯ ಸರ್ಕಾರದ ವಿವರಣೆ

ನವದೆಹಲಿ: ವಕ್ಫ್ (ತಿದ್ದುಪಡಿ) ಮಸೂದೆ ಪರಿಶೀಲಿಸುತ್ತಿರುವ ಜಂಟಿ ಸಂಸದೀಯ ಸಮಿತಿಗೆ (ಜೆಪಿಸಿ) ಕರ್ನಾಟಕ ಸರ್ಕಾರ ಗುರುವಾರ ವಿವರಣೆ ನೀಡಲಿದೆ.

ವಕ್ಫ್ ಮಂಡಳಿಗಳು ಹಕ್ಕು ಸಾಧಿಸಿರುವ ಆಸ್ತಿಗಳು ಮತ್ತು ಸರ್ಕಾರ ಅಥವಾ ಸರ್ಕಾರಿ ಸಂಸ್ಥೆಗಳ ಅನಧಿಕೃತ ಸ್ವಾಧೀನದಲ್ಲಿರುವ ವಕ್ಫ್ ಆಸ್ತಿಗಳ ವಿವರ ಸಲ್ಲಿಸುವಂತೆ ವಿವಿಧ ರಾಜ್ಯಗಳಿಗೆ ಜೆಪಿಸಿ ಇತ್ತೀಚೆಗೆ ಸೂಚಿಸಿತ್ತು. ರಾಜ್ಯ ವಕ್ಫ್ ಮಂಡಳಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ನೇತೃತ್ವದ ಅಧಿಕಾರಿಗಳ ತಂಡವು ಸಮಿತಿಯ ಅಧ್ಯಕ್ಷ ಜಗದಂಬಿಕಾ ಪಾಲ್ ಹಾಗೂ ಸದಸ್ಯರಿಗೆ ವಿವರಗಳನ್ನು ನೀಡಲಿದೆ.


ಶ್ರೀ ಆರ್ ಕೃಷ್ಣಪ್ಪ ರವರಿಗೆ
(ಕರ್ನಾಟಕ ಸರ್ಕಾರದ ಮಾಜಿ ಮಂತ್ರಿಗಳು,
ಕೆ.ಪಿ.ಸಿ.ಸಿ ಉಪಾಧ್ಯಕ್ಷರು ಹಾಗೂ
ಎಸ್.ಅರ್.ಎಸ್ ವಿದ್ಯಾಸಂಸ್ಥೆಗಳ ಅಧ್ಯಕ್ಷರು)
Excellence in education SRS INSTITUTES
ದಿನಾಂಕ: 25-12-2024 ರಂದು
78ನೇ ಹುಟ್ಟು ಹಬ್ಬಕ್ಕೆ
ಪರಮಾತ್ಮನು ಆಯಸ್ಸು, ಆರೋಗ್ಯ ಹಾಗೂ ಅಂತಸ್ತುಗಳನ್ನು
ಇನ್ನೂ ಹೆಚ್ಚಿನ ಕಾಲ ವೃದ್ಧಿಸಲೆಂದು ಹಾರೈಸುತ್ತೇವೆ.
ಹಾರ್ದಿಕ ಶುಭಾಶಯಗಳನ್ನು ಕೋರುವವರು :
ಶ್ರೀ ರೇವಣ ಸಿದ್ಧೇಶ್ವರ ವಿದ್ಯಾಸಂಸ್ಥೆ ದತ್ತಿಯ
ಕಾರ್ಯದರ್ಶಿಗಳು, ನಿರ್ದೇಶಕರು, ಆಡಳಿತ ಮಂಡಳಿ, ಪ್ರಾಂಶುಪಾಲರು
ಹಾಗೂ ಸಂಸ್ಥೆಯ ಎಲ್ಲಾ ಭೋದಕ ಮತ್ತು ಭೋಧಕೇತರ ಸಿಬ್ಬಂದಿಯವರು.
ಸಮಸ್ತ ನಾಗರೀಕ ಬಂಧುಗಳಿಗೆ ಕ್ರಿಸ್‌ಮಸ್ ಹಾಗೂ ಹೊಸ ವರ್ಷದ ಶುಭಾಶಯಗಳು.



ಕಾರುಗಳಿಗೆ ಜಲಜನಕದ ಅಂಟಿನ ನಂಟು

ನೇಸರ ಕಾಡನಕುಪ್ಪೆ

ಇತ್ತೀಚೆಗೆ ಬೆಂಗಳೂರಿನ ನೆಲಮಂಗಲದ ಬಳಿ ಕಾರಿನ ಮೇಲೆ ಕಂಟೇನರ್ ಬಿದ್ದು, ಒಂದೇ ಕುಟುಂಬದ ಆರು ಮಂದಿ ಮೃತಪಟ್ಟ ಸುದ್ದಿ ನೀವೆಲ್ಲ ಕೇಳಿರಬಹುದು. ಹತ್ತಾರು ಟನ್ ತೂಕವಿರುವ ಕಂಟೇನರ್ ಬಿದ್ದು, ಅತ್ಯುತ್ತಮ ಗುಣಮಟ್ಟದ ವೋಲ್ವೊ ಕಾರಿನ ದೇಹವೇ ನಜ್ಜುಗುಜ್ಜಾಗಿತ್ತು. ಈ ಬಗೆಯ ಸುದ್ದಿಗಳನ್ನು ನಾವು ಮೊದಲ ಬಾರಿ ಕೇಳುತ್ತಿಲ್ಲ. ಅಪಘಾತಗಳಲ್ಲಿ ಕಾರುಗಳು ಇನ್ನಿಲ್ಲದಂತೆ ಗಾಸಿಯಾಗಿ, ಒಳಗಿರುವವರು ಮೃತಪಡುತ್ತಲೇ ಇರುತ್ತಾರೆ. ಹಾಗಾದರೆ ಇದಕ್ಕೇನು ಪರಿಹಾರ? ಜಪಾನಿನ ನಗೋಯ ವಿಶ್ವವಿದ್ಯಾಲಯದ ವಿಜ್ಞಾನಿಗಳ ಪ್ರಕಾರ ಇದಕ್ಕೊಂದು ಪರಿಹಾರ ಇದೆ.

ಸಾಮಾನ್ಯವಾಗಿ ಕಾರಿನ ದೇಹವನ್ನು ಎರಡು ಬಗೆಯ ಉಕ್ಕಿನಿಂದ ಇತ್ತೀಚಿನ ದಿನಗಳಲ್ಲಿ ತಯಾರಿಸಲಾಗುತ್ತಿದೆ. ಕಾರಿನ ಎಂಜಿನ್ ಇರುವ ಭಾಗವು ಮೃದು ಉಕ್ಕಿನಿಂದಲೂ ಪ್ರಯಾಣಿಕರ ಕ್ಯಾಬಿನ್ ಅನ್ನು ಬಲಿಷ್ಠ ಉಕ್ಕಿನಿಂದಲೂ ತಯಾರಿಸಲಾಗಿರುತ್ತದೆ. ಕೆಲವು ರೇಸಿಂಗ್ ಕಾರುಗಳಲ್ಲಿ ಕಾರ್ಬನ್ ಫೈಬರ್ ದೇಹವನ್ನೂ ಕಾಣಬಹುದಾಗಿದೆ. ಅಪಘಾತದ ಪರಿಣಾಮವನ್ನು ತಡೆದುಕೊಳ್ಳುವಂಥ ಕೆಲವು ಅತ್ಯುನ್ನತ ದೇಹನಿರ್ಮಾಣ ತಂತ್ರಜ್ಞಾನಗಳನ್ನು ಐಷಾರಾಮಿ ಕಾರುಗಳಾದ ಬಿಎಂಡಬ್ಲ್ಯು, ಮರ್ಸಿಡೆಸ್ ಬೆನ್ಸ್, ವೋಲ್ವೊ, ರೋಲ್ಸ್ ರಾಯ್ಸ್ ಕಾರ್‌ಗಳಲ್ಲಿ ಅಳವಡಿಸಲಾಗಿರುತ್ತದೆ. ಅಂದರೆ, ಬಹುಪದರದ ಉಕ್ಕಿನಿಂದ ಪ್ರಯಾಣಿಕರ ಕ್ಯಾಬಿನ್ ತಯಾರಿಸಿರಲಾಗುತ್ತದೆ. ಆದರೂ, ಎಷ್ಟೇ ಉನ್ನತ ತಂತ್ರಜ್ಞಾನ ಬಳಸಿದರೂ, ಅಪಘಾತದ ತೀವ್ರತೆಯನ್ನು ತಡೆದುಕೊಳ್ಳುವುದಕ್ಕೆ ಕಾರುಗಳಿಗೆ ಮಿತಿಯಿರುತ್ತದೆ. ಇಲ್ಲವಾದರೆ, ಬೆಂಗಳೂರಿನಲ್ಲಿ ನಡೆದ ಅಪಘಾತದಲ್ಲಿ ಸಾಕ್ಷಿಯಾದಂತೆ ಕಾರುಗಳು ನಾಶವಾಗುತ್ತವೆ.

ಈ ಸಮಸ್ಯೆಗೆ ಪರಿಹಾರವನ್ನು ಕಂಡುಕೊಳ್ಳುವ ನಿಟ್ಟಿನಲ್ಲಿ ಈಗಾಗಲೇ ಅನೇಕ ಹೆಜ್ಜೆಗಳನ್ನು ಇಡಲಾಗಿದೆ. ನಗೋಯ ವಿಶ್ವವಿದ್ಯಾಲಯದ ಸಂಶೋಧನೆಯನ್ನು ಅರ್ಥಮಾಡಿಕೊಳ್ಳುವ ಮೊದಲು ಹಾಲಿ ಇರುವ ತಂತ್ರಜ್ಞಾನದ ಬಗ್ಗೆ ಒಂದು ಕಿರುನೋಟವನ್ನು ಬೀರಲೇಬೇಕು. ಕಾರಿನ ದೇಹದ ಚೌಕಟ್ಟನ್ನು 'ಮಾನೋಕಾಕ್' ಎಂದು ಕರೆಯಲಾಗುತ್ತದೆ. ಎಂದರೆ, ಒಂದು ಅಸ್ಥಿಪಂಜರದಂತೆ ಹಿಡಿಯಾದ ಒಂದು ಆಕಾರವಿರುವ ಒಂದು ಆಕೃತಿ. ಅದರ ಮೇಲೆ ಕಾರಿನ ದೇಹದ ಭಾಗಗಳಾದ ಬಾಗಿಲು, ಗಾಜು ಇತ್ಯಾದಿಗಳು ಕೂರುತ್ತವೆ. ಇನ್ನೊಂದು 'ಲ್ಯಾಡರ್' (ಏಣಿ) ಚೌಕಟ್ಟು ಎಂದು. ಅಂದರೆ, ಚೌಕಟ್ಟಿನ ಮೇಲೆ ಕಾರಿನ ದೇಹವನ್ನು ಒಂದೊಂದಾಗಿ ಕೂರಿಸಲಾಗುತ್ತದೆ. ಸಾಮಾನ್ಯವಾಗಿ ಕಾರು ಇತ್ಯಾದಿ ವಾಹನಗಳು 'ಮಾನೋಕಾಕ್' ಚೌಕಟ್ಟು, ಜೀಪ್, ಬಸ್, ಲಾರಿ ಇತ್ಯಾದಿ ವಾಹನಗಳಲ್ಲಿ ಲ್ಯಾಡರ್ ಚೌಕಟ್ಟು ಇರುತ್ತದೆ. 'ಮಾನೋಕಾಕ್' ಚೌಕಟ್ಟು ನೋಡಲು ಒಂದೇ ಆಕೃತಿಯಂತೆ ಕಂಡರೂ, ಅನೇಕ ಭಾಗಗಳನ್ನು ಸೇರಿಸಿ, ಅಂಟಿಸಲಾಗಿರುತ್ತದೆ. ಎಂದರೆ, ಎಂಜಿನ್ ಭಾಗ, ಪ್ರಯಾಣಿಕರು ಕೂರುವ ಭಾಗ, ಚಾವಣಿ, ಅಡಿ ಭಾಗ ಇವೆಲ್ಲವೂ ಪ್ರತ್ಯೇಕ ಭಾಗಗಳೇ. ಅವನ್ನು ಒಂದಕ್ಕೊಂದು ಬಳಿಕ ಅಂಟಿಸಿ, ಒಟ್ಟಾರೆಯಾಗಿ ಒಂದು ಆಕೃತಿಯಾಗಿರುವಂತೆ ಮಾಡಲಾಗುತ್ತದೆ.

ಈ ಅಂಟಿಸುವ ಪ್ರಕ್ರಿಯೆಯೇ ಇಲ್ಲಿ ಮಹತ್ವವಾದುದು. ಹಾಲಿ ತಂತ್ರಜ್ಞಾನದಲ್ಲಿ 'ಅಪಾಕ್ಸಿ ರೆಸಿನ್' ಎನ್ನುವ ಪ್ಲಾಸ್ಟಿಕ್-ರಬ್ಬರ್ ಆಧಾರಿತ ಅಂಟನ್ನು ವಿವಿಧ ಲೋಹದ ಭಾಗಗಳನ್ನು ಅಂಟಿಸಲು ಬಳಸಲಾಗುತ್ತದೆ. ಐಷಾರಾಮಿ ಕಾರು ಕಂಪನಿಗಳಿಂದ ಹಿಡಿದು, ಜನಸಾಮಾನ್ಯರ ಮೆಚ್ಚುಗೆಯ ಮಾರುತಿ, ಟಾಟಾ ಕಾರುಗಳವರೆಗೂ ಇದೇ ತಂತ್ರಜ್ಞಾನ ಇರುವುದು. 'ಅಪಾಕ್ಸಿ ರೆಸಿನ್' ಅಂಟು ಬಲಶಾಲಿಯೇ ಆಗಿರುವುದಾದರೂ ಅದಕ್ಕೆ ಅದರದೇ ಆದ ಮಿತಿಯಿದೆ.

ಅದರಲ್ಲಿ ಪ್ರಮುಖವಾದ ಮಿತಿಯೆಂದರೆ, 'ಅಪಾಕ್ಸಿ ರೆಸಿನ್'ನ ಬಾಳಿಕೆಯ ಅವಧಿ. ಇದು ರಬ್ಬರ್ ಹಾಗೂ ಪ್ಲಾಸ್ಟಿಕ್ ಆಧಾರಿತ ರಾಸಾಯನಿಕ ವಸ್ತುವಾಗಿರುವ ಕಾರಣ ದಿನಗಳು ಕಳೆದಂತೆ ತನ್ನ ದೃಢತೆಯನ್ನು ಕಳೆದುಕೊಳ್ಳುತ್ತ ಬರುತ್ತದೆ. ಹಾಗಾಗಿ, ಕಾರು ಹಳೆಯದಾದಂತೆ ಕಾರಿನ ದೃಢತೆಯೂ ಕಡಿಮೆ ಆಗಬಹುದು. ಬೆಂಗಳೂರಿನಲ್ಲಿ ಅಪಘಾತವಾದ ಕಾರು ಕೇವಲ ಎರಡು ತಿಂಗಳು ಹಳೆಯದು. ಅದಕ್ಕೆ ಈ ವಾದ ಅನ್ವಯಿಸದೇ ಇರಬಹುದು. ಆದರೆ, 'ಅಪಾಕ್ಸಿ ರೆಸಿನ್' ಅಂಟು ಬಹುಪದರ ಜೋಡಣೆಗೆ ಹೇಳಿ ಮಾಡಿಸಿದ್ದಲ್ಲ ಎನ್ನುವ ಬಲವಾದ ವಾದವಿದೆ. ಹಾಗಾಗಿ, ಅಪಘಾತದ ಸಮಯದಲ್ಲಿ ತೀವ್ರವಾದ ಏಟು, ಅಥವಾ ಅತೀವ ಭಾಗ ಬಿದ್ದಾಗ ಬಹುಪದರ ಲೋಹದ ಬಳಕೆ ಆಗದೇ ಇರುವ ಕಾರಣ ಕಾರು ನಜ್ಜು ಗುಜ್ಜಾಗಬಹುದು.

ಹೊಸ ಪರಿಹಾರ ಜಪಾನ್‌ನ ನಗೋಯ ವಿಶ್ವವಿದ್ಯಾಲಯದ ವಿಜ್ಞಾನಿಗಳ ಪ್ರಕಾರ 'ಅಪಾಕ್ಸಿ ರೆಸಿನ್' ಅಂಟನ್ನು ಬಳಕೆಯನ್ನು ನಿಲ್ಲಿಸುವುದು ಇದಕ್ಕೆ ಪರಿಹಾರವಾಗಬಹುದು ಎಂದಿದ್ದಾರೆ. ಪ್ಲಾಸ್ಟಿಕ್ ಹಾಗೂ ರಬ್ಬರ್ ಆಧಾರಿತ ಅಂಟಿಗೆ ಪರ್ಯಾಯವಾಗಿ, 'ಜಲಜನಕ ಆಧಾರಿತ ಶಾಖೋತ್ಪನ್ನ ಫೈಬರ್' ಅಂಟನ್ನು ಬಳಸಬಹುದು ಎಂದು ಪ್ರತಿಪಾದಿಸಿದ್ದಾರೆ. ಪ್ರತಿಷ್ಠಿತ ಎಸಿಎಸ್ ಅಪ್ಲೈಡ್ ಮೆಟೀರಿಯಲ್ಸ್ ಆ್ಯಂಡ್ ಇಂಟರ್‌ಫೇಸಸ್ (ಅನ್ವಯಿಕ ಸಾಮಗ್ರಿಗಳು ಹಾಗೂ ಸಂಪರ್ಕಸೇತು) ನಿಯತಕಾಲಿಕೆಯಲ್ಲಿ ತಮ್ಮ ಸಂಶೋಧನೆಯನ್ನು ಪ್ರಕಟಿಸಿದ್ದಾರೆ.

ಈ ಅಂಟು ಸಾಂಪ್ರದಾಯಿಕ 'ಅಪಾಕ್ಸಿ ರೆಸಿನ್' ಅಂಟಿಗಿಂತ ಸುಮಾರು 23ಪಟ್ಟು ಹೆಚ್ಚು ಬಲಶಾಲಿಯಾಗಿರುತ್ತದೆ. ಜೊತೆಗೆ ಸುಮಾರು 20ಪಟ್ಟು ಹೆಚ್ಚು ಬಾಳಿಕೆ ಬರುತ್ತದೆ. ಸಾಮಾನ್ಯವಾಗಿ ಪ್ಲಾಸ್ಟಿಕ್ ಅಥವಾ ರಬ್ಬರ್ ಬಿಸಿಲು ಹಾಗೂ ಶಾಖಕ್ಕೆ ತೆರೆದುಕೊಂಡರೆ ತಮ್ಮ ಶಕ್ತಿಯನ್ನು ಕಳೆದುಕೊಂಡು ಮೃದುವಾಗುತ್ತವೆ. ನಾವು ಪ್ರತಿನಿತ್ಯ ಅನೇಕ ಸಂದರ್ಭಗಳಲ್ಲಿ ಇದನ್ನು ನೋಡಿರುತ್ತೇವೆ. ಇದಕ್ಕೆ ಕಾರಣ, ಇವುಗಳಲ್ಲಿ ಇರುವ ಇಂಗಾಲದ ಅಂಶ. ಈ ಹೊಸ ಅಂಟು ಜಲಜನಕ ಆಧಾರಿತವಾಗಿರುವ ಕಾರಣ, ಈ ಮಿತಿ ಇರುವುದಿಲ್ಲ. ಫೈಬರ್ ಅಂಶ ಹೊಸ ಅಂಟಿನಲ್ಲೂ ಇರುವುದಾದರೂ ಇಂಗಾಲದ ಅಂಶ 'ಅಪಾಕ್ಸಿ ರೆಸಿನ್' ಅಂಟಿಗೆ ಹೋಲಿಸಿದರೆ ಕಡಿಮೆ ಇರುತ್ತದೆ. ಹಾಗಾಗಿ, ಇದು ಬೇಗ ಹಾಳಾಗುವುದಿಲ್ಲ ಎಂದು ನಗೋಯ ವಿಶ್ವವಿದ್ಯಾಲಯದ ಪ್ರಧಾನ ಸಂಶೋಧಕ ಅಟ್ಸುಷಿ ನೋರೊ ವಾದ ಮಂಡಿಸಿದ್ದಾರೆ.

ಜೊತೆಗೆ, ಈ ಅಂಟು ಹಗುರವಾದ ಅಲ್ಯೂಮಿನಂ ಮಾದರಿಯ ಲೋಹದ ಹಾಳೆಗಳನ್ನು ಸಮರ್ಥವಾಗಿ ಬೆಸೆಯುವ ಗುಣ ಹೊಂದಿರುತ್ತದೆ. ಜೊತೆಗೆ, ಕಾರ್ಬನ್ ಫೈಬರ್, ಸಿಂಥೆಟಿಕ್ ಆಧಾರಿತ ಸಾಮಗ್ರಿಗಳನ್ನೂ ಹಾಳೆ ಹಾಳೆಗಳಾಗಿ ಅಂಟಿಸಬಲ್ಲದಾಗಿರುತ್ತದೆ. ಆದ್ದರಿಂದ ಪ್ರಯಾಣಿಕರ ಕ್ಯಾಬಿನ್‌ನಂಥ ಭಾಗಗಳನ್ನು ಅತ್ಯಂತ ಬಲಶಾಲಿಯಾಗಿ ನಿರ್ಮಿಸಬಹುದಾಗಿದೆ ಎಂದು ವ್ಯಾಖ್ಯಾನಿಸಿದ್ದಾರೆ.

ಈ ತಂತ್ರಜ್ಞಾನವನ್ನು ಯುದ್ಧವಿಮಾನಗಳು, ನೌಕೆಗಳಲ್ಲಿ ಬಳಸಬಹುದಾಗಿದೆ ಎಂದು ನೋರೊ ಹೇಳಿದ್ದಾರೆ. ಈ ತಂತ್ರಜ್ಞಾನವನ್ನು ಬಳಸಿದರೆ ವಾಹನದ ದೇಹವು ದೃಢವೂ ಹಗುರವೂ ಆಗಿರುತ್ತದೆ ಎಂಬುದು. ಜೊತೆಗೆ, ವಾಹನದ ಮೈಲೇಜ್ ಸಹ ಹೆಚ್ಚುತ್ತದೆ ಎಂದೂ ವಿಶ್ಲೇಷಿಸಿದ್ದಾರೆ.



ಬರಲಿದೆ ಬೈಜಿಕ ಗಡಿಯಾರ

ಕೊಳ್ಳೇಗಾಲ ಶರ್ಮ

ಹೊಸ ವರ್ಷಕ್ಕೆ ಹೊಸ ಬಗೆಯ ಗಡಿಯಾರ ಬರಬಹುದೇ?. ಕೆಲವು ತಿಂಗಳುಗಳ ಹಿಂದೆ ಪ್ರಕಟವಾದ ಶೋಧಗಳ ಪ್ರಕಾರ ಜಗತ್ತಿನ ಅತ್ಯಂತ ನಿಖರವಾದ ಗಡಿಯಾರಗಳು ತಯಾರಾಗುವ ಕಾಲ ಸನ್ನಿಹಿತವಾಗಿವೆಯಂತೆ. ಪರಮಾಣುಗಳ ಕೇಂದ್ರಗಳಲ್ಲಿನ ಸೂಕ್ಷ್ಮ ಬದಲಾವಣೆಗಳನ್ನು ಗಮನಿಸುವ ಮೂಲಕ ಸಮಯವನ್ನು ಅಳೆಯುವ ಈ ನ್ಯೂಕ್ಲಿಯರ್ ಗಡಿಯಾರಗಳನ್ನು ತಯಾರಿಸಲು ಅಗತ್ಯವಾದ ಎಲ್ಲ ಸಾಧನಗಳನ್ನೂ ತಯಾರಿಸಲಾಗಿದೆ ಎಂದು 'ನೇಚರ್' ಹಾಗೂ 'ಸೈನ್ಸ್' ಪತ್ರಿಕೆಗಳು ವರದಿ ಮಾಡಿವೆ.

ಗಡಿಯಾರ ಎಂದರೆ ಕಾಲಮಾಪಕ. ಒಂದಾನೊಂದು ಕಾಲದಲ್ಲಿ ಹಗಲು, ರಾತ್ರಿಗಳನ್ನೇ ಕಾಲಮಾಪಕವನ್ನಾಗಿ ಬಳಸುತ್ತಿದ್ದೆವು. ಇದು ಭೂಮಿಯ ಒಂದು ಗಿರಕಿಗೆ ಸಮಾನ. ಇದನ್ನೆ ಇಪ್ಪತ್ತನಾಲ್ಕು ವಿಭಾಗಗಳನ್ನಾಗಿಸಿ ಗಂಟೆಗಳೆಂದು ಕರೆದೆವು. ಕಾಲವನ್ನು ಅಳೆಯುವ ಗಡಿಯಾರಗಳೆಲ್ಲದರ ಗುಣವೂ ಒಂದೇ. ನಿಯಕ ಅವಧಿಯಲ್ಲಿ ಅವು ತಮ್ಮ ಕ್ರಿಯೆಯನ್ನು ಮರುಕಳಿಸುತ್ತವೆ. ಭೂಮಿ ಒಂದು ದಿನದಲ್ಲಿ ಗಿರಕಿ ಹೊಡೆದು ಇನ್ನೊಂದನ್ನು ಆರಂಭಿಸುತ್ತದೆ. ಭೂಮಿ ಸೂರ್ಯನ ಸುತ್ತಲೂ ಒಂದು ಪ್ರದಕ್ಷಿಣೆಯನ್ನು 365.25 ದಿನಗಳಲ್ಲಿ ಪೂರೈಸಿ, ಇನ್ನೊಂದು ಪ್ರದಕ್ಷಿಣೆಗೆ ತೊಡಗುತ್ತದೆ. ಹೀಗೆ ನಿಯತವಾಗಿ ಮರುಕಳಿಸುವ ಯಾವುದೇ ವಿದ್ಯಮಾನವೂ ಕಾಲವನ್ನು ಅಳೆಯಲು ನೆರವಾಗಬೇಕು ಎನ್ನುವುದೇ ಗಡಿಯಾರದ ತತ್ವ. ಕಾಲವನ್ನು ಅಳೆಯಲು ಆರಂಭದ ಗಡಿಯಾರಗಳಲ್ಲಿ ರಂಧ್ರದ ಮೂಲಕ ತೊಟ್ಟಿಕ್ಕುವ ನೀರು ಇಲ್ಲವೇ, ಮರಳು ನೆರವಾಗುತ್ತಿತ್ತು. ಅನಂತರದ ದಿನಗಳಲ್ಲಿ ಲೋಲಕವೊಂದರ ತುಯ್ದಾಟವೇ ಕಾಲವನ್ನು ಮಾಪಿಸಿತು. ನಿರ್ದಿಷ್ಟ ಭಾರವನ್ನು ಹೊತ್ತ, ನಿರ್ದಿಷ್ಟ ಉದ್ದವಿರುವ ಲೋಲಕ ಒಮ್ಮೆ ಅತ್ತಿಂದ ಇತ್ತ ನಿರ್ದಿಷ್ಟ ಅವಧಿಯಲ್ಲಿ ತುಯ್ದಾಡುತ್ತಿದ್ದುದನ್ನು ಗಮನಿಸಿದ ಭೌತವಿಜ್ಞಾನಿಗಳು ಈ ಅವಧಿಯನ್ನೇ 'ಸೆಕೆಂಡು' ಎಂದು ಕರೆದರು. ಹೀಗೆ ಅತಿ ಸಣ್ಣದೊಂದು ಕಾಲದ ಅಳತೆ ಸಿದ್ಧವಾಗಿತ್ತು.

ಇದಕ್ಕಿಂತಲೂ ಸೂಕ್ಷ್ಮವಾದ ಅಳತೆ ಸಾಧ್ಯವಿಲ್ಲವೇ?

ಈ ಪ್ರಯತ್ನದಲ್ಲಿಯೇ ಹೊಸ ಬಗೆಯ ನಿಯತಕಾಲಿಕ ಘಟನೆಗಳನ್ನು ಕಾಲಮಾಪಕಗಳನ್ನಾಗಿ ಬಳಸುವ ಪ್ರಯತ್ನ ಶುರುವಾಯಿತು. ಕ್ವಾರ್ಟ್ಜ್ ಗಡಿಯಾರಗಳಲ್ಲಿ ಹರಳುಗಳು ವಿದ್ಯುತ್ ಹರಿದಾಗ ಕಂಪಿಸುವುದನ್ನು ಬಳಸಿದರು. ಎಲೆಕ್ಟ್ರಾನಿಕ್ ಗಡಿಯಾರಗಳಲ್ಲಿ ವಿದ್ಯುತ್ತಿನ ತರಂಗಗಳ ದೂರಗಳು ಅಥವಾ ಕಂಪನಗಳನ್ನೇ ಅಳತೆಯನ್ನಾಗಿ ಬಳಸುತ್ತಾರೆ. ಇದು ಕೂಡ ಸೆಕೆಂಡಿಗೆ ಅರವತ್ತು ಅಥವಾ ಐವತ್ತು ಬಾರಿ ಬದಲಾಗುತ್ತವೆ. ಇವಕ್ಕಿಂತಲೂ ನಿಖರವಾದ ಗಡಿಯಾರ ಎಂದರೆ ಇನ್ನೂ ಕಡಿಮೆ ಅವಧಿಯಲ್ಲಿ ಹೆಚ್ಚು ಬಾರಿ ಮರುಕಳಿಸುವ ವಿದ್ಯಮಾನವಾಗಬೇಕು. ಪರಮಾಣು ಗಡಿಯಾರಗಳು ಇದನ್ನು ಸಾಧಿಸುತ್ತವೆ. ಪರಮಾಣುಗಳಲ್ಲಿ ಇರುವ ಎಲೆಕ್ಟ್ರಾನುಗಳಿಗೆ ಶಕ್ತಿಯೂಡಿಸಿದಾಗ ಅವು ಉತ್ತೇಜನಗೊಳ್ಳುತ್ತವೆ. ಅನಂತರ ಸ್ವಲ್ಪ ಸಮಯದ ನಂತರ ಮೊದಲ ಸ್ಥಿತಿಗೇ ಮರಳುತ್ತವೆ. ಹೀಗೆ ಮರಳುವಾಗ ನಿರ್ದಿಷ್ಟ ಪ್ರಮಾಣದ ಶಕ್ತಿಯನ್ನು ವಿಕಿರಣ ಅಥವಾ ಬೆಳಕಿನ ರೂಪದಲ್ಲಿ ಚಿಮ್ಮಿಸುತ್ತವೆ. ಈ ವಿದ್ಯಮಾನವನ್ನೇ ಕಾಲವನ್ನು ಅಳೆಯಲು ಬಳಸುತ್ತಾರೆ.

ಪರಮಾಣುಗಳಲ್ಲಿ ಕೆಲವು ಉತ್ತೇಜಿತ ಸ್ಥಿತಿಯಲ್ಲಿಯೂ, ಕೆಲವು ಸಾಮಾನ್ಯ ಸ್ಥಿತಿಯಲ್ಲಿಯೂ ಇರುತ್ತವೆ. ಇವೆರಡೂ ಸ್ಥಿತಿಗಳ ನಡುವೆ ಪರಮಾಣುಗಳು ಹೊಯ್ದಾಡುತ್ತಿರುತ್ತವೆ. ಇದೊಂದು ರೀತಿ ಕಂಪನ ಎನ್ನಬಹುದು. ಈ ಕಂಪನಕ್ಕೆ ತಾಳೆ ಹೊಂದುವಂತೆ ತರಂಗಾಂತರ ಇರುವ ಕಿರಣಗಳಿಂದ ಹೊಡೆದಾಗ ನಿರ್ದಿಷ್ಟ ಪ್ರಮಾಣದ ಪರಮಾಣುಗಳಷ್ಟೆ ಮತ್ತೊಂದು ಸ್ಥಿತಿಗೆ ಬದಲಾಗುತ್ತವೆ. ಎಷ್ಟು ಪರಮಾಣುಗಳು ಹೀಗೆ ಬದಲಾಗುತ್ತಿವೆ ಎನ್ನುವುದನ್ನು ಅವು ಹೊರಚೆಲ್ಲಿದ ಶಕ್ತಿಯನ್ನು ಆಧರಿಸಿ ಅಳೆಯಬಹುದು. ಇದುವೇ ಪರಮಾಣು ಗಡಿಯಾರದ ಮೂಲತತ್ವ. ಪರಮಾಣು ಗಡಿಯಾರಗಳಲ್ಲಿ ಪರಮಾಣುಗಳಲ್ಲಿರುವ ಎಲೆಕ್ಟ್ರಾನುಗಳನ್ನು ಪ್ರಚೋದಿಸುತ್ತಾರೆ. ಎಲೆಕ್ಟ್ರಾನುಗಳಲ್ಲಿ ಬೇರೆ, ಬೇರೆ ಶಕ್ತಿಗಳು ಇರುವುದರಿಂದ ಇವನ್ನು ಒಂದೇ ನೆಲೆಗೆ ತಂದು ಅನಂತರ ಕಾಲವನ್ನು ಅಳೆಯಬೇಕು. ಇದಕ್ಕಾಗಿ ಲೇಸರು ಇಲ್ಲವೇ ಮೈಕ್ರೊವೇವ್‌ಗಳನ್ನು ಬಳಸುತ್ತಾರೆ. ಪರಮಾಣು ಗಡಿಯಾರಗಳಲ್ಲಿ ಸೀಸಿಯಂ ಅಥವಾ ಸ್ಟ್ರಾಂಶಿಯಂ ಪರಮಾಣುಗಳನ್ನು ಬಳಸುತ್ತಾರೆ. ಕಾರಣ: ಇವುಗಳಲ್ಲಿರುವ ಎಲೆಕ್ಟ್ರಾನುಗಳ ಕಂಪನ ಸಾಮರ್ಥ್ಯ. ಸೀಸಿಯಂ ಗಡಿಯಾರ ಪ್ರತಿ ಸೆಕೆಂಡಿನಲ್ಲಿ ಒಂಬತ್ತು ಶತಕೋಟಿ ಹತ್ತೊಂಬತ್ತು ಕೋಟಿ ಇಪ್ಪತ್ತಾರು ದಶಲಕ್ಷದ ಮೂರು ಲಕ್ಷದ ಏಳನೂರ ಎಪ್ಪತ್ತು ಬಾರಿ ಮಿಡಿಯುತ್ತದೆ! ಅಂದರೆ ಅಷ್ಟು ಸೂಕ್ಷ್ಮವಾದ ಕಾಲವನ್ನು ಅಳೆಯಬಹುದು.



ಇದೇ ಬಗೆಯ ವಿದ್ಯಮಾನವನ್ನು ಪರಮಾಣುಗಳ ಕೇಂದ್ರಗಳನ್ನು ಬಳಸಿಯೂ ಮಾಡಬಹುದಲ್ಲ ಎನ್ನುವ ಕಲ್ಪನೆ ಇತ್ತು. ಅದುವೇ ನ್ಯೂಕ್ಲಿಯರ್ ಗಡಿಯಾರ ಅಥವಾ ಬೈಜಿಕ ಗಡಿಯಾರದ ಕಲ್ಪನೆ. ಆದರೆ ಪರಮಾಣು ಬೀಜಗಳ ಸ್ಥಿತಿಯನ್ನು ಬದಲಿಸಲು ಶಕ್ತಿಯ ಪ್ರಮಾಣ ಬಹಳ ಹೆಚ್ಚು. ಆದರೆ ಇಪ್ಪತ್ತು ವರ್ಷಗಳ ಹಿಂದೆ ಥೋರಿಯಮಿನ ಥೋರಿಯಂ-249 ಎನ್ನುವ ಐಸೋಟೋಪನ್ನು ಬಳಸಬಹುದು ಎನ್ನುವ ಕಲ್ಪನೆ ಬಂದಿತ್ತು.

ಥೋರಿಯಂ-249ರ ಬೀಜಗಳು ಸ್ಥಿತ್ಯಂತರವಾಗಲು ಬಹಳ ಕಡಿಮೆ ಶಕ್ತಿ ಸಾಕು ಎಂದು ಲೆಕ್ಕಾಚಾರಗಳು ತಿಳಿಸಿದ್ದವು. ಆದರೆ ಎಷ್ಟು ಶಕ್ತಿ ಎಂಬುದು ತಿಳಿದಿರಲಿಲ್ಲ. ಹೀಗಾಗಿ ಇಪ್ಪತ್ತು ವರ್ಷಗಳಿಂದಲೂ ಈ ಪ್ರಯತ್ನ ನೆನೆಗುದಿಗೆ ಬಿದ್ದಿತ್ತು. ಕಳೆದ ವರ್ಷ ಫ್ರಾನ್ಸಿನ ರಾಷ್ಟ್ರೀಯ ಸಂಶೋಧನಾಲಯದ ಭೌತವಿಜ್ಞಾನಿಗಳು ಆಕಸ್ಮಿಕವಾಗಿ ಥೋರಿಯಂ-249ರ ಬೀಜಗಳು ಸ್ವಸ್ಥಿತಿಗೆ ಮರಳುವಾಗ ಎಂಟು ಎಲೆಕ್ಟ್ರಾನ್ ವೋಲ್ಟಿನಷ್ಟು ಶಕ್ತಿಯನ್ನು ಸೂಸುತ್ತವೆ ಎಂದು ಅಳೆದರು. ಅಂದರೆ ಕನಿಷ್ಠ ಇಷ್ಟು ಶಕ್ತಿಯನ್ನು ನೀಡುವುದು ಸಾಧ್ಯವಾದರೆ ಆ ಬೀಜಗಳ ಸ್ಥಿತ್ಯಂತರ ಸಾಧ್ಯ ಎಂದಾಯಿತು. ಇದನ್ನು ಲೇಸರ್ ಬೆಳಕಿನಿಂದ ಮಾಡಬಹುದು. ದುರದೃಷ್ಟವಶಾತ್, ಲೇಸರ್‌ನ ಬೆಳಕುಗಳು ಪ್ರತಿಯೊಂದರ ತರಂಗಾಂತರವೂ ಬೇರೆ ಬೇರೆಯಾಗಿರುತ್ತದೆ. ಯಾವ ತರಂಗಾಂತರದ ಬೆಳಕು ಇಷ್ಟು ಶಕ್ತಿಯನ್ನು ಕೊಡುತ್ತದೆ ಎಂಬುದನ್ನು ಪತ್ತೆ ಮಾಡಿದಲ್ಲದೆ ಈ ಕೆಲಸ ಮುಂದುವರಿಯುತ್ತಿರಲಿಲ್ಲ. ಇತ್ತೀಚೆಗಷ್ಟೆ ಜಪಾನಿನ ರಾಷ್ಟ್ರೀಯ ಲೇಸರ್ ಸಂಶೋಧನಾಲಯದ ವಿಜ್ಞಾನಿ ಯೆ ಮತ್ತು ಸಂಗಡಿಗರು ಸಾವಿರಾರು ಲೇಸರ್ ತರಂಗಗಳನ್ನು ಬಳಸಿ, ಯಾವ ತರಂಗ ಥೋರಿಯಂ-249 ಬೀಜಗಳನ್ನು ಉತ್ತೇಜಿಸುತ್ತದೆ ಎಂದು ಪತ್ತೆ ಮಾಡಿದ್ದಾರೆ. ಇದೇ ವೇಳೆ ಅಮೆರಿಕದ ವಿಜ್ಞಾನಿಗಳು, ಮರಳ ಕಣಗಳೊಳಗೆ ಥೋರಿಯಂ-249 ಕೂಡಿಸಿ, ಅವು ಈ ಲೇಸರ್ ತರಂಗದಿಂದ ಮಿನುಗಬಲ್ಲುವೇ ಎಂದು ಪರೀಕ್ಷಿಸಿದ್ದಾರೆ. ಇವೆಲ್ಲವೂ ಸಫಲವಾಗಿವೆ. ಸೀಸಿಯಂ ಪರಮಾಣು ಗಡಿಯಾರದ ಜೊತೆಗೆ ಹೋಲಿಸಿದಾಗ, ಅಷ್ಟೇ ನಿಖರವಾಗಿ ಸಮಯ ಹೇಳುತ್ತವೆಂದು ಸ್ಪಷ್ಟವಾಗಿದೆ. ಒಂದೇ ಸಮಸ್ಯೆ. ಆ ಲೇಸರನ್ನು ನಿಖರವಾಗಿ ತಯಾರಿಸುವ ಸಾಧನವೊಂದು ಬೇಕು ಅಷ್ಟೆ. ಅಷ್ಟಾದರೆ ಬೈಜಿಕ ಗಡಿಯಾರ ಸಿದ್ಧವಾದಂತೆ. ಮರಳಿನ ಗಡಿಯಾರದಿಂದ ಮರಳಕಣದ ಗಡಿಯಾರಕ್ಕೆ ಪಲ್ಲಟವಾಗಲಿದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಎಸ್ಸೆಸ್ಸೆಲ್ಸಿ - ವಿಜ್ಞಾನ

ಮಾನವನ ಕಣ್ಣು ಮತ್ತು ವರ್ಣಮಯ ಜಗತ್ತು

14) ಪ್ರಿಸ್‌ಬಯೋಪಿಯ ಕುರಿತು ಬರೆಯಿರಿ

ಉತ್ತರ:– ವಯಸ್ಸಾದಂತೆ ಕಣ್ಣಿನ ಹೊಂದಾಣಿಕೆಯ ಸಾಮರ್ಥ್ಯ ಸಾಮಾನ್ಯವಾಗಿ ಕಡಿಮೆಯಾಗುತ್ತದೆ. ಹೆಚ್ಚಿನ ಜನರಿಗೆ ಸಮೀಪ ಬಿಂದುವು ಕ್ರಮೇಣ ದೂರ ಸರಿಯುತ್ತದೆ. ಅಂತಹವರು ಹತ್ತಿರದ ವಸ್ತುಗಳನ್ನು ಆರಾಮದಾಯಕವಾಗಿ ಮತ್ತು ಸ್ಪಷ್ಟವಾಗಿ ಸರಿಪಡಿಸುವ ಕನ್ನಡಕವಿಲ್ಲದೆ ನೋಡಲು ಸಾಧ್ಯವಿಲ್ಲ. ಈ ದೋಷವನ್ನು ಪ್ರಿಸ್‌ಬಯೋಪಿಯ ಎನ್ನುತ್ತೇವೆ. ಈ ದೋಷವುಂಟಾಗಲು ಕಾರಣ ಮಸೂರವು ತನ್ನ ಸ್ಥಿತಿಸ್ಥಾಪಕ ಶಕ್ತಿಯನ್ನು ಕಳೆದುಕೊಳ್ಳುವುದು ಅಥವಾ ಕ್ರಮೇಣ ಸಿಲಿಯರಿ ಸ್ನಾಯುಗಳು ದುರ್ಬಲಗೊಳ್ಳುವುದು. ಕೆಲವೊಮ್ಮೆ ಕೆಲವರು ಸಮೀಪದೃಷ್ಟಿ ಮತ್ತು ದೂರದೃಷ್ಟಿ ಎರಡರಿಂದಲೂ ಬಳಲಬಹುದು. ಇಂತಹವರಿಗೆ ದ್ವಿಸಂಗಮ(bifocal) ಮಸೂರಗಳ ಅವಶ್ಯಕತೆಯಿದೆ.

ಸಾಮಾನ್ಯವಾಗಿ ದ್ವಿಸಂಗಮ ಮಸೂರಗಳು ನಿಮ್ನ ಮತ್ತು ಪೀನ ಮಸೂರಗಳೆರಡನ್ನೂ ಹೊಂದಿರುತ್ತವೆ. ಮೇಲ್ಭಾಗದಲ್ಲಿರುವ ನಿಮ್ನ ಮಸೂರವು ದೂರದ ನೋಟವನ್ನು ಹಾಗೂ ಕೆಳಗಿನ ಭಾಗದ ಪೀನ ಮಸೂರವು ಸಮೀಪದ ನೋಟವನ್ನು ಸುಗಮಗೊಳಿಸುತ್ತದೆ. ಈಗಿನ ದಿನಗಳಲ್ಲಿ, ಕಣ್ಣಿನ ವಕ್ರೀಭವನ ದೋಷಗಳನ್ನು ಕಣ್ಣಿನೊಳಗೆ ಅಳವಡಿಸುವ ಮಸೂರದಿಂದ (contact len) ಅಥವಾ ಶಸ್ತ್ರಚಿಕಿತ್ಸೆಗಳಿಂದಲೂ ಸರಿಪಡಿಸಬಹುದು.

15) ಕಣ್ಣಿನ ದಾನವನ್ನು ಯಾರು ಮಾಡಬಾರದು?

ಉತ್ತರ:– ಏಡ್ಸ್, ಹೆಪಟೈಟಿಸ್ ಬಿ ಅಥವಾ ಸಿ, ರೇಬೀಸ್, ತೀವ್ರತರದ ರಕ್ತದ ಕ್ಯಾನ್ಸರ್, ಟಿಟನಸ್, ಕಾಲರಾ, ಮೆನೆಂಜೈಟಿಸ್ ಅಥವಾ ಎನ್ಸೆಫಲೈಟಿಸ್‌ಗಳಿಂದ ಸತ್ತವರ ಕಣ್ಣು ದಾನಮಾಡುವ ಹಾಗಿಲ್ಲ.

16) ಕಣ್ಣಿನ ದಾನದ ಬಗ್ಗೆ ಬರೆಯಿರಿ

ಉತ್ತರ:– ಅಭಿವೃದ್ಧಿ ಹೊಂದುತ್ತಿರುವ ಜಗತ್ತಿನಲ್ಲಿ ಸುಮಾರು 35 ದಶಲಕ್ಷ ಜನರು ಅಂಧರಾಗಿದ್ದು, ಅವರಲ್ಲಿ ಸಾಕಷ್ಟು ಜನರ ದೃಷ್ಟಿ ಸರಿಪಡಿಸಬಹುದು. ಸುಮಾರು 4.5 ಮಿಲಿಯನ್ ಕಾರ್ನಿಯಾ ಕುರುಡುತನದಿಂದ ಬಳಲುತ್ತಿರುವವರನ್ನು ನೇತ್ರದಾನದಿಂದ ಪಡೆದ ಕಣ್ಣುಗಳಿಂದ ಕಾರ್ನಿಯಾ ಕಸಿ ಮೂಲಕ ಸರಿಪಡಿಸಬಹುದು. 4.5 ಮಿಲಿಯನ್ ಕುರುಡರಲ್ಲಿ ಶೇ 60ರಷ್ಟು ಮಕ್ಕಳು 12 ವರ್ಷಕ್ಕಿಂತ ಕಡಿಮೆ ವಯಸ್ಸಿನವರು.

ನೇತ್ರದಾನಿಗಳು ಯಾವುದೇ ವಯೋ ಗುಂಪಿನವರಾಗಿರಬಹುದು ಅಥವಾ ಯಾವುದೇ ಲಿಂಗದವರಿರಬಹುದು. ಕನ್ನಡಕಧಾರಿಗಳು ಅಥವಾ ಕಣ್ಣಿನ ಪೊರೆ(ಕ್ಯಾಟ್‌ರಾಕ್ಟ್) ಶಸ್ತ್ರಚಿಕಿತ್ಸೆಗೊಳಗಾದವರೂ ಸಹ ನೇತ್ರದಾನ ಮಾಡಬಹುದು. ಮಧುಮೇಹಿಗಳು, ಅಧಿಕ ರಕ್ತದೊತ್ತಡವಿರುವವರು, ಅಸ್ತಮಾ ರೋಗಿಗಳು ಮತ್ತು ಸಾಂಕ್ರಾಮಿಕ ರೋಗಗಳಿಲ್ಲದವರೂ ಸಹ ನೇತ್ರದಾನ ಮಾಡಬಹುದು.

ಮರಣಾನಂತರ 4–6 ಗಂಟೆಯಲ್ಲಿ ಕಣ್ಣುಗಳನ್ನು ತೆಗೆಯಬೇಕು. ತಕ್ಷಣ ಹತ್ತಿರದ ಕಣ್ಣಿನ ಬ್ಯಾಂಕ್‌ಗೆ ತಿಳಿಸಿ. ಕಣ್ಣಿನ ಬ್ಯಾಂಕ್ ತಂಡ ಮೃತರ ಮನೆಯಲ್ಲಿ ಅಥವಾ ಆಸ್ಪತ್ರೆಯಲ್ಲಿ ಕಣ್ಣುಗಳನ್ನು ತೆಗೆಯುತ್ತಾರೆ. ಕಣ್ಣಿನ ತೆಗೆಯುವಿಕೆ ಕೇವಲ 10–15 ನಿಮಿಷಗಳ ಸರಳಕ್ರಿಯೆ. ಒಂದು ಜೊತೆ ಕಣ್ಣುಗಳು ಇಬ್ಬರು ಕಾರ್ನಿಯಾ ಅಂಧರಿಗೆ ದೃಷ್ಟಿ ನೀಡುತ್ತದೆ

17) ಯಾವುದನ್ನು ರೋಹಿತವೆಂದು ಕರೆಯುತ್ತಾರೆ?

ಉತ್ತರ:– ಬೆಳಕಿನ ಕಿರಣದ ವರ್ಣಮಯ ಘಟಕಗಳ ಪಟ್ಟಿಯನ್ನು ರೋಹಿತವೆಂದು ಕರೆಯುತ್ತೇವೆ.

18) ಬೆಳಕಿನ ವರ್ಣವಿಭಜನೆ ಕುರಿತು ಬರೆಯಿರಿ

ಉತ್ತರ:– ಪಟ್ಟಕದ ಮೂಲಕ ಹಾಯುವ ಬಿಳಿ ಬೆಳಕು ಏಳು ಬಣ್ಣಗಳಾಗಿ ವಿಭಜನೆ ಹೊಂದುತ್ತದೆ.

ಪಟ್ಟಕದ ಮೂಲಕ ಹಾದು ಹೋದಾಗ ಪತನ ಕಿರಣಕ್ಕೆ ಸಂಬಂಧಿಸಿದಂತೆ ಪ್ರತೀ ಬಣ್ಣವೂ ತನ್ನದೇ ಆದ ಕೋನದಿಂದ ಬಾಗುವುದು. ಕೆಂಪು ಬಣ್ಣವು ಕನಿಷ್ಠವಾಗಿ ಮತ್ತು ನೇರಳೆ ಬಣ್ಣವು ಗರಿಷ್ಠವಾಗಿ ಬಾಗುವುದು. ಆದ್ದರಿಂದ ಪ್ರತಿ ಬಣ್ಣವು ತನ್ನದೇ ಆದ ನಿರ್ಗಮ ಕೋನದ ಮೂಲಕ ಬೇರೆ ಪಥಗಳಲ್ಲಿ ಹೊರಹೊಮ್ಮುವುದರಿಂದ ವಿಶಿಷ್ಟವಾಗಿರುವುದು. ಈ ವಿಶಿಷ್ಟ ಬಣ್ಣಗಳ ಪಟ್ಟಿಯನ್ನು ನಾವು ರೋಹಿತದಲ್ಲಿ ನೋಡುತ್ತೇವೆ.

ಸರ್ ಐಸಾಕ್ ನ್ಯೂಟನ್‌ರವರು ಸೂರ್ಯನ ಬೆಳಕಿನ ರೋಹಿತವನ್ನು ಪಡೆಯಲು ಗಾಜಿನ ಪಟ್ಟಕವನ್ನು ಬಳಸಿದ ಮೊದಲಿಗರು. ಅವರು ಮತ್ತೊಂದು ಸಮರೂಪಿ ಪಟ್ಟಕವನ್ನು ಬಳಸಿ ರೋಹಿತದ ಬಣ್ಣಗಳನ್ನು ಬೇರ್ಪಡಿಸಲು ಪ್ರಯತ್ನಿಸಿದರು. ಅವರಿಗೆ ಹೆಚ್ಚಿನ ಬಣ್ಣಗಳು ದೊರೆಯಲಿಲ್ಲ. ಆದರೆ ಅವರು ಸಮರೂಪಿಯಾದ ಮತ್ತೊಂದು ಪಟ್ಟಕವನ್ನು ಮೊದಲಿನ ಪಟ್ಟಕದ ವಿರುದ್ಧ ದಿಕ್ಕಿನಲ್ಲಿ ತಲೆಕೆಳಗಾಗಿ ಚಿತ್ರದಲ್ಲಿರುವಂತೆ ಇರಿಸಿದರು.



ಇದು ರೋಹಿತದ ಎಲ್ಲಾ ಬಣ್ಣಗಳು ತಲೆಕೆಳಗಾದ ಪಟ್ಟಕದ ಮೂಲಕ ಹಾದು ಹೋಗಲು ಅವಕಾಶ ಕಲ್ಪಿಸಿತು. ಎರಡನೇ ಪಟ್ಟಕದ ಮತ್ತೊಂದು ಕಡೆಯಿಂದ ನಿರ್ಗಮಿಸುವ ಬೆಳಕು ಬಿಳಿಬಣ್ಣದಾಗಿತ್ತು. ಈ ವೀಕ್ಷಣೆಯು ಸೂರ್ಯನ ಬೆಳಕು ಏಳು ಬಣ್ಣಗಳಿಂದುಂಟಾಗಿದೆ ಎಂದು ತೀರ್ಮಾನಿಸಿಲು ನ್ಯೂಟನ್‌ರಿಗೆ ಸುಳಿವು ನೀಡಿತು.

ಸೂರ್ಯನ ರೋಹಿತದಂತಹ ರೋಹಿತವನ್ನು ನೀಡುವ ಯಾವುದೇ ಬೆಳಕನ್ನು ಬಿಳಿಯ ಬೆಳಕು ಎಂದು ಕರೆಯುವರು

ಕಾಮನಬಿಲ್ಲು ಮಳೆಯ ನಂತರ ಆಕಾಶದಲ್ಲಿ ಕಾಣುವ ನೈಸರ್ಗಿಕ ರೋಹಿತವಾಗಿದೆ. (ಚಿತ್ರ) ಇದು ವಾತಾವರಣದಲ್ಲಿರುವ ಅತಿಸಣ್ಣ ನೀರಿನ ಹನಿಗಳಿಂದ ಉಂಟಾಗುವ ಸೌರಕಿರಣಗಳ ವರ್ಣವಿಭಜನೆಯಾಗಿದೆ.

ಕಾಮನಬಿಲ್ಲು ಯಾವಾಗಲೂ ಸೂರ್ಯನ ವಿರುದ್ಧ ದಿಕ್ಕಿನಲ್ಲಿ ಉಂಟಾಗುತ್ತದೆ. ನೀರಿನ ಹನಿಗಳು ಕಿರುಪಟ್ಟಕಗಳಂತೆ ವರ್ತಿಸುತ್ತವೆ. ಅವು ಸೂರ್ಯನ ಪತನ ಕಿರಣಗಳನ್ನು ವಕ್ರೀಭವನಗೊಳಿಸಿ ಚದುರಿಸುತ್ತವೆ. ನಂತರ, ಆಂತರಿಕವಾಗಿ ಪ್ರತಿಫಲಿಸುತ್ತವೆ. ಅಂತಿಮವಾಗಿ ನೀರಿನ ಹನಿಗಳಿಂದ ಹೊರ ಬರುವಾಗ ವಕ್ರೀಭವನ ಹೊಂದುತ್ತವೆ. ಬೆಳಕಿನ ವರ್ಣವಿಭಜನೆ ಮತ್ತು ಆಂತರಿಕ ಪ್ರತಿಫಲನದಿಂದಾಗಿ ವಿವಿಧ ಬಣ್ಣಗಳು ವೀಕ್ಷಕನ ಕಣ್ಣನ್ನು ತಲುಪುತ್ತವೆ.

ಸೂರ್ಯನ ಬೆಳಕಿರುವ ಸಮಯದಲ್ಲಿ ನೀವು ಜಲಪಾತದ ಬಳಿ ಅಥವಾ ನೀರಿನ ಕಾರಂಜಿಯ ಬಳಿ ಸೂರ್ಯ ನಿಮ್ಮ ಹಿಂದಿರುವಂತೆ ನಿಂತರೆ ಕಾಮನಬಿಲ್ಲನ್ನು ನೋಡಬಹುದು.

II PUC BIOLOGY

MAN IN HEALTH AND DISEASES

32. Which are the different modes of transmission of disease?

Ans:- **(....Contd)**

v) Transplacental Transmission - German easles, Syphilis.

(2) Indirect Transmission –

i) Vector - An animal transfers the pathogen while visiting the host, e.g., mosquito, sandfly, housefly.

ii) Vehicle - Food and water carry the pathogen, e.g., typhoid.

iii) Air Borne-Dust & air current, e.g.,typhus

iv) Fomites - Articles coming in contact with patient, door handles, taps, currency, garments.

v) Unclean Hands - They transfer the pathogens to fomites, food, utensils and other persons.

Multiple Choice Questions

1. AIDS spreads through
A) Blood transfusion
B) Placental transmission
C) Sexual intercourse D) All the above

2. AIDS is caused by
A) Rubeola virus B) Varicella virus
C) Human immunodeficiency virus
D) Treponema pallidus

3. Resistance against disease is due to
A) Immunoglobulin B) HLA proteins
C) Antigens D) Histamine

4. HIV attacks
A) B-lymphocytes B) Antibodies
C) T-lymphocytes D) Erythrocytes

5. Lysis of foreign cells is mediated through
A) Ig D and Ig E B) Ig M and Ig G
C) Ig M only D) Ig A only

6. Stimulant found in Cola, Tea and Coca is
A) Cocaine B) Tannin
C) Amphetamine D) Caffeine

7. Hashish and Ganja are obtained from
A) Erthroxylon B) Papaver
C) Cannabis D) Theobroma

8. Opiates and heroin are obtained from
A) Thea B) Papaver
C) Cannabis D) Theobroma

9. Drugs which induced dreamy state of unconsciousness are
A) Hallucinogens B) Sedatives

12. Metastasis occurs in case of
A) Malignant tumour B) Benig
C) Ulcer D) Both

13. Antibodies are formed by
A) Fibroblasts B) Plasm
C) Histiocytes D) Mast

14. Short lived immunity obtaine from mother through placenta and m
A) Passive immunity B) Active
C) Cellular immunity
D) Innate nonspecific immunity

15. T-lymphocytes
A) Have three main types-cyt and suppressor
B) Produced in thyroid
C) Originate in lymphoid tissue
D) Scavenge damaged cells debris.

16. Which of these immuneglobulin in size?
A) Ig A B) Ig D
C) Ig E D) IgM

17. Treatment of snake bite by antiv
A) Artificial acquired active imm
B) Artificial acquired passive imr
C) Natural acquired passive immu
D) Special natural immunity.

18. Which one of these is a stimulan
A) LSD B) Cocain
C) Heroin D) Opium

19. Synthetic drugs structurally adrenaline are
A) Amphetamines B) Barbi
C) Hallucinogens D) Analg

20. AIDS was first reported in
A) Russia B) Fran
C) U.S.A. D) Gern

21. Alcohol is the most socially acce drug. Excessive consumption of a alc
A) State of hallucination
B) Loss of memory
C) Suppression of brain
D) Cirrhosis of liver.

22. Opium is got from
A) Leaves
C) Flowers

52 ಹೊಸ ಇಂದಿರಾ ಕ್ಯಾಂಟೀನ್

ಕಳೆದ ಸಾಲಿನ ಬಜೆಟ್‌ನಲ್ಲಿ ಪ್ರಕಟ: ಪ್ರೀಕಾಸ್ಟ್ ಮಾದರಿಯಲ್ಲಿ ನಿರ್ಮಿಸುವ ಗುರಿ

● ಆರ್. ಮಂಜುನಾಥ್

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ಪ್ರತಿಯೊಂದು ವಾರ್ಡ್‌ನಲ್ಲೂ ಇಂದಿರಾ ಕ್ಯಾಂಟೀನ್ ಸ್ಥಾಪಿಸುವ ಯೋಜನೆಗೆ ಚಾಲನೆ ದೊರೆತಿದ್ದು, ಏಪ್ರಿಲ್ ವೇಳೆಗೆ 52 ಹೊಸ ಇಂದಿರಾ ಕ್ಯಾಂಟೀನ್‌ಗಳು ಆರಂಭವಾಗುವ ಸಾಧ್ಯತೆ ಇದೆ.

‘ಗುಣಮಟ್ಟದ ಆಹಾರ ಎಲ್ಲರಿಗೂ ಸಿಗಬೇಕು, ಹಸಿದವರು ಉಪವಾಸದಿಂದ ಇರಬಾರದು ಎಂಬ ಉದ್ದೇಶದಿಂದ ಇಂದಿರಾ ಕ್ಯಾಂಟೀನ್ ಅನ್ನು ಎಲ್ಲ ವಾರ್ಡ್‌ಗಳಲ್ಲಿ ಆರಂಭಿಸಲಾಗುತ್ತದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2023–24ರ ಬಜೆಟ್‌ನಲ್ಲಿ ಪ್ರಕಟಿಸಿದ್ದರು. 2023ರ ಜೂನ್ 12ರಂದು ಅಧಿಕಾರಿಗಳ ಸಭೆ ನಡೆಸಿ, ‘ಕೂಡಲೇ ಹೊಸ ಕ್ಯಾಂಟೀನ್ ಆರಂಭಿಸಬೇಕು ಹಾಗೂ ಹೊಸ ಮೆನು (ಆಹಾರಗಳು) ಪರಿಚಯಿಸಬೇಕು’ ಎಂದೂ ಸೂಚಿಸಿದ್ದರು. ಆದರೆ, ಒಂದೂವರೆ ವರ್ಷ ಈ ಸಂಬಂಧ ಯಾವುದೇ ಪ್ರಕ್ರಿಯೆ ಆಗಿರಲಿಲ್ಲ.

2024ರ ಡಿಸೆಂಬರ್ 17ರಂದು ಟೆಂಡರ್ ಪ್ರಕ್ರಿಯೆ ಆರಂಭಿಸಿರುವ ಬಿಬಿಎಂಪಿ, 17 ವಿಧಾನಸಭೆ ಕ್ಷೇತ್ರಗಳ ವ್ಯಾಪ್ತಿಯಲ್ಲಿ 52 ಇಂದಿರಾ ಕ್ಯಾಂಟೀನ್‌ಗಳನ್ನು ‘ಪ್ರೀಕಾಸ್ಟ್ ಮಾದರಿ’ಯಲ್ಲಿ ನಿರ್ಮಿಸಲು ಬಿಡ್‌ಗಳನ್ನು ಆಹ್ವಾನಿಸಿದೆ. ಜನವರಿ 8ರಂದು ಟೆಂಡರ್ ಪ್ರಕ್ರಿಯೆ ಮುಗಿಯಲಿದ್ದು, ಎಲ್ಲವೂ ಯೋಜನೆಯಂತೆಯೇ ನಡೆದರೆ ಜನವರಿ ಅಂತ್ಯದಲ್ಲಿ ಕಾರ್ಯಾದೇಶ ನೀಡಲಾಗುತ್ತದೆ. ಅಲ್ಲಿಂದ ಮೂರು ತಿಂಗಳೊಳಗೆ ಕ್ಯಾಂಟೀನ್ ನಿರ್ಮಾಣ ಪೂರ್ಣಗೊಳಿಸಲು ಯೋಜಿಸಲಾಗಿದೆ.

‘ಲಂಪ್‌ಸಮ್ ಟರ್ನ್ ಕೀ’ ಯೋಜನೆಯಲ್ಲಿ ಇಂದಿರಾ ಕ್ಯಾಂಟೀನ್ ನಿರ್ಮಾಣಗುತ್ತಿದ್ದು, ಟೆಂಡರ್‌ನಲ್ಲಿ ಅಂತಿಮವಾದ ವೆಚ್ಚಕ್ಕೇ ಕಾಮಗಾರಿ ಮುಗಿಯಬೇಕಿದೆ. 12 ತಿಂಗಳಲ್ಲಿ ಕ್ಯಾಂಟೀನ್ ಅನ್ನು ಗುತ್ತಿಗೆದಾರರು ಬಿಬಿಎಂಪಿಗೆ ವಹಿಸಿಕೊಡಬೇಕಿದೆ.

ಚಿತ್ರ ಸಹಿತ ಬಿಲ್: ‘ಇಂದಿರಾ ಕ್ಯಾಂಟೀನ್‌ಗಳಲ್ಲಿ ಆಹಾರ ಮಾರಾಟ ದುರುಪಯೋಗವಾಗದಂತೆ ‘ಚಿತ್ರ ಸಹಿತ ಬಿಲ್’ ನೀಡುವ ವ್ಯವಸ್ಥೆಯನ್ನು ಜಾರಿಗೆ ತರಲು ನಿರ್ಧರಿಸಲಾಗಿದೆ. ಈ ಬಗ್ಗೆ ಪ್ರಕ್ರಿಯೆಗಳು ನಡೆಯುತ್ತಿದ್ದು, ಟೆಂಡರ್ ಆಹ್ವಾನಿಸಿ, ಹೊಸ ವ್ಯವಸ್ಥೆಯನ್ನು ಜಾರಿಗೊಳಿಸಲಾಗುತ್ತದೆ’ ಎಂದು ಆರೋಗ್ಯ ವಿಭಾಗದ ಅಧಿಕಾರಿಗಳು ತಿಳಿಸಿದರು.

‘ಆಹಾರ ಗುಣಮಟ್ಟ ಕಾಪಾಡುವುದು ಹಾಗೂ ಆಹಾರ ಮಾರಾಟ ದುರುಪಯೋಗವಾಗದಂತೆ ಉಸ್ತುವಾರಿ ವಹಿಸಲು ಮಾರ್ಷಲ್‌ಗಳನ್ನು ನೇಮಿಸಲಾಗಿದೆ. ಇದರ ಜೊತೆಗೆ, ‘ಚಿತ್ರ ಸಹಿತ ಬಿಲ್’ ವ್ಯವಸ್ಥೆ ಜಾರಿಗೊಳಿಸಿದರೆ ಹೆಚ್ಚು ಪಾರದರ್ಶಕವಾಗಿರುತ್ತದೆ. ಆಹಾರ ಮಾರಾಟದ ಲೆಕ್ಕಪತ್ರವೂ ನಿಖರವಾಗಿರುತ್ತದೆ’ ಎಂದರು.

175 ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಇಂದಿರಾ ಕ್ಯಾಂಟೀನ್‌ಗಳು	**52** ನಿರ್ಮಾಣವಾಗಲಿರುವ ಹೊಸ ಇಂದಿರಾ ಕ್ಯಾಂಟೀನ್‌ಗಳು	**₹24.96** ಕೋಟಿ ಹೊಸ ಇಂದಿರಾ ಕ್ಯಾಂಟೀನ್‌ಗಳ ನಿರ್ಮಾಣ ವೆಚ್ಚ	**816** ಚದರ ಅಡಿ ಪ್ರತಿಯೊಂದು ಇಂದಿರಾ ಕ್ಯಾಂಟೀನ್ ವಿಸ್ತೀರ್ಣ

ಹೊಸ ಮೆನು ಶೀಘ್ರ!

ಹೊಸ ಇಂದಿರಾ ಕ್ಯಾಂಟೀನ್‌ಗಳ ಮಾದರಿ

ಇಂದಿರಾ ಕ್ಯಾಂಟೀನ್‌ಗಳಲ್ಲಿ ರಾಗಿ ಮುದ್ದೆ, ಚಪಾತಿ, ಅನ್ನ ಸಾಂಬಾರು, ಇಡ್ಲಿ, ಮಂಗಳೂರು ಬನ್ಸ್, ಬಿಸಿಬೇಳೆ ಬಾತ್, ಪುಲಾವ್, ಬ್ರೆಡ್ ಜಾಮ್, ಚೌಚೌ ಬಾತ್‌ಗಳನ್ನು ಪೂರೈಸಬೇಕು ಎಂದು 2023ರಲ್ಲಿಯೇ ನಿರ್ಧರಿಸಿ, ಸರ್ಕಾರ ಸಮ್ಮತಿಯನ್ನೂ ನೀಡಿತ್ತು. ಆದರೆ, ಈವರೆಗೆ ‘ಹೊಸ ಆಹಾರ ಮೆನು’ ಜಾರಿಯಾಗಿಲ್ಲ.

‘ಇಂದಿರಾ ಕ್ಯಾಂಟೀನ್‌ಗಳಿಗೆ ಆಹಾರ ಪೂರೈಸುವ 19 ಅಡುಗೆ ಮನೆಗಳಲ್ಲಿ ಹೊಸ ಮೆನುವಿನಂತೆ ಆಹಾರ ಸಿದ್ಧಪಡಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ, ಅವುಗಳನ್ನು ಉನ್ನತೀಕರಿಸಬೇಕಾದ ಅಗತ್ಯವಿದೆ. ಈ ಕಾರ್ಯ ಪೂರ್ಣಗೊಂಡ ಬಳಿಕ ಹೊಸ ಮೆನುವಿನಂತೆಯೇ ಗುತ್ತಿಗೆದಾರರು ಆಹಾರ ಪೂರೈಸಲಿದ್ದಾರೆ’ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ಅಧಿಕಾರಿಗಳು ತಿಳಿಸಿದರು.

‘ಕೆಲವು ಇಂದಿರಾ ಕ್ಯಾಂಟೀನ್‌ಗಳಲ್ಲಿ ಹೊಸ ಮೆನುವಿನಂತೆ ಆಹಾರ ನೀಡಲಾಗುತ್ತಿದೆ. ಉಳಿದ ಕಡೆಯೂ ಶೀಘ್ರವೇ ಪೂರೈಸಲಾಗುತ್ತದೆ’ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ಹೇಳಿದರು.

ಈಡೇರದ ಗುಣಮಟ್ಟ ಭರವಸೆ!

‘ಇಂದಿರಾ ಕ್ಯಾಂಟೀನ್‌ಗಳಿಗೆ ಆರೋಗ್ಯ ಅಧಿಕಾರಿಗಳು ಭೇಟಿ ನೀಡಿ, ಸುಸ್ಥಿತಿ ಮತ್ತು ಕಾರ್ಯನಿರ್ವಹಣೆ ಕುರಿತು ವರದಿ ಸಲ್ಲಿಸಬೇಕು. ದುರಸ್ತಿ ಅಗತ್ಯ ಇರುವಲ್ಲಿ ಕೂಡಲೇ ಕ್ರಮ ಕೈಗೊಳ್ಳಬೇಕು. ಆಹಾರದ ಗುಣಮಟ್ಟ ಕಾಯ್ದುಕೊಳ್ಳಬೇಕು. ನಿಗದಿಪಡಿಸಿದ ಮೆನುವನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಸ್ವಚ್ಛತೆ, ಗುಣಮಟ್ಟ ಹಾಗೂ ಪ್ರಮಾಣದಲ್ಲಿ ಯಾವುದೇ ರಾಜಿ ಮಾಡಕೊಳ್ಳಬಾರದು. ಸಚಿವರು, ಶಾಸಕರನ್ನು ಉಪಾಹಾರಕ್ಕೆ ಆಹ್ವಾನಿಸಬೇಕು. ಅವರು ಆಗಾಗ್ಗೆ ಆಹಾರ ಸೇವಿಸಿದರೆ ಗುಣಮಟ್ಟ ಕಾಪಾಡಿಕೊಳ್ಳಲು ಅನುಕೂಲ’ ಎಂದು ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಮುಖ್ಯ ಆಯುಕ್ತರು 2023ರ ಜೂನ್‌ನಲ್ಲಿಯೇ ಸೂಚಿಸಿದ್ದರು. ಆದರೆ, ‘ಈ ಯಾವ ಪ್ರಕ್ರಿಯೆಗಳೂ ನಡೆಯುತ್ತಿಲ್ಲ. ಗುಣಮಟ್ಟ, ಶುಚಿತ್ವವನ್ನೂ ಕಾಪಾಡುತ್ತಿಲ್ಲ’ ಎಂದು ನಾಗರಿಕರು ಆಗಾಗ್ಗೆ ದೂರುತ್ತಲೇ ಇದ್ದಾರೆ.

ಯಾವ ಕ್ಷೇತ್ರದಲ್ಲಿ ಹೊಸ ಇಂದಿರಾ ಕ್ಯಾಂಟೀನ್?

ಬೆಂಗಳೂರು ದಕ್ಷಿಣ: ಕಾಳೇನ ಅಗ್ರಹಾರ ಮುಖ್ಯರಸ್ತೆ; ರಜತಾದ್ರಿ ಬಿಲ್ಡಿಂಗ್ ಹಿಂಭಾಗ, ಸುಬ್ರಹ್ಮಣ್ಯಪುರ; ಯಲಚೇನಹಳ್ಳಿ ಉದ್ಯಾನ; ಸಿಂಗಸಂದ್ರ ಸರ್ಕಾರಿ ಆಸ್ಪತ್ರೆ, ನಾಗನಾಥಪುರ; ಬ್ರಿಗೇಡ್ ಮಿಲೇನಿಯಂ ಬಿಲ್ಡಿಂಗ್, ಆರ್‌ಬಿಐ ಲೇಔಟ್.

ಬೊಮ್ಮನಹಳ್ಳಿ: ಪ್ರಾಥಮಿಕ ಆರೋಗ್ಯ ಕೇಂದ್ರ, ಹೊಂಗಸಂದ್ರ; ಗಣಪತಿ ದೇವಸ್ಥಾನ, ಎಇಸಿಎಸ್ ಲೇಔಟ್, ಹೊಸ ರಸ್ತೆ; ಆಂಜನೇಯ ದೇವಸ್ಥಾನ, ಕೋಡಿಚಿಕ್ಕನಹಳ್ಳಿ; ರಂಗರಾಜ್ ಶಾಲೆ ಮೈದಾನ, ಜರಗನಹಳ್ಳಿ.

ದಾಸರಹಳ್ಳಿ: ರೈಲು ನಿಲ್ದಾಣ, ಎಜಿಪಿ ಲೇಔಟ್, ಚಿಕ್ಕಸಂದ್ರ; ಗೃಹಲಕ್ಷ್ಮಿ ಲೇಔಟ್, ನೆಲಗದರನಹಳ್ಳಿ; ಸುಂಕದಕಟ್ಟೆ ಮಾರ್ಕೆಟ್ ಉದ್ಯಾನ.

ಸಿ.ವಿ. ರಾಮನ್: ಸಿವಿಆರ್ ಆಸ್ಪತ್ರೆ ಆವರಣ, ಮಿಚೆಲ್ ಪಾಳ್ಯ, ಹೊಯ್ಸಳನಗರ.

ಶಿವಾಜಿನಗರ: ಬಿಬಿಎಂಪಿ ಕೇಂದ್ರ ಕಚೇರಿ, ಸಂಪಂಗಿರಾಮನಗರ; ಬೌರಿಂಗ್ ಆಸ್ಪತ್ರೆ, ಲೇಡಿ ಕರ್ಜನ್ ರಸ್ತೆ.

ಶಾಂತಿನಗರ: ಜಂಟಿ ಆಯುಕ್ತರ ಕಚೇರಿ, ರೆಸಿಡೆನ್ಸಿ ರಸ್ತೆ.

ಸರ್ವಜ್ಞನಗರ: ಹೆಣ್ಣೂರು ಬಂಡೆ; ಕಾಚರಕನಹಳ್ಳಿ ಸರ್ಕಾರಿ ಶಾಲೆ.

ಕೆ.ಆರ್. ಪುರ: ಶಾಂತಿ ಬಡಾವಣೆ, ಸಂತೆ ಮೈದಾನ.

ಮಹದೇವಪುರ: ಮುನ್ನೇಕೊಳಾಲ ಬಸ್ ನಿಲ್ದಾಣ.

ರಾಜರಾಜೇಶ್ವರಿನಗರ: ಚೌಡೇಶ್ವರಿನಗರ ವೃತ್ತ, ಲಗ್ಗೆರೆ; ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ಆಲದಮರ ವೃತ್ತ; ಬಿಬಿಎಂಪಿ ಮೈದಾನ, ಮಲ್ಲತ್ತಹಳ್ಳಿ; ಕಂದಾಯ–ಕಾವೇರಿ ಕಚೇರಿ, ಬಿಇಎಂಎಲ್ 3ನೇ ಹಂತ; ಹೊಸಹಳ್ಳಿ, ಗೊಲ್ಲರಪಾಳ್ಯ; ಭುವನೇಶ್ವರಿನಗರ ವಾರ್ಡ್ ಕಚೇರಿ, ನಾಗದೇವನಹಳ್ಳಿ; ಶಿರ್ಕೆ ಅಪಾರ್ಟ್‌ಮೆಂಟ್ ವೃತ್ತ, ಕೆಂಗೇರಿ.

ಜಯನಗರ: ರಾಗಿಗುಡ್ಡ ಉದ್ಯಾನ, ಜೆ.ಪಿ.ನಗರ.

ಚಿಕ್ಕಪೇಟೆ: ಐಟಿಐ ಕ್ಯಾಂಪಸ್, ಹೊಸೂರು ರಸ್ತೆ; ದಾಸಪ್ಪ ಆಸ್ಪತ್ರೆ, ಪುರಭವನ.

ಬಸವನಗುಡಿ: ಮದ್ದೂರಮ್ಮ ಮೈದಾನ, ಶ್ರೀನಗರ; ಬಂಡಿಮಾಂಕಾಳಮ್ಮ ದೇವಸ್ಥಾನ, ಹನುಮಂತನಗರ.

ಗಾಂಧಿನಗರ: ಕೆ.ವಿ. ದೇವಸ್ಥಾನ ರಸ್ತೆ, ಚಿಕ್ಕಪೇಟೆ.

ರಾಜಾಜಿನಗರ: ರಾಜಾಜಿನಗರ ಪೊಲೀಸ್ ಠಾಣೆ ಸಮೀಪ; ನೇತಾಜಿ ಪಾರ್ಕ್, ಬಸವೇಶ್ವರನಗರ; ಮೋಟಪ್ಪ ಉದ್ಯಾನ, ಶಿವನಗರ.

ಯಲಹಂಕ: ವಿಶ್ವನಗರ, ನಮ್ಮ ಕ್ಲಿನಿಕ್ ಬಳಿ, ಚಿಕ್ಕಬೆಟ್ಟಹಳ್ಳಿ.

ಬ್ಯಾಟರಾಯನಪುರ: ಪಶು ಆಸ್ಪತ್ರೆ, ಥಣಿಸಂದ್ರ; ಎಇಇ ಕಚೇರಿ, ದಾಸರಹಳ್ಳಿ; ತಿಂಡ್ಲು ಸರ್ಕಾರಿ ಶಾಲೆ ಸಮೀಪ; ರಾಮಚಂದ್ರಪುರ, ದೊಡ್ಡಬೊಮ್ಮಸಂದ್ರ.

ಪ್ರಧಾನಿ, ಬಿಜೆಪಿ ನಡೆಗೆ ಮಾಜಿ ಸಚಿವ ಬಿಕೆಸಿ ಟೀಕೆ

‘ಸಂವಿಧಾನ ದುರ್ಬಳಕೆಯಾಗುತ್ತಿದೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜನಾಕ್ರೋಶಕ್ಕೆ ಹೆದರಿ ಸಂವಿಧಾನ ಬದಲಾವಣೆ ಹೇಳಿಕೆಗಳಿಂದ ಹಿಂದೆ ಸರಿದ ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ಮುಖಂಡರು ಸಾಂವಿಧಾನಿಕ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುವ ಮೂಲಕ ಸಂವಿಧಾನದ ಆಶಯಗಳನ್ನೇ ಮೂಲೆಗುಂಪು ಮಾಡುತ್ತಿದ್ದಾರೆ ಎಂದು ಮಾಜಿ ಸಚಿವ ಬಿ.ಕೆ. ಚಂದ್ರಶೇಖರ್ ದೂರಿದರು.

ಸುದ್ದಿಗಾರರ ಜತೆ ಮಂಗಳವಾರ ಮಾತನಾಡಿದ ಅವರು, ಕೇಂದ್ರದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಮೇಲೆ ಚುನಾವಣಾ ಆಯೋಗ, ಆದಾಯ ತೆರಿಗೆ ಇಲಾಖೆ, ಜಾರಿ ನಿರ್ದೇಶನಾಲಯ ಸೇರಿದಂತೆ ಎಲ್ಲ ಸಂಸ್ಥೆಗಳಲ್ಲೂ ಹಸ್ತಕ್ಷೇಪ ನಡೆಸಿದೆ.ಹಿಂದುತ್ವದಸಿದ್ಧಾಂತಗಳಿಗೆಬದ್ಧರಾಗಿರುವ ಅಧಿಕಾರಿಗಳನ್ನೇ ಆಯಕಟ್ಟಿನ ಸ್ಥಳಗಳಿಗೆ ನೇಮಕ ಮಾಡಿ, ವಿರೋಧ ಪಕ್ಷಗಳ ವಿರುದ್ಧ ಬಳಸಿಕೊಳ್ಳಲಾಗುತ್ತಿದೆ ಎಂದು ಆರೋಪಿಸಿದರು.

ನ್ಯಾಯಾಂಗ, ಪೊಲೀಸ್ ವ್ಯವಸ್ಥೆಯಲ್ಲೂ ಹಸ್ತಕ್ಷೇಪಕ್ಕೆ ನಿರಂತರ ಪ್ರಯತ್ನಗಳು ನಡೆದಿವೆ. 370 ವಿಧಿ ರದ್ದು, ಅಯೋಧ್ಯೆ ವಿವಾದದ ತೀರ್ಪು ಸೇರಿದಂತೆ ತಮಗೆ ಅನುಕೂಲವಾಗುವ ವಾತಾವರಣ ಸೃಷ್ಟಿಸಿಕೊಟ್ಟವರಿಗೆ ನಿವೃತ್ತಿಯ ನಂತರ ಉತ್ತಮ ಸ್ಥಾನಮಾನ ನೀಡಲಾಗಿದೆ. ಇಂತಹ ಪ್ರಯತ್ನಗಳ ಮೂಲಕ ಸಂವಿಧಾನಕ್ಕೆ ತಿದ್ದುಪಡಿ ತಾರದೇ ಸಂವಿಧಾನದ ನೈತಿಕತೆಯನ್ನು ಕುಗ್ಗಿಸುವ ಪ್ರಯತ್ನ ನಡೆದಿದೆ ಎಂದರು.

ಅಂಬೇಡ್ಕರ್ ಅವರಿಗೆ ಕ್ಷೇತ್ರ ದೊರಕಿಸಿಕೊಟ್ಟು, ಅವರನ್ನು ಮೊದಲ ಕಾನೂನು ಮಂತ್ರಿ ಮಾಡಿದ್ದೇ ಕಾಂಗ್ರೆಸ್. ಎಲ್ಲ ಕಾಲದಲ್ಲೂ ನಾಯಕರ ನಡುವೆ ಭಿನ್ನಾಭಿಪ್ರಾಯ ಸಹಜ. ಅದನ್ನೇ ನೆಪ ಮಾಡಿಕೊಂಡು ಕಾಂಗ್ರೆಸ್ ಟೀಕಿಸುವ ಕೆಲಸ ನಡೆಯುತ್ತಿದೆ. ಅಂಬೇಡ್ಕರ್ ಸಿದ್ಧಾಂತ ವಿರೋಧಿಸಿಕೊಂಡು ಬಂದ ಪಕ್ಷವು ರಾಜಕೀಯ ಕಾರಣಗಳಿಗಾಗಿ ಈಗ ಅವರ ನಾಮಸ್ಮರಣೆ ಮಾಡುತ್ತಿದೆ ಎಂದು ಟೀಕಿಸಿದರು.

‘ಪಕ್ಷಪಾತಿ ಉಪರಾಷ್ಟ್ರಪತಿ’

ಚಂದ್ರಶೇಖರ್

ಉಪರಾಷ್ಟ್ರಪತಿ ಜಗದೀಪ್ ಧನಕರ್ ಅವರ ನಡವಳಿಕೆ ಪಕ್ಷಪಾತದಿಂದ ಕೂಡಿದೆ. ರಾಜ್ಯಸಭೆಯಲ್ಲಿ ಅವರ ವರ್ತನೆ ಬಿಜೆಪಿ ವಕ್ತಾರರಂತಿದೆ. ವಿರೋಧ ಪಕ್ಷದ ಸಂಸದರನ್ನು ಅಪಹಾಸ್ಯ ಮಾಡುವ ಪರಿಪಾಠ ರೂಢಿಸಿಕೊಂಡಿದ್ದಾರೆ ಎಂದು ಬಿ.ಕೆ. ಚಂದ್ರಶೇಖರ್ ಟೀಕಿಸಿದರು.

ಹಿಂದೆ ಇದ್ದ ಉಪರಾಷ್ಟ್ರಪತಿಗಳು ತಮ್ಮ ನಡವಳಿಕೆಗಳ ಮೂಲಕ ರಾಜ್ಯಸಭೆಗೆ ಒಂದು ಪರಂಪರೆಯನ್ನೇ ನೀಡಿದ್ದಾರೆ. ಅಂತಹ ಪರಂಪರೆಗೆ ಧನಕರ್ ನಡೆ ಒಂದು ಕಪ್ಪುಚುಕ್ಕೆ ಎಂದರು.

‘ಕಾಂಗ್ರೆಸ್‌ಗೆ ನೈತಿಕ ಹಕ್ಕಿಲ್ಲ’

ಬೆಂಗಳೂರು: ‘ಡಾ.ಬಿ.ಆರ್.ಅಂಬೇಡ್ಕರ್ ಅವರು ಬದುಕಿದ್ದಾಗ ನಿರಂತರವಾಗಿ ಅಪಮಾನ ಮಾಡಿದ್ದ ಕಾಂಗ್ರೆಸ್ಸಿಗರಿಗೆ ಅವರ ಹೆಸರು ಹೇಳುವ ನೈತಿಕ ಹಕ್ಕೇ ಇಲ್ಲ’ ಎಂದು ಬಿಜೆಪಿ ಸಹ ಉಸ್ತುವಾರಿ ಡಾ.ಪಿ.ಸುಧಾಕರ ರೆಡ್ಡಿ ಹೇಳಿದರು.

ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮಹಾರಾಷ್ಟ್ರ ಮತ್ತು ಹರಿಯಾಣ ವಿಧಾನ ಸಭಾ ಚುನಾವಣೆಯಲ್ಲಿ ಸೋಲಿನ ನಂತರ ಕಾಂಗ್ರೆಸ್ ಪಕ್ಷ ಹತಾಶಗೊಂಡಿದೆ. ಅಂಬೇಡ್ಕರ್ ಅವರನ್ನು ಲೋಕಸಭಾ ಚುನಾವಣೆಯಲ್ಲಿ ಎರಡು ಬಾರಿ ಸೋಲಿಸಿ ಅವಮಾನಿಸಿದ್ದ ಕಾಂಗ್ರೆಸ್ ಪಕ್ಷವು ಇದೀಗ ತಮ್ಮ ನಾಯಕನನ್ನು ಉಳಿಸಿಕೊಳ್ಳಲು ಅದೇ ಬಾಬಾ ಸಾಹೇಬರ ಹೆಸರನ್ನು ಬಳಸಿಕೊಳ್ಳುತ್ತಿದೆ’ ಎಂದರು.

‘ದೇಶ ವಿಭಜಿಸುವುದನ್ನು ಅಂಬೇಡ್ಕರ್ ವಿರೋಧಿಸಿದ್ದರು. ಕಾಶ್ಮೀರದಲ್ಲಿ 370ನೇ ವಿಧಿ ಹೇರುವುದನ್ನೂ ಅವರು ವಿರೋಧಿಸಿದ್ದರು. ಆದರೆ, ಅಂಬೇಡ್ಕರ್ ಇಚ್ಛೆಗೆ ವಿರುದ್ಧವಾಗಿ ಕಾಂಗ್ರೆಸ್ ಇವೆರಡನ್ನೂ ಮಾಡಿತ್ತು. ತುರ್ತುಪರಿಸ್ಥಿತಿ ಹೇರಿ ದೇಶವನ್ನೇ ಜೈಲಾಗಿಸಿತ್ತು’ ಎಂದು ಟೀಕಿಸಿದರು.

ನಿರಾಶ್ರಿತರಿಗೆ ಹಣ್ಣು, ಬೆಡ್‌ಶೀಟ್, ಕಂಬಳಿ ವಿತರಣೆ

‘ಅಶಕ್ತರು, ನೊಂದವರ ಸೇವೆ ಮಾಡಿ’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ‘ಅಶಕ್ತರು, ನೊಂದವರು ಅನಾಥರ ಸೇವೆ ಮಾಡುವ ಮೂಲಕ ಮಾನವೀಯ ಮೌಲ್ಯಗಳನ್ನು ರೂಡಿಸಿಕೊಳ್ಳಬೇಕು’ ಎಂದು ಕೆಪಿಸಿಸಿ ವಕ್ತಾರೆ ಎಚ್.ಕುಸುಮ ಹನುಮಂತ ರಾಯಪ್ಪ ತಿಳಿಸಿದರು.

ಮಾಗಡಿ ಮುಖ್ಯ ರಸ್ತೆಯ ನಿರಾಶ್ರಿತರ ಪುನರ್ವಸತಿ ಕೇಂದ್ರದಲ್ಲಿ ಮಾಜಿ ಸಂಸದ ಡಿ.ಕೆ. ಸುರೇಶ್ ಅವರ ಅಭಿಮಾನಿ ಬಳಗ ವತಿಯಿಂದ ನಿರಾಶ್ರಿತರಿಗೆ ಹಣ್ಣು, ಬೆಡ್‌ಶೀಟ್, ಕಂಬಳಿ ವಿತರಿಸಿ ಅವರು ಮಾತನಾಡಿದರು.

ಅಧಿಕಾರ, ಅಂತಸ್ತು ಯಾವುದು ಶಾಶ್ವತವಲ್ಲ ಬಡವರ ಅನಾಥರ, ಅಶಕ್ತರ ಸಂಕಷ್ಟಗಳಿಗೆ ಮಿಡಿಯುವ ಮೂಲಕ ಮಾನವ ಧರ್ಮ ಪಾಲಿಸಬೇಕೆಂದು ತಿಳಿಸಿದರು.

ಬಿಬಿಎಂಪಿಯ ಕೊಟ್ಟಿಗೆಪಾಳ್ಯ ವಾರ್ಡ್‌ನ ಮಾಜಿ ಸದಸ್ಯ ಮೋಹನ್ ಕುಮಾರ್ ಮಾತನಾಡಿ, ‘ನಿರಾಶ್ರಿತರ ಸೇವೆಯೇ ದೇವರ ಸೇವೆ’ ಎಂದು ಬಣ್ಣಿಸಿದರು. ಸಂದರ್ಭದ ಕಾಲ ಸುಳಿಗೆ ಸಿಲುಕಿ ಬಂಧು ಬಾಂಧವರ ಒಡನಾಟವಿಲ್ಲದೆ ಜೀವನ ಸಾಗಿಸುತ್ತಿರುವ ಅವರ ನೆರವಿಗೆ ಧಾವಿಸ ಬೇಕಾಗಿರುವುದು ನಮ್ಮೆಲ್ಲರ ಕರ್ತವ್ಯವಾಗಬೇಕಿದೆ’ ಎಂದರು.

ರಾಜರಾಜೇಶ್ವರಿ ನಗರಸಭಾ ವಿಧಾನಸಭಾ ಕ್ಷೇತ್ರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ರಾಂಪುರ ನಾಗೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎ. ಅಮರ್ ನಾಥ್, ರಮೇಶ್ ಗೌಡ, ಜ್ಯೋತಿ, ರಾಜೇಶ್ ಮತ್ತಿತರ ಮುಖಂಡರು ಉಪಸ್ಥಿತರಿದ್ದರು.

ಕೆಪಿಸಿಸಿ ವಕ್ತಾರೆ ಎಚ್.ಕುಸುಮ ಹನುಮಂತ ರಾಯಪ್ಪ ಅವರು ಮಾಗಡಿ ಮುಖ್ಯ ರಸ್ತೆಯ ನಿರಾಶ್ರಿತರ ಪುನರ್ವಸತಿ ಕೇಂದ್ರದಲ್ಲಿ ಮಾಜಿ ಸಂಸದ ಡಿ.ಕೆ. ಸುರೇಶ್ ಅವರ ಅಭಿಮಾನಿ ಬಳಗದ ವತಿಯಿಂದ ನಿರಾಶ್ರಿತರಿಗೆ ಹಣ್ಣು, ಬೆಡ್‌ಶೀಟ್, ಕಂಬಳಿ ವಿತರಿಸಿದರು

ಒಂಬತ್ತು ಪ್ರಮುಖ ಮಾರ್ಗಗಳಲ್ಲಿ ಸ್ಲೀಪರ್ ಬಸ್‌ಗಳ ಕಾರ್ಯಾಚರಣೆ

20 'ಅಂಬಾರಿ ಉತ್ಸವ' ಸೇವೆಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ ಹೊಸದಾಗಿ 20 ವೋಲ್ವೊ ಅಂಬಾರಿ ಉತ್ಸವ ಸ್ಲೀಪರ್ ಬಸ್ ಗಳು ಸೇರ್ಪಡೆಗೊಂಡಿದ್ದು, ಈ ಬಸ್‌ಗಳು ಬೆಂಗಳೂರಿನಿಂದ 9 ಪ್ರಮುಖ ಮಾರ್ಗಗಳಲ್ಲಿ ಕಾರ್ಯಾಚರಣೆ ನಡೆಸಲಿವೆ.

ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ನಿಗಮದ 20 ಅಂಬಾರಿ ಉತ್ಸವ ಬಸ್‌ಗಳಿಗೆ ಸಾರಿಗೆ ಸಚಿವ ರಾಮಲಿಂಗರೆಡ್ಡಿ ಮಂಗಳವಾರ ಚಾಲನೆ ನೀಡಿದರು. ಈ ವೇಳೆ ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಕೆಎಸ್‌ಆರ್‌ಟಿಸಿ ಅಧ್ಯಕ್ಷ ಎಸ್.ಆರ್. ಶ್ರೀನಿವಾಸ್, ಉಪಾಧ್ಯಕ್ಷ ಮೊಹಮ್ಮದ್ ರಿಜ್ವಾನ್ ನವಾಬ್ ಪಾಲ್ಗೊಂಡಿದ್ದರು.

ಯಾವ ಮಾರ್ಗದಲ್ಲಿ ಸಂಚಾರ? : ಕುಂದಾಪುರ- ಬೆಂಗಳೂರು-ಎರಡು ಬಸ್, ಮಂಗಳೂರು-ಬೆಂಗಳೂರು-ಎರಡು ಬಸ್, ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ-ಕುಂದಾಪುರ-ಎರಡು ಬಸ್, ಬೆಂಗಳೂರು-ನೆಲ್ಲೂರು-ಎರಡು ಬಸ್, ಬೆಂಗಳೂರು-ಹೈದರಾಬಾದ್-ಎರಡು ಬಸ್, ಬೆಂಗಳೂರು-ವಿಜಯವಾಡ-ನಾಲ್ಕು ಬಸ್, ಬೆಂಗಳೂರು-ಎರ್ನಾಕುಲಂ-ಎರಡು ಬಸ್, ಬೆಂಗಳೂರು-ತ್ರಿಶೂರು-ಎರಡು ಬಸ್, ಬೆಂಗಳೂರು-ಕಲ್ಲಿಕೋಟೆ-ಎರಡು ಬಸ್.

ಆದೇಶ ಪತ್ರ ವಿತರಣೆ: ಸಾರಿಗೆ ನಿಗಮದ ಹುಮ್ನಾಬಾದ್ ತರಬೇತಿ ಕೇಂದ್ರದಲ್ಲಿ ನಡೆಸಿದ ಚಾಲನಾ ವೃತ್ತಿ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವ 1,406 ಅಭ್ಯರ್ಥಿಗಳ ಪೈಕಿ 50 ಅಂಕಗಳಿಗೆ 50/49/48 ಅಂಕ ಪಡೆದಿರುವ 82 ಅಭ್ಯರ್ಥಿಗಳ ಪೈಕಿ 14 ಮಂದಿಗೆ ಚಾಲಕ/ನಿರ್ವಾಹಕರ ಹುದ್ದೆಗೆ ತಾತ್ಕಾಲಿಕ ನಿಯೋಜನೆ ಆದೇಶವನ್ನು ಸಚಿವರು ವಿತರಣೆ ಮಾಡಿದರು.

ಹೊಸ ಬಸ್ ಸೇರ್ಪಡೆ: ರಾಜ್ಯ ರಸ್ತೆ ಸಾರಿಗೆ ನಿಗಮಗಳಿಗೆ 5,800 ಹೊಸ ಬಸ್‌ಗಳ ಸೇರ್ಪಡೆಗೆ ಅನುಮೋದನೆ ನೀಡಿದ್ದು, ಈ ಪೈಕಿ ನಿಗಮಗಳಿಗೆ ಒಂದೂವರೆ ವರ್ಷದಲ್ಲಿ 4,301 ಬಸ್‌ಗಳನ್ನು ಸೇರ್ಪಡೆಗೊಳಿಸಲಾಗಿದೆ.

ನಾಲ್ಕು ನಿಗಮಗಳಲ್ಲಿ 9,000 ಹುದ್ದೆಗಳ ಭರ್ತಿಗೆ ಸರ್ಕಾರ ಅನುಮತಿ ನೀಡಿದ್ದು, ಈ ಪೈಕಿ 2,144 ಚಾಲಕ ಕಂ ನಿರ್ವಾಹಕ, ತಾಂತ್ರಿಕ ಸಿಬ್ಬಂದಿ ಹಾಗೂ ಆಡಳಿತ ಸಿಬ್ಬಂದಿಗೆ ನೇಮಕಾತಿ ಆದೇಶ ನೀಡಲಾಗಿದೆ. 6,856 ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಶೀಘ್ರದಲ್ಲೇ ಪೂರ್ಣಗೊಳಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೆಂಪೇಗೌಡ ಬಸ್ ನಿಲ್ದಾಣದಲ್ಲಿ ಕೆಎಸ್‌ಆರ್‌ಟಿಸಿಯ 20 ಅಂಬಾರಿ ಉತ್ಸವ ಬಸ್‌ಗಳಿಗೆ ಚಾಲನೆ ನೀಡಲಾಯಿತು ಪ್ರಜಾವಾಣಿ ಚಿತ್ರ

ಬಸ್ ಹರಿದು ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ನೆಲಮಂಗಲ: ಮಾಕಳಿಯ ಸಿದ್ಧ ಉಡುಪು ಕಾರ್ಖಾನೆ ಎದುರು ಮಹಿಳೆಯ ಮೇಲೆ ಬಸ್ ಚಕ್ರ ಹರಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಸಿದ್ಧ ಉಡುಪು ಕಾರ್ಖಾನೆ ಉದ್ಯೋಗಿ, ಕೊರಟಗೆರೆ ಹುಲುವಂಗಲ ಗ್ರಾಮದ ನಿವಾಸಿ ನಳಿನಾ(24) ಮೃತಪಟ್ಟವರು.

ಬೆಂಗಳೂರು ಉತ್ತರ ತಾಲ್ಲೂಕಿನ ಮಾಕಳಿಯ ಗೋಲ್ಡನ್ ಸೀಮ್ಸ್ ಗಾರ್ಮೆಂಟ್ಸ್ ಎದುರು ಘಟನೆ ನಡೆದಿದೆ. ಕಾರ್ಮಿಕರನ್ನು ಕರೆತರುವ ಬಸ್ ಇಳಿದು ಗಾರ್ಮೆಂಟ್ಸ್‌ಗೆ ನಡೆದು ಹೋಗುತ್ತಿದ್ದಾಗ ನಳಿನಾ ಮೇಲೆ ಅದೇ ಗಾರ್ಮೆಂಟ್ಸ್‌ನ ಇನ್ನೊಂದು ಬಸ್ ಹರಿದಿದೆ. ನಳಿನಾ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ನಳಿನಾ

ಪರಿಹಾರಕ್ಕೆ ಆಗ್ರಹ: ಚಾಲಕನ ಅಜಾಗರೂಕತೆಯೇ ಅಪಘಾತಕ್ಕೆ ಕಾರಣವಾಗಿದ್ದು, ಮೃತ ಮಹಿಳೆ ಕುಟುಂಬಕ್ಕೆ ಪರಿಹಾರ ನೀಡಬೇಕು ಎಂದು ರಾಜ್ಯ ಗಾರ್ಮೆಂಟ್ಸ್ ಮತ್ತು ಟೆಕ್ಸ್‌ಟೈಲ್ಸ್ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ರಾಜು ಆಗ್ರಹಿಸಿದ್ದಾರೆ.

ಕೌಟುಂಬಿಕ ಕಲಹ: ಕಾರ್ಮಿಕ ಆತ್ಮಹತ್ಯೆ

ದಾಬಸ್‌ಪೇಟೆ: ಪಟ್ಟಣದ ಎಸ್.ಡಿ.ಎಂ ಬಡಾವಣೆಯ ಮನೆಯೊಂದರಲ್ಲಿ ಕೌಟುಂಬಿಕ ಕಲಹದಿಂದ ಮನನೊಂದು ಕಾರ್ಮಿಕ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಅಸ್ಸಾಂನ ಸಚಿನ್ ನಾಯಕ್(26) ಆತ್ಮಹತ್ಯೆಗೆ ಶರಣಾದ ಕಾರ್ಮಿಕ.

ಇವರು ಒಂದೂವರೆ ತಿಂಗಳಿಂದ ಅವ್ವೇರಹಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಪ್ರೀಮಿಯರ್ ವುಡ್ ಪ್ಯಾಕರ್ಸ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ಯುವತಿಯನ್ನು ಪ್ರೀತಿಸಿ ಎರಡು ವರ್ಷಗಳ ಹಿಂದೆ ಮದುವೆಯಾಗಿ ಇಲ್ಲಿಗೆ ಬಂದು ನೆಲಸಿದ್ದರು. ಇತ್ತೀಚೆಗೆ ಇಬ್ಬರ ಮಧ್ಯೆ ಮನಸ್ತಾಪವಾಗಿದ್ದು, ಸಚಿನ್ ಮನನೊಂದು ಕೊಠಡಿಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ದಾಬಸ್ ಪೇಟೆ ಠಾಣೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಚಿನ್ನಾಭರಣ ಕಳ್ಳತನ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರ: ಬೀಗ ಹಾಕಿದ್ದ ಮನೆಗಳನ್ನೇ ಗುರಿಯಾಗಿಸಿ ಚಿನ್ನಾಭರಣ ಹಾಗೂ ನಗದು ಕಳವು ಮಾಡುತ್ತಿದ್ದ ಆರೋಪಿಯನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಸಾರಾಯಿಪಾಳ್ಯ ನಿವಾಸಿ ಮೊಹಮ್ಮದ್ ಖಾನ್(47) ಬಂಧಿತ.

ಆರೋಪಿಯಿಂದ ₹39.62 ಲಕ್ಷ ಮೌಲ್ಯದ 556 ಗ್ರಾಂ. ಚಿನ್ನಾಭರಣ ಹಾಗೂ 1 ಕೆ.ಜಿ 200 ಗ್ರಾಂ. ಬೆಳ್ಳಿ ವಸ್ತುಗಳನ್ನು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ಹೇಳಿದರು.

ಹೆಣ್ಣೂರು ಸಮೀಪದ ಚಳ್ಳಕೆರೆಯಲ್ಲಿ ಮನೆಗೆ ಹಾಕಿದ್ದ ಬೀಗವನ್ನು ಒಡೆದಿದ್ದ ಆರೋಪಿ ನಗದು ಹಾಗೂ ಚಿನ್ನಾಭರಣ ಕಳವು ಮಾಡಿದ್ದ. ಈ ಸಂಬಂಧ ದಾಖಲಾದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಕರಣದ ತನಿಖೆ ವೇಳೆ ಬಾತ್ಮೀದಾರರು ನೀಡಿದ ಮಾಹಿತಿ ಮೇರೆಗೆ ಡಿ.8ರಂದು ಎಚ್‌ಬಿಆರ್ ಲೇಔಟ್‌ನ 4ನೇ ಬ್ಲಾಕ್ ಬಳಿ ಮೊಹಮ್ಮದ್ ಖಾನ್‌ನನ್ನು ವಶಕ್ಕೆ ಪಡೆದು ಬ್ಯಾಗ್ ಪರಿಶೀಲಿಸಿದಾಗ ಕಟ್ಟಿಂಗ್ ಪ್ಲೇಯರ್ ಪತ್ತೆಯಾಗಿತ್ತು. ಬಳಿಕ ಆತನನ್ನು ಠಾಣೆಗೆ ಕರೆತಂದು ವಿಚಾರಣೆ ಮಾಡಿದಾಗ ಮನೆಗಳಿಗೆ ನುಗ್ಗಿ ಚಿನ್ನಾಭರಣ ಕಳ್ಳತನ ಮಾಡಿದ್ದಾಗಿ ತಪ್ಪೊಪ್ಪಿಕೊಂಡಿದ್ದಾನೆ. ನಗರ ಹಾಗೂ ಹೊರ ರಾಜ್ಯಗಳ ವಿವಿಧೆಡೆ ಮನೆಗಳವು ಮಾಡಿರುವುದಾಗಿ ಬಾಯ್ಬಿಟ್ಟಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಸತ್ಯಾಂಶ ಪತ್ತೆಗೆ ಸಿಐಡಿ ತನಿಖೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನಪ್ರತಿನಿಧಿಗಳು ಮಾತನಾಡುವಾಗ ಪದಗಳನ್ನು ಎಚ್ಚರಿಕೆಯಿಂದ ಬಳಸಬೇಕು. ವ್ಯಕ್ತಿಗತವಾಗಿ ಮಾತನಾಡುವಾಗಲೂ ಹುಷಾರಾಗಿ ಮಾತನಾಡಬೇಕು. ಬಳಸುವ ಭಾಷೆ, ಪದಗಳ ಮೇಲೆ ಹಿಡಿತ ಇರಬೇಕು' ಎಂದು ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ. ಮಹದೇವಪ್ಪ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸಚಿವೆ ಲಕ್ಷ್ಮೀ ಹೆಬ್ಬಾಳಕರ ಅವರನ್ನು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಅವರು ಅವಾಚ್ಯ ಶಬ್ದಗಳಿಂದ ನಿಂದಿಸಿರುವ ಆರೋಪದ ಪ್ರಕರಣದಲ್ಲಿ ಸತ್ಯಾಂಶ ಹೊರಬರಲಿ ಎಂಬ ಉದ್ದೇಶದಿಂದ ಸರ್ಕಾರ ಸಿಐಡಿ ತನಿಖೆಗೆ ವಹಿಸಿದೆ' ಎಂದರು.

'ಯಾರೊಬ್ಬರೂ ವ್ಯಕ್ತಿಗತವಾಗಿ ಹೇಳಿಕೆ ನೀಡಲೇಬಾರದು. ಜನಪ್ರತಿನಿಧಿಗಳಾದ ನಾವೇ ಹೀಗೆ ಮಾತನಾಡಿದರೆ ಜನರಿಗೆ ಏನು ಸಂದೇಶ ನೀಡುತ್ತೇವೆ' ಎಂದರು.

ಹರ್ಷ ಸಮೂಹ ಶಿಕ್ಷಣ ಸಂಸ್ಥೆಗಳು ಆಯೋಜಿಸಿದ್ದ ವಾರ್ಷಿಕೋತ್ಸವವನ್ನು ಗಿಬ್ಸ್ ಬಿಸಿನೆಸ್ ಸ್ಕೂಲ್ ನ ಮುಖ್ಯಸ್ಥ ಪ್ರೊ.ಭರತ್ ಗೋಪಾಲನ್ ಉದ್ಘಾಟಿಸಿದರು

'ಸ್ಪರ್ಧೆ ಎದುರಿಸಲು ಕೌಶಲ ಅಗತ್ಯ'

ಪ್ರಜಾವಾಣಿ ವಾರ್ತೆ

ನೆಲಮಂಗಲ: ಶಿಕ್ಷಣ ಸಂಸ್ಥೆಗಳು, ಭವಿಷ್ಯದ ಉದ್ಯೋಗ ಕ್ಷೇತ್ರಗಳಲ್ಲಿನ ಸ್ಪರ್ಧೆ ಎದುರಿಸಲು ಅಗತ್ಯವಾದ ಕೌಶಲಗಳನ್ನು ವಿದ್ಯಾರ್ಥಿಗಳಿಗೆ ಕಲಿಸಬೇಕು ಎಂದು ಗಿಬ್ಸ್ (ಜಿಐಬಿಎಸ್) ಬಿಸಿನೆಸ್ ಸ್ಕೂಲ್‌ನ ಮುಖ್ಯಸ್ಥ ಪ್ರೊ.ಭರತ್ ಗೋಪಾಲನ್ ತಿಳಿಸಿದರು.

ಹರ್ಷ ಸಮೂಹ ಶಿಕ್ಷಣ ಸಂಸ್ಥೆಗಳು ಕಂಬಯ್ಯನಪಾಳ್ಯ ಕ್ಯಾಂಪಸ್‌ನಲ್ಲಿ ಹಮ್ಮಿಕೊಂಡಿದ್ದ ವಾರ್ಷಿಕೋತ್ಸವ ಉದ್ಘಾಟಿಸಿ ಮಾತನಾಡಿ, 'ಪೋಷಕರು ಮಕ್ಕಳ ಸಾಮರ್ಥ್ಯ ಹಾಗೂ ಶಿಕ್ಷಣ ಸಂಸ್ಥೆಗಳ ಮೇಲೆ ನಂಬಿಕೆ ಇಡಬೇಕು' ಎಂದರು.

ಹರ್ಷ ಸಂಸ್ಥೆಯ ಕಾರ್ಯದರ್ಶಿ ಯಶಸ್, 'ವಾರ್ಷಿಕೋತ್ಸವ ಎಂದರೆ ಪ್ರತಿಭೆಗಳ ಅನಾವರಣ' ಎಂದರು.

ಹರ್ಷ ಸಮೂಹದ ಅಧ್ಯಕ್ಷ ಎಸ್. ಶಿವಕುಮಾರ್ ಪ್ರತಿಭಾನ್ವಿತರನ್ನು ಪುರಸ್ಕರಿಸಿದರು. ಉಪಾಧ್ಯಕ್ಷೆ ಗಿರಿಜಾ ಶಿವಕುಮಾರ್, ಶಿಕ್ಷಕರಾದ ವಸಂತ, ಸಹನ, ಮೊಹಮ್ಮದ್ ಅಲಿ, ಮುಜೀದ್ ಪಾಷಾ ಅವರಿಗೆ ಉತ್ತಮ ಶಿಕ್ಷಕ ಪ್ರಶಸ್ತಿಯನ್ನು ನೀಡಿ ಗೌರವಿಸಿದರು. ನಿರ್ದೇಶಕ ಹರ್ಷ, ಕಾಲೇಜು ಪ್ರಾಚಾರ್ಯೆ ಜ್ಯೋತಿ ಕಾಮತ್, ಮುಖ್ಯ ಶಿಕ್ಷಕಿಯರಾದ ಬಿಂದು ಶರ್ಮ, ಎಲ್.ಪೂರ್ಣಿಮಾ ಇದ್ದರು.

ಡಿ.26 'ಕಂಪ್ಯೂಟರ್ ಆಪರೇಟರ್‌ಗಳ ದಿನ' ಆಚರಣೆ

ಬೆಂಗಳೂರು: ಕಂಪ್ಯೂಟರ್ ಆವಿಷ್ಕಾರ ಮಾಡಿದ ವಿಜ್ಞಾನಿ ಚಾರ್ಲ್ಸ್ ಬ್ಯಾಬೇಜ್ ಅವರ ಹುಟ್ಟಿದ್ದ ದಿನವಾದ ಡಿ.26 ರಂದು ರಾಜ್ಯದಲ್ಲಿ ಪ್ರತಿ ವರ್ಷ 'ಕಂಪ್ಯೂಟರ್ ಆಪರೇಟರ್‌ಗಳ ದಿನ'ವನ್ನಾಗಿ ಆಚರಿಸಲು ತೀರ್ಮಾನಿಸಲಾಗಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಈ ಪ್ರಸ್ತಾವಕ್ಕೆ ಒಪ್ಪಿಗೆ ನೀಡಿದ್ದಾರೆ ಎಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯಿತಿಯ ಲೆಕ್ಕ ಸಹಾಯಕರು ಹಾಗೂ ಡಾಟಾ ಎಂಟ್ರಿ ಆಪರೇಟರ್ ಉದ್ಯೋಗಿಗಳ ಕಲ್ಯಾಣ ಸಂಘದ ಭೀಮರೆಡ್ಡಿ ಪಾಟೀಲ ತಿಳಿಸಿದ್ದಾರೆ.

ಗ್ರಾಮೀಣ ಜನರ ಅನುಕೂಲಕ್ಕಾಗಿ ಸರ್ಕಾರ ಜಾರಿಗೆ ತಂದಿರುವ ಕಾರ್ಯಕ್ರಮಗಳು ಮತ್ತು ಗ್ರಾಮ ಪಂಚಾಯಿತಿ ಕಚೇರಿಗಳಲ್ಲಿ ಸಿಗುವ ಸೌಲಭ್ಯಗಳನ್ನು ಸಾರ್ವಜನಿಕರ ಹತ್ತಿರಕ್ಕೆ ತೆಗೆದುಕೊಂಡು ಹೋಗುತ್ತಿರುವ ಡಾಟಾ ಎಂಟ್ರಿ ಆಪರೇಟರ್‌ಗಳನ್ನು ಗುರುತಿಸಿ ಅವರ ಕಲ್ಯಾಣಕ್ಕಾಗಿ ದಿನಾಚರಣೆ ಘೋಷಣೆ ಮಾಡಿರುವುದು ಸಂತಸ ತಂದಿದೆ ಎಂದು ಅವರು ಸಚಿವರಿಗೆ ಪತ್ರ ಬರೆದಿದ್ದಾರೆ.

ನಗರದಲ್ಲಿ ಇಂದು

'ಸೀತಾರಾಮ ಕಲ್ಯಾಣ' 6ನೇ ವಾರ್ಷಿಕೋತ್ಸವ: ಅತಿಥಿಗಳು: ಶೋಭಾ ಕರಂದ್ಲಾಜೆ, ಡಾ.ಸಿ.ಎನ್.ಅಶ್ವತ್ಥನಾರಾಯಣ, ಸುರೇಶ್ ಗೌಡ, ಜಯಪಾಲ್, ಅಧ್ಯಕ್ಷತೆ: ಅಂಬರೀಶ್ ಜಿ., ಆಯೋಜನೆ: ಅಕ್ಷಯ ಬ್ರಾಹ್ಮಣ ಮಹಾಸಂಘ, ಸ್ಥಳ: ಮೇವರ್ ಭವನ, ಕಲ್ಯಾಣ ನಗರ, ಯಶವಂತಪುರ ವೃತ್ತ, ಬೆಳಿಗ್ಗೆ 7ರಿಂದ

ಅಟಲ್ ಬಿಹಾರಿ ವಾಜಪೇಯಿ ಜನ್ಮದಿನದ ಪ್ರಯುಕ್ತ ಸುಶಾಸನಾ ದಿನಾಚರಣೆ ಮತ್ತು ನಿಪುಣ್ ಭಾರತ್ ಅಭಿಯಾನ: ಅಧ್ಯಕ್ಷತೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಉದ್ಘಾಟನೆ: ಪ್ರೊ. ಕೃಷ್ಣೇಗೌಡ, ಉಪನ್ಯಾಸ: ಗುರುರಾಜ ಕರಜಗಿ, ಆಯೋಜನೆ: ಡಾ.ಸಿ. ಎನ್.ಅಶ್ವತ್ಥನಾರಾಯಣ ಫೌಂಡೇಷನ್, ಶಿಕ್ಷಣ ಫೌಂಡೇಷನ್, ಸ್ಥಳ: ಚಂದ್ರೋದಯ ಕನ್ನಡ ಮಾಧ್ಯಮ ಶಾಲೆ ಆವರಣ, ಅಟಲ್ ಜಿ ಪಾರ್ಕ್ ಬಳಿ, ದೀವಾನರಪಾಳ್ಯ, ಬೆಳಿಗ್ಗೆ 9.30

ಅಟಲ್ ಬಿಹಾರಿ ವಾಜಪೇಯಿ

ವಾರ್ಷಿಕೋತ್ಸವ: 'ವಿದ್ಯಾಶ್ರೀ' ವಾರ್ಷಿಕ ಸಂಚಿಕೆ ಬಿಡುಗಡೆ: ವಿನಾಯಕ ಭಟ್ಟ ಮೂರೂರು, ಬಹುಮಾನ ವಿತರಣೆ: ರೋಹಿತ್ ಚಕ್ರತೀರ್ಥ, ಶಾಲಾ ವಿದ್ಯಾರ್ಥಿಗಳಿಂದ ಶಾರೀರಿಕ ಪ್ರದರ್ಶನ, ಅಧ್ಯಕ್ಷತೆ: ಜಿ.ಆರ್. ರೆಡ್ಡಿ, ಮುಖ್ಯ ಅತಿಥಿಗಳು: ಮದಿರಾಜು ಧನಂಜಯ, ಅಜಿತ್ ಹನುಮಕ್ಕನವರ್, ಆಯೋಜನೆ ಹಾಗೂ ಸ್ಥಳ: ಜನಸೇವಾ ವಿದ್ಯಾಕೇಂದ್ರ, ಚನ್ನೇನಹಳ್ಳಿ, ಬೆಳಿಗ್ಗೆ 9.45

'ಅಂಬೇಡ್ಕರೈಟ್' ಯುವ ಸಮ್ಮೇಳನ: ಉದ್ಘಾಟನೆ: ಸಂತೋಷ್ ಲಾಡ್, ಅಧ್ಯಕ್ಷತೆ: ಅಶೋಕ್, ವಿಶೇಷ ಆಹ್ವಾನಿತ: ಪಾ. ರಂಜಿತ್, ಆಯೋಜನೆ: ಅಂಬೇಡ್ಕರೈಟ್ ಯೂತ್ಸ್ ಫೆಡರೇಷನ್-ಕರ್ನಾಟಕ, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ವಸಂತನಗರ, ಬೆಳಿಗ್ಗೆ 10

ಶಾಸ್ತ್ರೀಯ ಸಂಭ್ರಮ: ಪುಸ್ತಕ ಮತ್ತು ಆಡಿಯೊ ಬಿಡುಗಡೆ, 'ವಿದ್ಯಾ ವಾಗೀಶ್ವರಿ ಪಂಡಿತ ಪ್ರಶಸ್ತಿ': ಆರ್. ಎಸ್. ನಂದಕುಮಾರ್, 'ಶಾಸ್ತ್ರೀಯ ಸೌರಭ ಪುರಸ್ಕಾರ': ವಿ.ಶಂಕರಮೂರ್ತಿ ಬಾಳಿಲ, ಜಿ.ಎಸ್. ಆನಂದ, ವಿ.ಕೃಷ್ಣ, ಮುಖ್ಯ ಅತಿಥಿಗಳು: ಶೇಷ ಶಾಸ್ತ್ರಿ, ರೇವತಿ ಕಾಮತ್, ಶುಭಾ ಧನಂಜಯ್, ಎಂ.ಆರ್.ವಿ. ಪ್ರಸಾದ್, ಆಯೋಜನೆ: ಶ್ರೀಕಾಂತಂ ನಾಗೇಂದ್ರ ಶಾಸ್ತ್ರಿ ಫೌಂಡೇಷನ್, ಸ್ಥಳ: ರಮಣ ಮಹರ್ಷಿ ಸಭಾಂಗಣ, ಸಂಜಯನಗರ, ಬೆಳಿಗ್ಗೆ 10

23ನೇ ವಾರ್ಷಿಕೋತ್ಸವ ಹಾಗೂ 'ಸವಿಗಾನ ರತ್ನ' ವಾರ್ಷಿಕ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ರಾಜೇಶ್ ಕೃಷ್ಣನ್, ಮುಖ್ಯ ಅತಿಥಿಗಳು: ಅಶೋಕ ಎನ್. ಚಲವಾದಿ, ಎಚ್. ರವೀಂದ್ರ, ಎಸ್. ರಾಜು, ಡಿ. ಉದಯಶಂಕರ್, ಆಯೋಜನೆ: ವಿಜಯನಗರ ಸಾಂಸ್ಕೃತಿಕ ಕಲಾಕೇಂದ್ರ, ಸವಿಗಾನಲಹರಿ ಸುಗಮಸಂಗೀತ ಶಾಲೆ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 10

ಕನ್ನಡ ನುಡಿ ಸಮ್ಮೇಳನ: ಸಮ್ಮೇಳನಾಧ್ಯಕ್ಷತೆ: ಪ್ರೊ. ಅಂಜಿನ ರೆಡ್ಡಿ ಕೆ.ಆರ್., ಉದ್ಘಾಟನೆ: ನ್ಯಾ.ವಿ. ಗೋಪಾಲಗೌಡ, ಪ್ರಶಸ್ತಿ ಪ್ರದಾನ: ಟಿ. ತಿಮ್ಮೇಗೌಡ, ಅಧ್ಯಕ್ಷತೆ: ಆರ್.ಕೆ. ಸರೋಜಾ, ಮುಖ್ಯ ಅತಿಥಿ: ಅಶೋಕ ಎನ್. ಚಲವಾದಿ, ಆಯೋಜನೆ: ಅಖಿಲ ಕರ್ನಾಟಕ ಕುವೆಂಪು ಸಾಂಸ್ಕೃತಿಕ ವೇದಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

9ನೇ ವರ್ಷದ ಸ್ನೇಹ ಸಮ್ಮಿಲನ: ಉದ್ಘಾಟನೆ: ನ್ಯಾ.ಆರ್. ನಟರಾಜ್, ಮುಖ್ಯ ಅತಿಥಿ: ವೂಡೇ ಪಿ. ಕೃಷ್ಣ, ಅಧ್ಯಕ್ಷತೆ: ಸಿ. ರಾಜಶೇಖರ್, ಆಯೋಜನೆ ಹಾಗೂ ಸ್ಥಳ: ಬಿ.ಕೆ. ಮರಿಯಪ್ಪ ವಿದ್ಯಾರ್ಥಿ ನಿಲಯದ ಹಿರಿಯ ವಿದ್ಯಾರ್ಥಿಗಳ ಸಂಘ, 3ನೇ ಮುಖ್ಯರಸ್ತೆ, ಚಾಮರಾಜಪೇಟೆ, ಬೆಳಿಗ್ಗೆ 11

15ನೇ ವರ್ಷದ ಸರ್ವಸದಸ್ಯರ ಮಹಾಸಭೆ: ಆಯೋಜನೆ: ಆರುವೇಲು ನಿಯೋಗಿ ಬ್ರಾಹ್ಮಣ ಸಂಘ, ಸ್ಥಳ: ಗಂಜಾಂ ಮಂಟಪ, ಬುಲ್‌ಟೆಂಪಲ್ ರಸ್ತೆ, ರಾಮಕೃಷ್ಣ ಆಶ್ರಮದ ಸಮೀಪ, ಬೆಳಿಗ್ಗೆ 11

ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮದಿನದ ಪ್ರಯುಕ್ತ ಸುಶಾಸನ ದಿವಸ: ಉದ್ಘಾಟನೆ: ಬಿ.ಎಲ್. ಸಂತೋಷ್, ಅಧ್ಯಕ್ಷತೆ: ಕೃಷ್ಣೇಗೌಡ, ಸುಶಾಸನ ಕುರಿತ ಭಿತ್ತಿಪತ್ರಗಳ ಪ್ರದರ್ಶನ ಉದ್ಘಾಟನೆ: ಛಲವಾದಿ ನಾರಾಯಣಸ್ವಾಮಿ, ಪ್ರಾಸ್ತಾವಿಕ ನುಡಿ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಆಯೋಜನೆ: ನಾಡಪ್ರಭು ಕೆಂಪೇಗೌಡ ಜನಪರ ವೇದಿಕೆ, ಸ್ಥಳ: ಜ್ಞಾನ ಜ್ಯೋತಿ ಸಭಾಂಗಣ, ಅರಮನೆ ರಸ್ತೆ, ಸಂಜೆ 4

'ದಾಸನಾದೆನಯ್ಯ ನಿಮ್ಮ ಏಸು ಜನ್ಮಕ್ಕೆ' ವಿಡಿಯೊ ಪ್ರದರ್ಶನ ಹಾಗೂ ವಿಜಯಭಾಸ್ಕರ್ ಅವರ ಚಿತ್ರಗೀತೆಗಳ ನುಡಿನಮನ: ಗಾಯಕರು: ವಿಜಯಾನಂದ ನಾಯಕ್, ಎಚ್. ಎಸ್. ಶ್ರೀನಿವಾಸಮೂರ್ತಿ, ಲಕ್ಷ್ಮಿ ಶ್ರೇಯಾಂಸಿ, ಅಂಜಲಿ ಹಳಿಯಾಳ, ಮುಖ್ಯ ಅತಿಥಿಗಳು: ಮಧುಸೂಧನ್ ಹವಾಲ್ದಾರ್, ಕೃಷ್ಣ ಕೊಲ್ಹಾರ ಕುಲಕರ್ಣಿ, ಮಂಜುಳಾ ಗುರುರಾಜ್, ನವಿಲು ಯಾತ್ರಿ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5

ಪ್ರೊ.ಕಿ.ರಂ. ನೆನಪಿನ ಕವಿಗೋಷ್ಠಿ ಮತ್ತು ಪ್ರೊ.ಕಿ.ರಂ. ನಾಗರಾಜ ಸಂಸ್ಕೃತಿ ಪ್ರಶಸ್ತಿ ಪ್ರದಾನ ಸಮಾರಂಭ: ಕವಿಗೋಷ್ಠಿ ಅಧ್ಯಕ್ಷತೆ: ಕಾ.ವೆಂ. ಶ್ರೀನಿವಾಸ ಮೂರ್ತಿ, ಪ್ರಶಸ್ತಿ ಪ್ರದಾನ: ಎಲ್.ಎನ್. ಮುಕುಂದರಾಜ್, ಅಧ್ಯಕ್ಷತೆ: ನಲ್ಲೂರು ಪ್ರಸಾದ್ ಆರ್.ಕೆ., ಆಯೋಜನೆ: ಪ್ರಜ್ಞಾ ಸಾಂಸ್ಕೃತಿಕ ವೇದಿಕೆ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5.30



ಕಿ.ರಂ. ನಾಗರಾಜ

ಶಿವಮೊಗ್ಗ ಸುಬ್ಬಣ್ಣ ಸ್ಮರಣಾರ್ಥ ಸಂಗೀತ ಸಂಜೆ: ಗಾಯನ: ಕೌಶಿಕ್ ಐತಾಳ್, ಆಯೋಜನೆ: ಡಾ.ಶಿವಮೊಗ್ಗ ಸುಬ್ಬಣ್ಣ ಪ್ರತಿಷ್ಠಾನ, ಸ್ಥಳ: ಸುಚಿತ್ರಾ ಫಿಲ್ಮ್ ಸೊಸೈಟಿ, ಬನಶಂಕರಿ 2ನೇ ಹಂತ, ಸಂಜೆ 6.30



ಶಿವಮೊಗ್ಗ ಸುಬ್ಬಣ್ಣ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ನಾಳೆ, ನಾಡಿದ್ದು ಕಾರ್ಯಕ್ರಮ–ಕುಂದಾನಗರಿ ಸಜ್ಜು • ಜಿಲ್ಲಾಡಳಿತದಿಂದ ದೀಪಾಲಂಕಾರ, ಪ್ರತಿಮೆ ಅನಾವರಣ

‘ಗಾಂಧಿ ಭಾರತ’: ಅಂದಾಜು ₹20 ಕೋಟಿ ವೆಚ್ಚ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಡಿ.26 ಹಾಗೂ 27ರಂದು ನಡೆಯುವ ‘ಗಾಂಧಿ ಭಾರತ’ ಕಾರ್ಯಕ್ರಮಕ್ಕೆ ಕುಂದಾನಗರಿ ಸಜ್ಜುಗೊಂಡಿದೆ. ಇಲ್ಲಿನ ವೀರಸೌಧ ಹಾಗೂ ಸುವರ್ಣಸೌಧ ಈ ಎರಡೂ ಕಡೆಗಳಲ್ಲಿ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಜಿಲ್ಲಾಡಳಿತ ವತಿಯಿಂದ ಅಂದಾಜು ₹20 ಕೋಟಿ ವೆಚ್ಚ ಮಾಡಲಾಗುತ್ತಿದೆ.

1924ರಲ್ಲಿ ಮಹಾತ್ಮ ಗಾಂಧೀಜಿ ಅಧ್ಯಕ್ಷತೆಯಲ್ಲಿ ನಗರದ ಟಿಳಕವಾಡಿಯಲ್ಲಿ ಕಾಂಗ್ರೆಸ್ ಸ್ವಾತಂತ್ರ್ಯ ಯೋಧರ ಅಧಿವೇಶನ ನಡೆದಿತ್ತು. ಗಾಂಧೀಜಿ ಅವರು ಅಧ್ಯಕ್ಷತೆ ವಹಿಸಿದ್ದ ಏಕಮಾತ್ರ ಅಧಿವೇಶನ ಇದಾಗಿತ್ತು. ಐತಿಹಾಸಿಕ ಮಹತ್ವದ ಈ ಅಧಿವೇಶನ ಜರುಗಿ ಈಗ ನೂರು ವಸಂತಗಳು ತುಂಬಿವೆ.

‘ಈ ಉತ್ಸವವನ್ನು ಕಾಂಗ್ರೆಸ್ ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಿದೆ. ಸರ್ಕಾರದ ಹಣದಲ್ಲಿ ಪಕ್ಷದ ಕೆಲಸ ಮಾಡಿಕೊಳ್ಳುತ್ತಿದೆ’ ಎಂದು ಬಿಜೆಪಿ ಮುಖಂಡರು ತಕರಾರು ತೆಗೆದಿದ್ದಾರೆ.

‘ಆಗಿನ ಕಾಂಗ್ರೆಸ್ ಈಗಿನ ಕಾಂಗ್ರೆಸ್ ಬೇರೆಬೇರೆ. ಗಾಂಧೀಜಿ ಕಟ್ಟಿದ ಕಾಂಗ್ರೆಸ್ ಸ್ವಾತಂತ್ರ್ಯ ಹೋರಾಟಕ್ಕೆ ಸೀಮಿತವಾಗಿತ್ತು. ದೇಶದ ಎಲ್ಲ ಜನರೂ ಒಂದಾಗಿ ಹೋರಾಡಿದ್ದರು. ಐತಿಹಾಸಿಕ ಅಧಿವೇಶನವು ಜನರ ಕಾರ್ಯಕ್ರಮ ಆಗಬೇಕಾಗಿತ್ತು. ಈಗಿನ ಕಾಂಗ್ರೆಸ್ಸಿಗರು ತಮ್ಮ ಸ್ವಾರ್ಥಕ್ಕೆ ಈ ಕಾರ್ಯಕ್ರಮ ಬಳಸಿಕೊಳ್ಳುತ್ತಿದ್ದಾರೆ’ ಎಂದು ಸಂಸದ ಜಗದೀಶ ಶೆಟ್ಟರ್ ಟೀಕಿಸಿದ್ದಾರೆ.

ಸರ್ಕಾರಿ ಕಾರ್ಯಕ್ರಮಗಳೇನು?: ಅಧಿವೇಶನಕ್ಕಾಗಿ ನಗರವನ್ನು ಕಣ್ಮನ ಸೆಳೆಯುವಂತೆ ಅಂದಗೊಳಿಸಲಾಗಿದೆ. ಪ್ರತಿ ರಸ್ತೆ, ಗಲ್ಲಿ, ವೃತ್ತಗಳನ್ನು ವರ್ಣರಂಜಿತ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿದೆ. ಡಿ.9ರಿಂದ 19ರವರೆಗೆ ನಡೆದ ಚಳಿಗಾಲದ ವಿಧಾನ ಮಂಡಲ ಅಧಿವೇಶನ ವೇಳೆಯೂ ಈ ದೀಪಾಲಂಕಾರ ಮಾಡಲಾಗಿತ್ತು. ಗಾಂಧಿ ಭಾರತ ಅಧಿವೇಶನ ಮುಗಿಯುವವರೆಗೆ ಅಂದರೆ ಡಿ.28ರವರೆಗೆ ಅಲಂಕಾರ ಇರಲಿದ್ದು ಒಟ್ಟಾರೆ ₹8 ಕೋಟಿ ಅಂದಾಜು ವೆಚ್ಚವಾಗಲಿದೆ. ಇದನ್ನು ಹೆಸ್ಕಾಂ ಭರಿಸಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸುವರ್ಣ ವಿಧಾನಸೌಧದ ಮುಂದೆ ₹8.5 ಕೋಟಿ ವೆಚ್ಚದಲ್ಲಿ ಗಾಂಧೀಜಿ ಬೃಹತ್ ಪ್ರತಿಮೆ ನಿರ್ಮಿಸಲಾಗಿದೆ. ₹10 ಲಕ್ಷ ವೆಚ್ಚದಲ್ಲಿ ವೀರಸೌಧ (1924ರಲ್ಲಿ ಕಾಂಗ್ರೆಸ್ ಅಧಿವೇಶನ ನಡೆದ ಜಾಗ) ಮುಂದೆಯೂ ಗಾಂಧಿ ಪ್ರತಿಮೆ ಸಿದ್ಧಗೊಂಡಿದೆ.

ಆಗಿನ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಆಗಿದ್ದ ಗಂಗಾಧರರಾವ್ ದೇಶಪಾಂಡೆ ಅವರ ಸ್ಮರಣಾರ್ಥ ರಾಮತೀರ್ಥ ನಗರದಲ್ಲಿ ಸ್ಮಾರಕ ಭವನ ನಿರ್ಮಿಸಲಾಗಿದೆ. ಗಾಂಧೀಜಿ ಅವರನ್ನು ಬೆಳಗಾವಿಗೆ ಕರೆತಂದು, ಅಧಿವೇಶನ ಸಂಘಟಿಸಿ, ಯಶಸ್ವಿಗೊಳಿಸಿದ್ದು ಇದೇ ಗಂಗಾಧರರಾವ್ ಅವರು. ಬೆಳಗಾವಿಯವರಾದ ಅವರ ಸ್ಮರಣೆಗೆ ಭವನ ನಿರ್ಮಿಸಿ ಅಲ್ಲಿ ಫೋಟೊ ಗ್ಯಾಲರಿ ಕೂಡ ಸಿದ್ಧಗೊಳಿಸಲಾಗಿದೆ. ಇದಕ್ಕೆ ₹35 ಲಕ್ಷ ವೆಚ್ಚ ಮಾಡಲಾಗಿದೆ.

ಕಾಂಗ್ರೆಸ್ ಕಾರ್ಯಕ್ರಮಗಳೇನು?: ಒಂದೆಡೆ ವೀರಸೌಧ ಇನ್ನೊಂದೆಡೆ ಸುವರ್ಣಸೌಧ; ಎರಡೂ ಕಡೆ ವೈವಿಧ್ಯಮಯ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಸುವರ್ಣಸೌಧದಲ್ಲಿ ನಡೆಯುವ ಕಾರ್ಯಕ್ರಮ ಮಾತ್ರ ಸರ್ಕಾರದ್ದು. ವೀರಸೌಧದಲ್ಲಿ ಕಾಂಗ್ರೆಸ್ ಪಕ್ಷದ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿದೆ.

‘ಆದರೆ, ವೀರಸೌಧದ ಪುನರುಜ್ಜೀವನ, ಅಲಂಕಾರ ಹಾಗೂ ದೀಪಗಳ ವ್ಯವಸ್ಥೆಗೆ ಸರ್ಕಾರದ್ದೇ ಹಣ ಖರ್ಚು ಮಾಡಲಾಗಿದೆ’ ಎಂಬುದು ಬಿಜೆಪಿ ಮುಖಂಡರ ದೂರು.

ಡಿ.26ರಂದು ವೀರಸೌಧದಲ್ಲಿ ಎಐಸಿಸಿ ಕಾರ್ಯಕಾರಿಣಿ ಸಭೆ ನಡೆಯಲಿದೆ. ದೇಶದ 150 ಸಂಸದರು ಪಾಲ್ಗೊಳ್ಳಲಿದ್ದಾರೆ. ‘ಕಾಂಗ್ರೆಸ್‌ಗೆ ಹೊಸ ದಿಕ್ಕು ನೀಡುವ ಸಭೆ ಇದು’ ಎಂದೂ ಬಿಂಬಿಸಲಾಗಿದೆ. ಡಿ.27ರಂದು ಸಿ.ಪಿ.ಇಡಿ. ಮೈದಾನದಲ್ಲಿ ಕಾಂಗ್ರೆಸ್ ಜನ ಸಮಾವೇಶ ಕೂಡ ಆಯೋಜಿಸಲಾಗಿದ್ದು, ಇದು ಕೂಡ ಸಂಪೂರ್ಣ ಪಕ್ಷದ ವೇದಿಕೆಯಾಗಿದೆ.

ಒಂದೆಡೆ, ಜಿಲ್ಲಾಡಳಿತ ಮಾಡಿದ ಸ್ವಾಗತ ಕಮಾನುಗಳು ರಾರಾಜಿಸುತ್ತಿವೆ. ಇನ್ನೊಂದೆಡೆ, ಕಾಂಗ್ರೆಸ್ ಪಕ್ಷದ ಸ್ವಾಗತ ಕಮಾನು, ಕಟೌಟುಗಳೂ ಎದ್ದುನಿಂತಿವೆ.

‘ಗಾಂಧಿ ಭಾರತ’ ಶತಮಾನೋತ್ಸವಕ್ಕಾಗಿ ಬೆಳಗಾವಿಯ ‘ಕಾಂಗ್ರೆಸ್ ರಸ್ತೆ’ಯಲ್ಲಿ ಕಾಂಗ್ರೆಸ್ ಪಕ್ಷದಿಂದ ನಿರ್ಮಿಸಿದ ಸ್ವಾಗತ ಕಮಾನು

ಇದು ನಕಲಿ ಗಾಂಧಿಗಳ ಕಾಂಗ್ರೆಸ್ ಸಮಾವೇಶ. ಆಗಿನ ಕಾಂಗ್ರೆಸ್‌ಗೂ ಈಗಿನ ಕಾಂಗ್ರೆಸ್‌ಗೂ ಸಂಬಂಧವೇ ಇಲ್ಲ. ಯಾರದೋ ದುಡ್ಡು ಯಲ್ಲಮ್ಮನ ಜಾತ್ರೆ ಮಾಡಿದ್ದಾರೆ

ಜಗದೀಶ ಶೆಟ್ಟರ್
ಸಂಸದ, ಬೆಳಗಾವಿ

ಗಾಂಧೀಜಿ ನೇತೃತ್ವದಲ್ಲಿ 1924ರಲ್ಲಿ ನಡೆದ ಅಧಿವೇಶನದ ಮಹತ್ವವನ್ನು ವಿಶ್ವಮಟ್ಟದಲ್ಲಿ ಬಿಂಬಿಸಲು ಸರ್ಕಾರದಿಂದ ವೈಭವಯುತ ಕಾರ್ಯಕ್ರಮ ಆಯೋಜಿಸಲಾಗಿದೆ

ಮೊಹಮ್ಮದ್ ರೋಷನ್
ಜಿಲ್ಲಾಧಿಕಾರಿ, ಬೆಳಗಾವಿ

ಆಗ ಗಾಂಧೀಜಿ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು, ಈಗ ಮಲ್ಲಿಕಾರ್ಜುನ ಖರ್ಗೆ ಅಧ್ಯಕ್ಷರಾಗಿದ್ದಾರೆ. ಈ ಅಧಿವೇಶನ ಕಾಂಗ್ರೆಸ್‌ನ ಇತಿಹಾಸದ ಕನ್ನಡಿ

ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ಕಾರ್ಯಕ್ರಮಕ್ಕೆ ಅಡ್ಡಿಪಡಿಸಿದರೆ ಕಾಂಗ್ರೆಸ್ ಶಕ್ತಿ ಪ್ರದರ್ಶನ: ಡಿಕೆಶಿ

ಪ್ರಜಾವಾಣಿ ವಾರ್ತೆ

ಶಿವಕುಮಾರ್

ಬೆಳಗಾವಿ: ‘ಕಾಂಗ್ರೆಸ್ ಪಕ್ಷದ ಶಕ್ತಿ ಏನು ಎಂಬುದು ನಮಗೆ ಗೊತ್ತಿದೆ. ನಮಗಿಂತ ಚೆನ್ನಾಗಿ ಬಿಜೆಪಿಯವರಿಗೂ ಗೊತ್ತಿದೆ. ‘ಗಾಂಧಿ ಭಾರತ’ ಕಾರ್ಯಕ್ರಮಕ್ಕೆ ಅಡ್ಡಿಪಡಿಸಲು ಬಂದರೆ ನಮ್ಮ ಶಕ್ತಿ ತೋರಿಸುತ್ತೇವೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ನಗರದಲ್ಲಿ ಮಾಧ್ಯಮದವರೊಂದಿಗೆ ಮಂಗಳವಾರ ಮಾತನಾಡಿದ ಅವರು, ‘ಡಿ.26ರಂದು ಬೆಳಗಾವಿ ಚಲೋ’ ಹಮ್ಮಿಕೊಳ್ಳುತ್ತೇವೆ ಎಂದು ಬಿಜೆಪಿಯವರು ಹೇಳಿದ್ದಾರೆ. ನಾನು ಅವರ ಬಗ್ಗೆ ತಲೆ ಕೆಡಿಸಿಕೊಳ್ಳುವವನಲ್ಲ. ಕಾಂಗ್ರೆಸ್ ಅಧಿವೇಶನದ ಶತಮಾನೋತ್ಸವ ಸಂಭ್ರಮದಲ್ಲಿದ್ದೇವೆ. ಯಾರಾದರೂ ಕೆಡಿಸುವ ಪ್ರಯತ್ನ ಮಾಡಲಿ. ಆಮೇಲೆ ನೋಡೋಣ’ ಎಂದರು.

‘ಈ ಕಾರ್ಯಕ್ರಮವನ್ನು ಪಕ್ಷದ ದೃಷ್ಟಿಯಿಂದ ನೋಡಬೇಡಿ. ಕಾಂಗ್ರೆಸ್ ಪಕ್ಷ ಯಾವುದೇ ಕಾರ್ಯಕ್ರಮ ಮಾಡಿದರೂ ಪಕ್ಷದ ಕಾರ್ಯಕ್ರಮವನ್ನಾಗಿ ಮಾಡುವುದಿಲ್ಲ. ದೇಶದ ಇತಿಹಾಸ ಹಾಗೂ ದೇಶವನ್ನು ಯಾವ ದಿಕ್ಕಿನಲ್ಲಿ ಮುನ್ನಡೆಸಬೇಕು ಎನ್ನುವುದನ್ನು ಗಮನದಲ್ಲಿಟ್ಟು ಮಾಡುತ್ತದೆ’ ಎಂದು ಹೇಳಿದರು.

‘ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಾಯಕರು ಎಂದೆನಿಸಿಕೊಂಡವರು ಈ ಕಾರ್ಯಕ್ರಮಕ್ಕೆ ಬರಬೇಕು. ಡಿ.26ರಂದು ಬೆಳಿಗ್ಗೆ ಕೆಲವು ಸ್ಥಳಗಳಲ್ಲಿ ಉದ್ಘಾಟನಾ ಕಾರ್ಯಕ್ರಮಗಳಿವೆ. 1924ರಲ್ಲಿ ಗಾಂಧೀಜಿ ಅವರ ನೇತೃತ್ವದಲ್ಲಿ ಬೆಳಗಾವಿ ಅಧಿವೇಶನ ಡಿ.26ರ ಮಧ್ಯಾಹ್ನ 3 ಗಂಟೆಗೆ ನಡೆದಿತ್ತು. ಅದೇ ರೀತಿ ಇದೇ 26ರಂದು ಮಧ್ಯಾಹ್ನ 3ಕ್ಕೆ ನಮ್ಮ ಕಾರ್ಯಕಾರಿ ಸಮಿತಿ ಸಭೆ ನಡೆಯಲಿದೆ. 27ರಂದು ಬೆಳಿಗ್ಗೆ 10.30ಕ್ಕೆ ಸರ್ಕಾರದ ವತಿಯಿಂದ ಸುವರ್ಣಸೌಧ ಆವರಣದಲ್ಲಿ ಗಾಂಧಿ ಪ್ರತಿಮೆ ಅನಾವರಣ ಮಾಡಲಾಗುವುದು. ಮಧ್ಯಾಹ್ನ 12 ಗಂಟೆಗೆ ಸಾರ್ವಜನಿಕ ಸಭೆ ನಡೆಯಲಿದೆ’ ಎಂದು ತಿಳಿಸಿದರು.

ಸಿಡಬ್ಲ್ಯುಸಿ ಸಭೆ: 2025ಕ್ಕೆ ಕಾರ್ಯಸೂಚಿ

‘ನವ ಸತ್ಯಾಗ್ರಹ ಬೈಠಕ್’ ಹೆಸರಿನಲ್ಲಿ ನಾಳೆ ಸಭೆ • ಕಾಂಗ್ರೆಸ್ ಸಂಸದರು ಭಾಗಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಹಾತ್ಮ ಗಾಂಧಿ ಅವರ ಅಧ್ಯಕ್ಷತೆಯಲ್ಲಿ ನಡೆದಿದ್ದ ಬೆಳಗಾವಿ ಅಧಿವೇಶನದ ಶತಮಾನೋತ್ಸವ ಸ್ಮರಣಾರ್ಥ ಬೆಳಗಾವಿಯಲ್ಲಿ ಗುರುವಾರ ನಡೆಯಲಿರುವ ವಿಸ್ತೃತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ (ಸಿಡಬ್ಲ್ಯುಸಿ) ಸಭೆಯು 2025ಕ್ಕೆ ಪಕ್ಷದ ಕಾರ್ಯಸೂಚಿ ರೂಪಿಸಲಿದೆ.

‘ನವ ಸತ್ಯಾಗ್ರಹ ಬೈಠಕ್’ ಹೆಸರಿನಲ್ಲಿ ನಡೆಯುವ ಈ ಸಭೆಯಲ್ಲಿ ಸುಮಾರು 200 ನಾಯಕರು ಭಾಗಿಯಾಗಲಿದ್ದಾರೆ. ಶುಕ್ರವಾರ ‘ಜೈ ಬಾಪು, ಜೈ ಭೀಮ್, ಜೈ ಸಂವಿಧಾನ್’ ರ‍್ಯಾಲಿ ನಡೆಯಲಿದೆ. ಇದರಲ್ಲಿ ಪಕ್ಷದ ಸಂಸದರು ಮತ್ತು ಕಾಂಗ್ರೆಸ್ ಪದಾಧಿಕಾರಿಗಳು ಭಾಗವಹಿಸಲಿದ್ದಾರೆ.

ಮಂಗಳವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್, ‘ಸಂವಿಧಾನಶಿಲ್ಪಿ ಬಿ.ಆರ್. ಅಂಬೇಡ್ಕರ್ ಅವರಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಾಡಿರುವ ಅವಮಾನದ ಕುರಿತು ಚರ್ಚಿಸಲಾಗುತ್ತದೆ. ಸಭೆ ನಡೆಯುವ ಸ್ಥಳಕ್ಕೆ ‘ಮಹಾತ್ಮ ಗಾಂಧಿ ನಗರ’ ಎಂದು ಹೆಸರಿಡಲಾಗಿದೆ’ ಎಂದರು. ಅಮಿತ್ ಶಾ ಅವರು ದೇಶದ ಕ್ಷಮೆಯಾಚಿಸಬೇಕು ಹಾಗೂ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಅವರು ಆಗ್ರಹಿಸಿದರು.

‘ದೇಶದ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಯ ಬಗ್ಗೆ ಪಕ್ಷದ ನಿಲುವನ್ನು ಒಳಗೊಂಡಿರುವ ಎರಡು ನಿರ್ಣಯಗಳನ್ನು ಸಿಡಬ್ಲ್ಯುಸಿ ಅಂಗೀಕರಿಸಲಿದೆ. ಬಿಜೆಪಿ ಆಡಳಿತದಲ್ಲಿ ದೇಶವು ಎದುರಿಸುತ್ತಿರುವ ನಿರ್ಣಾಯಕ ಸವಾಲುಗಳ ಬಗ್ಗೆ ಚರ್ಚಿಸಲಾಗುತ್ತದೆ. ಇದರಲ್ಲಿ ಬೆಳೆಯುತ್ತಿರುವ ಆರ್ಥಿಕ ಅಸಮಾನತೆ ಮತ್ತು ಸಂವಿಧಾನದ ಮೇಲಿನ ದಾಳಿ ಸೇರಿವೆ’ ಎಂದು ವೇಣುಗೋಪಾಲ್ ಹೇಳಿದರು.

ಮಹಾತ್ಮಾ ಗಾಂಧೀಜಿ ಅವರು ಮೊದಲ ಮತ್ತು ಕೊನೆಯ ಬಾರಿಗೆ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆ ವಹಿಸಿ ಸರಿಯಾಗಿ 100 ವರ್ಷಗಳ ನಂತರ ನಡೆಯುತ್ತಿರುವ ಬೆಳಗಾವಿ ಅಧಿವೇಶನದ ಪ್ರಾಮುಖ್ಯತೆ ಬಗ್ಗೆ ಮತ್ತೊಂದು ನಿರ್ಣಯ ಕೈಗೊಳ್ಳುವ ಸಾಧ್ಯತೆ ಇದೆ.

ಗುರುವಾರ ಮಧ್ಯಾಹ್ನ 2.30ಕ್ಕೆ ಆರಂಭವಾಗಲಿರುವ ಸಭೆಯಲ್ಲಿ ಸಿಡಬ್ಲ್ಯುಸಿ ಸದಸ್ಯರಲ್ಲದೆ, ಕೇಂದ್ರ ಚುನಾವಣಾ ಸಮಿತಿ ಸದಸ್ಯರು, ರಾಜ್ಯ ಘಟಕಗಳ ಅಧ್ಯಕ್ಷರು, ಶಾಸಕಾಂಗ ಪಕ್ಷದ ನಾಯಕರು ಮತ್ತು ಮಾಜಿ ಮುಖ್ಯಮಂತ್ರಿಗಳು ಭಾಗವಹಿಸಲಿದ್ದಾರೆ ಎಂದು ಹೇಳಿದರು. ಪಕ್ಷದ ಮುಂದಿನ ಒಂದು ವರ್ಷದ ಕಾರ್ಯಕ್ರಮಗಳ ಕುರಿತು ಸಿಡಬ್ಲ್ಯುಸಿ ಚರ್ಚೆ ನಡೆಸಲಿದೆ ಎಂದರು.

ಪಕ್ಷದ ಸಂಘಟನೆಯಲ್ಲಿ ಬದಲಾವಣೆ ಬಗ್ಗೆ ಸಿಡಬ್ಲ್ಯುಸಿಯಲ್ಲಿ ನಿರ್ಣಯ ತೆಗೆದು ಕೊಳ್ಳಲಾಗುತ್ತದೆಯೇ ಎಂಬ ಪ್ರಶ್ನೆಗೆ ವೇಣುಗೋಪಾಲ್, ‘2025ರಲ್ಲಿ ಸಂಘಟನೆಯ ಪುನರ್ ರಚನೆ ಮಾಡಲು ಹಿಂದಿನ ಸಭೆಯಲ್ಲಿ ನಿರ್ಧರಿಸಲಾಗಿದೆ’ ಎಂದರು.

ಉದಯಪುರ ಚಿಂತನ ಶಿಬಿರದಲ್ಲಿ ಕೈಗೊಂಡ ಏಳು ಪ್ರಮುಖ ನಿರ್ಧಾರಗಳ ಪೈಕಿ ನಾಲ್ಕನ್ನು ಕಾಂಗ್ರೆಸ್ ಜಾರಿಗೊಳಿಸಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್, ‘ಪ್ರಧಾನಿ ನರೇಂದ್ರ ಮೋದಿ ಮತ್ತು ಬಿಜೆಪಿಯವರು ಸಂವಿಧಾನ ಬದಲಾಯಿಸಲು ಬಯಸುತ್ತಿದ್ದಾರೆ. ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ವರ್ತಿಸುತ್ತಿದ್ದಾರೆ’ ಎಂದು ಆರೋಪಿಸಿದರು.

ಮುಖ್ಯಾಂಶಗಳು

- **ಸಭೆ ನಡೆಯುವ ಸ್ಥಳಕ್ಕೆ ‘ಮಹಾತ್ಮ ಗಾಂಧಿ ನಗರ’ ಎಂದು ನಾಮಕರಣ**
- **ಶುಕ್ರವಾರ ‘ಜೈ ಬಾಪು, ಜೈ ಭೀಮ್, ಜೈ ಸಂವಿಧಾನ್’ ರ‍್ಯಾಲಿ- ವೇಣುಗೋಪಾಲ್**

ಪ್ರಜಾವಾಣಿ ಸಾಧಕಿಯರು

‘ಪ್ರಜಾವಾಣಿ ಸಾಧಕಿಯರು’ ಪ್ರಶಸ್ತಿಗೆ ನಾಮನಿರ್ದೇಶನಗಳನ್ನು ಆಹ್ವಾನಿಸಲಾಗಿದೆ. ತಮ್ಮ ವೃತ್ತಿ ಅಥವಾ ಪ್ರವೃತ್ತಿ ಮೂಲಕ ಸುತ್ತಲಿನ ಜನರ ಬದುಕು ಪರಿವರ್ತನೆಗೊಳ್ಳಲು, ಇನ್ನಷ್ಟು ಉತ್ತಮಗೊಳ್ಳಲು ಕಾರಣರಾದ ಅಸಾಮಾನ್ಯ ಮಹಿಳೆಯರಿಗೆ ಈ ಪ್ರಶಸ್ತಿ ನೀಡಲಾಗುತ್ತಿದೆ. ನೀವು ಅಂಥವರಲ್ಲಿ ಒಬ್ಬರಾಗಿದ್ದರೆ ಅಥವಾ ನಿಮ್ಮ ಪರಿಚಿತ ವಲಯದಲ್ಲಿ ಅಂತಹ ಅಪೂರ್ವ ಮಹಿಳೆಯರು ಇದ್ದರೆ ಅವರ ವಿವರಗಳನ್ನು ನಮಗೆ ಕಳುಹಿಸಿ ಕೊಡಿ.

ವಿವರ ನಮ್ಮ ಕೈಸೇರಬೇಕಾದ ಕೊನೆಯ ದಿನಾಂಕ
ಜನವರಿ 10, 2025

ಕಳುಹಿಸಬೇಕಾದ ವಿಳಾಸ
pv@prajavani.co.in

(ಕ್ಯುಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕವೂ ನಾಮ ನಿರ್ದೇಶನಗಳನ್ನು ಕಳುಹಿಸಬಹುದು)

ಕೆಎಲ್‌ಇ ಕ್ಯಾನ್ಸರ್ ಆಸ್ಪತ್ರೆಗೆ 30ರಂದು ರಾಷ್ಟ್ರಪತಿ ಚಾಲನೆ

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ಕೆಎಲ್‌ಇ ಸಂಸ್ಥೆ ನಿರ್ಮಿಸಿದ ಅತ್ಯಾಧುನಿಕ ಚಿಕಿತ್ಸಾ ಸೌಕರ್ಯಗಳನ್ನು ಒಳಗೊಂಡ ಕ್ಯಾನ್ಸರ್ ಆಸ್ಪತ್ರೆಯನ್ನು ಡಿ.30ರಂದು ಮಧ್ಯಾಹ್ನ 4ಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಉದ್ಘಾಟಿಸಲಿದ್ದಾರೆ’ ಎಂದು ಸಂಸ್ಥೆಯ ಕಾರ್ಯಾಧ್ಯಕ್ಷ ಪ್ರಭಾಕರ ಕೋರೆ ತಿಳಿಸಿದರು.

‘ಸುಮಾರು ₹300 ಕೋಟಿ ವೆಚ್ಚದಲ್ಲಿ 300 ಹಾಸಿಗೆಗಳನ್ನು ಹೊಂದಿದ, 1.75 ಲಕ್ಷ ಚದರ ಅಡಿ ವಿಸ್ತೀರ್ಣದ ಬೃಹತ್ ಆಸ್ಪತ್ರೆ ಸಿದ್ಧಗೊಂಡಿದೆ. ಅತಿ ಕಡಿಮೆ ದರದಲ್ಲಿ ಕ್ಯಾನ್ಸರ್‌ಗೆ ವಿಶ್ವಮಟ್ಟದ ಚಿಕಿತ್ಸೆ ನೀಡಲಾಗುತ್ತದೆ’ ಎಂದು ಅವರು ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ಸಂಸ್ಥೆಯು ಈಗಾಗಲೇ 5,500 ಹಾಸಿಗೆಗಳ ವಿವಿಧ ಆಸ್ಪತ್ರೆಗಳನ್ನು ನಡೆಸುತ್ತಿದೆ. ಆದರೆ, ಉತ್ತರ ಕರ್ನಾಟಕ ಭಾಗದಲ್ಲಿ ಕ್ಯಾನ್ಸರ್ ರೋಗಕ್ಕೆ ಸೂಕ್ತ ಆಸ್ಪತ್ರೆ ಇರಲಿಲ್ಲ. ಬಹಳಷ್ಟು ವರ್ಷಗಳಿಂದ ರೋಗಿಗಳು ಮುಂಬೈ ಇಲ್ಲವೇ ಬೆಂಗಳೂರಿಗೆ ಹೋಗಬೇಕಾಗಿತ್ತು. ಈ ಕೊರತೆ ನೀಗಿಸಲು ಪ್ರತ್ಯೇಕ ಕ್ಯಾನ್ಸರ್ ಆಸ್ಪತ್ರೆ ನಿರ್ಮಿಸಿದ್ದೇವೆ. ರಾಜ್ಯ ಮಾತ್ರವಲ್ಲದೇ ಮಹಾರಾಷ್ಟ್ರ, ಗೋವಾ ರಾಜ್ಯಗಳ ರೋಗಿಗಳಿಗೂ ಇದು ಅನುಕೂಲ ಆಗಲಿದೆ’ ಎಂದರು.

‘ಈ ಆಸ್ಪತ್ರೆ ನಿರ್ಮಿಸಲು ನಮ್ಮ ಸಂಸ್ಥೆಯ ಹಳೆ ವಿದ್ಯಾರ್ಥಿ, ಅಮೆರಿಕದಲ್ಲಿ ನೆಲೆಸಿರುವ ಡಾ.ಸಂಪತ್‌ಕುಮಾರ ಶಿವಾನಗಿ ಹಾಗೂ ಡಾ.ಉದಯಾ ಶಿವಾನಗಿ ಅವರು ₹8 ಕೋಟಿ ದೇಣಿಗೆ ನೀಡಿದ್ದಾರೆ. ಆಸ್ಪತ್ರೆಗೆ ಅವರ ಹೆಸರನ್ನೇ ಇಡಲಾಗುತ್ತಿದೆ. ಶಸ್ತ್ರಚಿಕಿತ್ಸೆ, ಕಿಮೊಥೆರಪಿ, ರೇಡಿಯೊಥೆರಪಿ ಸೇರಿದಂತೆ ಎಲ್ಲ ರೀತಿಯ ಚಿಕಿತ್ಸೆ ಲಭ್ಯ ಇವೆ. ರೋಗಿಗಳಿಗೆ ಅಡ್ಡಪರಿಣಾಮ ಬೀರದಂಥ ಅತ್ಯಾಧುನಿಕ ರೋಬಾಟಿಕ್ ಚಿಕಿತ್ಸಾ ವಿಧಾನ ಅಳವಡಿಕೆ ಮಾಡಿಕೊಂಡಿದ್ದೇವೆ. ಮುಂಬೈನ ಟಾಟಾ ಮೆಮೋರಿಯಲ್ ಆಸ್ಪತ್ರೆಗಿಂತಲೂ ಗುಣಮಟ್ಟದ ವೈದ್ಯಕೀಯ ಸಲಕರಣೆಗಳು ನಮ್ಮಲ್ಲಿವೆ’ ಎಂದು ಅವರು ತಿಳಿಸಿದರು.

‘ಭಾರತವು ಈಗ ಕ್ಯಾನ್ಸರ್ ಪೀಡಿತರ ತಾಣವಾಗುತ್ತಿದೆ. ವಿಶ್ವದ ಅತಿ ಹೆಚ್ಚು ರೋಗಿಗಳು ನಮ್ಮಲ್ಲಿದ್ದಾರೆ. ಹೃದ್ರೋಗವನ್ನು ಹಿಂದಿಕ್ಕಿ ಕ್ಯಾನ್ಸರ್ ಮೊದಲ ಸ್ಥಾನ ಪಡೆದಿದೆ. ಹಸುಗೂಸಿನಿಂದ ಹಿಡಿದು ಹಿರಿಯರವರೆಗೆ ಎಲ್ಲ ವಯೋಮಾನದವರಿಗೆ, ಎಲ್ಲ ಮಾದರಿಯ ಕ್ಯಾನ್ಸರ್ ಚಿಕಿತ್ಸೆಯೂ ಕೆಎಲ್‌ಇ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಲಭ್ಯ ಇವೆ’ ಎಂದು ವಿವರಿಸಿದರು.

ಬೆಳಗಾವಿಯು ರಾಜ್ಯದ ಆರೋಗ್ಯ ಸೇವೆಗಳ ಕೇಂದ್ರವಾಗಲಿದೆ ಎಂದು ನಾನು 40 ವರ್ಷಗಳ ಹಿಂದೆ ಹೇಳಿದ್ದೆ. ಈಗ ಅದು ಸತ್ಯವಾಗಿದೆ

ಪ್ರಭಾಕರ ಕೋರೆ
ಕಾರ್ಯಾಧ್ಯಕ್ಷ, ಕೆಎಲ್‌ಇ ಸಂಸ್ಥೆ

ವಿವಿಧ ಸಚಿವಾಲಯ: ಗುತ್ತಿಗೆ ಸಿಬ್ಬಂದಿಯ ವೇತನ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಸಚಿವರು, ವಿಧಾನಸಭೆ, ವಿಧಾನಪರಿಷತ್, ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯರ ಆಪ್ತ ಸಿಬ್ಬಂದಿ ಸೇರಿದಂತೆ ವಿವಿಧ ಸಚಿವಾಲಯಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಗುತ್ತಿಗೆ ಸಿಬ್ಬಂದಿಯ ಸಂಚಿತ ವೇತನವನ್ನು ಪರಿಷ್ಕರಿಸಿ ರಾಜ್ಯ ಸರ್ಕಾರ ಆದೇಶ ಹೊರಡಿಸಿದೆ. ಪರಿಷ್ಕೃತ ವೇತನವು ನ.1ರಿಂದಲೇ ಅನ್ವಯವಾಗಲಿದೆ.

7ನೇ ವೇತನ ಆಯೋಗದ ಶಿಫಾರಸಿನ ಮೇರೆಗೆ 'ಕರ್ನಾಟಕ ನಾಗರಿಕ ಸೇವೆಗಳು (ಪರಿಷ್ಕೃತ ವೇತನ) ನಿಯಮಗಳು– 2024'ನ್ನು ರಾಜ್ಯ ಸರ್ಕಾರ ಈಗಾಗಲೇ ಜಾರಿಗೊಳಿಸಿದ್ದು, ಅದರ ಅನ್ವಯ ಗುತ್ತಿಗೆ ಸಿಬ್ಬಂದಿಯ ಸಂಚಿತ ವೇತನವನ್ನೂ ಇದೀಗ ಪರಿಷ್ಕರಿಸಲಾಗಿದೆ.

ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿಗಳ, ಸಚಿವರ ಸ್ಥಾನಮಾನ ಪಡೆದ ಪ್ರಾಧಿಕಾರಗಳ ಆಪ್ತ ಶಾಖೆಗಳಲ್ಲಿ ಮತ್ತು ಕೆಲವು ಆಯೋಗಗಳಲ್ಲಿ ಗುತ್ತಿಗೆ ಆಧಾರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ಸಂಚಿತ ವೇತನವೂ ಪರಿಷ್ಕರಣೆ ಆಗಲಿದೆ. ಆದರೆ, ಈ ಪರಿಷ್ಕರಣೆಯು ಹೊರಗುತ್ತಿಗೆ ಸಿಬ್ಬಂದಿಗೆ ಅನ್ವಯಿಸದು ಎಂದು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಯಾರಿಗೆ ಎಷ್ಟು ಪರಿಷ್ಕರಣೆ?

ವಿಶೇಷ ಅಧಿಕಾರಿ/ವಿಶೇಷ ಕರ್ತವ್ಯಾಧಿಕಾರಿಗಳಿಗೆ ₹69,250, ಸಹಾಯಕರ ಹುದ್ದೆ ಮತ್ತು ಶೀಘ್ರಲಿಪಿಗಾರರಿಗೆ ₹49,050, ಕಿರಿಯ ಸಹಾಯಕ/ದ್ವಿತೀಯ ದರ್ಜೆ ಸಹಾಯಕ, ಬೆರಳಚ್ಚುಗಾರರು, ವಾಹನ ಚಾಲಕರಿಗೆ ₹34,100, 'ಡಿ' ದರ್ಜೆ ನೌಕರರಿಗೆ ₹27 ಸಾವಿರವರೆಗೆ ವೇತನ ಪರಿಷ್ಕರಣೆ ಆಗಲಿದೆ.

ಕಣ್ಗಾವಲು ಇರಿಸುವುದು ವೈಯಕ್ತಿಕ ಸ್ವಾತಂತ್ರ್ಯ ಹರಣ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವುದೇ ವ್ಯಕ್ತಿಯ ಮೇಲೆ ಕಣ್ಗಾವಲು ಇರಿಸುವುದು ಸಾಂವಿಧಾನಿಕವಾಗಿ ವ್ಯಕ್ತಿಯೊಬ್ಬರಿಗೆ ಕೊಡಮಾಡಿರುವ ಮೂಲಭೂತ ಹಕ್ಕಿನ ಉಲ್ಲಂಘನೆಯಾಗುತ್ತದೆ' ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಸರ್ಕಾರಿ ಅಧಿಕಾರಿಗಳ ಕರ್ತವ್ಯಕ್ಕೆ ಅಡ್ಡಿ ಉಂಟು ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ರೌಡಿ ಶೀಟರ್ ಸೈಲೆಂಟ್ ಸುನೀಲ್ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಿರುವ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.

'ಯಾವುದೇ ವ್ಯಕ್ತಿಯ ಮೇಲೆ ಕಣ್ಗಾವಲು ಇರಿಸುವುದು ಮೂಲಭೂತ ಹಕ್ಕಿನ ಉಲ್ಲಂಘನೆಯಾಗುತ್ತದೆ. ಕೆಲವರ ವಿಚಾರದಲ್ಲಿ ವಿನಾಯಿತಿ ಎಂಬುದು ನಿಜವಾದರೂ ಕಣ್ಗಾವಲು ಇಡುವುದು ಕಾನೂನಿನ ವ್ಯಾಪ್ತಿಯಲ್ಲಿರಬೇಕು. ಹಾಗೆಂದು ಆತನ ಬದುಕಿನಲ್ಲಿ ಏನಾಗುತ್ತದೆ ಎಂದು ಇಣುಕಿ ನೋಡಲಾಗದು. ಕಾನೂನು ಮತ್ತು ಸುವ್ಯವಸ್ಥೆ, ಶಾಂತಿ ಕಾಪಾಡುವುದಕ್ಕಾಗಿ ನಿಗಾ ಇರಿಸುವುದೇನೊ ಸರಿ. ಆದರೆ, ಇದು ಎಲ್ಲಾ ಪ್ರಕರಣಗಳಲ್ಲೂ ಅಲ್ಲ' ಎಂದು ನ್ಯಾಯಪೀಠ ಹೇಳಿದೆ.

'ನನ್ನ ವಿರುದ್ಧ ಕೇಂದ್ರೀಯ ಅಪರಾಧ ದಳದ ಡಿಸಿಪಿ ಶ್ರೀನಿವಾಸ್ ಗೌಡ ಮತ್ತು ಸಹಾಯಕ ಸಬ್ ಇನ್‌ಸ್ಪೆಕ್ಟರ್ ಪಿ.ಹರೀಶ್ ಸಲ್ಲಿಸಿರುವ ದೂರನ್ನು ರದ್ದುಪಡಿಸಬೇಕು' ಎಂದು ಕೋರಿ ಹೆಬ್ಬಾಳದ ಗೋದ್ರೇಜ್ ಹುಡ್‌ಮೆನ್ಸ್ ಎಸ್ಟೇಟ್ ನಿವಾಸಿ ಸೈಲೆಂಟ್ ಸುನೀಲ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಮೀನಾಕ್ಷಿ ರವಿ, ಸತೀಶ್ ಹಂಪಿಹೊಳಿಗೆ 'ಸಂಗೀತ ಕಲಾರವಿಂದ' ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮೀನಾಕ್ಷಿ ರವಿ



ಸತೀಶ್ ಹಂಪಿಹೊಳಿ

ಬೆಂಗಳೂರು: ಸಂಗೀತ ಕೃಪಾ ಕುಟೀರ ಸಂಸ್ಥೆ ನೀಡುವ 'ಸಂಗೀತ ಕಲಾರವಿಂದ' ಪ್ರಶಸ್ತಿಗೆ ಕರ್ನಾಟಕ ಸಂಗೀತ ಗಾಯಕಿ ಮೀನಾಕ್ಷಿ ರವಿ ಹಾಗೂ ತಬಲಾ ವಾದಕ ಸತೀಶ್ ಹಂಪಿಹೊಳಿ ಆಯ್ಕೆಯಾಗಿದ್ದಾರೆ.

ಇದೇ 29ರಂದು ಬೆಳಿಗ್ಗೆ 10.15ಕ್ಕೆ ಬನಶಂಕರಿ 2ನೇ ಹಂತದ ಹನುಮಂತನಗರದ ಸ್ವಾಮಿ ವಿವೇಕಾನಂದ ವಿದ್ಯಾ ಶಾಲೆ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಗಾಯಕ ಮುದ್ದುಮೋಹನ್ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸುತ್ತಾರೆ.

ಹಿಂದೂಸ್ತಾನಿ ಗಾಯಕ ಮೃತ್ಯುಂಜಯ ಶೆಟ್ಟರ್ ಅವರಿಂದ ಹಿಂದೂಸ್ತಾನಿ ಗಾಯನ ನಡೆಯಲಿದೆ. ಸತೀಶ್ ಹಂಪಿಹೊಳಿ (ತಬಲಾ) ಹಾಗೂ ಶಿವಕುಮಾರ್ ಮಹಾಂತ್ (ಹಾರ್ಮೋನಿಯಂ) ಸಾಥ್ ನೀಡಲಿದ್ದಾರೆ ಎಂದು ಸಂಗೀತ ಕೃಪಾ ಕುಟೀರದ ಕಾರ್ಯದರ್ಶಿ ಎನ್.ಎಸ್. ಗುಂಡುಶಾಸ್ತ್ರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

VIDYASHREE HIGH SCHOOL CBSE Anjananagar, Bengaluru-91.Required Trained and Experienced NTT,PRT,TGT and PGT Teachers for the Academic year 2025-26 to teach Mathematics, Science and English for Primary and High school.Walk-in between 9:30am to 4:30pm.Drop your CV @vidyashreehighschool@gmail.com Contact:9035858269

CRESCENT HIGH SCHOOL#28, Sultan Road, Banagalore-02 Contact: 9071120120 7019929814 Qualified Teachers are Required to teach in Pre-Primary, Primary Middle &`High School (All Subjects Including Art &`Craft, Computer &`PET (Male &Female teachers).and PUC (Commerce-HEBA) Candidates with experience and fluency in English may apply to:Chairman, Enclosing Bio-data,& photostat copies of the testimonials within 10`days by Email: mmacrescent@gmail.com

PRINCIPAL REQUIRED: For SRI ANNAPURNA VIDYAANIKETAN (1-10)th Std. Veerabhadranagar, Near PES University, Bangalore. EMail: sriannpunavidyaaniketan@gmail.com

SESHADRIPURAM INSTITUTIONS
● Bengaluru ● Mysuru ● Tumakuru ● Mandya
27, Nagappa Street, Seshadripuram, Bengaluru-560 020. Phone: 22955350
Website: www.set.edu.in / E-mail: info@set.edu.in

require
for **Seshadripuram Institute of Technology**
Plot No. 4, 5, 6A, 6B & 7A, Kadakola Industrial Area, Kadakola Village, Jaipura Hobli, Mysuru Taluk, Mysuru–571311.
Website: sitmysore.ac.in / E-mail: sitsetmysuru@gmail.com

PROFESSOR

Eligibility: B. E., / B. Tech., and M. E., M. Tech. in CSE, ISE, AI & ML, ME and ECE in relevant discipline with First Class. Ph.D. Compulsory.
Subject: ● Computer Science / Information Science / AI & ML ● Mechanical ● Electronics & Communication.

Minimum of 10 years of experience in teaching / research / industry out of which at least 3 years shall be at a post equivalent to that of an Associate Professor.
At least total of 6 research publications in SCI Journals / UGC Care / AICTE approved list of journals and at least 2 successful Ph.D. guided as Supervisor/Co-Supervisor.
Industry professionals with requisite qualification and at least 15 years of industrial experience or superannuated having a zeal for academic career can also apply.

ASSOCIATE PROFESSOR

Eligibility: B. E., / B. Tech., and M. E., M. Tech. in CSE, ISE, AI & ML, ME and EEE in relevant discipline with First Class. Ph.D. Compulsory.
Subject: ● Computer Science / Information Science / AI & ML ● Mechanical ● Electrical & Electronics.
Eligibility: First class in Master's Degree in the relevant subject. **Ph.D. with NET / KSET compulsory.**
Subject: ● Chemistry ● Mathematics.

Minimum of 8 years of experience in teaching / research/ industry out of which at least 2 years shall be post Ph.D. experience.
At least total of 6 research publications in SCI Journals / UGC Care / AICTE approved list of journals.
Industry professionals with requisite qualification and at least 10 years of industrial experience or superannuated having a zeal for academic career can also apply.

ASSISTANT PROFESSOR

Eligibility: B. E., / B. Tech., and M. E., / M. Tech., in CSE, ISE, AI & ML, ME and EEE in relevant discipline with First Class Ph. D. Desirable.
Subject: ● Computer Science / Information Science / AI & ML ● Mechanical ● Electrical & Electronics ● Electronics & Communication.

2 years of experience as an Assistant Professor/ Research / Industry is desirable.
The candidates along with teaching should have publications in SCI Journals / UGC Care / AICTE approved list of journals.
The candidates should assist Professors / Associate Professors in setting up laboratory and preparing manuals.

Salary as per 7th Pay of AICTE Pay Scale
Eligible candidates can apply by scanning the below QR- code and then download the blank application form. The filled in application form has to be mailed by post/courier to:
The Honorary General Secretary, Seshadripuram Educational Trust, 27, Nagappa Street, Seshadripuram, Bengaluru-560020 within 7 days.

N. R. Pandith Aradhya, President — **Dr. Wooday P. Krishna**, Honorary General Secretary

P.S. GOENKA MEMORIAL EDUCATIONAL TRUST
JNANA VIJNANA VIDYAPEETHA
(Affiliated to CBSE, New Delhi)
#11th Main, 6th Cross, R.K. Layout, Padmanabhanagar, Bangalore – 560 062.
Ph. No. 080 – 26391509, Email: jvvp2001@gmail.com
Inviting applications from suitable Lady candidates for the following posts:
High School: Post graduates with B.Ed. and min 3 years experience to teach Social Science and English.
Middle School: Graduates with B.Ed. and min 3 years experience to teach Science and Mathematics.
Primary: Graduates with B.Ed. and min 3 years experience to teach Science, Computers, English, Kannada and Social Science.
Nursery: Montessori trained graduates
Experienced PE Teacher with BPEd.
Qualified Art and Craft teachers.
Apply with copies of documents within two weeks.

Engg/ Production Technical

WANTED ENGINEERS (B.E./Diploma) with 7+ years' experience for Hyderabad projects. Requirements: B.E./B.Tec./ Diploma in civil engineering, 7+ years' experience, Proficient in English &`Hindi. Attractive Salary, Accommodation and Allowances. Apply with a resume to: engrs4gsl@gmail.com Director Green Souls Life Spaces Pvt.Ltd., Ph: 9972472772.

WANTED ELECTRICAL TECHNICIAN in Bangalore. Qualification: ITI/ Diploma EEE Freshers Preferred, 2 Wheeler Required. Call: 9342529325.

WANTED FRESH Diploma Engineers for Factory on Magadi Road, Urgently. Call- 9880133173

SESHADRIPURAM INSTITUTIONS
● Bengaluru ● Mysuru ● Tumakuru ● Mandya
27, Nagappa Street, Seshadripuram, Bengaluru-560 020. Phone: 22955350
Website: www.set.edu.in / E-mail: info@set.edu.in

require
for **Seshadripuram Institute of Technology**
Plot No. 4, 5, 6A, 6B & 7A, Kadakola Industrial Area, Kadakola Village, Jaipura Hobli, Mysuru Taluk, Mysuru–571311.
Website: sitmysore.ac.in / E-mail: sitsetmysuru@gmail.com

SYSTEM ANALYST / SYSTEM ADMINISTRATOR
for Computer Science Division
Eligibility: ME/MTech (CSE/IT/Networking) or First class in BE/ B.Tech. in Computer Science / IT / ISE, with 5 years' experience in maintaining and servicing hardware and software.
Candidates with certification in Microsoft Azure, CompTIA Linux+, CCNA, AWS SysOps. will be preferred.
Responsibility: Maintaining and servicing all computers and peripherals. Should have knowledge of campus wide network.

INSTRUCTOR / ASSISTANT INSTRUCTOR
for Computer Science, Mechanical & Electrical & Electronics Division
Eligibility: B.E. in relevant disciplines or First Class in Three-year Diploma in respective streams (CSE/ME/EEE/ECE) from a DTE recognised Diploma institution with minimum of 5 years' experience in an academic institution / industry for Instructors and 3 years' experience in an academic institution / industry.
Should have computer knowledge as well as EDA tools and be prepared to learn new technologies.

Eligible candidates can apply by scanning the below QR- code and then download the blank application form. The filled in application form has to be mailed by post/courier to
The Honorary General Secretary, Seshadripuram Educational Trust, 27, Nagappa Street, Seshadripuram, Bengaluru-560020 within 7 days.

N. R. Pandith Aradhya, President — **Dr. Wooday P. Krishna**, Honorary General Secretary

Hotel

WANTED RESTAURANT MANAGER, COOKS, ASSISTANT COOKS, WAITERS, CASHIERS. Good Salary + Accommodation. UNCLE'S KITCHEN, Bannerghatta Road. 99000-54468

General

KARNATAKA CHITRAKALA PARISHATH
KUMARA KRUPA ROAD, BENGALURU - 560001
Date: 25.12.2024
EMPLOYMENT (TEMPORARY)
Applications are invited from the eligible candidates for the following **temporary positions.**
1. Research Assistant for "Centre of Excellence in Art & Culture Research"
   Honorarium: ₹35,000 per month
2. Deputy Curator / Program Officer for Chitrakala Parishath galleries & Museum.
   Honorarium: ₹30,000/- to 50,000/- per month based on qualification and experience.
3. Art Teachers for Hobby classes.
   Honorarium: ₹2000/- to 2500/- per class based on qualification & experience.

For more details, please visit CKP website at www.chitrakalaparishath.org

Applications along with CV and supporting documents should be submitted through e-mail to office@chitrakalaparishath.org on or before 05.01.2025.

Sd/-
General Secretary

Walk-in

DC AUTO Parts Pvt. Ltd. Peenya 2nd Stage, Bengaluru-560058. Hiring DME/ITI Experience 2-5 years, in Supervisory position in Precision Machine shops with Conventional and CNC Manchines. With Knowledge in CNC Programming. Salary as per Company Standard. Interested Candidates can WALK-IN/ Share resumes to: hr@dcprecise.com Contact: 8123266936

Multiple Vacancy

AMC INSTITUTIONS BENGALURU REQUIRES

ADMINISTRATIVE OFFICER — MBA with 3 yrs experience	ACCOUNTS OFFICER — M.Com / B.Com with 3-5 yrs experience
OFFICE SUPERINTENDENT	Graduation with 3-5 yrs experience
The candidates for the above posts should be well versed with all statutory norms, PF, ESI, TDS etc.	
ACCOUNTS ASSISTANTS — Latest Tally Knowledge with 3-5 yrs experience	LAW OFFICERS — Criminal and Property matters with experience
CONSTRUCTION SUPERVISORS	3 to 5 yrs experience

SEND RESUME TO: headplacements157@gmail.com WHATSAPP ONLY 98451 11771

Villas/Bunglows

Kanakapura Road

INDEPENDENT BUNGALOW/ Villa of duplex house for sale on site measuring 2,800 Sq.feet along with 4353 Sq.feet (RCC building) at B.M.Kaval Village, Thathaguni, Bangalore to Kanakapura Main Road, Bangalore South Taluk, Bangalore. Contact: 9902401486

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

REAL ESTATE SELLING

Industrial & Factory

Tumkur Road

SALE, 4/ 6/ 9 Acres Industrial Converted Land Dabaspet 99 Acres Koratagere Road. NAIK: 9141326819

Sites

Vishweshwariah Layout

AVAILABLE 30X40 BDA Site Viswesavaraiah Layout 1st Block Near 100ft Parallel Road Good Location: 9035470616

BUSINESS

Business to Business

Finance

WE ARRANGE Mortgage, Purchase, Construction & Completion of Construction, Takeover Loans from Banks. Contact: 9353705002

PUBLIC NOTICE

ಸಾರ್ವಜನಿಕ ತಿಳುವಳಿಕೆ
ಶ್ರೀ. ಮೊಹಿತ್ ಗುರ್‌ನಾನಿ ಜೆನರಲ್ ಮ್ಯಾನೆಜರ್ ಮ|| ಬೆಂಗಳೂರು ಏರ್‌ಪೋರ್ಟ್ ಹೋಟೆಲ್ ಲಿಮಿಟೆಡ್ ತಾಜ್ ಬೆಂಗಳೂರು ದೇವನಹಳ್ಳಿ ಬೆಂಗಳೂರು-560300 ಇಲ್ಲಿ ಡಿಜೆ ಮ್ಯೂಸಿಕ್ ನಡೆಸಲು ಪರವಾನಿಗೆ ಕೋರಿ ಪೊಲೀಸ್ ಆಯುಕ್ತರು, ಬೆಂಗಳೂರು ನಗರ ರವರಿಗೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.
ಈ ಬಗ್ಗೆ ಸಾರ್ವಜನಿಕರ ಆಕ್ಷೇಪಣೆ/ಸಲಹೆಗಳು ಏನಾದರೂ ಇದ್ದಲ್ಲಿ, ಅವುಗಳನ್ನು ಲಿಖಿತ ಮೂಲಕ ಸಹಿಯೊಂದಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ 15 ದಿನಗಳೊಳಗಾಗಿ ಉಪ ಪೊಲೀಸ್ ಆಯುಕ್ತರು (ಆಡಳಿತ), ಪೊಲೀಸ್ ಆಯುಕ್ತರವರ ಕಛೇರಿ, ನಂ.1, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು- 560001 ರವರಿಗೆ ಸಲ್ಲಿಸಬಹುದಾಗಿರುತ್ತದೆ. ನಿಗದಿತ ಅವಧಿಯಲ್ಲಿ ಯಾವುದೇ ಆಕ್ಷೇಪಣೆ/ಸಲಹೆಗಳು ಬಾರದಿದ್ದಲ್ಲಿ ಅರ್ಜಿದಾರರು ಸದರಿ ಸ್ಥಳದಲ್ಲಿ ಡಿಜೆ ಮ್ಯೂಸಿಕ್ ನಡೆಸಲು ಪರವಾನಿಗೆ ಕೋರಿ ಸಲ್ಲಿಸಿರುವ ಅರ್ಜಿಯ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.
ಉದ್ದೇಶಿತ ಕೇಂದ್ರದ ಚಕ್ಕುಬಂದಿ
1. ಪೂರ್ವಕ್ಕೆ: KIA ರಸ್ತೆ, 2. ಪಶ್ಚಿಮಕ್ಕೆ: KIA ರಸ್ತೆ, 3. ಉತ್ತರಕ್ಕೆ:KIA ರಸ್ತೆ, 4. ದಕ್ಷಿಣಕ್ಕೆ:KIA ರಸ್ತೆ
ದಿನಾಂಕ: 24/12/2024
ಸಹಿ/-
ಪೊಲೀಸ್ ಆಯುಕ್ತರು, ಬೆಂಗಳೂರು ನಗರ

EDUCATION CORNER

SCORE HIGH MARKS
ISCE / CBSE
10th SCIENCE, 12th CHEMISTRY
CRASH COURSE
ONE on ONE GOOGLE MEET CLASSES
(1.5 HOURS EACH SESSION)
- Revising Topics and Handling Numericals from Board Exam Perspective
- Last 10 years Board Papers
- Tips to Handle Tricky Questions
- Guidelines to Tackle Board Exam Papers

98400 87459

INDIA'S NO.1 TEACHERS TRAINING INSTITUTE
NIECCE — NATIONAL INSTITUTE OF EARLY CHILD CARE & EDUCATION
Regd. Govt. of India | Regd. No. KR03D0041831 - New Delhi
Affiliated to IAO, U.S.A | An ISO 9001 : 2015 Institute
Nursery Teachers Training Course (NTT) (Montessori Integrated)
Duration : 6 Months
Batches : Online & Offline
Eligibility : 10th / 12th / Degree
Placement Assistance
To Work in CBSE / ICSE / State / IGCSE Board Schools
Batches Starting Soon

AUTHORISED TRAINING CENTERS

Chandralayout: 80958 11112	T C Palya: 99003 71746
Rajajinagar: 91085 44922	Kittanahalli: 97404 49264
Jayanagar: 99010 61160	Bannerghatta Rd.: 95916 11009
Indiranagar: 70223 34402	Nagadevanahalli: 98800 99444
Yelahanka: 96116 61190	D. Bommasandra: 97311 97460
Electronic City: 84318 88784	Doddaballapura: 98456 06364
Ullal: 63666 99899	Mysore: 97404 08333
Matthikere: 70198 06668	Channapatna: 96633 11973
R R Nagar: 98800 75345	Tumkur: 87629 37081
M S Palya: 97412 33113	Kalburgi: 99009 75676
Laggere: 99455 51324	Hubli: 99451 60180
Haralur: 91087 53091	Guntakal (AP): 63000 26699
Marathahalli: 96111 68923	Krishnagiri (TN): 90036 56604
Navodayanagar: 95919 77740	And more coming soon...

Franchise : 9886855700 / www.niecce.com

CONNECT

Bharatanatya Rangapravesha of Kum Pranathi P Katte
Disciple of Vid Suma Krishna Murthy
Lalithashree Nruthyadhama

At Chowdaiah Memorial Hall, Malleshwaram, Bangalore. On December 27, 2024, Friday 5:30 PM onwards.
All are Welcome
RSVP - Praveen Katte and Parimala Praveen - 9845080138

NEW RESORT
Starting operations with Valuable land asset in Electronic City, looking for experienced Operator/ Manager. Partial Dilution of Equity in LLP to invest also Available.
for more details contact: 9341286903

PUBLIC NOTICE
(CANCELLATION GENERAL POWER OF ATTORNEY(GPA) Dated 24/01/2012)
This is to inform the general public that my client **Mr.G.Shivaprakesh G Seshadri** aged about 58 years, S/o.G. Seshadri, Residing at Prestige St Johns Wood, Koramangala, Bangalore-560029, presently R/at Michigan, USA. do here by cancel all the power and authorities given by my client to **Mr.G.Seshadri S/o.Late Anantha Subba Rao,** by virtue of GPA dated 24/01/2012, to do any Act, deeds and things relating to the property A J Complex, M.G.Road Mudigere, Chickmagalur District, managing collecting rent advances any other business in Karnataka Bank Mudigere or any other bank is hereby cancelled with effect from 17/12/2024.
Mr. Dayananda.G.M, Advocates and Legal consultants, KAR 2472/2003, No. 49, 1st Floor, Opp. 12th Cross, Cubbonpet Main Road, Bangalore-560 002. M : +91 9900577458

PERSONAL

Change of Name

CHANGE OF NAME
I, **RISHANYA GOWDA RAJPUT** and **RISHANYA MEGHA RAJPUT** D/o Megha Rangaswamy Gowda, Residing at Kengeri Upanagara, Bangalore-560060, declare that above names pertain to me only. Vide affidavit dated 25-11-2024, before notary Sumithra N, Bangalore. Henceforth I shall be called **RISHANYA GOWDA RAJPUT** only.

CHANGE OF NAME
I, **Susheela Chinnappa, Spouse of No. 615346A, Rank: Ex-SGT, Name: CHINNAPPA.A.P,** residing at No.335, Vinayaka Layout, 1st Cross, 1st Main, Horamavu, Bengaluru-560043, have changed my name to **VASANTHI.B.A,** vide affidavit dated 24.12.2024, before notary L. Gopalakrishna, Bengaluru.

CHANGE OF NAME
I, **YUVANSHIE GOWDA RAJPUT** and **YUVANSHIE MEGHA RAJPUT** D/o Megha Rangaswamy Gowda, Residing at Kengeri Upanagara, Bangalore-560060, declare that above names pertain to me only. Vide affidavit dated 25-11-2024, before notary Sumithra N, Bangalore. Henceforth I shall be called **YUVANSHIE GOWDA RAJPUT** only.

ಹೆಸರು ಬದಲಾವಣೆ
ನೆಲಮಂಗಲ ತಾಲ್ಲೂಕು, ಹಂಚಿಪುರ, ಕರೆಕಲ್ಲುಪಾಳ್ಯ, ನಂ.15ರ ವಾಸಿಯಾದ ಶಶಿಕಲಾ ಅವರ ಮಗಳಾದ ಬಿಂದುಶ್ರೀ.ಎಂ (ಆಧಾರ್ ನಂ:5364 1467 9517) ಆದ ನನ್ನ ಹೆಸರು ಕೊಟಕ್‌ಮಹಿಂದ್ರಾ ಡೆಪಾಸಿಟ್ ಬಾಂಡ್‌ನಲ್ಲಿ ನಂ:186092001290 ಬಿಂದು ಎಂದು ನಮೂದಾಗಿರುತ್ತದೆ. ನೋಟರಿ ಎಂ.ರವಿಕುಮಾರ್ ದಿನಾಂಕ:14–12–2024 ನೆಲಮಂಗಲ ಅವರ ದೃಢೀಕೃತ ಅಫಿಡವಿಟ್ ಮೂಲಕ ಬಿಂದುಶ್ರೀ.ಎಂ ಹಾಗು ಬಿಂದು ಎರಡೂ ನಾನೇ ಎಂದು ಪ್ರಾಮಾಣೀಕರಿಸುತ್ತಿದ್ದೇನೆ.

I, **ASHOK** PRAHALADA RAO S/o Prahalada Rao & Choodamani Rao residing at 11, Krishna Gardenia, 5th Main, RMV 2nd Stage, Dollars Colony, Bengaluru-94 have changed my name to ASHOK RAO SHIKARIPURA vide affidavit dated 23-12-2024 sworn before Notary N. Peruvazhuthi, Bengaluru.

I, GAUTAM MAHALE , S/o Prashant Mahale, aged 18 years, #S-8, 2nd floor, Royal Embassy Apartment, Gangamma Garden, Malagala Main Road, Nagarbhavi 2nd Stage, Bangalore- 560091, have changed my name from Gautam Prashant Mahale to GAUTAM MAHALE vide Affidavit dated 23-12-2024 sworn before Notary M.K. Devaki, Bangalore.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH Classifieds — More value, more impact — ಪ್ರಜಾವಾಣಿ
REAL ESTATE
BOOK YOUR REAL ESTATE ADS IN DH ALL KARNATAKA + PRAJAVANI BENGALURU CITY ON SATURDAY + SUNDAY
@ 2481/-* FOR 15 WORDS
www.dhclassifieds.com BOOK NOW
Book your ad with us now! For more details contact:
+91 9845114560 | +91 9901641752 | +91 9886213331
+91 9731810277 | +91 9900428036 | 080-45557163/164
*Conditions apply

ಕ್ರಿಸ್‌ಮಸ್ ಸಂಭ್ರಮ ಕ್ರಿಸ್‌ಮಸ್ ಅಂಗವಾಗಿ ನಗರದ ಇನ್‌ಫ್ಯಾಂಟ್ ಜೀಸಸ್ ಚರ್ಚ್‌ನಲ್ಲಿ ಕ್ರೈಸ್ತ ಧರ್ಮೀಯರು ಮಂಗಳವಾರ ಸಾಮೂಹಿಕ ಪ್ರಾರ್ಥನೆ ಸಲ್ಲಿಸಿದರು–ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್ (ಎಡಚಿತ್ರ) ಶಿವಾಜಿನಗರದಲ್ಲಿರುವ ಸೇಂಟ್ ಮೇರಿಸ್ ಬೆಸಿಲಿಕಾ ಚರ್ಚ್‌ಗೆ ಆಕರ್ಷಕ ದೀಪಾಲಂಕಾರ ಮಾಡಲಾಗಿದೆ (ಬಲಚಿತ್ರ)– ಎಂ.ಎಸ್. ಮಂಜುನಾಥ್

‘ಅಪಸ್ವರಕ್ಕೆ ಸಮ್ಮೇಳನದ ಯಶಸ್ಸೇ ಉತ್ತರ’

ಪ್ರಜಾವಾಣಿ ವಾರ್ತೆ

ಮಹೇಶ ಜೋಶಿ

ಬೆಂಗಳೂರು: ‘ಮಂಡ್ಯದಲ್ಲಿ ಹಮ್ಮಿಕೊಂಡಿದ್ದ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಿಸಿದಂತೆ ಅಪಸ್ವರ ಎತ್ತಿದವರು, ಅಡ್ಡಗಾಲು ಹಾಕಿದವರಿಗೆ ಸಮ್ಮೇಳನದ ಅಭೂತಪೂರ್ವ ಯಶಸ್ಸೇ ಉತ್ತರವಾಗಿದೆ’ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಸಮ್ಮೇಳನದ ಯಶಸ್ಸಿಗೆ ಕನ್ನಡಿಗರಿಗೆ ಕೃತಜ್ಞತೆ ಸಲ್ಲಿಸಿರುವ ಅವರು, ‘ಮಂಡ್ಯದಲ್ಲಿ ಸಮ್ಮೇಳನ ಗೊತ್ತುಪಡಿಸಿದ ದಿನದಿಂದಲೂ ಅಪಸ್ವರ ಎತ್ತುವವರು, ಪ್ರತಿ ಹೆಜ್ಜೆಗೂ ಅಡ್ಡಗಾಲು ಹಾಕುವವರು ಇದ್ದೇ ಇದ್ದರು. ಈಗ ಸಮ್ಮೇಳನ ಯಶಸ್ವಿಯಾದ ನಂತರವೂ ತಪ್ಪುಗಳನ್ನು ಹುಡುಕುವ ಪ್ರಯತ್ನ ಮಾಡುತ್ತಿದ್ದಾರೆ. ಅವರಿಗೆ ಸಮ್ಮೇಳನದ ಯಶಸ್ಸೇ ಉತ್ತರವಾಗಿದೆ. ‘ಟೀಕೆಗಳು ಸಾಯುತ್ತವೆ ಕೆಲಸಗಳು ಉಳಿಯುತ್ತವೆ’ ಎಂಬ ಮಾತಿನಂತೆ ಸಮ್ಮೇಳನದ ಯಶಸ್ಸು ಮಾತ್ರ ಇತಿಹಾಸದ ಪುಟಗಳಲ್ಲಿ ದಾಖಲಾಗುತ್ತದೆ’ ಎಂದಿದ್ದಾರೆ.

‘ಬಳ್ಳಾರಿಯಲ್ಲಿ ನಡೆಯಲಿರುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೂ ಇದೇ ರೀತಿಯ ಬೆಂಬಲ ದೊರಕುವ ವಿಶ್ವಾಸವಿದೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭಾರತೀಯ ರೈಲ್ವೆಯಲ್ಲಿ ಸೇರ್ಪಡೆಗೆ ಅನುಮತಿ ● ರಾಜ್ಯ ಸರ್ಕಾರದ ಷೇರು ಶೇ 11.62

ಕೊಂಕಣ ರೈಲ್ವೆ ನಿಗಮದ ವಿಲೀನಕ್ಕೆ ಒಪ್ಪಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಷ್ಟದಲ್ಲಿರುವ ಕೊಂಕಣ ರೈಲ್ವೆ ನಿಗಮವನ್ನು ಭಾರತೀಯ ರೈಲ್ವೆಯಲ್ಲಿ ವಿಲೀನಗೊಳಿಸಲು ರಾಜ್ಯ ಸರ್ಕಾರ ತಾತ್ವಿಕವಾಗಿ ಒಪ್ಪಿಗೆ ನೀಡಿದೆ.

ಕೇರಳ, ಕರ್ನಾಟಕ, ಗೋವಾ ಮತ್ತು ಮಹಾರಾಷ್ಟ್ರ ಸಂಪರ್ಕಿಸುವ ಕೊಂಕಣ ರೈಲ್ವೆಯನ್ನು ಲಾಭಕ್ಕೆ ತರಲು ಸಾಧ್ಯವಾಗದೇ, ಆಧುನೀಕರಣ ಕಾರ್ಯವೂ ಸಾಧ್ಯವಾಗದೇ ಏಗುತ್ತಾ ಸಾಗುತ್ತಿರುವುದರಿಂದ ವಿಲೀನಕ್ಕೆ ಕೊಂಕಣ ರೈಲ್ವೆ ನಿಗಮವೂ ಸಜ್ಜಾಗಿದೆ. ಕೊಂಕಣ ರೈಲ್ವೆ ನಿಗಮದಲ್ಲಿ ಕರ್ನಾಟಕ ಸರ್ಕಾರ ಶೇ 11.62 ರಷ್ಟು ಈಕ್ವಿಟಿ ಷೇರು (₹270 ಕೋಟಿ) ಹೊಂದಿದೆ.

ಕೊಂಕಣ ರೈಲ್ವೆ ನಿಗಮ ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಮುಂದಿನ 15 ವರ್ಷಗಳಿಗೆ ₹9,158 ಕೋಟಿ ಅಗತ್ಯವಿದೆ. ಇದಕ್ಕೆ ಕರ್ನಾಟಕ ತನ್ನ ಪಾಲನ್ನು ನೀಡಬೇಕು. ತನ್ನ ಪಾಲು ಹೂಡಿಕೆ ಮಾಡಲು ಸಾಧ್ಯವಾಗದೇ ಇದ್ದರೆ, ಷೇರುಗಳನ್ನು ಭಾರತೀಯ ರೈಲ್ವೆ ಮಂತ್ರಾಲಯಕ್ಕೆ ಬಿಟ್ಟುಕೊಡುವ ಬಗ್ಗೆ ಪರಿಶೀಲನೆ ನಡೆಸಬಹುದು ಎಂದು ಕೊಂಕಣ ರೈಲ್ವೆ ನಿಗಮವು ಕರ್ನಾಟಕ ಸರ್ಕಾರಕ್ಕೆ ತಿಳಿಸಿದೆ.

ಇದಕ್ಕೆ ಪ್ರತಿಕ್ರಿಯಿಸಿರುವ ರಾಜ್ಯದ ಹಣಕಾಸು ಇಲಾಖೆ, ನಿಗಮದಿಂದ ಈಕ್ವಿಟಿ ಷೇರುಗಳ ಹಿಂಪಡೆಯುವಿಕೆ, ನಿಗಮದಿಂದ ಹೊರಬರಲು ಇರುವ ಉತ್ತಮ ಆಯ್ಕೆಗಳು ಹಾಗೂ ಇದಕ್ಕಾಗಿ ನಡೆಸಬೇಕಾದ ಮೌಲ್ಯಮಾಪನ ವಿಧಾನದ ಬಗ್ಗೆ ಮೂಲಸೌಲಭ್ಯ ಅಭಿವೃದ್ಧಿ ಇಲಾಖೆಯು ಕೊಂಕಣ ರೈಲ್ವೆ ನಿಗಮಕ್ಕೆ ಪತ್ರ ಬರೆಯಬೇಕು ಎಂದು ಸೂಚಿಸಿದೆ.

ಕೊಂಕಣ ರೈಲ್ವೆ ನಿಗಮದಿಂದ ಹೊರಬರುವ ಮತ್ತು ಭಾರತೀಯ ರೈಲ್ವೆಯಲ್ಲಿ ವಿಲೀನಗೊಳಿಸುವ ವಿಚಾರವಾಗಿ ಪ್ರಸ್ತಾವನೆ ಸಲ್ಲಿಸುವಂತೆ ಕೋರಲಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಇತ್ತೀಚೆಗೆ ವಿಧಾನಸಭೆಯಲ್ಲಿ ಮಾಹಿತಿ ನೀಡಿದ್ದರು.

ಈ ಕುರಿತು ಪ್ರತಿಕ್ರಿಯಿಸಿರುವ ಬಿಜೆಪಿ ಶಾಸಕ ವಿ.ಸುನಿಲ್ ಕುಮಾರ್, ‘ಭಾರತೀಯ ರೈಲ್ವೆಯಲ್ಲಿ ವಿಲೀನಗೊಳಿಸುವ ಸಂಬಂಧ ಗೋವಾ ರಾಜ್ಯ ಒಪ್ಪಿಗೆ ನೀಡಿದೆ. ನಾವು ಕೂಡ ವಿಲೀನಕ್ಕೆ ಇರುವ ಅಡೆ ತಡೆಗಳನ್ನು ನಿವಾರಿಸಬೇಕು. ಆಧುನೀಕರಣದ ಜತೆ ಹೊಸ ರೈಲುಗಳನ್ನು ಆರಂಭಿಸಿದರೆ ಉತ್ತಮ’ ಎಂದು ಹೇಳಿದ್ದಾರೆ.

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ

ಎಲ್.ಆರ್.ಡಿ.ಇ. ಕಟ್ಟಡ, ನಂ.1, ಅಲಿ ಆಸ್ಕರ್ ರಸ್ತೆ, ಬೆಂಗಳೂರು–560 052. ದೂರವಾಣಿ ಸಂಖ್ಯೆ: 22263479

ಸಂಖ್ಯೆ: STRRPA/TP/CLU/152/2024-25 ದಿನಾಂಕ: 24.12.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **“ವ್ಯವಸಾಯ”** ವಲಯದಿಂದ **“ವಸತಿ”** ಭೂಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತವೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಕ್ರ ಸಂ.	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಅನುಮೋದಿತ ಮಹಾ ಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಎಮ್. ರಾಮಾಂಜಿನಪ್ಪ ಬಿನ್ ಲೇಟ್ ಮುನಿಶಾಮಪ್ಪ, ಇವರ ಪರವಾಗಿ ಜಂಟಿ ಅಭಿವೃದ್ಧಿದಾರರಾದ ಮೆ॥ ಎಸ್.ಎಲ್.ವಿ. ಡೆವಲಪರ್ಸ್, ಇದರ ಪಾರ್ಟ್‌ನರ್ಸ್ ಆದ ಶ್ರೀ ಅರುಣ್ ಕುಮಾರ್ ಬಿ.ಎ. ಬಿನ್ ಬಿ.ಎಸ್. ಅನಂತಮೂರ್ತಿ ಮತ್ತು ಶ್ರೀ ಚರಣ್ ಕುಮಾರ್ ಬಿ.ಎ. ಬಿನ್ ಬಿ.ಎಸ್. ಅನಂತಮೂರ್ತಿ, ಶಟ್ಟರಹಳ್ಳಿ ಗ್ರಾಮ, ಕಸಬಾ ಹೋಬಳಿ, ದೇವನಹಳ್ಳಿ ತಾಲ್ಲೂಕು.	ದೊಡ್ಡಬಳ್ಳಾಪುರ	ಕಸಬಾ	ಕೊನಘಟ್ಟ	52/1 52/2 52/3	0–37 1–08 2–02	ವ್ಯವಸಾಯ	ವಸತಿ

ಷರಾ: ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನಿನ ಪರಿಸರದಲ್ಲಿ ವಸತಿ ಬಡಾವಣೆಗಳು ಬಂದಿದ್ದು/ ಬರುತ್ತಿದ್ದು, ಜಮೀನಿನಲ್ಲಿ ಯೋಜಿತ ಬೆಳವಣಿಗೆಯ ವಿನ್ಯಾಸವನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಕಡಿಮೆ ವೆಚ್ಚದಲ್ಲಿ ನಿವೇಶನಗಳನ್ನು ನೀಡುವ ಉದ್ದೇಶವನ್ನು ಹೊಂದಿರುತ್ತೇವೆ ಆದ್ದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **‘ವ್ಯವಸಾಯ ವಲಯ’** ದಿಂದ **‘ವಸತಿ’** ವಲಯಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–

ಸದಸ್ಯ ಕಾರ್ಯದರ್ಶಿಗಳು (ಅ.ಪ್ರ) ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

ವಾಸಾಸಂಇ/ವಾಪ್ರ/ಎಎಎ/3951/2024–25

ಮೈಸೂರು ರೇಸ್

ದಿ ಫ್ಲೈಯಿಂಗ್ ಫೀಟ್ ಗೆಲ್ಲುವ ನಿರೀಕ್ಷೆ

ಪಿ.ಎಂ.ಚೆನ್ನಬಸವಣ್ಣ ಮೆಮೋರಿಯಲ್ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ದಿ ಫ್ಲೈಯಿಂಗ್ ಫೀಟ್ ಈ ರೇಸ್ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ

1ನೇ ರೇಸ್: ಮೈಸೂರು ಫಾರೊ 4, ಪಾರ್ಕ್‌ವೆಸ್ಟ್ 8, ಆಶೀರ್ವಾದ್ 5
2ನೇ ರೇಸ್: ಎಗೆನ್ಸ್ಟ್ ಆಲ್ ಆಡ್ಸ್ 10, ಬ್ರೇಕ್ ಅವೇ 2, ಕೊಯೊಟೆ ಗರ್ಲ್ 5
3ನೇ ರೇಸ್: ಹಲ್ಚಿಮಿ 3, ಎಲಿವಾಡೊ 4, ಕಂಟ್ರಿ ಮ್ಯಾಜಿಕ್ 2
4ನೇ ರೇಸ್: ಸ್ಟ್ರೀಟ್ ಸೆನ್ಸ್ 2, ಆರಾಧನ 6, ಸೆಲೆರಿಯೊ 7
5ನೇ ರೇಸ್: ದಿ ಫ್ಲೈಯಿಂಗ್ ಫೀಟ್ 3, ಬ್ರೇವ್ ಟ್ರೂಪರ್ 1, ಸಿಲ್ವರ್ ಸ್ಪ್ರಿಂಗ್ 4
6ನೇ ರೇಸ್: ರೋಡ್ ರನ್ನರ್ 7, ಪರ್ಫೆಕ್ಟ್ ಎಂಪ್ರೆಸ್ 5, ಡೆವಿಲ್ಸ್ ಡಿಲೈಟ್ 8
7ನೇ ರೇಸ್: ಡಬೀಟ್ 2, ಸೇಂಟ್ ಎಮಿಲಿಯನ್ 5, ಸ್ಮಾರ್ಟ್ ಕ್ಯಾಡಿಲಾಕ್ 4
ಉತ್ತಮ ಬೆಟ್: ರೋಡ್ ರನ್ನರ್

ಉತ್ತಮ ಬೆಟ್: ರೋಡ್ ರನ್ನರ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7;	2,3,4;	5,6,7

ಸಾಕಮ್ಮ–ಕುಟುಂಬಸ್ಥರ ಸಮಾಗಮ ಇಂದು

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಹೊಸಪೇಟೆಯ ದಣಾನಾಯಕನಕೆರೆಯಿಂದ 25 ವರ್ಷಗಳ ಹಿಂದೆ ಕಾಣೆಯಾಗಿದ್ದ ಸಾಕಮ್ಮ ಅವರನ್ನು ಹಿಮಾಚಲ ಪ್ರದೇಶದಿಂದ ಮಂಗಳವಾರ ರಾತ್ರಿ ರಾಜ್ಯಕ್ಕೆ ಕರೆತರಲಾಗಿದೆ.

ಸಾಕಮ್ಮ ಮತ್ತು ಕುಟುಂಬಸ್ಥರ ಸಮಾಗಮ ಬುಧವಾರ ಬೆಳಿಗ್ಗೆ ನಗರದ ‘ಕುಮಾರ ಕೃಪಾ’ ಅತಿಥಿ ಗೃಹದಲ್ಲಿ ನಡೆಯಲಿದೆ.

ಸಾಕಮ್ಮ ಮತ್ತು ಕುಟುಂಬಸ್ಥರನ್ನು ಸೇರಿಸಲು ಬಳ್ಳಾರಿಯ ಅಧಿಕಾರಿಗಳ ಮತ್ತೊಂದು ತಂಡ ಮಕ್ಕಳು, ಸೋದರಿಯರನ್ನು ಕರೆದುಕೊಂಡು ಬೆಂಗಳೂರಿಗೆ ಬಂದು ತಲುಪಿದೆ.

ಜಿಲ್ಲಾ ಸಮಾಜ ಕಲ್ಯಾಣ ಇಲಾಖೆಯ ಉಪ ನಿರ್ದೇಶಕ ಮಲ್ಲಿಕಾರ್ಜುನ ನೇತೃತ್ವದ ತಂಡ ಸಾಕಮ್ಮ ಅವರ ಕುಟುಂಬಸ್ಥರ ಜಾಡು ಹಿಡಿದು ಬಳ್ಳಾರಿಯಲ್ಲಿ ಹುಡುಕಾಟ ನಡೆಸಿತ್ತು. ಪರಿಣಾಮವಾಗಿ ಸಾಕಮ್ಮ ಅವರ ಇಬ್ಬರು ಗಂಡು ಮಕ್ಕಳು, ಒಬ್ಬ ಹೆಣ್ಣು ಮಗಳು ಮತ್ತು ಅಕ್ಕ–ತಂಗಿಯರು ಸೋಮವಾರ ಪತ್ತೆಯಾಗಿದ್ದರು.

ವಿಡಿಯೊ ಕರೆ ಮೂಲಕ ಮಕ್ಕಳನ್ನು ತೋರಿಸಿದರೆ ಗುರುತಿಸದ ಸಾಕಮ್ಮ, ಅಕ್ಕ ತಂಗಿಯರನ್ನು ತೋರಿಸಿದಾಗ ಕಂಡು ಹಿಡಿದಿದ್ದರು.

ಹೀಗಾಗಿ ಮಕ್ಕಳ ಜೊತೆಗೆ ಅಕ್ಕ–ತಂಗಿಯರನ್ನು ಬೆಂಗಳೂರಿಗೆ ಕರೆತರಲಾಗಿದೆ.

‘ಕೇಸರಿ ಶಾಲು ಹಾಕಿದರೆ ಯುಧಿಷ್ಠಿರ ಆಗುವುದಿಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಸರಿ ಶಾಲು ಹಾಕಿದ ತಕ್ಷಣ ದುಶ್ಯಾಸನರು ಯುಧಿಷ್ಠಿರ ಆಗುವುದಿಲ್ಲ’ ಎಂದು ಸಚಿವ ಪ್ರಿಯಾಂಕ್ ಖರ್ಗೆ ವಾಗ್ದಾಳಿ ನಡೆಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಸಚಿವೆ ಲಕ್ಷ್ಮೀ ಹೆಬ್ಬಾಳಕರ ವಿರುದ್ಧ ಸಿ.ಟಿ. ರವಿ ಅಸಾಂವಿಧಾನಿಕ ಪದ ಬಳಕೆ ಮಾಡಿದ್ದಾರೆ. ಆದರೆ, ಬಿಜೆಪಿಯವರು ಏನೂ ಆಗಿಯೇ ಇಲ್ಲ ಎನ್ನುವಂತೆ ಮಾತನಾಡುತ್ತಾರೆ. ಅವರಲ್ಲೇ ಹೊಂದಾಣಿಕೆ ಇಲ್ಲ’ ಎಂದರು.

‘ಸಿ.ಟಿ. ರವಿ ಅವಾಚ್ಯ ಪದ ಬಳಸಿದ ಪ್ರಕರಣದ ವಿಡಿಯೊ ಎಫ್‌ಎಸ್‌ಎಲ್‌ಗೆ ಹೋಗಿದೆಯಲ್ಲವೇ, ವರದಿ ಬರಲಿ. ಎಲ್ಲವೂ ಗೊತ್ತಾಗುತ್ತದೆ’ ಎಂದರು.

‘ಈ ವಿಡಿಯೊವನ್ನು ಕಾಂಗ್ರೆಸ್‌ನವರು ಬಿಟ್ಟಿಲ್ಲ. ಮಾಧ್ಯಮದವರ ಎದುರಿಗೇ ವಿಡಿಯೊ ಇದೆ. ಸಿ.ಟಿ. ರವಿ ಅವಾಚ್ಯ ಪದ ಬಳಕೆ ಮಾಡಿದ ಸಂದರ್ಭದಲ್ಲಿ ಅಲ್ಲಿಯೇ ಇದ್ದ ಇತರ ಶಾಸಕರು, ‘ನಾವೂ ಕೇಳಿಸಿಕೊಂಡಿದ್ದೇವೆ. ನಾಲ್ಕೈದು ಬಾರಿ ಹೇಳಿದ್ದಾರೆ’ ಎಂದಿದ್ದಾರೆ’ ಎಂದು ಹೇಳಿದರು.

ಮಾರಕಾಸ್ತ್ರಗಳಿಂದ ದಾಳಿ: ಹೋಟೆಲ್‌ನಲ್ಲಿ ಕೈ ಕತ್ತರಿಸಿದ ಗುಂಪು

ಪ್ರಜಾವಾಣಿ ವಾರ್ತೆ

ಮಂಜುನಾಥ್

ದೇವನಹಳ್ಳಿ: ತಾಲ್ಲೂಕಿನ ಗಡಿ ಭಾಗ ಸಾದಹಳ್ಳಿ ಗೇಟ್ ಬಳಿಯ ಶ್ರೀ ಕೃಷ್ಣ ಹೋಟೆಲ್‌ಗೆ ಮಂಗಳವಾರ ಊಟಕ್ಕೆ ಬಂದಿದ್ದ ವ್ಯಕ್ತಿ ಮೇಲೆ ದುಷ್ಕರ್ಮಿಗಳ ಗುಂಪು ಮಾರಕಾಸ್ತ್ರಗಳಿಂದ ದಾಳಿ ನಡೆಸಿ ಕೈ ಕತ್ತರಿಸಿದೆ.

ಕೊಲೆ ಪ್ರಕರಣವೊಂದರಲ್ಲಿ ಸಹಕಾರ ನೀಡಿಲ್ಲ ಎಂಬ ಹಳೆ ದ್ವೇಷದ ಹಿನ್ನೆಲೆಯಲ್ಲಿ ಮಂಜುನಾಥ್ ಮೇಲೆ ದೇವನಹಳ್ಳಿಯ ಭೋವಿಪಾಳ್ಯದ ಗುಂಪು ಮಾರಕಾಸ್ತ್ರದಿಂದ ದಾಳಿ ಮಾಡಿ ಪರಾರಿಯಾಗಿದೆ.

ಮಂಜುನಾಥ್ ಅವರ ಬಲಗೈ ಹಾಗೂ ಕಾಲಿಗೆ ರಕ್ತ‌ಗಾಯವಾಗಿದೆ. ಪೊಲೀಸರು ಗಾಯಾಳುವನ್ನು ಆಸ್ಪತ್ರೆಗೆ ಸಾಗಿಸಿದ್ದಾರೆ. ಚಿಕ್ಕಜಾಲ ಪೊಲೀಸರು ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಬಂಧನಕ್ಕೆ ಕಾರ್ಯಾಚರಣೆ ಆರಂಭಿಸಿದ್ದಾರೆ.

ಲೋಕಪಾಲ್ ವಿಚಾರಣೆ: ಸೆಬಿ ಅಧ್ಯಕ್ಷೆ ಮಾಧವಿಗೆ ಸಮನ್ಸ್

ನವದೆಹಲಿ: ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಅಧ್ಯಕ್ಷೆ ಮಾಧವಿ ಪುರಿ ಬುಚ್ ಮತ್ತು ದೂರುದಾರರಾದ ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ಅವರನ್ನು ಜನವರಿ 28ರಂದು ಮೌಖಿಕ ವಿಚಾರಣೆಗೆ ಹಾಜರಾಗುವಂತೆ ಲೋಕಪಾಲ್ ಕರೆದಿದೆ.

ಭ್ರಷ್ಟಾಚಾರಕ್ಕೆ ಸಂಬಂಧಿಸಿದಂತೆ ಸೆಬಿ ಮುಖ್ಯಸ್ಥರ ವಿರುದ್ಧ ಮೊಯಿತ್ರಾ ಮತ್ತು ಇತರ ಇಬ್ಬರು ದೂರು ನೀಡಿದ್ದರು. ಮಾಧವಿ ಪುರಿ ಬುಚ್ ವಿರುದ್ಧ ಹಿಂಡೆನ್‌ಬರ್ಗ್ ಸಂಸ್ಥೆ ನೀಡಿದ ವರದಿಯನ್ನು ಆಧರಿಸಿ ಅವರು ದೂರು ದಾಖಲಿಸಿದ್ದರು.

ಮಂತ್ರಾಲಯದಲ್ಲಿ ಭಕ್ತರಿಗೆ ವಸತಿ ಸೌಲಭ್ಯಕ್ಕೆ ತೊಡಕು

ಪ್ರಜಾವಾಣಿ ವಾರ್ತೆ

ರಾಯಚೂರು: ಕ್ರಿಸ್‌ಮಸ್ ಮತ್ತು ಹೊಸ ವರ್ಷದ ರಜೆಯ ಕಾರಣ ಮಂತ್ರಾಲಯ ಮಠಕ್ಕೆ ಬರುವ ಭಕ್ತರ ಸಂಖ್ಯೆಯಲ್ಲಿ ಹೆಚ್ಚಳವಾಗಿದೆ. ಹೀಗಾಗಿ ಡಿ.25ರಿಂದ ಜನವರಿ 2ರವರೆಗೆ ಇಲ್ಲಿಗೆ ಬರುವ ಎಲ್ಲರಿಗೂ ವಸತಿ ಸೌಲಭ್ಯ ಕಲ್ಪಿಸಲು ಕಷ್ಟವಾಗಲಿದೆ ಎಂದು ಮಂತ್ರಾಲಯದ ಶ್ರೀರಾಘವೇಂದ್ರ ಸ್ವಾಮಿಗಳ ಮಠದ ವ್ಯವಸ್ಥಾಪಕರು ತಿಳಿಸಿದ್ದಾರೆ.

ಭಕ್ತರು ಈಗಾಗಲೇ ಕೊಠಡಿಗಳಿಗೆ ಆನ್‌ಲೈನ್ ಬುಕಿಂಗ್ ಮಾಡಿದ್ದಾರೆ. ಇಷ್ಟೇ ಅಲ್ಲದೆ, ಇತ್ತೀಚಿನ ದಿನಗಳಲ್ಲಿ ಕೊಠಡಿ ಹಂಚಿಕೆಗಾಗಿ ದಾನಿಗಳಿಂದ ಡೋನರ್ಸ್ ಕೂಪನ್‌ಗಳನ್ನು ಸ್ವೀಕರಿಸಲಾಗಿದೆ ಎಂದು ಹೇಳಿದ್ದಾರೆ.

ಇದೇ ಸಮಯದಲ್ಲಿ, ಪ್ರೋಟೊಕಾಲ್ ಮಾನದಂಡಗಳ ಪ್ರಕಾರ ನಾವು ವಿವಿಐಪಿಗಳನ್ನು ನೋಡಿಕೊಳ್ಳಬೇಕಾಗಲಿದೆ. ಜನದಟ್ಟಣೆ ಇರುವ ದಿನಗಳಲ್ಲಿ ಕೊಠಡಿಗಳನ್ನು ಕಾಯ್ದಿರಿಸಲು ಕೊನೆಯ ಕ್ಷಣದ ಮನವಿ ಮಾಡಿದರೆ, ಶಿಫಾರಸು ಪತ್ರ ತಂದರೆ ಸ್ಪಂದಿಸುವುದು ಕಷ್ಟವಾಗಲಿದೆ. ಭಕ್ತರು ಸಹಕರಿಸಬೇಕು ಎಂದು ಮನವಿ ಮಾಡಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರು, ಅನೆಕ್ಸ್ ಕಟ್ಟಡ–1, ನರಸಿಂಹರಾಜ ಚೌಕ, ಬೆಂಗಳೂರು – 560 002

ಸಂಖ್ಯೆ: ಬೃಬೆಂಮಪಾ/ಮು.ಆಯುಕ್ತರು/ಪಿಎಸ್‌ಆರ್(ಜಿ)/2677/2024–25 ದಿನಾಂಕ: 23.12.2024

ಸಾರ್ವಜನಿಕ ಪ್ರಕಟಣೆ

ನಮೂನೆ – III

ಕಾಯಿದೆ 3ರ ಉಪಕಾಯಿದೆ (3) ನ್ನು ಅವಲೋಕಿಸಿ)

ಕರ್ನಾಟಕ ನಗರ ಮತ್ತು ಪಟ್ಟಣ ಯೋಜನಾ ಕಾಯಿದೆ 1961ರ ಸೆಕ್ಷನ್ 14–ಬಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತ, “24.00 ಮೀಟರ್‌ಗಳ ಅಗಲದಂತೆ, ಅನುಮೋದಿತ **ಮಹಾಯೋಜನೆ 2015ರ ಪ್ರಸ್ತಾವನೆಗಳನ್ನು ಅನುಷ್ಠಾನಗೊಳಿಸಲು ಎನ್‌ಹೆಚ್–04 ರಿಂದ ಸೇಂಟ್. ಆಂಥೋನಿ'ಸ್ ಚರ್ಚ್‌ವರೆಗೆ ಟಿ.ಸಿ.ಪಾಳ್ಯ ಮುಖ್ಯ ರಸ್ತೆಯ (ಭಟ್ಟರಹಳ್ಳಿ) ಅಗಲೀಕರಣ ಮತ್ತು ಅಭಿವೃದ್ಧಿ ಮಾಡುವ ಕಾಮಗಾರಿಗಾಗಿ** ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ನ.ರಾ.ಚೌಕ, ಬೆಂಗಳೂರು–560002 ಇವರಿಗೆ ಈ ಕೆಳಗಿನ ಷೆಡ್ಯೂಲ್‌ನಲ್ಲಿ ತಿಳಿಸಲಾದ ಪ್ರದೇಶಗಳು ಅವಶ್ಯಕವಿರುತ್ತದೆ.

ಈ ಕೆಳಗಿನ ಜಮೀನು/ಕಟ್ಟಡದ ಮಾಲೀಕರು ನ್ಯಾಯೋಚಿತ ಪರಿಹಾರ ಮತ್ತು ಭೂಸ್ವಾಧೀನ, ಪುನರ್ವಸತಿ ಮತ್ತು ರೀಸೆಟಲ್‌ಮೆಂಟ್ ಪಾರದರ್ಶಕ ಕಾಯಿದೆ 2013ರಂತೆ ವಿತ್ತೀಯ ಪರಿಹಾರದ ಬದಲಾಗಿ ಅಭಿವೃದ್ಧಿ ಹಕ್ಕುಗಳ ಆಯ್ಕೆಯನ್ನು ಹೊಂದಿರುತ್ತಾರೆ. ಅಭಿವೃದ್ಧಿ ಹಕ್ಕುಗಳನ್ನು/ಮೌಲ್ಯವನ್ನು ಪ್ರಾಧಿಕಾರವು ಭೂಮಿಯನ್ನು ನೀಡಿದ/ಒಪ್ಪಿಸಿದ ದುಪ್ಪಟ್ಟು ಮತ್ತು ನೀಡಿದ/ಒಪ್ಪಿಸಿದ ಕಟ್ಟಡದ ಪ್ರದೇಶದ ಅಂದಾಜು ಮೌಲ್ಯವನ್ನು (ಲೋಕೋಪಯೋಗಿ ಇಲಾಖೆ ಮಾನದಂಡಗಳಂತೆ) ಭೂಮಿಯ ಪೈಕಿ ಕಟ್ಟಡ ನಿರ್ಮಿಸಿರುವ ಭಾಗದ ಮಾರುಕಟ್ಟೆ ಮೌಲ್ಯದಂತೆ ವಿಂಗಡಿಸಿ ನೀಡಲಾಗುವುದು.

ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಸಾರ್ವಜನಿಕ ಉದ್ದೇಶಕ್ಕಗಿ ಅವಶ್ಯಕವಿರುವ ಸ್ವತ್ತು ಮತ್ತು ಸ್ವತ್ತಿನ ಮಾಲೀಕರು ಹಾಗೂ ಆಸಕ್ತ ವ್ಯಕ್ತಿಗಳಿಗೆ ವಿತ್ತೀಯ ಪರಿಹಾರದ ಬದಲಿಗೆ ಅಭಿವೃದ್ಧಿ ಹಕ್ಕುಗಳ ಪ್ರಮಾಣ ಪತ್ರಗಳನ್ನು (ಡಿಆರ್‌ಸಿಗಳು) ವಿತರಿಸಲಾಗುವುದು. ಯಾವುದೇ ಆಕ್ಷೇಪಣೆಗಳು ಮತ್ತು ಸಲಹೆಗಳಿದ್ದಲ್ಲಿ ಉಪ ಆಯುಕ್ತರವರ ಕಚೇರಿ, (ಭೂಸ್ವಾಧೀನ ಮತ್ತು ಟಿಡಿಆರ್), ಕೇಂದ್ರ ಕಚೇರಿ, ಬೃ.ಬೆಂ.ಮ.ಪಾಲಿಕೆ ಇವರನ್ನು ಈ ಪ್ರಕಟಣೆಯ ದಿನಾಂಕದಿಂದ 30 ದಿನಗಳೊಳಗಾಗಿ ಸಂಪರ್ಕಿಸಬಹುದು.

ಭೂಮಿ/ಕಟ್ಟಡ ಪ್ರದೇಶವನ್ನು ನೀಡದ/ಒಪ್ಪಿಸಿದವರು ಹಾಗೂ ಡಿಆರ್‌ಸಿ ನೀಡುವ ಭೂ ಮಾಲೀಕರ ಪಟ್ಟಿ

Name of the District : **Bangalore Urban** Name of the Taluk : **Bangalore East** Name of the Village : **Sannathammanahalli**

Sl. No.	Sy. No/ Khatha No.	Type of land		Nature of Land			Dimension of the land / plot & Extent in Sq.m.		Boundaries of the land / plot				Building Details			Present activity on land/ Building (Specify Specific activity such as shop, office. factory apartment, individual house etc.	Market (guidelines) value of the land per Sq.m.	Name and address of the owner of the plot / land for which DRC is to be issued
		Vacant	Built up	Agriculture	Converted undeveloped	Approved Layout/ developed Land Building Site	Dimension	Extent	North	South	East	West	Extent in Sq.m	Type of Construction and No. of floors	Floor area Ratio			
1	no.Sy No.50/10 (Boock-I)	Vacant Land		Agriculture Land			1027.16		Remaining Portion of Sy No.50/10	Existing road in Sy No.50/10	Sy No.51	Sy No.51	None	None	None	Vacant	48,000/-	Archbishop of Bangalore, Sy No.50/10,Sannathammanahalli Village, K.R Puram Hobli, Bangalore East Taluk.
2	Sy No.50/10 (Boock-II)						486.36		Existing road in Sy No.50/10	Remaining Portion of Sy No.50/10	Battarahalli Village Boundary	Sy No.51	None	None	None	Vacant	48,000/-	

Note: Market guideline value of this property is considered subject to conditions of payment of fee as per Government Order No. :ನಅಇ 137 ಎಂಎನ್‌ಯು 2024 (ಇ), ದಿನಾಂಕ:09.09.2024 and as per the Circular No:ಆಯುಕ್ತರು/ಪಿ.ಎಸ್.ಆರ್/ಜಿ/1802/2024–25, ದಿನಾಂಕ:21.09.2024.

Objections and suggestions made be submitted at the address specified below:

ವಿಭಾಗ / ಉಪ–ವಿಭಾಗ / ಶಾಖೆ ಕಚೇರಿಗಳ ಹೆಸರು ಮತ್ತು ವಿಳಾಸ	ಉಪ ಆಯುಕ್ತರು, ಭೂಸ್ವಾಧೀನ ಮತ್ತು ಟಿಡಿಆರ್, 2ನೇ ಮಹಡಿ, ಕೊಠಡಿ ಸಂ. 208, ಅನೆಕ್ಸ್ ಕಟ್ಟಡ–3, ನರಸಿಂಹರಾಜ ಚೌಕ, ಬೃ.ಬೆಂ.ಮಾ.ಪಾಲಿಕೆ, ಬೆಂಗಳೂರು – 560 002.

ಸಹಿ/–

ಮುಖ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆರ್‌ಆರ್ ನಗರ ವಿಧಾನ ಸಭಾಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶ

‘ಅಪಪ್ರಚಾರ ವಿರುದ್ಧ ಹೋರಾಟ’

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವನಗರ: ‘ಕಾಂಗ್ರೆಸ್ ಕಾರ್ಯಕರ್ತರು, ನಾಗರಿಕರಿಗೆ ಕಿರುಕುಳ ನೀಡುವುದು, ದೌರ್ಜನ್ಯ ಎಸಗುವುದು, ದಬ್ಬಾಳಿಕೆ ನಡೆಸುವಂತಹ ಪ್ರವೃತ್ತಿಯನ್ನು ಬಿಜೆಪಿ ಶಾಸಕ ಮುನಿರತ್ನ ಮುಂದುವರಿಸಿದರೆ, ಎಲ್ಲರೂ ಹೋರಾಟಕ್ಕೆ ಮುಂದಾಗಬೇಕು’ ಎಂದು ಕಾಂಗ್ರೆಸ್ ಕಾರ್ಯಕರ್ತರು ಒಕ್ಕೊರಲಿಂದ ತೀರ್ಮಾನಿಸಿದರು.

ರಾಜರಾಜೇಶ್ವರಿನಗರ ವಿಧಾನ ಸಭಾಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶದಲ್ಲಿ ಮಾತನಾಡಿದ ಹಲವು ಮುಖಂಡರು, ಕಾರ್ಯಕರ್ತರು ‘ಅಪಪ್ರಚಾರ, ಸುಳ್ಳು ಹೇಳಿಕೆ ನೀಡಿದರೆ ಮೌನವಾಗಿರಬಾರದು.ಅದನ್ನುಎಲ್ಲರೂ ಖಂಡಿಸಬೇಕು’ ಎಂದು ನಿರ್ಧರಿಸಿದರು.

ಬಿಬಿಎಂಪಿ ಆಡಳಿತ ಪಕ್ಷದ ಮಾಜಿ ನಾಯಕ ಬಿ.ಆರ್.ನಂಜುಂಡಪ್ಪ ಮಾತನಾಡಿ,‘ಕಾರ್ಯಕರ್ತರು ಮೂಲ, ವಲಸಿಗ ಎಂಬ ಭಾವನೆಯನ್ನು ಬಿಟ್ಟು ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷವನ್ನು ಸದೃಢವಾಗಿ ಸಂಘಟನೆ ಮಾಡಬೇಕು’ ಎಂದು ತಿಳಿಸಿದರು.

ರಾಜರಾಜೇಶ್ವರಿನಗರ ವಿಧಾನ ಸಭಾಕ್ಷೇತ್ರದ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶದಲ್ಲಿ ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತರಾಯಪ್ಪ ಮಾತನಾಡಿದರು

ಪಾಲಿಕೆ ಮಾಜಿ ಸದಸ್ಯೆ ಆಶಾ ಸುರೇಶ್ ಮಾತನಾಡಿ, ‘ಒಕ್ಕಲಿಗ ಸಮುದಾಯದ ಬಿಜೆಪಿಯ ಮಮತ ವಾಸುದೇವ್, ಜೆಡಿಎಸ್‌ನ ಮಂಜುಳ ನಾರಾಯಣಸ್ವಾಮಿ ಹಾಗೂ ನನ್ನ ಮೇಲೆ ಸುಳ್ಳು ಕೇಸು ದಾಖಲಿಸಿ, ಕಿರುಕುಳ ನೀಡಿರುವ ಶಾಸಕ ಮುನಿರತ್ನ ವಿರುದ್ಧ ಎಲ್ಲ ಸಮುದಾಯದವರು ಒಂದಾಗಿ ಹೋರಾಡಬೇಕು’ ಎಂದು ತಿಳಿಸಿದರು.

ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹನುಮಂತರಾಯಪ್ಪ ಮಾತನಾಡಿ, ‘ನಿಷ್ಠಾವಂತರಿಗೆ ಕ್ಷೇತ್ರ, ಜಿಲ್ಲಾ, ರಾಜ್ಯಮಟ್ಟದಲ್ಲಿ ಸ್ಥಾನಮಾನ ದೊರಕಿಸಿಕೊಡಲಾಗುವುದು. ಹುದ್ದೆ ಪಡೆದರೆ ಸಾಲದು, ಜನ ಸಾಮಾನ್ಯರ ಜೊತೆ ಬೆರೆತು ಅವರ ಸೇವೆ ಮಾಡಬೇಕು’ ಎಂದು ಕಿವಿಮಾತು ಹೇಳಿದರು.

ಪಾಲಿಕೆ ಮಾಜಿ ಸದಸ್ಯ ವೇಲು ನಾಯಕರ್, ಮುಖಂಡ ಯಾರಬ್ ಆಕ್ರೋಶ, ಕೆಪಿಸಿಸಿ ಪ್ರಧಾನಕಾರ್ಯದರ್ಶಿ ಹೇಮಲತಾ ಇಂದ್ರೇಶ್ ಮಾತನಾಡಿದರು.

ಪಾಲಿಕೆ ಮಾಜಿ ಸದಸ್ಯರಾದ ಸಿದ್ದೇಗೌಡ, ಮಂಜುಳನಾರಾಯಣಸ್ವಾಮಿ ವಿವಿಧ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ರಾಂಪುರ ನಾಗೇಶ್, ಗೋಪಾಲಕೃಷ್ಣ, ಸುಲಕ್ಷಣ ಬೈರೇಗೌಡ, ಮೀನಾ, ಪಾರ್ಥಗೌಡ, ಹನುಮೇಗೌಡ, ಮುಖಂಡರಾದ ರಮೇಶ್ ಗೌಡ ಮಲ್ಲತ್ತಹಳ್ಳಿ ಕೆ.ಜಗದೀಶ್, ಅನಿಲ್ ಕುಮಾರ್ ಎಂ.ವಿ.ಕೊಟ್ಟಿಗೆಪಾಳ್ಯ ಶೇಖರ್ ಹಿಂದುಳಿದ ವಿಭಾಗದ ಕಾಂಗ್ರೆಸ್ ಅಧ್ಯಕ್ಷ ರವಿಕುಮಾರ್ ಮಾತನಾಡಿದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು–01
ಇ-ಮೇಲ್ : editpage@prajavani.co.in

ಅಭಿಮತ

❦ ಸುಭಾಷಿತ ❦

ನಿಮ್ಮನ್ನು ನೀವು ಅರಿತುಕೊಳ್ಳುವವರೆಗೆ ನೀವು ಶಾಂತಿಯಿಂದ ಇರಲು ಸಾಧ್ಯವಿಲ್ಲ.

–ಜಿಡ್ಡು ಕೃಷ್ಣಮೂರ್ತಿ

ಚುನಾವಣಾ ನಿಯಮ ಬದಲು ಆಯೋಗದ ವಿಶ್ವಾಸಾರ್ಹತೆಗೆ ಹೊಡೆತ

ಚುನಾವಣೆಗೆ ಸಂಬಂಧಿಸಿದ ಕೆಲವು ನಿಯಮಗಳನ್ನು ಸರ್ಕಾರವು ಬದಲಾಯಿಸಿದೆ. ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಗಳು, ವೆಬ್‌ಕಾಸ್ಟಿಂಗ್ ದೃಶ್ಯಾವಳಿ ಮತ್ತು ಅಭ್ಯರ್ಥಿಗಳ ವಿಡಿಯೊ ಚಿತ್ರೀಕರಣದ ದೃಶ್ಯಗಳ ಸಾರ್ವಜನಿಕ ಪರಿಶೀಲನೆಗೆ ಇರುವ ಅವಕಾಶಕ್ಕೆ ತಡೆ ಒಡ್ಡುವುದು ಈ ಬದಲಾವಣೆಯ ಉದ್ದೇಶ. ಆದರೆ, ಇದು ಪಾರದರ್ಶಕತೆಯ ನಿಯಮಗಳಿಗೆ ವಿರುದ್ಧವಾಗಿದೆ. ಚುನಾವಣಾ ಪ್ರಕ್ರಿಯೆಯು ವಿಶ್ವಾಸಾರ್ಹವಾಗಿ ಇರಬೇಕಾದ ಅಗತ್ಯ ಇದೆ. ಚುನಾವಣಾ ನಿಯಮ 93(2)(ಎ)ಗೆ ತಿದ್ದುಪಡಿ ತರಲಾಗಿದೆ. ಚುನಾವಣಾ ಆಯೋಗದ ಸಲಹೆಯ ಮೇರೆಗೆ ಈ ತಿದ್ದುಪಡಿ ಮಾಡಲಾಗಿದೆ ಎಂದು ಹೇಳಲಾಗುತ್ತಿದೆ. ಮತಗಟ್ಟೆಗಳ ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಗಳ ದುರ್ಬಳಕೆಯನ್ನು ತಡೆಯುವುದಕ್ಕಾಗಿ ಈ ಬದಲಾವಣೆ ತರಲಾಗಿದೆ ಎಂದು ಸರ್ಕಾರ ಹೇಳಿದೆ. ನಾಮಪತ್ರ, ಬ್ಯಾಂಕ್ ಸ್ಟೇಟ್‌ಮೆಂಟ್ ದಾಖಲೆಗಳ ಉಲ್ಲೇಖ ಈ ನಿಯಮದಲ್ಲಿ ಇತ್ತು. ಆದರೆ, ವಿದ್ಯುನ್ಮಾನ ದಾಖಲೆಗಳ ಕುರಿತು ಯಾವುದೇ ಉಲ್ಲೇಖವು ನಿಯಮದಲ್ಲಿ ಇರಲಿಲ್ಲ. ಈ ದ್ವಂದ್ವವನ್ನು ಸರಿಪಡಿಸುವುದಕ್ಕಾಗಿ ನಿಯಮಕ್ಕೆ ತಿದ್ದುಪಡಿ ತರಲಾಗಿದೆ. ಮತಗಟ್ಟೆಯಲ್ಲಿ ಕಾಪಾಡಬೇಕಾದ ಗೋಪ್ಯತೆಯನ್ನು ಕೃತಕ ಬುದ್ಧಿಮತ್ತೆ ಬಳಸಿ ಉಲ್ಲಂಘಿಸುವ ಸಾಧ್ಯತೆಯನ್ನು ತಪ್ಪಿಸುವುದು ಕೂಡ ಈ ತಿದ್ದುಪಡಿಯ ಉದ್ದೇಶ ಎಂದು ಹೇಳಲಾಗಿದೆ. ಇದರ ಪರಿಣಾಮವಾಗಿ, ಚುನಾವಣೆಗೆ ಸಂಬಂಧಿಸಿದ ಒಂದಷ್ಟು ದಾಖಲೆಗಳು ಮತದಾರರಿಗೆ ಲಭ್ಯವಾಗುವುದಕ್ಕೆ ತಡೆ ಒಡ್ಡಿದಂತೆ ಆಗಿದೆ.



ಚುನಾವಣೆಗೆ ಸಂಬಂಧಿಸಿದ ನಿಯಮಗಳಲ್ಲಿ ಬದಲಾವಣೆ ಮಾಡುವುದಕ್ಕೆ ಮುನ್ನ ವಿರೋಧ ಪಕ್ಷಗಳ ಜೊತೆಗೆ ಸಮಾಲೋಚನೆ ನಡೆಸಬೇಕಾದುದು ಚುನಾವಣಾ ಆಯೋಗ ಮತ್ತು ಸರ್ಕಾರದ ಹೊಣೆಗಾರಿಕೆ

ಈಗ ನೀಡಿರುವ ವಿವರಣೆಯು ಖಂಡಿತವಾಗಿಯೂ ತೃಪ್ತಿಕರವಲ್ಲ. ಚುನಾವಣೆಗೆ ಸಂಬಂಧಿಸಿದಂತೆ ಚುನಾವಣಾ ಆಯೋಗ ಮತ್ತು ಸರ್ಕಾರದ ನಡವಳಿಕೆಯ ಕುರಿತು ಈ ವಿವರಣೆಯು ಇನ್ನಷ್ಟು ಪ್ರಶ್ನೆಗಳನ್ನು ಹುಟ್ಟುಹಾಕುತ್ತದೆ. ಮತಗಟ್ಟೆಗಳಲ್ಲಿ ಸ್ಥಾಪಿಸುವ ಸಿ.ಸಿ. ಟಿ.ವಿ. ಕ್ಯಾಮೆರಾಗಳು ಮತಗಟ್ಟೆ ಅಧಿಕಾರಿಗಳನ್ನು ತೋರಿಸುತ್ತವೆಯೇ ವಿನಾ ಮತದಾರರನ್ನು ಅಲ್ಲ. ಮತದಾರರು ಮತ ಹಾಕುವ ದೃಶ್ಯಗಳು ಸಿ.ಸಿ. ಟಿ.ವಿ. ಕ್ಯಾಮೆರಾಗಳಲ್ಲಿ ಸೆರೆಯಾಗುವುದಿಲ್ಲ. ಹಾಗಾಗಿ, ಗೋಪ್ಯ ಮತದಾನದ ನಿಯಮವು ಉಲ್ಲಂಘನೆಯಾಗಬಹುದು ಎಂಬ ಕಳವಳಕ್ಕೆ ಅರ್ಥವೇ ಇಲ್ಲ. ಮತಗಟ್ಟೆಯ ಹೊರಗೆ ಮತದಾರರೇ ಕ್ಯಾಮೆರಾಗಳನ್ನು ಬಳಸುತ್ತಾರೆ. ಹೊರಗೆ ಕ್ಯಾಮೆರಾ ಬಳಕೆಗೆ ಯಾವುದೇ ನಿರ್ಬಂಧ ಇಲ್ಲ. ಹಾಗೆ ನೋಡಿದರೆ, ವಿಡಿಯೊಗಳು ಉಪಯುಕ್ತ. ಚಂಡೀಗಢ ಮೇಯರ್ ಹುದ್ದೆಗೆ ಕಳೆದ ವರ್ಷ ನಡೆದ ಮತದಾನದಲ್ಲಿ ಚುನಾವಣಾಧಿಕಾರಿಯೇ ಮತಪತ್ರಗಳನ್ನು ತಿರುಚಿದ ದೃಶ್ಯ ವಿಡಿಯೊದಲ್ಲಿ ದಾಖಲಾಗಿತ್ತು. ಜಮ್ಮು–ಕಾಶ್ಮೀರ ಹಾಗೂ ನಕ್ಸಲ್ ಪ್ರಾಬಲ್ಯದ ಪ್ರದೇಶಗಳಲ್ಲಿ ಸಮಸ್ಯೆ ಇದೆ ಎಂಬ ಕಾರಣಕ್ಕೆ ಇತರೆಡೆಗಳ ಜನರಿಗೆ ಅವರ ಹಕ್ಕುಗಳನ್ನು ನಿರಾಕರಿಸಬಾರದು.

ಹರಿಯಾಣ ವಿಧಾನಸಭೆ ಚುನಾವಣೆಗೆ ಸಂಬಂಧಿಸಿದ ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿ ಸೇರಿ ನಿಯಮ 93(2)ರ ಅಡಿಯಲ್ಲಿ ನೀಡಲು ಸಾಧ್ಯವಿರುವ ಎಲ್ಲ ದಾಖಲೆಗಳನ್ನು ದೂರುದಾರ ಮಹಮ್ಮದ್ ಪ್ರಾಚಾ ಅವರಿಗೆ ನೀಡುವಂತೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಈಚೆಗೆ ಆದೇಶ ನೀಡಿತ್ತು. ಅದಾದ ಬಳಿಕ, ನಿಯಮಕ್ಕೆ ತಿದ್ದುಪಡಿ ತರಲಾಗಿದೆ. ತಿದ್ದುಪಡಿಯಾದ ನಿಯಮದ ಪ್ರಕಾರ, ಮಹಮ್ಮದ್ ಅವರಿಗೆ ಈಗ ದಾಖಲೆಗಳು ಸಿಗುವುದಿಲ್ಲ. ಹರಿಯಾಣ ವಿಧಾನಸಭೆಗೆ ಈಚೆಗೆ ನಡೆದ ಚುನಾವಣೆಗೆ ಸಂಬಂಧಿಸಿ ಹಲವು ಪ್ರಶ್ನೆಗಳು ಕೇಳಿಬಂದಿದ್ದವು ಎಂಬುದು ಗಮನಾರ್ಹ. ಚುನಾವಣೆಗೆ ಸಂಬಂಧಿಸಿದ ನಿಯಮಗಳಲ್ಲಿ ಬದಲಾವಣೆ ಮಾಡುವುದಕ್ಕೆ ಮುನ್ನ ವಿರೋಧ ಪಕ್ಷಗಳ ಜೊತೆಗೆ ಸಮಾಲೋಚನೆ ನಡೆಸಬೇಕಾದುದು ಚುನಾವಣಾ ಆಯೋಗ ಮತ್ತು ಸರ್ಕಾರದ ಹೊಣೆಗಾರಿಕೆ. ಆದರೆ ಅಂತಹ ಯಾವುದೇ ಸಮಾಲೋಚನೆ ನಡೆದಿಲ್ಲ. ಸರ್ಕಾರದ ನಿರ್ಧಾರಕ್ಕೆ ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿವೆ. ಚುನಾವಣಾ ಪ್ರಕ್ರಿಯೆಯ ಋಜುತ್ವವನ್ನು ಶಿಥಿಲಗೊಳಿಸುವ ಪ್ರಯತ್ನ ಇದು ಎಂದು ಕಾಂಗ್ರೆಸ್ ಪಕ್ಷವು ಟೀಕಿಸಿದೆ. ಚುನಾವಣಾ ಆಯೋಗವು ಪಾರದರ್ಶಕವಾಗಿರಲು ಬಯಸುತ್ತಿಲ್ಲ ಮತ್ತು ಸರ್ಕಾರದ ಪರವಾಗಿದೆ ಎಂದು ಕಾಂಗ್ರೆಸ್ ಆರೋಪಿಸಿದೆ. ನಿಯಮದಲ್ಲಿ ಮಾಡಿರುವ ಬದಲಾವಣೆಯಿಂದ ಯಾವುದೇ ಪ್ರಯೋಜನ ಇಲ್ಲ. ಆದರೆ, ಚುನಾವಣಾ ಆಯೋಗದ ವಿಶ್ವಾಸಾರ್ಹತೆಯನ್ನು ಇನ್ನಷ್ಟು ಕೆಳಕ್ಕೆ ತಳ್ಳಲು ನೆರವಾಗುತ್ತದೆ.

ದಿನದ ಟ್ವೀಟ್

ಕನ್ನಡ ಬಳಕೆ ವ್ಯಾಪಕವಾಗಲಿ

ಬೆಳಗಾವಿಯ ಮರಾಠಾ ಕೊ ಆಪರೇಟಿವ್ ಬ್ಯಾಂಕಿನ ಚುನಾವಣೆಯ ಅಭ್ಯರ್ಥಿಗಳ ಪಟ್ಟಿಯನ್ನು ಮೊದಲು ಪೂರ್ತಿ ಮರಾಠಿಯಲ್ಲಿಯೇ ಮುದ್ರಿಸುತ್ತಿದ್ದರು. ಈಗ ಮರಾಠಿಯ ಜೊತೆಗೆ ಕನ್ನಡ ಕೂಡ ಬಳಸಿರುವುದು ವಿಶೇಷ. ಈ ಪಟ್ಟಿಯಲ್ಲಿರುವ ಪ್ರತಿಯೊಬ್ಬ ಅಭ್ಯರ್ಥಿಯೂ ಮರಾಠಾ ಸಮುದಾಯಕ್ಕೆ ಸೇರಿದವರು.

ವಿ.ಸಿಂಧೂರ ಲಕ್ಷ್ಮಣ, ಸಾಫ್ಟ್‌ವೇರ್ ಎಂಜಿನಿಯರ್

ಕಿಡಿನುಡಿ

ಸಿ.ಟಿ. ರವಿ ಅವರನ್ನು ರಾತ್ರಿಯಿಡೀ ಅಲೆದಾಡಿಸಿದ ಬಗ್ಗೆ ಪ್ರತಿಕ್ರಿಯಿಸಿದ ಪೊಲೀಸ್ ಅಧಿಕಾರಿಯೊಬ್ಬರು, ಸುರಕ್ಷತೆಯ ದೃಷ್ಟಿಯಿಂದ ನಾವು ಕಬ್ಬಿನಗದ್ದೆಗೆ, ಫಾರೆಸ್ಟ್‌ಗೆ ಕರೆದುಕೊಂಡು ಹೋಗಿದ್ದಾಗಿ ಹೇಳಿದ್ದಾರೆ. ಕಬ್ಬಿನಗದ್ದೆ, ಅರಣ್ಯ ಪ್ರದೇಶವೇ ಸೇಫ್. ಇನ್ನುಮೇಲೆ ಯಾರನ್ನೇ ಬಂಧಿಸಿದರೂ ಸೀದಾ ಕಬ್ಬಿನಗದ್ದೆಗೆ ಕರೆದುಕೊಂಡು ಹೋಗಬೇಕು.

ಆರ್.ಅಶೋಕ, ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಶನಿವಾರ, 25-12-1999

● **ಇಂಡಿಯನ್ ಏರ್‌ಲೈನ್ಸ್ ವಿಮಾನ ಅಪಹರಣ**

ನವದೆಹಲಿ, ಡಿ. 24 (ಯುಎನ್‌ಐ, ಪಿಟಿಐ)– ಇಂದು ಸಂಜೆ ಕಠ್ಮಂಡುವಿನಿಂದ ದೆಹಲಿಗೆ ಹೊರಟಿದ್ದ, 189 ಪ್ರಯಾಣಿಕರಿದ್ದ ಇಂಡಿಯನ್ ಏರ್‌ಲೈನ್ಸ್‌ನ 'ಏರ್‌ಬಸ್' ವಿಮಾನವನ್ನು ಅಪಹರಿಸಿದ ಐವರು ಶಸ್ತ್ರಧಾರಿಗಳು ನಾಲ್ವರು ಪ್ರಯಾಣಿಕರನ್ನು ಕೊಂದು ಐವರನ್ನು ಗಾಯಗೊಳಿಸಿದ್ದಾರೆ.

ರಾತ್ರಿ ಲಾಹೋರ್ ನಿಲ್ದಾಣದಲ್ಲಿ ಇಂಧನ ತುಂಬಿಸಿಕೊಂಡು ನಂತರ ಕಾಬೂಲ್ ಕಡೆಗೆ ಹೊರಟಿದ್ದ ವಿಮಾನಕ್ಕೆ ಕಾಬೂಲ್‌ನಲ್ಲಿ ಇಳಿಯಲು ತಾಲಿಬಾನ್ ಅನುಮತಿ ನಿರಾಕರಿಸಿತು. ವಿಮಾನ, ಭಾರತೀಯ ಕಾಲಮಾನ ರಾತ್ರಿ 1.35ಕ್ಕೆ ಅಬುಧಾಬಿಯ ವಾಯುಸೇನಾ ನೆಲೆಯೊಂದರಲ್ಲಿ ಇಳಿಯಿತು.
ಅನುಮತಿ ನಕಾರ: ಕಾಬೂಲಿನಲ್ಲಿ ವಿಮಾನ ಇಳಿಯಲು ತಮ್ಮ ಸರ್ಕಾರ ಅನುಮತಿ ನಿರಾಕರಿಸಿದೆ ಎಂದು ಅಫ್ಗಾನಿಸ್ತಾನದ ತಾಲಿಬಾನ್ ಆಡಳಿತದ ವಿಮಾನಯಾನ ಸಚಿವರು ಹೇಳಿದರು.

● **ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ 'ನರಕದರ್ಶನ'**

ಬೆಂಗಳೂರು, ಡಿ. 24– ಹೆಜ್ಜೆ ಹೆಜ್ಜೆಗೂ ಲಂಚ. ಔಷಧಿಯಿದ್ದರೂ ಸತಾಯಿಸುವ ಸಿಬ್ಬಂದಿ. ಸಮಯ ಪಾಲಿಸದ ವೈದ್ಯರು. ಅಸಹಾಯಕರಾದ ರೋಗಿಗಳು. ಇವು ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಗೆ ವೈದ್ಯಕೀಯ ಶಿಕ್ಷಣ ಖಾತೆ ಸಚಿವರಾದ ನಫೀಸಾ ಫಜಲ್ ಅವರು ಅನಿರೀಕ್ಷಿತವಾಗಿ ಭೇಟಿ ನೀಡಿದಾಗ ಕಂಡುಬಂದ ದೃಶ್ಯ.

ಯಾರಿಗೂ ಪೂರ್ವಸೂಚನೆ ನೀಡದೆ ಸಚಿವರು ಇಂದು ಬೆಳಿಗ್ಗೆ ಆಸ್ಪತ್ರೆಗೆ ಭೇಟಿ ನೀಡಿದಾಗ, ಅಲ್ಲಿಯ ಸೂಪರಿಂಟೆಂಡೆಂಟ್ ಅವರೇ ಇನ್ನೂ ಬಂದಿರಲಿಲ್ಲ. ಉಳಿದ ವೈದ್ಯರು 9.30ರೊಳಗೆ ಹಾಜರಿರಬೇಕಿದ್ದರೂ, 10.30 ಆಗಿದ್ದರೂ ಬಹುತೇಕ ವೈದ್ಯರು ಬಂದಿರಲಿಲ್ಲ. ಇದರಿಂದಾಗಿ ಎಲ್ಲ ವಿಭಾಗಗಳಲ್ಲೂ ರೋಗಿಗಳು ಗಂಟೆಗಟ್ಟಲೆ ಕಾಯುತ್ತಾ ಯಾತನೆ ಪಡುತ್ತಿದ್ದರು.

50 ವರ್ಷಗಳ ಹಿಂದೆ

ಬುಧವಾರ, 25-12-1974

● **ಮಂಡ್ಯ ಜಿಲ್ಲೆಯಲ್ಲಿ ಸಣ್ಣ ಉಕ್ಕಿನ ಕಾರ್ಖಾನೆ**

ಮಂಡ್ಯ, ಡಿ. 24– ಮಂಡ್ಯ ಜಿಲ್ಲೆಯಲ್ಲಿ ಶೀಘ್ರದಲ್ಲಿಯೇ ಸಣ್ಣ ಪ್ರಮಾಣದ ಉಕ್ಕಿನ ಕಾರ್ಖಾನೆಯೊಂದನ್ನು ಸ್ಥಾಪಿಸಲಾಗುವುದು, ಕೇಂದ್ರ ಸರ್ಕಾರ ಈ ಯೋಜನೆಗೆ ಮಂಜೂರಾತಿ ನೀಡಿದೆ ಎಂದು ಕೈಗಾರಿಕಾ ಸಚಿವ ಎಸ್.ಎಂ. ಕೃಷ್ಣ ಅವರು ಇಂದು ಇಲ್ಲಿ ಪ್ರಕಟಿಸಿದರು.

ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯ ಆಶ್ರಯದಲ್ಲಿ ಮಂಡ್ಯ ವಿದ್ಯುತ್ ಅಭಿವೃದ್ಧಿ ಠೇವಣಿ ಯೋಜನೆಯನ್ನು ಕೃಷ್ಣ ಅವರು ಉದ್ಘಾಟಿಸಿದರು.

ರಾಜ್ಯದಲ್ಲಿ ಅತ್ಯಂತ ಹಳೆಯದಾದ ವಿದ್ಯುತ್ ಉತ್ಪಾದನಾ ಕೇಂದ್ರವು ಮಂಡ್ಯ ಜಿಲ್ಲೆಯ ಶಿವನಸಮುದ್ರದಲ್ಲಿದೆಯೆಂಬುದನ್ನು ಸಭೆಗೆ ನೆನಪು ಮಾಡಿಕೊಟ್ಟ ಸಚಿವರು, ದೇಶಕ್ಕೆ ಪ್ರಪ್ರಥಮವಾಗಿ ವಿದ್ಯುತ್ ಬೆಳಕನ್ನು ಕರುಣಿಸಿದ ಕೀರ್ತಿ ಮಂಡ್ಯ ಜಿಲ್ಲೆಯದೆಂದರು.

● **'... ಮೌನ ಬಂಗಾರ'**

ವರ್ಧಾಗಂಜ್, ಡಿ. 24– 'ಅಹಂಭಾವ ತಳೆಯದೆ ಮೌನ ಆಚರಿಸಿದರೆ ಆಡುವ ಮಾತಿಗಿಂತ ಅದು ಹೆಚ್ಚು ಪರಿಣಾಮಕಾರಿಯಾಗಿರುತ್ತದೆ' ಎಂದು ಆಚಾರ್ಯ ವಿನೋಬಾ ಭಾವೆ ಸೋಮವಾರ ತಿಳಿಸಿದರು. ಅವರು ನಾಳೆಯಿಂದ ಒಂದು ವರ್ಷ ಕಾಲ ಮೌನ ಆಚರಿಸಲಿದ್ದಾರೆ.

ಮಾನವ ಕಲ್ಯಾಣ ಸಾಧನೆ ಹಾದಿಯಲ್ಲಿ ಮೌನವು ಮಹತ್ಪಾತ್ರ ವಹಿಸುತ್ತದೆ ಎಂದು ಪೌನಾರ್ ಆಶ್ರಮದಲ್ಲಿ ಸರ್ವ ಸೇವಾ ಸಂಘದ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಿದ್ದ ಅವರು ಹೇಳಿದರು.

ವಾಜಪೇಯಿ ತಮ್ಮದೇ ಕವಿತೆಯ ಆಶಯವನ್ನು ಪಾಲಿಸಿದ್ದುದು ಗಮನಾರ್ಹ
ನಡೆ– ನುಡಿಯಿಂದ ಜನಮನ ಗೆದ್ದ ನಾಯಕ

ಸೂರ್ಯ–ನಮಸ್ಕಾರ

ಎ. ಸೂರ್ಯ ಪ್ರಕಾಶ್

ಸ್ವಾತಂತ್ರ್ಯಾನಂತರದಲ್ಲಿ ದೇಶದ ಸಾರ್ವಜನಿಕ ಜೀವನವು ಕಂಡಿರುವ ಮಹಾನ್ ವ್ಯಕ್ತಿಗಳಲ್ಲಿ ಒಬ್ಬರಾದ ಅಟಲ್ ಬಿಹಾರಿ ವಾಜಪೇಯಿ ಅವರ ಜನ್ಮಶತಮಾನೋತ್ಸವವು ಇಂದು (ಡಿ. 25) ನಡೆಯಲಿದೆ. ಅತ್ಯಂತ ಬಹುಮುಖಿ ವ್ಯಕ್ತಿತ್ವವನ್ನು ಹೊಂದಿದ್ದ, ದೇಶದ ಅತ್ಯುತ್ತಮ ಸಂಸದೀಯ ಪಟುಗಳಲ್ಲಿ ಒಬ್ಬರಾಗಿದ್ದ, ಮಹಾನ್ ಪ್ರಜಾತಂತ್ರವಾದಿಯಾಗಿದ್ದ, ಭಾರತದ ಭದ್ರತೆ, ಆರ್ಥಿಕ ಸಮೃದ್ಧಿ ಮತ್ತು ಸರ್ವಾಂಗೀಣ ವಿಕಾಸವನ್ನು ಖಾತರಿಪಡಿಸುವ ಬದ್ಧತೆಯನ್ನು ಹೊಂದಿದ್ದ ವಾಜಪೇಯಿ ಅವರ ಜೀವನವನ್ನು ಅವಲೋಕಿಸಲು ಇದು ಸುಸಂದರ್ಭ.

1998ರಲ್ಲಿ ಕೇಂದ್ರ ಸರ್ಕಾರದ ನೇತೃತ್ವ ಹೊತ್ತಿದ್ದ ವಾಜಪೇಯಿ ಅವರು ಭಾರತವನ್ನು ಅಣ್ವಸ್ತ್ರ ಶಕ್ತ ರಾಷ್ಟ್ರವನ್ನಾಗಿಸುವ ಪ್ರಮುಖ ತೀರ್ಮಾನವೊಂದನ್ನು ತೆಗೆದುಕೊಂಡಾಗ, ಅವರ ಧೈರ್ಯ, ದೂರದೃಷ್ಟಿ ಮತ್ತು ಬದ್ಧತೆ ಎಂಥದ್ದು ಎಂಬುದರ ನೋಟ ಲಭಿಸಿತ್ತು. ರಾಷ್ಟ್ರದ ಭದ್ರತೆಗೆ ಆದ್ಯತೆ, ಅರ್ಥವ್ಯವಸ್ಥೆಯನ್ನು ಮುಕ್ತಗೊಳಿಸುವುದು, ಸಾಮಾಜಿಕ ಅಭಿವೃದ್ಧಿ ಕಾರ್ಯಕ್ರಮಗಳು ಸೇರಿದಂತೆ ಹಲವು ವಲಯಗಳಲ್ಲಿ ವಾಜಪೇಯಿ ಅವರು ಪ್ರಧಾನಿಯಾಗಿ ಆರು ವರ್ಷಗಳ ಅಧಿಕಾರ ಅವಧಿಯಲ್ಲಿ ಕೈಗೊಂಡ ತೀರ್ಮಾನಗಳು ಸ್ಪಷ್ಟ ಆಲೋಚನೆಗಳು ಮತ್ತು ಬಲಿಷ್ಠ ನೀತಿಗಳ ಕಾರಣದಿಂದಾಗಿ ನೆನಪಿನಲ್ಲಿ ಉಳಿಯುತ್ತವೆ.

ಅಣ್ವಸ್ತ್ರ ಹೊಂದುವುದರ ಪರಿಣಾಮವಾಗಿ ದೇಶವು ಅಮೆರಿಕ ಹೇರುವ ದಿಗ್ಬಂಧನಕ್ಕೆ ಗುರಿಯಾಗಬೇಕಾಗುತ್ತದೆ ಎಂಬುದು ಗೊತ್ತಿದ್ದರೂ, ಸವಾಲನ್ನು ಎದುರಿಸಿ ನಿಂತ ವಾಜಪೇಯಿ, ಭಾರತವು ನಿಜಕ್ಕೂ ಸುರಕ್ಷಿತವಾಗುವಂತೆ ಖಾತರಿಪಡಿಸಿದರು. ಅದೇ ರೀತಿಯಲ್ಲಿ, ಆರ್ಥಿಕ ಹಾಗೂ ವಿದೇಶಾಂಗ ವ್ಯವಹಾರಗಳ ವಿಚಾರದಲ್ಲಿ ಅವರು ಇರಿಸಿದ ಹೆಜ್ಜೆಗಳು, ವಿವಿಧ ದೇಶಗಳ ಒಕ್ಕೂಟದಲ್ಲಿ ಭಾರತಕ್ಕೆ ಮಹತ್ವದ ಸ್ಥಾನ ದೊರೆಯುವಂತೆ ಮಾಡಿದವು. 1998ರ ಮಾರ್ಚ್ 22ರಂದು ರಾಷ್ಟ್ರಪತಿಯವರು ಸರ್ಕಾರ ರಚಿಸುವಂತೆ ಆಹ್ವಾನ ನೀಡಿದ ನಂತರ ವಾಜಪೇಯಿ ಅವರ ಭಾಷಣದ ಸ್ಮರಣೀಯ ಮಾತೊಂದು ದೇಶದ ಬಗ್ಗೆ ಅವರು ಹೊಂದಿದ್ದ ಆಲೋಚನೆಯನ್ನು ಸ್ಪಷ್ಟಪಡಿಸುತ್ತದೆ:

'ರಾಮಕೃಷ್ಣ ಪರಮಹಂಸರು ಒಬ್ಬರಿಗೆ ಹೇಳಿದ್ದರು. ಜೀವನ ದೋಣಿಯಿದ್ದಂತೆ. ಅದು ಸಹಜವಾಗಿಯೇ ನೀರಿನ ಮೇಲಿರಬೇಕು. ಆದರೆ ದೋಣಿಗೆ ನೀರು ನುಗ್ಗಿ, ಅದು ಮುಳುಗುವಂತೆ ಮಾಡಲು ಬಿಡಲಾಗದು. ಸ್ವದೇಶಿ ವಿಚಾರವಾಗಿ ನಾನು ಮತ್ತು ನನ್ನ ಸಹವರ್ತಿಗಳು ಹೇಳುವುದು ಇದನ್ನೇ. ದೇಶವು ಸಹಜವಾಗಿಯೇ ಜಗತ್ತಿನಲ್ಲಿ ಒಂದಾಗಿ ಇರಬೇಕು. ಆದರೆ ಈಗ ಜಾಗತಿಕ ಮಾರುಕಟ್ಟೆಗಳನ್ನು ಅಪ್ಪಳಿಸುತ್ತಿರುವ ಪ್ರವಾಹ ನಮ್ಮನ್ನು ಮುಳುಗಿಸಲು ಬಿಡಲಾಗದು. ಬದಲಾಗಿ, ಅದೇ ಪ್ರವಾಹವು ನಮಗೆ ಅನುಕೂಲಕರವಾಗುವಂತೆ ಮಾಡಬೇಕು. ಹೀಗಾಗಿ, ನಮ್ಮ ಅರ್ಥವ್ಯವಸ್ಥೆಯ ದೋಣಿಯನ್ನು ನಾವು ಇನ್ನಷ್ಟು ಬಲಿಷ್ಠವಾಗಿಸೋಣ. ಭಾರತೀಯರ ಉತ್ಪಾದಕ ಶಕ್ತಿಯನ್ನು ಬಳಸಿ ನಾವು ಈ ಕೆಲಸವನ್ನು ಸಾಧ್ಯವಾದಷ್ಟೂ ಕಡಿಮೆ ಅವಧಿಯಲ್ಲಿ ಮಾಡೋಣ'.

ದೇಶದ ಆರ್ಥಿಕ ಶಕ್ತಿಯನ್ನು ಹೆಚ್ಚಿಸಲು ಇದೊಂದು ಅದ್ಭುತ ಆಲೋಚನೆಯಾಗಿತ್ತು. ಕೇಂದ್ರದ ಈಗಿನ ಸರ್ಕಾರವು 'ಭಾರತದಲ್ಲೇ ತಯಾರಿಸಿ' ಮತ್ತು 'ಸ್ಟ್ಯಾಂಡ್ ಅಪ್ ಇಂಡಿಯಾ' ಯೋಜನೆಗಳ ಮೂಲಕ ಭಾರಿ ಯಶಸ್ಸು ಕಂಡಿರುವುದು ರಾಮಕೃಷ್ಣರ ಬೋಧನೆಯ ಸಾರವನ್ನು, ವಾಜಪೇಯಿ ಅವರ ಕಿವಿಮಾತನ್ನು ಗ್ರಹಿಸುವಲ್ಲಿ ಈಗಿನ ನಾಯಕತ್ವದ ಸಾಮರ್ಥ್ಯವನ್ನು ಮಾತ್ರವೇ ತೋರಿಸುತ್ತಿಲ್ಲ. ಬದಲಿಗೆ, ವಾಜಪೇಯಿ ಅವರ ಕನಸನ್ನು ಸಾಕಾರಗೊಳಿಸುವ ಈಗಿನ ನಾಯಕತ್ವದ ಶಕ್ತಿಯನ್ನೂ ತೋರಿಸುತ್ತಿದೆ. ವಾಜಪೇಯಿ ಅವರು ಸಲಹೆ ನೀಡಿದ 25 ವರ್ಷಗಳಲ್ಲಿ ಭಾರತವು ಜಗತ್ತಿನ ಐದನೆಯ ಅತಿದೊಡ್ಡ ಅರ್ಥವ್ಯವಸ್ಥೆ ಆಗಿರುವುದಷ್ಟೇ ಅಲ್ಲದೆ, ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಅರ್ಥವ್ಯವಸ್ಥೆಯೂ ಆಗಿದೆ.

ವಾಜಪೇಯಿ ಅವರ ಈ ನಿಲುವು ದೇಶದ ಅರ್ಥವ್ಯವಸ್ಥೆಯ ಎಲ್ಲ ಅಂಗಗಳನ್ನು ಉತ್ತೇಜಿಸುವ ಕೆಲಸ ಮಾಡಿತು. ಆಗ ನಿದ್ರಾವಸ್ಥೆಯಲ್ಲಿದ್ದಂತೆ ಕಾಣುತ್ತಿದ್ದ ದೈತ್ಯಶಕ್ತಿ ಎಚ್ಚೆತ್ತುಕೊಳ್ಳಲು ಆರಂಭವಾಯಿತು. ಅಭಿವೃದ್ಧಿ ಹಾಗೂ ಆರ್ಥಿಕ ಬೆಳವಣಿಗೆಯ ವಿಚಾರದಲ್ಲಿ ವಾಜಪೇಯಿ ಅವರಿಗೆ ಸಮಗ್ರವಾದ ದೃಷ್ಟಿಕೋನ ಇತ್ತು. ದೇಶದ ಉತ್ತರ ಮತ್ತು ದಕ್ಷಿಣವನ್ನು ಹಾಗೂ ಪೂರ್ವ ಮತ್ತು ಪಶ್ಚಿಮವನ್ನು ಬೆಸೆಯಲು ಸುವರ್ಣ ಚತುಷ್ಪಥ ಯೋಜನೆಯ ಅಡಿ ಎಕ್ಸ್‌ಪ್ರೆಸ್ ಹೆದ್ದಾರಿಗಳ ನಿರ್ಮಾಣಕ್ಕೆ ಅವರು ನೀಡಿದ ಒತ್ತು ನಿಜಕ್ಕೂ ಅದ್ಭುತ.

ವಿಮಾನಯಾನ ಮತ್ತು ಅಂತರರಾಷ್ಟ್ರೀಯ ದರ್ಜೆಯ ವಿಮಾನ ನಿಲ್ದಾಣಗಳ ನಿರ್ಮಾಣಕ್ಕೆ ಕೂಡ ಅವರು ಗಮನಹರಿಸಿದರು. 1999ರ ಜನವರಿ 1ರಂದು ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಉದ್ಘಾಟಿಸುವಾಗ ಅವರು, ಮುಂಬೈ, ದೆಹಲಿ ಮತ್ತು ಬೆಂಗಳೂರಿನ ವಿಮಾನ ನಿಲ್ದಾಣಗಳಿಗೆ ಕಾರ್ಪೊರೇಟ್ ರೂಪ ನೀಡುವ ಬದ್ಧತೆ ಸರ್ಕಾರಕ್ಕಿದೆ ಎಂದು ಘೋಷಿಸಿದರು. 'ಅಂತರರಾಷ್ಟ್ರೀಯ ದರ್ಜೆಯ ವಿಮಾನ ನಿಲ್ದಾಣಗಳ ನಿರ್ಮಾಣದತ್ತ ಇದು ಮೊದಲ ಹೆಜ್ಜೆ' ಎಂದು ಅವರು ಹೇಳಿದರು. ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಎರಡನೆಯ ಟರ್ಮಿನಲ್ ವಿಶ್ವದ ಅತ್ಯುತ್ತಮ ಟರ್ಮಿನಲ್‌ಗಳಲ್ಲಿ ಒಂದು ಎಂದು ಜಗತ್ತಿನ ಎಲ್ಲೆಡೆ ಜನ ಪ್ರಶಂಸೆಯ ಮಾತು ಆಡುವಾಗ, ನಾವು ದೂರದರ್ಶಿತ್ವ ಹೊಂದಿದ್ದ ವಾಜಪೇಯಿ ಅವರನ್ನು ನೆನಪಿಸಿಕೊಳ್ಳಬೇಕು.



ನವ ಭಾರತವನ್ನು ಕಟ್ಟುವಲ್ಲಿ ಅವರ ಬದ್ಧತೆ ಹೇಗಿತ್ತೆಂದರೆ, 1999ರ ಜನವರಿ 2ರಂದು ಅವರು ರಾಷ್ಟ್ರೀಯ ಏಕೀಕೃತ ಹೆದ್ದಾರಿ ಯೋಜನೆಗೆ ಚಾಲನೆ ನೀಡಿದರು. ಅದನ್ನು ಅವರು 'ಸ್ವತಂತ್ರ ಭಾರತದಲ್ಲಿ ಕೈಗೆತ್ತಿಕೊಂಡ ಅತ್ಯಂತ ಉದ್ದದ, ಅತಿದೊಡ್ಡದಾದ ಮತ್ತು ಅತ್ಯಂತ ಮಹತ್ವಾಕಾಂಕ್ಷೆಯ ಮೂಲಸೌಕರ್ಯ ಯೋಜನೆ' ಎಂದು ಬಣ್ಣಿಸಿದ್ದರು. 'ಇದು ನಮ್ಮ ತಲೆಮಾರು ದೇಶದ ಮುಂದಿನ ತಲೆಮಾರಿಗೆ ನೀಡುವ ಅತ್ಯಂತ ಮೌಲ್ಯಯುತವಾದ ಉಡುಗೊರೆ' ಎಂದು ಬಣ್ಣಿಸಿದ್ದರು. ಯೋಜನೆಯು ಗುಜರಾತನ್ನು ಅಸ್ಸಾಂ ಜೊತೆ, ಕನ್ಯಾಕುಮಾರಿಯನ್ನು ಕಾಶ್ಮೀರದ ಜೊತೆ ಬೆಸೆಯಲಿದೆ ಎಂದಿದ್ದರು. ಇಂದಿನ ಕೇಂದ್ರ ಸರ್ಕಾರವು ವಾಜಪೇಯಿ ಅವರ ಕನಸುಗಳನ್ನು ಈಡೇರಿಸುವ ಕೆಲಸ ಮಾಡುತ್ತಿದೆ.

ವಾಜಪೇಯಿ ಅವರ ಸಂಸದೀಯ ಕೌಶಲವು ಬಹುಶ್ರುತವಾಗಿದೆ. ಈ ದೇಶ ಕಂಡ ಮಹಾನ್ ಸಂಸದೀಯ ಪಟುಗಳಲ್ಲಿ ಅವರೂ ಒಬ್ಬರು. ತಮ್ಮ ರಾಜಕೀಯ ಜೀವನದ ಉದ್ದಕ್ಕೂ ಅವರು ತೀಕ್ಷ್ಣವಾಗಿ ಮಾತನಾಡುತ್ತಿದ್ದರು, ಟೀಕೆಗಳನ್ನು ಮಾಡುತ್ತಿದ್ದರು, ಹಾಸ್ಯ ಮಾಡುತ್ತಿದ್ದರು. ಆದರೆ ಎಂದಿಗೂ ನಿಂದಿಸುತ್ತಿರಲಿಲ್ಲ. ಅವರ ನಡೆಯಿಂದ ಕಲಿಯುವುದು ಸಂಸದರಿಗೆ ಬಹಳಷ್ಟಿದೆ.

ಕೊನೆಯಲ್ಲಿ ವಾಜಪೇಯಿ ಅವರ ಕಾವ್ಯದ ಬಗ್ಗೆ ಕೆಲವು ಮಾತುಗಳು. ವಾಜಪೇಯಿ ಅವರಿಗೆ ಜನರೊಂದಿಗೆ ಬಹಳ ಆಳವಾದ ಸಂಪರ್ಕ ಹೊಂದಲು ಸಾಧ್ಯವಾಗಿದ್ದಕ್ಕೆ ತಮ್ಮಲ್ಲಿದ್ದ ಮಾತುಗಾರಿಕೆಯೊಂದೇ ಕಾರಣವಾಗಿರಲಿಲ್ಲ. ಕಾವ್ಯವು ವಾಜಪೇಯಿ ವ್ಯಕ್ತಿತ್ವದ ಒಂದು ವಿಸ್ತರಿತ ಭಾಗವಾಗಿತ್ತು. ಬಹಳ ನೆನಪಿನಲ್ಲಿ ಉಳಿಯುವ ಅವರ ಒಂದು ಕವಿತೆ 'ಊಂಚಾಯಿ'. ಇದನ್ನು ಅವರು ಬರೆದಿದ್ದುದು ತಮಗೆ ಪದ್ಮವಿಭೂಷಣ ಪುರಸ್ಕಾರ ಬಂದಿದ್ದಕ್ಕೆ ದೆಹಲಿಯಲ್ಲಿ ನಡೆದ ಸನ್ಮಾನ ಕಾರ್ಯಕ್ರಮವೊಂದರಲ್ಲಿ ಭಾಗಿಯಾದ ನಂತರ.

ಬಹಳ ಎತ್ತರವಾದ ಪರ್ವತದ ಮೇಲೆ ಮರಗಳು ಬೇರುಬಿಡುವುದಿಲ್ಲ, ಸಸಿಗಳು ಬೆಳೆಯುವುದಿಲ್ಲ, ಹುಲ್ಲು ಉಳಿಯುವುದಿಲ್ಲ ಎಂಬ ಅರ್ಥವನ್ನು ಆ ಕವಿತೆಯ ಆರಂಭಿಕ ಸಾಲುಗಳು ಧ್ವನಿಸುತ್ತವೆ. ಕವಿತೆಯ ಕೊನೆಯಲ್ಲಿ ವಾಜಪೇಯಿ ಅವರು, 'ನನ್ನವರಲ್ಲದವರನ್ನು ಅಪ್ಪಿಕೊಳ್ಳಲು ಆಗದಷ್ಟು ಎತ್ತರಕ್ಕೆ ನನ್ನನ್ನು ಏರಿಸಬೇಡ ದೇವರೇ' ಎಂದು ಬರೆದಿದ್ದಾರೆ.

ದೇಶದ ಪ್ರಧಾನಿ ಆಗಿದ್ದಾಗ ವಾಜಪೇಯಿ ಅವರು ತಮ್ಮದೇ ಕವಿತೆಯ ಆಶಯವನ್ನು ಪಾಲಿಸಿದ್ದರು ಎಂಬುದನ್ನು ಇಲ್ಲಿ ಉಲ್ಲೇಖಿಸಬೇಕು. ಅವರು ತಮ್ಮ ಬೇರುಗಳನ್ನು, ಹಳೆಯ ಸ್ನೇಹಿತರನ್ನು, ಕಷ್ಟದ ಆರಂಭಿಕ ದಿನಗಳನ್ನು ಎಂದಿಗೂ ಮರೆಯಲಿಲ್ಲ. ಅವರು ಎತ್ತರಕ್ಕೆ ಏರಿದರೂ, ಅವರ ಬೇರುಗಳು ನೆಲದಲ್ಲಿ ಭದ್ರವಾಗಿ ಊರಿದ್ದವು. ಈ ಕಾರಣಕ್ಕಾಗಿ ಪ್ರಜಾತಂತ್ರ ಭಾರತವು ಅವರನ್ನು ಯಾವತ್ತಿಗೂ ನೆನಪಿನಲ್ಲಿ ಇಟ್ಟುಕೊಳ್ಳಬೇಕು.

ಚುರುಮುರಿ

ಗೃಹಲಕ್ಷ್ಮಿ ಕಟಾಕ್ಷ

● ಮಣ್ಣೆ ರಾಜು

'ನಮ್ಮ ಜನನಾಯಕರ ಜಗಳದ ಹೊಸ ನ್ಯೂಸ್ ಏನಿದೆರೀ?...' ಕಾಫಿ ಕೊಟ್ಟು ಸುಮಿ ಕೇಳಿದಳು.

'ಏನಿಲ್ಲ, ಹಳೆ ನ್ಯೂಸ್ ಹೊಸ ಡೋಸ್ ಅಷ್ಟೇ' ನ್ಯೂಸ್‌ಪೇಪರ್ ಮಡಿಸಿಟ್ಟು ಶಂಕ್ರಿ ಕಾಫಿ ಹೀರಿದ.

'ಪರಿಷತ್, ಪಾರ್ಲಿಮೆಂಟ್ ಆವರಣದಲ್ಲಿ ಜನನಾಯಕರ ನೂಕಾಟ, ಕಾದಾಟದ ಫಲಿತಾಂಶ ಏನಾಯ್ತು? ಯಾರು ಗೆದ್ದರು, ಯಾರು ಸೋತರು?'

'ಅದು ಗೆಲ್ಲೋ ಪಂದ್ಯವಲ್ಲ, ಸೋಲಿಸೋ ಪಂದ್ಯ. ಕಲಾಪ ಕಾದಾಟದಲ್ಲಿ ಗಾಯಗೊಂಡವರು, ಗಾಸಿಗೊಂಡವರ ಹಗ್ಗ ಜಗ್ಗಾಟದಲ್ಲಿ ಹಗ್ಗವೂ ಹರಿಯುತ್ತಿಲ್ಲ, ಜಗಳವೂ ಬಗೆಹರಿಯುತ್ತಿಲ್ಲ. ಹೀಗಾಗಿ, ಆಳುವ, ಕೇಳುವ ಪಕ್ಷಗಳು ಫಜೀತಿಗೆ ಸಿಲುಕಿವೆ'.

'ಲಕ್ಷ್ಮಿಕಟಾಕ್ಷದಿಂದ ಸರ್ಕಾರ ಸುಭದ್ರವಾಗಿ ಇದೆಯಂತೆ ಕಣ್ರೀ...'

'ಯಾವ ಲಕ್ಷ್ಮಿ ಕಟಾಕ್ಷ? ಮೂರು ಕಾಸಿನ ಅಭಿವೃದ್ಧಿ ಕೆಲಸಗಳಾಗಿಲ್ಲ ಅಂತ ವಿಪಕ್ಷದವರು ಬೊಂಬಡಿ ಬಾರಿಸ್ತಿದ್ದಾರಲ್ಲಾ'.

'ಅವರು ಏನಾದರೂ ಬಾರಿಸಿಕೊಳ್ಳಲಿ, ಸರ್ಕಾರದ ಕಡೆಗೆ ಲಕ್ಷ್ಮಿ ಒಲಿದೊಲಿದು ಬರುತ್ತಿದ್ದಾಳೆ. ಮೊನ್ನೆ ಗೃಹಲಕ್ಷ್ಮಿಯರ ದಂಡು ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ, ನಿಮ್ಮ ಜೊತೆ ನಾವಿದ್ದೇವೆ ಎಂದು ಹೇಳಿತಂತೆ. ಗೃಹಲಕ್ಷ್ಮಿಯರು ತರಕಾರಿ ಅಂಗಡಿ, ಸೀರೆ, ಬಳೆ ಅಂಗಡಿ ತೆರೆದು ವ್ಯವಹಾರ ಮಾಡುತ್ತಾ ಆರ್ಥಿಕವಾಗಿ ಸದೃಢರಾಗುತ್ತಿದ್ದಾರಂತೆ'.

'ಮಹಿಳಾ ಆರಾಧನೆಯಲ್ಲಿ ಮುಳುಗಿರುವ ಸರ್ಕಾರಕ್ಕೆ ಪುರುಷರ ರೋದನೆ ಕಾಣುತ್ತಿಲ್ಲ. ಹೆಣ್ಣಿಗೆ ಬೆಣ್ಣೆ, ಗಂಡಿಗೆ ಸುಣ್ಣ... ವಿರೋಧ ಪಕ್ಷದವರಾದರೂ ಪುರುಷರ ಪರ ನಿಲ್ಲಬೇಕು'.

'ಸದ್ಯಕ್ಕೆ ಕಷ್ಟವಂತೆ, ಸರ್ಕಾರಿಲಕ್ಷ್ಮಿಯನ್ನು ನಿಂದಿಸಿದ ವಿಪಕ್ಷದವರ ಕೋಪವು ಶಾಪವಾಗಿ ಕಾಡುತ್ತಿದೆಯಂತೆ. ಅವರು ಕೋಪವಿಮೋಚನೆ ಮಾಡಿಕೊಳ್ಳಬೇಕಾಗಿದೆ'.

'ಕೋಪವಿಮೋಚನೆಗೆ ಹೋಮಗೀಮ ಮಾಡಬೇಕಾಗುತ್ತಾ?!'

'ಬೇಕಾಗಿಲ್ಲ, ವಿರೋಧ ಪಕ್ಷದವರು ಮುಲಾಜಿಲ್ಲದೆ 'ಪುರುಷ ಭಾಗ್ಯ'ಗಳನ್ನು ಘೋಷಿಸಿಬಿಟ್ಟರೆ ಸರ್ಕಾರಿಲಕ್ಷ್ಮಿ ಶಾಂತವಾಗಿ, ಕೋಪ ವಿಮೋಚನೆ ಆಗಬಹುದು!' ನಕ್ಕಳು ಸುಮಿ.

ಸಂಗತ

ಎತ್ತ ಸಾಗುತ್ತಿದೆ ನಾಗರಿಕ ಪ್ರಜ್ಞೆ?

ಭಾಷೆಯು ಸಮಕಾಲೀನ ರಾಜಕಾರಣದಲ್ಲಿ ವ್ಯಾಪಕವಾಗಿ ದುರ್ಬಳಕೆಯಾಗುತ್ತಿದೆ

● ಮೀನಾಕ್ಷಿ ಬಾಳಿ

**ಆಸೆ, ಆಮಿಷ, ತಾಮಸ, ಹುಸಿ, ವಿಷಯ,
ಕುಟಿಲ, ಕುಹಕ, ಕ್ರೋಧ, ಕ್ಷುದ್ರ, ಮಿಥ್ಯೆ
ಇವನೆನ್ನ ನಾಲಿಗೆಯ ಮೇಲಿಂದತ್ತ ತೆಗೆದು
ಕಳೆಯಯ್ಯಾ... ಕೂಡಲಸಂಗಮದೇವಾ**

ಕರ್ನಾಟಕದ ಸಾಂಸ್ಕೃತಿಕ ನಾಯಕ ಬಸವಣ್ಣನವರು ನುಡಿ ಮಹೋನ್ನತಿಯ ಕುರಿತು ಹೇಳಿದ ಮಾತಿದು. ಮಾತು ವ್ಯಕ್ತಿತ್ವದ ಪ್ರತಿಬಿಂಬ. ವ್ಯಕ್ತಿ ಬೆಳೆದುಬಂದ ಸಮಾಜೋ-ಆರ್ಥಿಕ ಪರಿಸರ, ನಂಬಿಕೊಂಡು ಬಂದಿರುವ ಸಿದ್ಧಾಂತ ಮತ್ತು ಅವರಿಗೆ ದಕ್ಕಿದ ಸಂಸ್ಕಾರದಿಂದ ಮಾತುಗಳು ಒಡಮೂಡುತ್ತವೆ. ಆದ್ದರಿಂದಲೇ ಅವು ಮನಸ್ಸಿನ ಕನ್ನಡಿಗಳು.

ಬಸವಣ್ಣನವರು ಕೂಡಲಸಂಗಯ್ಯನಲ್ಲಿ 'ಆಸೆ ಆಮಿಷಾದಿ ನೀಚ ಗುಣಗಳೇ ನಮ್ಮ ನಾಲಿಗೆಯನ್ನು ನಿರ್ವಹಿಸುತ್ತವೆ. ಆದ್ದರಿಂದ ಆ ಎಲ್ಲ ದುಷ್ಟ ಗುಣಗಳನ್ನು ನನ್ನ ಮನಸ್ಸಿನಿಂದ ತೆಗೆದುಹಾಕಬೇಕು' ಎಂದು ಸಂಗಯ್ಯನಲ್ಲಿ ಅರ್ಥಾತ್ ತಮ್ಮ ಅಂತಃಸಾಕ್ಷಿಗೆ ಮೊರೆ ಹೋಗುತ್ತಾರೆ. ಮನಸ್ಸಿನಲ್ಲಿರುವ ಕುಟಿಲ, ಕುಹಕ ಭಾವನೆಗಳು ಲಯವಾದರೆ ಆಡುವ ಮಾತು ತನ್ನಷ್ಟಕ್ಕೆ ಮೌಲಿಕವಾಗುತ್ತದೆ. ಇಲ್ಲವಾದರೆ ಯಥಾ ಭಾವ ತಥಾ ಭಾಷೆ. ಇದನ್ನು ನಮ್ಮ ರಾಜಕೀಯ ನಾಯಕರು ಸದನಗಳಲ್ಲಿ ತೋರ್ಪಡಿಸುತ್ತಿದ್ದಾರೆ.

ಕರ್ನಾಟಕದ ಮೇಲ್ಮನೆ ಸದಸ್ಯರೊಬ್ಬರು ಸಚಿವೆಯೊಬ್ಬರನ್ನು ಉದ್ದೇಶಿಸಿ ಆಡಿದರು ಎನ್ನಲಾದ ಮಾತುಗಳು ಈಗ ವಿವಾದಕ್ಕೆ ಕಾರಣವಾಗಿವೆ. ಸಾರ್ವಜನಿಕ ಸ್ಥಳದಲ್ಲಿ ಜನಸಾಮಾನ್ಯರು ಸಹ ಆಡಲು ಹಿಂದೆ ಮುಂದೆ ನೋಡುವಂತಹ ಪದಗಳನ್ನು ಶಾಸಕರೊಬ್ಬರು ತಮ್ಮ ಸಹೋದ್ಯೋಗಿಗೆ ಸ್ವಲ್ಪವೂ ಅಳುಕಿಲ್ಲದೆ ಬಳಸುತ್ತಾರೆ, ಅದೂ ಚಿಂತಕರ ಚಾವಡಿ ಎಂದು ಖ್ಯಾತಿವೆತ್ತ ಮೇಲ್ಮನೆಯಲ್ಲಿ ಎನ್ನುವುದು ನಿಜವೇ ಆಗಿದ್ದರೆ, ಸಮಕಾಲೀನ ರಾಜಕಾರಣ ಅದೆಷ್ಟು ಪ್ರಪಾತಕ್ಕೆ ಕುಸಿದಿದೆ ಎಂಬುದನ್ನು ಗಮನಿಸಬೇಕು.

ಮಹಿಳೆಯರು ರಾಜಕೀಯದಲ್ಲಿ ಸ್ವಲ್ಪವೇ ಮೇಲೇರುತ್ತಿದ್ದಾರೆ ಎನಿಸಿದರೆ ಸಾಕು, ಪುರುಷ ಸಂಗಾತಿಗಳು ಮೊದಲು ಆಕೆಯ ಚಾರಿತ್ರ್ಯಹರಣ ಮಾಡಲು ಮುಂದಾಗುತ್ತಾರೆ. ಲಿಂಗಸಂವೇದನೆಯುಳ್ಳ ಕೆಲವು ಪಕ್ಷಗಳ ಸದಸ್ಯರನ್ನು ಹೊರತುಪಡಿಸಿದರೆ ಬಹುತೇಕ ಪಕ್ಷಗಳ ಅನೇಕರು ಮಹಿಳೆಯರ ಕುರಿತು ಅವಾಚ್ಯವಾಗಿ ಮಾತನಾಡುತ್ತಾರೆ.

ನಾವು ಕೆಲವು ಗೆಳತಿಯರು ಒಮ್ಮೆ ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದೆವು. ನಮ್ಮ ಮುಂದೆ ಕುಳಿತಿದ್ದ ಪಡ್ಡೆ ಹುಡುಗರಿಬ್ಬರು ಪರಸ್ಪರ ಬೈದಾಡುತ್ತ, ತಾಯಿ, ಅಕ್ಕ, ತಂಗಿ ಪದಗಳನ್ನು ಬಳಸಿ ತೀರಾ ಅಸಭ್ಯವಾಗಿ ಮಾತನಾಡುತ್ತಿದ್ದರು. ತಕ್ಷಣ ಜಾಗೃತರಾದ ನಾವು ಅವರನ್ನು ಹಿಡಿದು ತರಾಟೆಗೆ ತೆಗೆದುಕೊಂಡೆವು. ಉದ್ಧಟನೊಬ್ಬ ತಿರುಗಿಬಿದ್ದು 'ನಮ್ಮವ್ವ, ನಮ್ಮ ಅಕ್ಕತಂಗಿಯರಿಗಿ ನಾವು ಬೈತೀವಿ. ನಾವೇನು ನಿಮಗ್ ಬೈದೀವೇನ್ರಿ' ಎಂದು ಎದೆಸೆಟೆಸಿ ನಿಂತ. ಇದರಿಂದ ಕನಲಿದ ನಾವು 'ಏ ಮೂರ್ಖ, ಯಾವುದೇ ಮಹಿಳೆಯರಿಗೆ ಖಾಸಗಿಯಾಗಿ ಅಥವಾ ಸಾರ್ವಜನಿಕವಾಗಿ ಹೀಗೆ ಬೈಯುವಂತಿಲ್ಲ. ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆ ಅಡಿ ಒದ್ದು ಒಳಹಾಕಬೇಕಾಗುತ್ತದೆ ನೋಡು' ಎಂದು ದಬಾಯಿಸಿದೊಡನೆ ಆತ ತಾನು ಬಳಸಿದ ಅಸಭ್ಯ ಪದಗಳಿಗೆ ನಾಚಿಕೆಪಟ್ಟು ಕ್ಷಮೆ ಕೇಳಿದ. ಜೊತೆಗೆ, ಇನ್ನೆಂದೂ ಹೀಗೆ ಮಹಿಳೆಯರನ್ನು ಅವಾಚ್ಯವಾಗಿ ಬೈಯುವುದಿಲ್ಲ ಎಂದು ಭರವಸೆ ನೀಡಿದ. ಬಸ್ಸಿನಲ್ಲಿದ್ದ ಎಲ್ಲ ಪ್ರಯಾಣಿಕರು ಆ ಹುಡುಗರಿಗೆ ಛೀಮಾರಿ ಹಾಕಿದರು. ಅಲ್ಲಿದ್ದ ಎಲ್ಲರಲ್ಲಿಯೂ ನಾಗರಿಕ ಪ್ರಜ್ಞೆಯೊಂದು ಜಾಗೃತವಾಗಿತ್ತು. ಹೀಗೆ ಎಲ್ಲರೂ ನಮ್ಮೊಂದಿಗೆ ಧ್ವನಿಗೂಡಿಸಿದ್ದರಿಂದಲೇ ಆ ಹುಡುಗರಿಗೆ ತಾವು ತಪ್ಪು ಮಾಡಿದ್ದೇವೆ ಎನಿಸಿತ್ತು.

ಸಾಮಾಜಿಕ ಜಾಲತಾಣದಲ್ಲಿ ಕೆಲವು ಪಡ್ಡೆ ಹುಡುಗರು ಮಹಿಳೆಯರ ಕುರಿತು ಬಳಸುತ್ತಿರುವ ಭಾಷೆ ಅದೆಷ್ಟು ಅಸಭ್ಯ ಮತ್ತು ಅಪಾಯಕಾರಿಯಾಗಿದೆ ಎಂದರೆ, ಇದೀಗ ಯಾರ ಮನೆಯ ಮಹಿಳೆಯರೂ ಸುರಕ್ಷಿತವಾಗಿಲ್ಲ ಎಂದೇ ಹೇಳಬೇಕಾಗುತ್ತದೆ. ಕೋಮುದ್ವೇಷದ ದಳ್ಳುರಿಯು ದೇಶದ ಆತ್ಮಪ್ರಜ್ಞೆಯನ್ನು ಸರ್ವನಾಶ ಮಾಡಿದೆ. ಅಸಭ್ಯ, ವಿಕೃತ ಭಾಷೆಯನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಡಲಾಗುತ್ತಿದೆ. ತಮ್ಮನ್ನು ಹಾಗೂ ತಮ್ಮ ನಾಯಕರನ್ನು ಅತ್ಯಂತ ಸಮರ್ಥರು ಎಂದು ಬಿಂಬಿಸಿಕೊಳ್ಳುತ್ತಿರುವ ಈ ಫೇಸ್‌ಬುಕ್ ಶೂರರು, ಮಹಿಳೆಯರ ಬಗೆಗಿನ ತಮ್ಮ ವಿಕೃತ ಲೈಂಗಿಕ ಚಟಗಳನ್ನು ತೀರಿಸಿಕೊಳ್ಳುತ್ತಿದ್ದಾರೆ. ಪದೇಪದೇ ನಡೆಯುತ್ತಿರುವ ಇಂತಹ ಪ್ರಕರಣಗಳು ದೇಶದ ಯುವಕರು ವಿಕೃತಿ ಮೆರೆಯಲು ದಾರಿ ಮಾಡಿಕೊಡುತ್ತಿವೆ.



ಸಾಮಾನ್ಯ ಹುಡುಗರನ್ನು ಕಾನೂನಿನ ಭಯದಿಂದ ನಿಯಂತ್ರಿಸಬಹುದು. ಆದರೆ ಶಾಸನಗಳನ್ನು ರೂಪಿಸಬೇಕಾದ ನಾಯಕರೇ ತೋಪೆದ್ದು ಹೋಗಿರುವಾಗ ಇಂಥ ದುಷ್ಟರನ್ನು ಯಾವ ಕಾನೂನು ಏನು ಮಾಡೀತು? ದೇಶ ಈಗ ಅತ್ಯಂತ ಅಪಾಯಕಾರಿ ಸ್ಥಿತಿಯಲ್ಲಿದೆ. ಜನರ ಸಾಂಸ್ಕೃತಿಕ ಮಟ್ಟ ಪಾತಾಳಕ್ಕೆ ಕುಸಿದಿದೆ. ನಾಗರಿಕ ಪ್ರಜ್ಞೆ ನಿರ್ನಾಮವಾಗಿದೆ. ಜೈಲಿನಲ್ಲಿ ಇರಬೇಕಾದ ಗೂಂಡಾಗಳು, ಅತ್ಯಾಚಾರ ಆರೋಪ ಹೊತ್ತವರು, ರಾಷ್ಟ್ರದ್ರೋಹಿಗಳು ಶಾಸನಸಭೆಗಳಲ್ಲಿ ಕುಳಿತಿದ್ದಾರೆ. ಅವರನ್ನು ನಿಯಂತ್ರಿಸುವುದು ಅಷ್ಟು ಸುಲಭವೇ? ಅನೇಕ ಮೌಲಿಕ ರಾಜಕಾರಣಿಗಳು ಇವರ ನಡುವೆ ಮೂಲೆಗುಂಪಾಗಿದ್ದಾರೆ.

ಭಾಷೆಯು ಸಮಕಾಲೀನ ರಾಜಕಾರಣದಲ್ಲಿ ದುರ್ಬಳಕೆಯಾಗುತ್ತಿರುವಷ್ಟು ಇನ್ನೆಲ್ಲಿಯೂ ಆಗುತ್ತಿಲ್ಲ. ಹೀಗೆ ದುರ್ಬಳಕೆ ಮಾಡಿಕೊಳ್ಳುತ್ತಿರುವವರು ಈಗ ಅಪಾಯದ ಹಂತವನ್ನು ಮೀರಿದ್ದಾರೆ. ದೇಶದ ನುಡಿಗೆ ಸೂತಕ ಸುತ್ತುವರಿದಿದೆ.

ವಾಚಕರ ವಾಣಿ

ಬೆನಗಲ್ ಚಿತ್ರಗಳು ಬೀರಿದ ಪರಿಣಾಮ ದೊಡ್ಡದು

ಭಾರತೀಯ ಚಲನಚಿತ್ರರಂಗದ ಶ್ರೇಷ್ಠ ನಿರ್ದೇಶಕರಲ್ಲಿ ಒಬ್ಬರಾದ ಶ್ಯಾಮ್ ಬೆನಗಲ್ ಅವರು ನಿಧನರಾದ ಈ ಸಂದರ್ಭದಲ್ಲಿ, ಅವರ ನಿರ್ದೇಶನದ ಚಿತ್ರ 'ಮಂಥನ್' ವಿಶೇಷವಾಗಿ ಗಮನ ಸೆಳೆಯುತ್ತದೆ. ಕ್ಷೀರಕ್ರಾಂತಿಯ ಹರಿಕಾರ ದಿವಂಗತ ಕುರಿಯನ್ ಅವರ ಜೀವನದಿಂದ ಪ್ರೇರಿತರಾಗಿ, ಐದು ಲಕ್ಷ ರೈತರಿಂದ ತಲಾ ಎರಡು ರೂಪಾಯಿ ಸಂಗ್ರಹಿಸಿ ನಿರ್ಮಾಣ ಮಾಡಿದ ಈ ಚಿತ್ರವು ಭಾರತದ ಮೊದಲ ಕ್ರೌಡ್ ಫಂಡಿಗ್ ಚಿತ್ರ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕುರಿಯನ್ ಅವರೇ ಹೇಳಿದ ಕಥೆಯನ್ನು ಆಧರಿಸಿ ಸುಮಾರು ಅರ್ಧ ಶತಮಾನದ ಹಿಂದೆ ನಿರ್ಮಿಸಿದ ಈ ಚಿತ್ರ ತಾಂತ್ರಿಕವಾಗಿ ಹಳೆಯದಾಗಿದ್ದರೂ ಈಗಲೂ ನೋಡುಗರ ಮೇಲೆ ಉಂಟುಮಾಡುವ ಪ್ರಭಾವ ಎಳ್ಳಷ್ಟೂ ಕಡಿಮೆಯಾಗಿಲ್ಲ.

ಈ ವರ್ಷದ ಕಾನ್ಸ್ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಶ್ರೇಷ್ಠ ಚಿತ್ರಗಳ ಗುಂಪಿನಲ್ಲಿ ಪ್ರದರ್ಶನಗೊಂಡ ಈ ಚಿತ್ರವನ್ನು ಇತ್ತೀಚೆಗೆ ಭಾರತದ ಆಯ್ದ 50 ನಗರಗಳ 100 ಚಿತ್ರಮಂದಿರಗಳಲ್ಲಿ ಮರು ಬಿಡುಗಡೆ ಮಾಡಲಾಗಿತ್ತು. ಪಶುವೈದ್ಯ ಡಾ. ರಾವ್ ಮತ್ತು ಆತನ ಸಹಚರರು ಗುಜರಾತ್‌ನ ಖೇಡ್ ಜಿಲ್ಲೆಯ, ಪರಿಶಿಷ್ಟರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದ ಕುಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘ ಸ್ಥಾಪಿಸಲು ಪಡುವ ಶ್ರಮ ಪ್ರೇಕ್ಷಕರ ಮೇಲೆ ಗಾಢ ಪರಿಣಾಮ ಉಂಟು ಮಾಡುತ್ತದೆ. ಹಾಲಿನ ಕೊರತೆಯಿಂದ ಬಳಲುತ್ತಿದ್ದ ದೇಶವನ್ನು ಜಗತ್ತಿನ ಅತಿ ಹೆಚ್ಚು ಹಾಲು ಉತ್ಪಾದಿಸುವ ದೇಶವನ್ನಾಗಿ ಮಾರ್ಪಡಿಸಲು ಎಪ್ಪತ್ತರ ದಶಕದಲ್ಲಿ ಕ್ಷೀರಕ್ರಾಂತಿಯ ಮುಂಚೂಣಿಯಲ್ಲಿ ಇದ್ದವರು ಹಳ್ಳಿಗಳಲ್ಲಿನ ಜಾತೀಯತೆ, ರಾಜಕೀಯ, ಮೌಢ್ಯದ ಕಾರಣದಿಂದ ಎದುರಿಸಿದ ಸಂಕಷ್ಟಗಳು, ಅಡೆತಡೆಗಳನ್ನು ಅರಿಯಲು ಪ್ರತಿ ಭಾರತೀಯ ಈ ಚಿತ್ರವನ್ನು ತಪ್ಪದೇ ನೋಡಬೇಕು.

ಟಿ.ಜಯರಾಂ, ಕೋಲಾರ

ಓದುವಿಕೆಗೆ ಅಂಚೆ ಇಲಾಖೆ ಹೊಡೆತ!

ಅಂಚೆ ಇಲಾಖೆಯವರು ಮುದ್ರಿತ ಪುಸ್ತಕಗಳ ರಿಜಿಸ್ಟರ್ಡ್ ಪೋಸ್ಟ್ ದರವನ್ನು ಸುಮಾರು ಎರಡರಷ್ಟು ಪ್ರಮಾಣದಲ್ಲಿ ಏರಿಕೆ ಮಾಡಿದ್ದಾರೆ. ಇದರಿಂದ ಆನ್‌ಲೈನ್ ಮೂಲಕ ಪುಸ್ತಕಗಳು ಹಾಗೂ ಸಾಹಿತ್ಯ ಪತ್ರಿಕೆಗಳನ್ನು ತರಿಸಿಕೊಳ್ಳುವ ಓದುಗರು, ಪುಸ್ತಕ ಪ್ರಕಾಶಕರು ತುಂಬಾ ಸಂಕಷ್ಟಕ್ಕೆ ಈಡಾಗಿದ್ದಾರೆ. ಸಾಮಾನ್ಯ ಅಂಚೆಯಲ್ಲಿ ಪುಸ್ತಕಗಳನ್ನು ಕಳುಹಿಸಿದರೆ ಓದುಗರಿಗೆ ಅವು ತಲುಪದಿರುವ ಸಂದರ್ಭಗಳೇ ಹೆಚ್ಚು. ಕೊರಿಯರ್ ಮೂಲಕ ಕಳುಹಿಸುವುದು ಕೂಡ ಅಧಿಕ ವೆಚ್ಚದಾಯಕವೇ. ಅಂಚೆ ಇಲಾಖೆಯವರ ಈ ನಿರ್ಧಾರದಿಂದ, ಅಳಿವಿನಂಚಿನಲ್ಲಿರುವ ಓದುವ ಹವ್ಯಾಸಕ್ಕೆ ಮತ್ತು ಪುಸ್ತಕ ಪ್ರಕಟಣೆಯ ಕಾಯಕಕ್ಕೆ ಮತ್ತಷ್ಟು ಹೊಡೆತ ಬೀಳುವ ಅಪಾಯ ಇದೆ. ಇದನ್ನು ಮನಗಂಡು, ಅಂಚೆ ಇಲಾಖೆಯು ಏರಿಸಿರುವ ರಿಜಿಸ್ಟರ್ಡ್ ಪೋಸ್ಟ್ ದರವನ್ನು ಇಳಿಸಲು ಮುಂದಾಗಬೇಕಿದೆ.

ಚಾವಲ್ಮನೆ ಸುರೇಶ್ ನಾಯಕ್, ಕೊಪ್ಪ, ಚಿಕ್ಕಮಗಳೂರು

ಕೈಗಾರಿಕೆಗೆ ಬರಡು ಜಮೀನು ಗುರುತಿಸಲಿ

'ಭೂಸ್ವಾಧೀನ ಪ್ರಕ್ರಿಯೆಯನ್ನು ಕೈಬಿಡಲು ಸಾಧ್ಯವಿಲ್ಲ' ಎಂಬ ಮುಖ್ಯಮಂತ್ರಿಯವರ ಹೇಳಿಕೆ (ಪ್ರ.ವಾ., ಡಿ. 24) ರೈತರ ಪಾಲಿಗೆ ದುರ್ದೈವವೆನ್ನಬಹುದು. ದೇವನಹಳ್ಳಿ, ದೊಡ್ಡಬಳ್ಳಾಪುರ ಹಾಗೂ ನೆಲಮಂಗಲ ತಾಲ್ಲೂಕುಗಳ ಜಮೀನುಗಳು ಕೃಷಿಗೆ ಫಲವತ್ತಾಗಿವೆ. ಮಣ್ಣಿನ ಫಲವತ್ತತೆಯ ಸುಧಾರಣೆ ಹಾಗೂ ನೀರಿನ ಸಮರ್ಪಕ ಬಳಕೆಯಿಂದ ರೈತರು ಸುಸ್ಥಿರ ಕೃಷಿ ಮಾಡುತ್ತ ಜೀವನ ಸಾಗಿಸುತ್ತಿದ್ದಾರೆ. ಈ ಪ್ರಾಂತ್ಯದಲ್ಲಿರುವ ಒಣಬೇಸಾಯ ಪದ್ಧತಿಯಿಂದ ಹೆಚ್ಚು ಇಳುವರಿ ಸಾಧ್ಯವಿಲ್ಲ ಎಂದು ಅರಿತ ಬಹಳಷ್ಟು ರೈತರು ಕೊಳವೆಬಾವಿ ಕೊರೆಸಿ ಕೃಷಿ ಹೊಂಡ, ಹನಿ ನೀರಾವರಿ ಪದ್ಧತಿಯಿಂದ ವಿವಿಧ ಬಗೆಯ ತರಕಾರಿ, ಹಣ್ಣುಗಳ ಜೊತೆಗೆ ದೀರ್ಘಾವಧಿ ಬೆಳೆಗಳಾದ ಅಡಿಕೆ, ತೆಂಗು, ಬಾಳೆ, ಮಾವು, ದಾಳಿಂಬೆ ತೋಟಗಳನ್ನು ಮಾಡಿಕೊಂಡು ಕೃಷಿ ಕಾರ್ಯದಲ್ಲಿ ತೊಡಗಿದ್ದಾರೆ.

ಆದಕಾರಣ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕೃಷಿಯನ್ನು ಪ್ರೋತ್ಸಾಹಿಸುವುದೇ ಅಭಿವೃದ್ಧಿಗೆ ಪೂರಕ. ಇದಕ್ಕೆ ಭಿನ್ನವಾಗಿ ಕೈಗಾರಿಕೆ ಸ್ಥಾಪನೆಯಂಥ ಆಲೋಚನೆಯು ಸುಸ್ಥಿರ ಅಭಿವೃದ್ಧಿಗೆ ವಿರುದ್ಧದ ನಡೆಯಾಗುತ್ತದೆ. ಈ ಭಾಗದಲ್ಲಿ ಕೃಷಿ ಜಮೀನುಗಳ ಬದಲಾಗಿ ಸರ್ಕಾರಿ ಜಮೀನುಗಳನ್ನು ಗುರುತಿಸಿ ಕೈಗಾರಿಕೆಗಳಿಗೆ ಒದಗಿಸುವುದು ಉತ್ತಮ ಪರ್ಯಾಯ ವಿಧಾನವಾಗುತ್ತದೆ. ಕೃಷಿಯೋಗ್ಯ ಜಮೀನುಗಳನ್ನು ರಾಜ್ಯದ ಯಾವುದೇ ಭಾಗದಲ್ಲೂ ಸ್ವಾಧೀನಪಡಿಸಿಕೊಳ್ಳಬಾರದು. ಅಭಿವೃದ್ಧಿ ವಿಕೇಂದ್ರೀಕರಣ ಪರಿಕಲ್ಪನೆಯನ್ನು ದೃಷ್ಟಿಯಲ್ಲಿ ಇರಿಸಿಕೊಂಡು ಬರಡು ಭೂಮಿಗಳಲ್ಲಿ ಕೈಗಾರಿಕೆ ಸ್ಥಾಪಿಸಿದರೆ ಸುಸ್ಥಿರ ಅಭಿವೃದ್ಧಿ ಸಾಧ್ಯವಾಗುತ್ತದೆ.

ಡಿ. ರಾಜಗೋಪಾಲ್, ಬೆಂಗಳೂರು

ಉಳಿಸಿಕೊಳ್ಳಲೇಬೇಕು ಸಹ್ಯಾದ್ರಿಯ ಹಸಿರು

ಕೇಂದ್ರ ಅರಣ್ಯ ಮತ್ತು ಪರಿಸರ ಸಚಿವಾಲಯ ಇತ್ತೀಚೆಗೆ ಬಿಡುಗಡೆ ಮಾಡಿರುವ ದೇಶದ 'ಅರಣ್ಯ ಪರಿಸ್ಥಿತಿ ವರದಿ–2023' ದೊಡ್ಡ ಆಘಾತವನ್ನೇ ತಂದಿದೆ. ದಕ್ಷಿಣ ಭಾರತದ ಜಲಸುರಕ್ಷತೆ ಹಾಗೂ ಪರಿಸರ ಸುಸ್ಥಿರತೆಯ ನೆಲಗಟ್ಟಾದ ಪಶ್ಚಿಮಘಟ್ಟ ಪ್ರದೇಶದಲ್ಲಿ ಹಿಂದಿನ ಹತ್ತು ವರ್ಷಗಳಲ್ಲಿ ಮತ್ತಷ್ಟು ಅರಣ್ಯ ನಾಶವಾಗಿದೆ ಮತ್ತು ಈ ಪ್ರಕ್ರಿಯೆ ಗಣನೀಯವಾಗಿ ಸಾಗುತ್ತಲೇ ಇದೆ! ಹಾಗಾದರೆ, ಈವರೆಗಿನ ಸಾರ್ವಜನಿಕ ಚಿಂತನೆ, ಚರ್ಚೆಗಳು, ಸಂಶೋಧನೆಗಳು, ಸರ್ಕಾರಿ ಯೋಜನೆಗಳು, ನ್ಯಾಯಾಲಯಗಳ ನಿರ್ದೇಶನಗಳು, ಜನಾಂದೋಲನಗಳು- ಯಾವುವೂ ತಳಮಟ್ಟದ ಪರಿಸ್ಥಿತಿಯನ್ನು ಹತೋಟಿಗೆ ತರಲಾರದಷ್ಟು ನೈಸರ್ಗಿಕ ಸಂಪನ್ಮೂಲ ನಿರ್ವಹಣೆ ಕುಸಿಯುತ್ತಿದೆಯೇ? ಇದು ತುಂಬ ಕಳವಳಕಾರಿಯಾದ ಸಂಗತಿ.

ಹವಾಮಾನ ಬದಲಾವಣೆ ಹಾಗೂ ಸ್ಥಳೀಯ ಪರಿಸರ ನಾಶ- ಈ ಎರಡೂ ವಿದ್ಯಮಾನಗಳು ಈಗಾಗಲೇ ಬದುಕನ್ನು ಹೈರಾಣಾಗಿಸುತ್ತಿವೆ. ರಾಜ್ಯವು ಇದನ್ನು ಪರಿಣಾಮಕಾರಿಯಾಗಿ ಎದುರಿಸುವ ದಿಸೆಯಲ್ಲಿ, ಸಹ್ಯಾದ್ರಿಯ ಪರಿಸರ ಸುಸ್ಥಿರತೆಯನ್ನು ಕಾಪಾಡಿಕೊಳ್ಳುವುದೂ ಬಹುಮುಖ್ಯ ಅಂಶವಾಗಿದೆ. ಈ ದೃಷ್ಟಿಯಿಂದ ಈ ಕೆಳಗಿನ ಐದು ಅಂಶಗಳು ಅತ್ಯಗತ್ಯವಾಗಿವೆ. ಮಲೆನಾಡಿಗೆ ಸೂಕ್ತವಾದ ಭೂಬಳಕೆ ನೀತಿ, ಜನಸಹಭಾಗಿತ್ವದ ಅರಣ್ಯ ಸಂರಕ್ಷಣೆ, ಜಲಾನಯನ ತತ್ವದಲ್ಲಿ ಮಣ್ಣು, ನೀರು ನಿರ್ವಹಣೆ, ಪರಿಣಾಮಕಾರಿ ತ್ಯಾಜ್ಯ ಸಂಸ್ಕರಣೆ ಮತ್ತು ನೈಸರ್ಗಿಕ ಸಂಪನ್ಮೂಲ ಆಧಾರಿತ ಉದ್ಯೋಗ ಸೃಷ್ಟಿ. ಈ ಆಯಾಮಗಳಿರುವ ಸಮಗ್ರ ನೀತಿಯನ್ನು ಕಾಲಬದ್ಧ ಯೋಜನೆಗಳೊಂದಿಗೆ ಜಾರಿಗೆ ತರಲು, ರಾಜ್ಯ ಅರಣ್ಯ ಮತ್ತು ಪರಿಸರ ಸಚಿವರ ನೇತೃತ್ವದಲ್ಲಿ ವಿಶೇಷ ಪ್ರಯತ್ನಗಳಾಗಲಿ ಎಂಬುದೇ ಆಶಯ.

ಕೇಶವ ಎಚ್. ಕೊರ್ಸೆ, ಶಿರಸಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಔಷಧ ಗುಣಮಟ್ಟ ನಿಯಂತ್ರಣ ವ್ಯವಸ್ಥೆಗೆ 'ಗ್ರಹಣ'

ಬಳ್ಳಾರಿಯ ವಿಮ್ಸ್‌ನಲ್ಲಿ ಸಂಭವಿಸಿರುವ ಬಾಣಂತಿಯರ ಸಾವುಗಳು ರಾಜ್ಯದ ಸಾರ್ವಜನಿಕ ಆರೋಗ್ಯ ಸೇವೆಗಳ ಕ್ಷೇತ್ರದಲ್ಲಿ ತಲ್ಲಣ ಉಂಟುಮಾಡಿವೆ. ಕಳಪೆ ಔಷಧದಿಂದ ಸಾವು ಸಂಭವಿಸಿವೆ ಎಂದು ತಜ್ಞರ ಸಮಿತಿ ಹೇಳಿದೆ. ಇಂಥ ಹಲವು ಘಟನೆಗಳು ದೇಶದ ವಿವಿಧ ಭಾಗಗಳಲ್ಲಿಯೂ ಹಿಂದೆ ನಡೆದಿವೆ. ಆರೋಗ್ಯ ಕ್ಷೇತ್ರದ ಪರಿಣತರು, ರಾಷ್ಟ್ರದ ಔಷಧ ನಿಯಂತ್ರಣ ವ್ಯವಸ್ಥೆಯ ಲೋಪದೋಷಗಳತ್ತ ಬೊಟ್ಟು ಮಾಡುತ್ತಿದ್ದಾರೆ. ಔಷಧ ಗುಣಮಟ್ಟ ನಿಯಂತ್ರಣ ವ್ಯವಸ್ಥೆಯ ಲೋಪಗಳು ಮತ್ತು ಈ ವಿಚಾರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ನಡುವೆ ಸಮನ್ವಯ ಇಲ್ಲದಿರುವುದೇ ರೋಗಿಗಳ ಸಾವಿಗೆ ಕಾರಣವಾಗುತ್ತಿದೆ ಎನ್ನಲಾಗಿದೆ

ಪ್ರಜಾವಾಣಿ ವಾರ್ತೆ

ಬಳ್ಳಾರಿಯ ವಿಮ್ಸ್‌ನಲ್ಲಿ ಬಾಣಂತಿಯರ ಸಾವಿಗೆ ಅವರಿಗೆ ನೀಡಲಾಗಿದ್ದ ರಿಂಗರ್ ಲ್ಯಾಕ್ಟೇಟ್ ಐ.ವಿ. ದ್ರಾವಣದ ಗುಣಮಟ್ಟ ಕಳಪೆಯಾಗಿದ್ದುದೇ ಕಾರಣ ಎಂದು ರಾಜ್ಯ ಸರ್ಕಾರ ನೇಮಿಸಿದ್ದ ತನಿಖಾ ಸಮಿತಿ ವರದಿ ನೀಡಿದೆ. ಪ್ರಮಾಣಿತ ಗುಣಮಟ್ಟ ಪರೀಕ್ಷೆ (ಎನ್‌ಎಸ್‌ಕ್ಯೂ) ಕಳಪೆ ಗುಣಮಟ್ಟದ ಕಾರಣಕ್ಕೆ ಈ ಔಷಧವನ್ನು ತಿರಸ್ಕರಿಸಿದ್ದೇ ಅಲ್ಲದೇ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮವು (ಕೆಎಸ್‌ಎಂಎಸ್‌ಸಿಎಲ್) ಆ ಕಂಪನಿಯನ್ನು ಕಪ್ಪು ಪಟ್ಟಿಗೆ ಸೇರಿಸಿತ್ತು. ಆದರೆ, ಔಷಧವನ್ನು ಪೂರೈಸಿದ್ದ ಪಶ್ಚಿಮ್ ಬಂಗಾ ಕಂಪನಿಯು ಕೇಂದ್ರೀಯ ಔಷಧ ಪರೀಕ್ಷಾ ಪ್ರಯೋಗಾಲಯದಿಂದ (ಸಿಡಿಎಲ್) ತನ್ನ ಔಷಧಿಯ ಗುಣಮಟ್ಟ ಉತ್ತಮವಾಗಿದೆ ಎಂದು ಪ್ರಮಾಣ ಪತ್ರ ತಂದ ಕಾರಣಕ್ಕೆ ರಾಜ್ಯವು ಅನಿವಾರ್ಯವಾಗಿ ಅದನ್ನು ಬಳಸಬೇಕಾಯಿತು ಎಂದು ರಾಜ್ಯ ಸರ್ಕಾರ ಹೇಳಿದೆ.

2022ರಲ್ಲಿ ಚಂಡೀಗಢದಲ್ಲಿ ಇಂಥದ್ದೇ ಒಂದು ಪ್ರಕರಣ ನಡೆದಿತ್ತು. ಚಂಡೀಗಢದ ಸ್ನಾತಕೋತ್ತರ ವೈದ್ಯಕೀಯ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆಯಲ್ಲಿ (ಪಿಜಿಐಎಂಇಆರ್) ಐವರು ರೋಗಿಗಳು ಮೃತಪಟ್ಟರು. ಮೃತಪಟ್ಟ ರೋಗಿಗಳಿಗೆ ನೀಡಿದ್ದ ಚುಚ್ಚುಮದ್ದು ಕಲಬೆರಕೆ ಆಗಿದೆ ಎಂದು ಚಂಡೀಗಢದ ಪ್ರಾದೇಶಿಕ ಔಷಧ ಪರೀಕ್ಷಾ ಪ್ರಯೋಗಾಲಯದಲ್ಲಿ (ಆರ್‌ಡಿಟಿಎಲ್) ನಡೆಸಿದ ಪರೀಕ್ಷೆಯಲ್ಲಿ ತಿಳಿದುಬಂದಿತ್ತು. ಅದನ್ನು ಅಲ್ಲಿನ ಸರ್ಕಾರ ಕಪ್ಪು ಪಟ್ಟಿಗೆ ಸೇರಿಸಿತ್ತು. ಆ ಚುಚ್ಚುಮದ್ದನ್ನು ತಯಾರಿಸಿದ್ದ ಕಂಪನಿಯು ಎರಡನೆಯ ಬಾರಿಗೆ ಔಷಧದ ಗುಣಮಟ್ಟ ಪರೀಕ್ಷೆ ಮಾಡುವಂತೆ ಸಿಡಿಎಲ್ ಅನ್ನು ಕೋರಿತ್ತು. ಆ ಔಷಧವು ಸಿಡಿಎಲ್ ನಡೆಸಿದ ಗುಣಮಟ್ಟದ ಎಲ್ಲ ಪರೀಕ್ಷೆಗಳಲ್ಲೂ ತೇರ್ಗಡೆಯಾಗಿರುವುದಾಗಿ ಆರು ತಿಂಗಳ ನಂತರ, 2023ರ ಮಾರ್ಚ್‌ನಲ್ಲಿ, ಕೇಂದ್ರ ಆರೋಗ್ಯ ಇಲಾಖೆಯ ರಾಜ್ಯ ಸಚಿವರೇ ಲೋಕಸಭೆಯಲ್ಲಿ ತಿಳಿಸಿದ್ದರು. ಆದರೆ, ಆ ಕಂಪನಿ ನೀಡಿದ್ದ ಸಿಡಿಎಲ್ ವರದಿ ನಕಲಿ ಎನ್ನುವುದು ನಂತರ ತಿಳಿದುಬಂದಿತ್ತು.

ಈ ಎರಡು ಪ್ರಕರಣಗಳು ಔಷಧ ಗುಣಮಟ್ಟ ಪರೀಕ್ಷೆಗೆ ಸಂಬಂಧಿಸಿದ ಸಿಡಿಎಲ್‌ನ ಪಾತ್ರದ ಬಗ್ಗೆ ಗಂಭೀರ ಪ್ರಶ್ನೆಗಳನ್ನು ಎತ್ತುತ್ತವೆ. ಸಿಡಿಎಲ್, ಕೇಂದ್ರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಡಿ ಕಾರ್ಯ ನಿರ್ವಹಿಸುವ ಸಂಸ್ಥೆ. ಅದು ತನ್ನ ಕೇಂದ್ರೀಕೃತ ದತ್ತಾಂಶವನ್ನಾಗಲಿ, ಪರೀಕ್ಷಾ ವಿಧಾನಗಳನ್ನಾಗಲಿ, ಪರೀಕ್ಷಾ ವರದಿಗಳನ್ನಾಗಲಿ ಬಹಿರಂಗಪಡಿಸುವುದಿಲ್ಲ. ಆ ಪರೀಕ್ಷೆಗಳನ್ನು ನಡೆಸಿದ ತಜ್ಞರ ಹೆಸರು ಮತ್ತು ಅರ್ಹತೆಗಳನ್ನೂ ಬಹಿರಂಗಪಡಿಸುವುದಿಲ್ಲ. ಎಲ್ಲವೂ ಗೋಪ್ಯವಾಗಿ ನಡೆಯುತ್ತವೆ.

ದೇಶದಲ್ಲಿ ಏಳು ಕೇಂದ್ರೀಯ ಔಷಧ ಪರೀಕ್ಷಾ ಪ್ರಯೋಗಾಲಯಗಳಿದ್ದು, ಇವುಗಳಲ್ಲಿ ಕೋಲ್ಕತ್ತದ ಪ್ರಯೋಗಾಲಯವು ಮೇಲ್ಮನವಿ ಪ್ರಕರಣಗಳನ್ನು ಇತ್ಯರ್ಥಪಡಿಸುವ, ಅಂತಿಮ ವರದಿ ನೀಡುವ ಅಧಿಕಾರ ಹೊಂದಿದೆ.

ಉನ್ನತ ಮಟ್ಟದ, ಮೇಲ್ಮನವಿಗಳನ್ನು ಇತ್ಯರ್ಥಪಡಿಸುವ ಪರಮಾಧಿಕಾರ ಹೊಂದಿರುವ ಸಂಸ್ಥೆಯಾಗಿರುವ ಸಿಡಿಎಲ್, ಪಾರದರ್ಶಕತೆಯನ್ನು ಹೊಂದಿರುವುದು ಮೂಲಭೂತ ಅಗತ್ಯವಾಗಿರುತ್ತದೆ. ಈ ವಿಚಾರದಲ್ಲಿ ಸಿಡಿಎಲ್ ವಿಪರೀತ ಎನ್ನುವಷ್ಟು ಗೋಪ್ಯತೆಯನ್ನು ಅನುಸರಿಸುತ್ತಿದೆ. ಹಲವರು ಮಾಹಿತಿ ಹಕ್ಕು ಕಾಯ್ದೆ ಅಡಿ ಮಾಹಿತಿ ಕೇಳಿದಾಗಲೂ ಕೊಟ್ಟಿಲ್ಲ.

ಇನ್ನೊಂದು ಸಮಸ್ಯೆ ಎಂದರೆ, ರಾಜ್ಯಗಳಿಂದ ಸಿಡಿಎಲ್‌ಗೆ ಔಷಧಗಳ ಮಾದರಿಗಳನ್ನು ಕಳುಹಿಸುವ ಕ್ರಮವು ಸಂಕೀರ್ಣವಾಗಿದ್ದು, ಹಲವು ಮಾರ್ಗಗಳ ಮೂಲಕ ನಡೆಯುತ್ತದೆ. ಡ್ರಗ್ ಇನ್‌ಸ್ಪೆಕ್ಟರ್, ನ್ಯಾಯಾಲಯದ ಸಿಬ್ಬಂದಿ, ಅಂಚೆ ಇಲಾಖೆ ಮತ್ತು ಸಿಡಿಎಲ್ ಸಿಬ್ಬಂದಿ ಈ ಕಾರ್ಯದಲ್ಲಿ ಭಾಗಿಯಾಗುತ್ತಾರೆ. ಈ ಮಾರ್ಗದಲ್ಲಿ ಯಾವ ಹಂತದಲ್ಲಿ ಬೇಕಾದರೂ ಮಾದರಿಗಳನ್ನು ಬದಲಾಯಿಸುವ ಸಾಧ್ಯತೆ ಇದೆ ಎಂದು ಔಷಧ ಕ್ಷೇತ್ರದ ತಜ್ಞರು ಹಲವು ಬಾರಿ ಅನುಮಾನ ವ್ಯಕ್ತಪಡಿಸಿದ್ದರು. ಇಡೀ ಪ್ರಕ್ರಿಯೆಯೇ ಅನುಮಾನಾಸ್ಪದ ಮತ್ತು ದೋಷಪೂರ್ಣ ಎನ್ನುವುದು ಅವರ ವಾದ.

ಎಲ್ಲೆಲ್ಲಿವೆ ಸಿಡಿಎಲ್?



ಸಿಡಿಎಸ್‌ಸಿಒ ಪಾತ್ರ: ಹೊಸ ಔಷಧಗಳಿಗೆ ಅನುಮೋದನೆ, ಅವುಗಳ ಕ್ಲಿನಿಕಲ್ ಟ್ರಯಲ್ಸ್, ಔಷಧಗಳ ಮೇಲೆ ನಿಷೇಧ ಇತ್ಯಾದಿ ಜವಾಬ್ದಾರಿ ಕೇಂದ್ರೀಯ ಔಷಧ ಗುಣಮಟ್ಟ ನಿಯಂತ್ರಣ ಸಂಘಟನೆಯದ್ದಾಗಿದೆ (ಸಿಡಿಎಸ್‌ಸಿಒ). ಮಾರುಕಟ್ಟೆಗೆ ಅಡಿಯಿಟ್ಟ ಹೊಸ ಔಷಧಗಳ ಬಗ್ಗೆ ಸಿಡಿಎಸ್‌ಸಿಒ ಕಾಲದಿಂದ ಕಾಲಕ್ಕೆ ತನ್ನ ವೆಬ್‌ಸೈಟ್‌ನಲ್ಲಿ ಮಾಹಿತಿ ನೀಡುತ್ತದೆ. ನಕಲಿ ಅಥವಾ ಕಳಪೆ ಗುಣಮಟ್ಟದ ಔಷಧಗಳ ಬಗ್ಗೆಯೂ ಅದು ಮಾಹಿತಿ ನೀಡಬೇಕು. ಆದರೆ, ಸಿಡಿಎಸ್‌ಸಿಒ ವೆಬ್‌ಸೈಟ್‌ನಲ್ಲಿ ಕೇಂದ್ರೀಕೃತ ಮಾಹಿತಿ ಲಭ್ಯವಿಲ್ಲ.

ಔಷಧಗಳ ಗುಣಮಟ್ಟ ಕಾಪಾಡುವ ವಿಚಾರದಲ್ಲಿ ಹತ್ತಾರು ತೊಡಕುಗಳಿವೆ. ಅದು ಸಿಡಿಎಸ್‌ಸಿಒ ಜವಾಬ್ದಾರಿಯಾಗಿದ್ದು, ಅದರ ಕಾನೂನಾತ್ಮಕ ಮತ್ತು ಆಡಳಿತಾತ್ಮಕ ರಚನೆಯೇ ಒಂದು ದೊಡ್ಡ ಮಿತಿಯಾಗಿದೆ. ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್), ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರಕ್ಕೆ ಇರುವಂಥ ಶಾಸನಾತ್ಮಕ ಬಲ ಸಿಡಿಎಸ್‌ಸಿಒಗೆ ಇಲ್ಲ. ಇದು ಕೇಂದ್ರದ ಆರೋಗ್ಯ ಸೇವೆಗಳ ಮಹಾನಿರ್ದೇಶನಾಲಯದ ಒಂದು ಅಂಗಸಂಸ್ಥೆಯಾಗಿ ಕಾರ್ಯನಿರ್ವಹಿಸುತ್ತದೆ. ಜತೆಗೆ, ಆರೋಗ್ಯ ಕಾರ್ಯದರ್ಶಿ ಮತ್ತು ಆರೋಗ್ಯ ಸಚಿವರ ನೇರ ಉಸ್ತುವಾರಿಯಲ್ಲಿ ಕೆಲಸ ಮಾಡಬೇಕಿದೆ. ಸಿಡಿಎಸ್‌ಸಿಒಗೆ ಸ್ವಾಯತ್ತೆ ನೀಡಲು 2013ರಲ್ಲಿ ಔಷಧಗಳು ಮತ್ತು ಸೌಂದರ್ಯವರ್ಧಕಗಳ (ತಿದ್ದುಪಡಿ) ಮಸೂದೆ ಮಂಡಿಸಲಾಗಿತ್ತು. ಆದರೆ, ಚರ್ಚೆ ನಡೆಯದೆಯೇ ಮಸೂದೆಯನ್ನು ಹಿಂಪಡೆಯಲಾಗಿತ್ತು.

ಔಷಧಗಳ ಗುಣಮಟ್ಟ ನಿಯಂತ್ರಣ ಅಧಿಕಾರವು 38 ವಿವಿಧ ಸಂಸ್ಥೆಗಳ ಬಳಿ ಇದ್ದು, (ಪ್ರತಿ ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಲ್ಲಿ ಒಂದು ಸಂಸ್ಥೆ ಮತ್ತು ಕೇಂದ್ರದ ಅಡಿಯಲ್ಲಿರುವ ಸಿಡಿಎಸ್‌ಸಿಒ ಸೇರಿ) ಅದೊಂದು ಸಂಕೀರ್ಣ ವ್ಯವಸ್ಥೆಯಾಗಿದೆ.

ಹೊಸ ಔಷಧಗಳಿಗೆ ಅನುಮೋದನೆ, ಅವುಗಳ ಕ್ಲಿನಿಕಲ್ ಟ್ರಯಲ್ಸ್, ಆಮದು, ರಫ್ತಿಗೆ ಸಂಬಂಧಿಸಿದ ಅನುಮತಿ ನೀಡುವುದು, ಔಷಧಗಳನ್ನು ನಿಷೇಧಿಸುವುದು ಕೇಂದ್ರ ಸರ್ಕಾರದ ಜವಾಬ್ದಾರಿಯಾಗಿದ್ದರೆ, ಔಷಧಿಗಳ ಉತ್ಪಾದನೆ ಮತ್ತು ಮಾರಾಟವು ರಾಜ್ಯ ಸರ್ಕಾರಗಳ ವ್ಯಾಪ್ತಿಗೆ ಬರುತ್ತದೆ. ಸಿಡಿಎಸ್‌ಸಿಒ ರಾಜ್ಯ ಔಷಧ ನಿಯಂತ್ರಕರು (ಎಸ್‌ಡಿಸಿ) ಜೊತೆಯಾಗಿ ಕೆಲಸ ಮಾಡಬೇಕು. ಆದರೆ, ಔಷಧದ ಗುಣಮಟ್ಟ ನಿಯಂತ್ರಣದ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ನಡುವೆ ಸಮನ್ವಯ ಮತ್ತು ಮಾಹಿತಿ ವಿನಿಮಯವೇ ಇಲ್ಲದಿರುವುದು ಅನೇಕ ಸಮಸ್ಯೆಗಳಿಗೆ ಕಾರಣವಾಗುತ್ತಿದೆ.

ಯಾವ ರಾಜ್ಯದಲ್ಲಿ ಯಾವ ಬ್ರ್ಯಾಂಡ್‌ನ ಯಾವ ಔಷಧದ ವಿರುದ್ಧ ಆರೋಪ ಕೇಳಿಬಂದಿತ್ತು, ಅದನ್ನು ಹೇಗೆ ಪರೀಕ್ಷೆ ನಡೆಸಲಾಗಿತ್ತು, ಅದರ ಫಲಿತಾಂಶ ಏನು ಎನ್ನುವುದರ ಮಾಹಿತಿಯೇ ಸಾರ್ವಜನಿಕವಾಗಿ ಲಭ್ಯವಾಗುವುದಿಲ್ಲ. ರಾಜ್ಯ ಸರ್ಕಾರಗಳಿಗೂ ಅದು ಸಿಗುತ್ತಿಲ್ಲ. ಯಾವ ಔಷಧ ಯಾವ ರಾಜ್ಯದಲ್ಲಿ ನಿಷೇಧವಾಗಿದೆ ಎನ್ನುವ ಮೂಲಭೂತ ವಿಚಾರ ಸಹ ಮತ್ತೊಂದು ರಾಜ್ಯಕ್ಕೆ ತಿಳಿಯುವುದಿಲ್ಲ.

ರಾಜ್ಯ ರಾಜ್ಯಗಳ ನಡುವೆ ಇರುವ ಮಾಹಿತಿಯ ಕೊರತೆ ಮತ್ತು ಗುಣಮಟ್ಟ ನಿಯಂತ್ರಣ ವ್ಯವಸ್ಥೆಯ ಕೇಂದ್ರೀಕರಣವನ್ನು ಕೆಲವು ಕಂಪನಿಗಳು ತಮ್ಮ ಅನುಕೂಲಕ್ಕೆ ಬಳಸಿಕೊಂಡು, ಕಳಪೆ ಔಷಧಗಳನ್ನು ಮಾರುಕಟ್ಟೆಗೆ ಬಿಡುತ್ತಿವೆ ಎಂದು ವಿಶ್ಲೇಷಿಸಲಾಗುತ್ತಿದೆ.

ಆಧಾರ: ಫಾರ್ಮಾಬಿಜ್.ಕಾಂ, ಲೋಕಸಭೆಯಲ್ಲಿ ಸಚಿವರ ಉತ್ತರ, ವಿಶ್ವ ಆರೋಗ್ಯ ಸಂಸ್ಥೆಯ 'ಮೆಡಿಕಲ್ ಡೈಲಾಗ್ಸ್' ಪೋರ್ಟಲ್

ಕೇಂದ್ರವು ಹೇಳಿದ್ದೇನು?

ಸಿಡಿಎಸ್‌ಸಿಒ ಕಾರ್ಯಶೈಲಿಯ ಬಗ್ಗೆ ಇತ್ತೀಚೆಗೆ ಲೋಕಸಭೆಯಲ್ಲಿ ಸಂಸದರು ಹಲವು ಪ್ರಶ್ನೆಗಳನ್ನು ಎತ್ತಿದ್ದರು. ಅದಕ್ಕೆ ಉತ್ತರಿಸಿದ್ದ ಕೇಂದ್ರ ಆರೋಗ್ಯ ಇಲಾಖೆಯ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ಅವರು, ಔಷಧ ನಿಯಮಗಳು 1945ರ ಪ್ರಕಾರ, ಎಲ್ಲ ಔಷಧ ಉತ್ಪಾದಕರು ಉತ್ತಮ ಉತ್ಪಾದನಾ ಅಭ್ಯಾಸಗಳು (ಜಿಎಂಪಿ) ಸೇರಿದಂತೆ 'ಔಷಧ ನಿಯಮಗಳು–1945'ರ ಅನುಸೂಚಿ 'ಎಂ'ನಲ್ಲಿ ನಿಗದಿಪಡಿಸಲಾಗಿರುವ ಅನುಮತಿಯ ಷರತ್ತುಗಳನ್ನು ಪಾಲಿಸಬೇಕು ಎಂದಿದ್ದರು. ಇಲ್ಲದಿದ್ದರೆ, ಔಷಧಗಳು ಮತ್ತು ಸೌಂದರ್ಯವರ್ಧಕಗಳ ಕಾಯ್ದೆ 1940ರ ನಿಯಮಗಳ ಅಡಿ ಕ್ರಮ ಕೈಗೊಳ್ಳಲಾಗುವುದು ಎಂದಿದ್ದರು.

ಸಿಡಿಎಸ್‌ಸಿಒ ಸಿಬ್ಬಂದಿಯ ಸಂಖ್ಯೆಯನ್ನು ಕಳೆದ ಹತ್ತು ವರ್ಷದಲ್ಲಿ ಗಮನಾರ್ಹವಾಗಿ ಹೆಚ್ಚಿಸಿದ್ದೇವೆ ಎಂದಿದ್ದ ಸಚಿವರು, ಔಷಧಗಳು ಮತ್ತು ಸೌಂದರ್ಯವರ್ಧಕಗಳ ಕಾಯ್ದೆ 1940ರ ಅಡಿ ದಾಖಲಾದ ಪ್ರಕರಣಗಳ ಶೀಘ್ರ ಇತ್ಯರ್ಥಕ್ಕಾಗಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿ ವಿಶೇಷ ನ್ಯಾಯಾಲಯಗಳನ್ನು ಸ್ಥಾಪನೆ ಮಾಡಿರುವುದಾಗಿಯೂ ಮಾಹಿತಿ ನೀಡಿದ್ದರು.

ಬ್ರಿಟಿಷ್ ಕಾಲದ ಕಾಯ್ದೆ...

ಭಾರತದಲ್ಲಿ ಸದ್ಯ ಔಷಧಗಳ ಗುಣಮಟ್ಟ ನಿಯಂತ್ರಣಕ್ಕೆ ಆಧಾರವಾಗಿರುವುದು ಔಷಧಗಳು ಮತ್ತು ಸೌಂದರ್ಯವರ್ಧಕಗಳ ಕಾಯ್ದೆ 1940. ಇದಕ್ಕೆ ಹಲವು ಬಾರಿ ತಿದ್ದುಪಡಿಗಳನ್ನು ಮಾಡಲಾಗಿದೆಯಾದರೂ ಒಟ್ಟಾರೆಯಾಗಿ ಇದು ಬ್ರಿಟಿಷರ ವಸಾಹತುಶಾಹಿ ಗುಣವುಳ್ಳ ಕಾಯ್ದೆಯಾಗಿಯೇ ಉಳಿದಿದೆ ಎನ್ನುವ ವಿಶ್ಲೇಷಣೆಗಳಿವೆ.

ಆಗ ಭಾರತವು ಹೆಚ್ಚು ಔಷಧಗಳನ್ನು ವಿದೇಶಗಳಿಂದ ತರಿಸಿಕೊಳ್ಳುತ್ತಿತ್ತು. ಮೂಲ ಕಾಯ್ದೆಯನ್ನು, ಔಷಧಗಳನ್ನು ಪೂರೈಸುತ್ತಿದ್ದ ವಿದೇಶಿ ವ್ಯಾಪಾರಿಗಳು ಮತ್ತು ತಯಾರಕರ ಹಿತಾಸಕ್ತಿಗಳಿಗೆ ತಕ್ಕಂತೆ ರೂಪಿಸಲಾಗಿತ್ತು. ಆದರೆ, ಇಂದು ಭಾರತವು ಔಷಧ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸಿರುವುದಷ್ಟೇ ಅಲ್ಲ, 200ಕ್ಕೂ ಹೆಚ್ಚು ದೇಶಗಳಿಗೆ ರಫ್ತು ಕೂಡ ಮಾಡುತ್ತಿದೆ. ಆದರೆ, ಔಷಧಗಳ ನಿಯಂತ್ರಣ ವ್ಯವಸ್ಥೆಯಲ್ಲಿ ಮಾತ್ರ ಹೆಚ್ಚಿನ ಬದಲಾವಣೆಗಳೇನೂ ಆಗಿಲ್ಲ. ಕೇಂದ್ರವು ಸಿಡಿಎಲ್ ಮತ್ತು ಔಷಧ ಮತ್ತು ಸೌಂದರ್ಯವರ್ಧಕಗಳ ಕಾಯ್ದೆ 1940 ಅನ್ನು ಸುಧಾರಣೆ ಮಾಡಬೇಕು ಎನ್ನುವ ಬೇಡಿಕೆ ಬಹುಕಾಲದಿಂದ ಕೇಳಿಬರುತ್ತಲೇ ಇದೆ.

ಕೇಂದ್ರೀಕೃತ ದತ್ತಾಂಶ ಲಭ್ಯ ಇಲ್ಲ

ನಕಲಿ ಮತ್ತು ಕಲಬೆರಕೆ ಔಷಧ ಪ್ರಕರಣಗಳಿಗೆ ಸಂಬಂಧಿಸಿದಂತೆ ತಪ್ಪಿತಸ್ಥರ ವಿರುದ್ಧ ನಿಗದಿತ ಕಾಲಮಿತಿಯಲ್ಲಿ ಕಠಿಣ ಕ್ರಮ ಜರುಗಿಸಬೇಕು ಎಂದು ರಾಸಾಯನಿಕ ಮತ್ತು ರಸಗೊಬ್ಬರ ಇಲಾಖೆಗೆ ಸಂಬಂಧಿಸಿದ ಸಂಸದೀಯ ಸ್ಥಾಯಿ ಸಮಿತಿಯು (2024–25) ಔಷಧ ಇಲಾಖೆಗೆ ಶಿಫಾರಸು ಮಾಡಿದೆ. ಇಂಥ ಪ್ರಕರಣಗಳ ಇತ್ಯರ್ಥ ಪ್ರಮಾಣವು ಅತ್ಯಂತ ಕಡಿಮೆ ಇರುವುದರ ಬಗ್ಗೆ ಸಮಿತಿಯು ಕಳವಳ ವ್ಯಕ್ತಪಡಿಸಿದೆ.

2015–16ರಿಂದ 2018–19ರ ನಡುವೆ ರಾಜ್ಯ ಔಷಧ ನಿಯಂತ್ರಕರು 2.5 ಲಕ್ಷ ಔಷಧ ಮಾದರಿಗಳನ್ನು ಪರೀಕ್ಷೆ ಮಾಡಿದ್ದು, ಅವುಗಳ ಪೈಕಿ 593 ನಕಲಿ ಎಂದೂ, 9266 ಕಳಪೆ ಎಂದೂ ಪತ್ತೆಯಾಗಿದೆ ಎಂದು ವರದಿ ಉಲ್ಲೇಖಿಸಿದೆ. ಪ್ರಕರಣಗಳ ಇತ್ಯರ್ಥ ಪ್ರಮಾಣವು ಕಡಿಮೆ ಇದೆ ಎಂದಿರುವ ಸಮಿತಿಯು, ಅದಕ್ಕೆ ಸಂಬಂಧಿಸಿದ ದತ್ತಾಂಶವನ್ನು ಕೇಂದ್ರೀಕೃತವಾಗಿ ಸಂಗ್ರಹಿಸಲಾಗುತ್ತಿಲ್ಲ ಎನ್ನುವ ಅಂಶದ ಬಗ್ಗೆ ಅಚ್ಚರಿ ವ್ಯಕ್ತಪಡಿಸಿದೆ.

ಸಿನಿ ಬಿಟ್ಸ್



ಒಟಿಟಿಯಲ್ಲಿ 'ಭೈರತಿ ರಣಗಲ್'

ಕಳೆದ ನ.15ರಂದು ತೆರೆಕಂಡಿದ್ದ ನಟ ಶಿವರಾಜ್‌ಕುಮಾರ್ ನಟನೆಯ 'ಭೈರತಿ ರಣಗಲ್' ಸಿನಿಮಾ ಇಂದು(ಡಿ.25) ಅಮೆಜಾನ್ ಪ್ರೈಂನಲ್ಲಿ ಬಿಡುಗಡೆಯಾಗಿದೆ.

ನರ್ತನ್ ಆ್ಯಕ್ಷನ್ ಕಟ್ ಹೇಳಿರುವ ಈ ಸಿನಿಮಾ 'ಮಫ್ತಿ' ಸಿನಿಮಾದ ಪ್ರೀಕ್ವೆಲ್. ಸಿನಿಮಾವನ್ನು 'ಗೀತಾ ಪಿಕ್ಚರ್ಸ್' ಲಾಂಛನದಡಿ ಗೀತಾ ಶಿವರಾಜ್‌ಕುಮಾರ್ ಅವರು ನಿರ್ಮಾಣ ಮಾಡಿದ್ದಾರೆ. 'ವೇದ' ಸಿನಿಮಾ ಬಳಿಕ ಗೀತಾ ಅವರು ನಿರ್ಮಾಣ ಮಾಡುತ್ತಿರುವ ಎರಡನೇ ಸಿನಿಮಾ ಇದಾಗಿದೆ.

ಇತ್ತೀಚೆಗಷ್ಟೇ 25 ದಿನಗಳನ್ನು ಪೂರೈಸಿದ್ದ ಈ ಸಿನಿಮಾ ವರ್ಷದ ಹಿಟ್ ಚಿತ್ರಗಳಲ್ಲಿ ಒಂದಾಗಿದೆ. ಎರಡು ಶೇಡ್‌ಗಳಲ್ಲಿ ಶಿವರಾಜ್‌ಕುಮಾರ್ ಅವರು ಈ ಚಿತ್ರದಲ್ಲಿ ಕಾಣಿಸಿಕೊಂಡಿದ್ದು, ಚಿತ್ರದಲ್ಲಿ ನಾಯಕಿಯಾಗಿ ರುಕ್ಮಿಣಿ ವಸಂತ್ ನಟಿಸಿದ್ದು, ರಾಹುಲ್ ಬೋಸ್, ಅವಿನಾಶ್, ಗೋಪಾಲಕೃಷ್ಣ ದೇಶಪಾಂಡೆ, ಶಬೀರ್ ಚಿತ್ರದ ತಾರಾಬಳಗದಲ್ಲಿದ್ದಾರೆ. 'ಮಫ್ತಿ'ಯ ಪ್ರೀಕ್ವೆಲ್ ಆಗಿರುವ 'ಭೈರತಿ ರಣಗಲ್' ಸಿನಿಮಾದ ಸೀಕ್ವೆಲ್ ಕೂಡಾ ಬರಲಿದ್ದು, ಇದರೊಂದಿಗೆ ಕಥೆಗೊಂದು ಅಂತ್ಯ ಸಿಗಲಿದೆ. ❖

'ಸ್ವೇಚ್ಛಾ' ಟ್ರೇಲರ್ ಬಿಡುಗಡೆ

ಸುರೇಶ್ ರಾಜು ನಿರ್ದೇಶನದ, ಅನ್ವಿಶ್ ಹಾಗೂ ಪವಿತ್ರಾ ನಾಯಕ್ ಮುಖ್ಯಭೂಮಿಕೆಯಲ್ಲಿ ನಟಿಸಿರುವ 'ಸ್ವೇಚ್ಛಾ' ಸಿನಿಮಾದ ಟ್ರೇಲರ್ ಹಾಗೂ ಹಾಡುಗಳ ಬಿಡುಗಡೆ ಇತ್ತೀಚೆಗೆ ನಡೆಯಿತು.

ಚಿತ್ರದಲ್ಲಿ ಎರಡು ಕಥೆಗಳನ್ನು ಸಮಾನಾಂತರವಾಗಿ ಹೇಳುವ ಪ್ರಯತ್ನವನ್ನು ಈ ಚಿತ್ರದಲ್ಲಿ ನಿರ್ದೇಶಕರು ಮಾಡಿದ್ದು, ಕಥೆಗಳಲ್ಲಿ ಬರುವ ಐದು ಪಾತ್ರಗಳು ಅವರವರ ಸ್ವೇಚ್ಛೆಗೋಸ್ಕರ ಯಾವ ರೀತಿ ಹೋರಾಟ ನಡೆಸುತ್ತವೆ ಎಂಬುದನ್ನು ಹೇಳಿದ್ದಾರೆ. ಸ್ಟಾರ್ ಮಸ್ತ್ ವಿಕ್ಟರಿ ಆರ್ಟ್ಸ್ ಬ್ಯಾನರ್ ಅಡಿ ಸ್ಟಾರ್ ಮಸ್ತಾನ್ ಹಾಗೂ ಕೆ.ಆರ್. ಮುರಹರಿ ರೆಡ್ಡಿ ಅವರು ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ.

ರಾಯಚೂರು, ಬೂರ್ದಿಪಾಡು, ಶ್ರೀರಂಗಪಟ್ಟಣ ಹಾಗೂ ಬೆಂಗಳೂರು ಸುತ್ತಮುತ್ತ ಈ ಚಿತ್ರದ ಚಿತ್ರೀಕರಣ ನಡೆದಿದೆ. 'ನಟಿ ಸ್ಪಂದನ ಮತ್ತು ಶ್ರೀಲಕ್ಷ್ಮಿ ತಾಯಿ, ಮಗಳಾಗಿ ಭಾವನಾತ್ಮಕ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಜನವರಿ ಅಂತ್ಯದಲ್ಲಿ ಚಿತ್ರವನ್ನು ಬಿಡುಗಡೆ ಮಾಡುವ ಯೋಚನೆಯಿದೆ' ಎಂದರು ಸುರೇಶ್ ರಾಜು. ನಾಯಕ ಅನ್ವಿಶ್‌ಗೆ ಇದು ಮೂರನೇ ಸಿನಿಮಾ. ಕೂಲಿ ಕೆಲಸ ಮಾಡುವ ಹುಡುಗನಾಗಿ ಅವರಿಲ್ಲಿ ಬಣ್ಣಹಚ್ಚಿದ್ದಾರೆ. ಸುರೇಶ್ ರೆಡ್ಡಿ ಅವರು ರಚಿಸಿದ ಈ ಚಿತ್ರದ ಕಥೆಗೆ ಸುರೇಶ್ ರಾಜು ಅವರು ಚಿತ್ರಕಥೆ, ಸಂಭಾಷಣೆ ಬರೆದಿದ್ದಾರೆ. ❖

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ **ಕಾಂಗ್ರೆಸ್** ನಾಯಕ ಹಾಗೂ ಸಂಸದ ರಾಹುಲ್ ಗಾಂಧಿ ಅವರ ವಿಡಿಯೊ ಅನ್ನು ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿದೆ. ಸಂಸದ ಅನುರಾಗ್ ಠಾಕೂರ್, ಅಮಿತ್ ಮಾಳವೀಯ. ತೇಜಸ್ವಿ ಸೂರ್ಯ ಸೇರಿದಂತೆ ಬಿಜೆಪಿಯ ಕೆಲವು ಮುಖಂಡರು ಕೂಡ ವಿಡಿಯೊ ಅನ್ನು ಹಂಚಿಕೊಂಡಿದ್ದಾರೆ. ರಾಹುಲ್ ಗಾಂಧಿ ಅವರೇ ತಾವು ಸಂಸದರನ್ನು ತಳ್ಳಿರುವುದು ನಿಜ ಎಂಬುದಾಗಿ ಒಪ್ಪಿಕೊಂಡಿದ್ದಾರೆ... ನಾಚಿಕೆಗೇಡು ಎಂದು ಪ್ರತಿಪಾದಿಸಿದ್ದಾರೆ. ಆದರೆ, ಇದು ಸುಳ್ಳು ಸುದ್ದಿ.

✓ **ರಾಹುಲ್ ಗಾಂಧಿ** ಅವರ ವಿಡಿಯೊ ಅನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ, ತಳ್ಳಾಟದ ವೇಳೆ ಏನು ನಡೆಯಿತು ಎಂದು ಪತ್ರಕರ್ತರು ಪ್ರಶ್ನಿಸುತ್ತಿರುವುದು ಕೇಳಿಸುತ್ತದೆ. ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೊಳ್ಳಲಾಗುತ್ತಿರುವ ವಿಡಿಯೊ ಎಎನ್‌ಐ ಸುದ್ದಿಸಂಸ್ಥೆಯದ್ದಾಗಿದ್ದು, ಅದು ದೀರ್ಘವಾದ ವಿಡಿಯೋ ಆಗಿದೆ. ವಿಡಿಯೊ ಮತ್ತು ಆ ಕುರಿತ ವರದಿಯನ್ನು ಸುದ್ದಿಸಂಸ್ಥೆಯು ಎಕ್ಸ್‌ನಲ್ಲಿ ಹಂಚಿಕೊಂಡಿದೆ. 'ಹೌದು, ಅದು ನಡೆದಿದ್ದು ನಿಜ' (ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ತಳ್ಳಿರುವುದು) ಎಂದು ರಾಹುಲ್ ಗಾಂಧಿ ಅವರು ಹೇಳಿದ್ದಾರೆ. ಆದರೆ, ತಾನು ಸಂಸದರನ್ನು ತಳ್ಳಿದ್ದು ನಿಜ ಎಂದು ರಾಹುಲ್ ಒಪ್ಪಿಕೊಂಡಿರುವುದು ವಿಡಿಯೊದಲ್ಲಿ ಇಲ್ಲ. ಈ ಬಗ್ಗೆ ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಯುಕ್ತ ಆಹಾರ, ಯುಕ್ತ ಕರ್ಮ, ಯುಕ್ತ ನಿದ್ದೆ!

ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

95

ಸುಖವಾಗಿರಬೇಕು ಎಂದರೆ ಆರೋಗ್ಯವಾಗಿರಬೇಕು. ಆರೋಗ್ಯವಾಗಿರಬೇಕು ಎಂದರೆ ಏನು ಮಾಡಬೇಕು? ನಾವು ಸಾಧಾರಣವಾಗಿ ಆರೋಗ್ಯ ಕೆಟ್ಟಾಗ ವೈದ್ಯರ ಬಳಿಗೆ ಹೋಗುತ್ತೇವೆ. ಆದರೆ, ನಮ್ಮ ಋಷಿ ಮುನಿಗಳು ಆರೋಗ್ಯ ಕೆಡದೇ ಇರುವ ಹಾಗೆ ಏನು ಮಾಡಬೇಕು ಎಂದು ಕಂಡುಕೊಂಡರು. 'ಮನುಷ್ಯನೇ ನೀನು ನಿರೋಗಿಯಾಗಿರಬೇಕಾದರೆ, ಈ ಭೂಮಿಯ ಮೇಲೆ ಸುಖವಾಗಿರಬೇಕಾದರೆ ಮೂರು ವಿಷಯಗಳನ್ನು ತಿಳಕೊ' ಎಂದರು. ಯಾವುವು ಆ ಮೂರು ವಿಷಯಗಳು? 'ಚೆನ್ನಾಗಿ ಊಟ ಮಾಡು, ಚೆನ್ನಾಗಿ ದುಡಿ ಮತ್ತು ಚೆನ್ನಾಗಿ ನಿದ್ದೆ ಮಾಡು' ಇವೇ ಸೂತ್ರಗಳು. ಈ ಮೂರೂ ಕೆಟ್ಟಿದ್ದರಿಂದಲೇ ಮನುಷ್ಯನ ಆರೋಗ್ಯ ಹದಗೆಟ್ಟಿದೆ. ನೀವು ಆರೋಗ್ಯದಿಂದ ಇರಬೇಕು ಅಂದರೆ ಯುಕ್ತ ಆಹಾರ, ಯುಕ್ತ ಕರ್ಮ ಮತ್ತು ಯುಕ್ತ ನಿದ್ರೆ ಅಷ್ಟೇ ಸಾಕು. ಯುಕ್ತ ಆಹಾರ ಅಂದ್ರೆ ಅತಿ ತಿನ್ನಬೇಡ, ಅತಿ ಬಿಡಬೇಡ. ಅತಿಯಾಗಿ ಕೆಲಸ ಮಾಡಬೇಡ. ಕೆಲಸ ಮಾಡದೇ ಇರಬೇಡ. ಅತಿಯಾಗಿ ನಿದ್ದೆ ಮಾಡಬೇಡ, ನಿದ್ದೆ ಮಾಡದೆಯೂ ಇರಬೇಡ. ಯುಕ್ತ ಆಹಾರ ಎಂದರೆ ಯಾವುದು ಒಳ್ಳೆಯದು ಯಾವುದು ಕೆಟ್ಟದ್ದು ಎಂದು ನಿರ್ಧರಿಸಿ ಸೇವಿಸುವುದಕ್ಕೆ ಯುಕ್ತ ಆಹಾರ ಅಂತಾರ. ನಮ್ಮ ಹಿರಿಯರು ಯಾಕೆ ಆಹಾರಕ್ಕೇ ಮಹತ್ವ ಕೊಟ್ಟರು ಎಂದರೆ, ನಮಗೆ ಕಣ್ಣಿಗೆ ಕಾಣುವ ದೇಹ ಒಂದೇ ಅಂತ ನಾವು ತಿಳಕೊಂಡೇವಿ. ಆದರೆ, ನಮ್ಮ ದೇಹದ ಒಳಗೆ ಐದು ದೇಹಗಳಿವೆ. ನಮ್ಮ ದೇಹಕ್ಕೆ ಅನ್ನಮಯ ಶರೀರ ಅಂತಾರೆ. ಅನ್ನಮಯ ಶರೀರ ಎಂದರೆ ಯಾವುದು ಅನ್ನಕ್ಕಾಗಿ ಬದುಕೈತಿ ಅದು ಅನ್ನಮಯ ಶರೀರ. ಕಣ್ಣಿಗೆ ಕಾಣುವ ದೇಹ ಅನ್ನಮಯ ಶರೀರ. ಇದರೊಳಗೆ ಇನ್ನೊಂದು ಶರೀರ ಐತಿ. ಅದು ಪ್ರಾಣಮಯ ಶರೀರ. ಅದರೊಳಗೊಂದು ಮನೋಮಯ ಶರೀರ ಐತಿ. ಅದರೊಳಗೊಂದು ವಿಜ್ಞಾನಮಯ ಶರೀರ. ಅದರೊಳಗೊಂದು ಆನಂದಮಯ ಶರೀರ ಐತಿ.

ನಮ್ಮ ಹಿರಿಯರು, ಋಷಿ ಮುನಿಗಳು, ಶರಣರು ಅನ್ನಕ್ಕೆ ಯಾತಕ್ಕೆ ಹೆಚ್ಚು ಆದ್ಯತೆ ಕೊಟ್ಟರು ಎಂದರೆ ನಾವು ಉಣ್ಣುವ ಅನ್ನ ಕೆಟ್ಟಿತು ಅಂದ್ರೆ ನಮ್ಮ ದೇಹ ಕೆಡತೈತಿ, ಮನಸ್ಸು ಕೆಡತೈತಿ, ಜೀವ ಕೆಡುತೈತಿ, ಬದುಕು ಕೆಡತೈತಿ. ಅದಕ್ಕೆ ಅನ್ನ ಶುದ್ಧವಾಗಿರಬೇಕು. ಆಹಾರ ಹಿತವಾಗಿರಬೇಕು, ಮಿತವಾಗಿರಬೇಕು. ಏನು ಉಣ್ಣಬೇಕು ಎಷ್ಟು ಉಣ್ಣಬೇಕು ಅನ್ನುವುದು ಗೊತ್ತಿರಬೇಕು. ಯುರೋಪ್ ದೇಶದಲ್ಲಿ ಒಂದು ಮಾತು ಇದೆ. 'ನೀನು ಅನ್ನವನ್ನು ಔಷಧದ ಹಾಗೆ ಉಣ್ಣದಿದ್ದರೆ ಮುಂದೆ ನೀನು ಔಷಧವನ್ನು ಅನ್ನ ಉಂಡ ಹಾಗೆ ಉಣ್ಣಬೇಕಾಗುತ್ತದೆ' ಎಂದು. ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ ಅಂತ ನಮ್ಮ ಗಾದೆ. ನಾವು ಜಗಳ ಆಡ್ತೀವಿ ಅಂದ್ರೆ ನಮಗೆ ಮಾತಾಡಕ್ಕೆ ಬಂದಿಲ್ಲ ಅಂತ ಅರ್ಥ. ನಮಗೆ ರೋಗ ಬಂದೈತಿ ಅಂದರೆ ಊಟ ಮಾಡಲು ಬಂದಿಲ್ಲ ಅಂತ ಅರ್ಥ. ಆಹಾರದಲ್ಲಿ ದೋಷ ಇರಬಾರದು. ಆಹಾರ ಗಳಿಕೆಯಲ್ಲಿಯೂ ದೋಷ ಇರಬಾರದು. ನಾವು ಕಳ್ಳತನ ಮಾಡಿ, ಇನ್ನೊಬ್ಬರಿಗೆ ಮೋಸ ಮಾಡಿ ಗಳಿಸಿದ ಅನ್ನವನ್ನು ಉಂಡರೆ ಅದೂ ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಅಡುಗೆ ಮಾಡುವಾಗಿನ ಮನಃಸ್ಥಿತಿ ಕೂಡಾ ಅನಾರೋಗ್ಯಕ್ಕೆ ಕಾರಣವಾಗುತ್ತದೆ. ಅದಕ್ಕೆ ಆಹಾರದ ವಿಷಯದಲ್ಲಿ ಎಚ್ಚರಿಕೆಯಿಂದ ಇರಬೇಕು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಡಿಸೆಂಬರ್ 25, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಕೃಷ್ಣ ದಶಮಿ ಗಂ. 22-30 ನಕ್ಷತ್ರ: ಚಿತ್ತಾ ಗಂ. 15-22 ಯೋಗ: ಅತಿಗಂಡ ಗಂ. 21-47 ಕರಣ: ವಣಿಜ ಗಂ. 09-13, ಧನು ಮಾಸದ 09 ನೇ ದಿನ, ಮಳೆನಕ್ಷತ್ರ: ಮೂಲ 4.
ರಾಹುಕಾಲ: ಮಧ್ಯಾಹ್ನ 12-00 – 01-30
ಸೂರ್ಯೋದಯ: 06-54 ಸೂರ್ಯಾಸ್ತ : 06-07
ಮುಸ್ಲಿಂ ದಿನಾಂಕ: 22 ಜುಮಾದುಸ್ಸಾನಿ
ದಿನ ವಿಶೇಷ: ಕ್ರಿಸ್‌ಮಸ್ (ಕ್ರಿಶ್ಚಿಯನ್), ಅದೃಷ್ಟ ಸಂಖ್ಯೆ : 6, 5

ಮೇಷ: ಮನಸ್ಸಿನ ಭಾವನೆಗಳನ್ನು ವ್ಯಕ್ತಪಡಿಸಲು ಸೂಕ್ತ ಸಮಯ. ಮಕ್ಕಳ ವಿದ್ಯಾಭ್ಯಾಸವು ಉತ್ತಮವಾಗಿದ್ದು, ಕುಟುಂಬದಲ್ಲಿ ಸುಖ-ಶಾಂತಿ ಇರುತ್ತದೆ. ಬಂಧುಗಳೊಡನೆ ವಿವಾದವನ್ನು ಮಾಡಬೇಡಿ.

ವೃಷಭ: ಸೋಲು ನಿಮ್ಮನ್ನು ಬಾಧಿಸುತ್ತಿದ್ದರೂ, ಹೊಸತನದಲ್ಲಿ ಜಯ ಕಾಣುವಿರಿ. ಮನೆಯಲ್ಲಿನ ವ್ಯವಹಾರಗಳಲ್ಲಿ ಸಕಾರಾತ್ಮಕ ಪ್ರತಿಕ್ರಿಯೆಗಳನ್ನು ಕಾಣುವಿರಿ. ವಿವಿಧ ಮೂಲಗಳಿಂದ ದ್ರವ್ಯಲಾಭ ಇರುವುದು.

ಮಿಥುನ: ಅಧ್ಯಯನದಲ್ಲಿ ಆಸಕ್ತಿ ಹೆಚ್ಚುವುದು. ಅಧ್ಯಯನಶೀಲರಿಗೆ ಉತ್ತಮ ಜ್ಞಾನಾರ್ಜನೆ ಆಗುವುದು. ಸಂಶೋಧಕರಿಗೆ ಆವಿಷ್ಕಾರಗಳಿಂದ ಜನಪ್ರಿಯತೆ ಉಂಟಾಗುವುದು. ವ್ಯವಹಾರಗಳು ಲಾಭ ತರಲಿವೆ.

ಕರ್ಕಾಟಕ: ಮಗಳ ಹದಗೆಟ್ಟ ಆರೋಗ್ಯದ ಬಗ್ಗೆ ಚಿಂತೆ ನಿದ್ದೆಯನ್ನು ಕೆಡಿಸುತ್ತದೆ. ಹಾಡು ಹರಟೆಗಳಲ್ಲಿ ಕಾಲ ಕಳೆಯುವುದು ಬಿಡಿ. ನಿಮ್ಮ ಆಯ್ಕೆಗಳಲ್ಲಿ ಬೇರೆಯವರು ಮೂಗು ತೂರಿಸುವುದು ನಿಮಗೆ ಸರಿಬರುವುದಿಲ್ಲ.

ಸಿಂಹ: ಅನಗತ್ಯ ವಿಚಾರಗಳಲ್ಲಿ ಸುಮ್ಮನೆ ತಲೆಹಾಕುವುದನ್ನು ಬಿಡಿ. ಮಸಾಲೆ ಪದಾರ್ಥಗಳನ್ನು ಬೆಳೆಯುವವರಿಗೆ ಹಾಗೂ ಮಾರಾಟ ಮಾಡುವವರಿಗೆ ಉತ್ತಮ ವ್ಯಾಪಾರ.

ಕನ್ಯಾ: ನ್ಯೂನತೆಗಳನ್ನು ಸರಿಮಾಡಿಕೊಳ್ಳುವ ಬಗ್ಗೆ ಯೋಚನೆ ಮಾಡಿ. ಗುರುಗಳ ಅನುಗ್ರಹವಿಲ್ಲದೆ ಏನೂ ಸಿದ್ಧಿಸುವುದಿಲ್ಲವಾದ್ದರಿಂದ ಗುರುವನ್ನು ನೆನೆಸಿಕೊಳ್ಳುವುದು ಮರೆಯದಿರಿ.

ತುಲಾ: ಹಳೆಯಕಾಲದ ಸಂಸ್ಕೃತಿಯನ್ನು ಉಳಿಸುವಲ್ಲಿ ಪರಿಶ್ರಮವಹಿಸುವಿರಿ. ಮೌನವಹಿಸುವ ಬದಲಾಗಿ ಮದುವೆಯ ವಿಚಾರವಾಗಿ ನಿರ್ಧಾರವನ್ನು ಸ್ಪಷ್ಟವಾಗಿ ಹಿರಿಯರ ಮುಂದೆ ತಿಳಿಯಪಡಿಸುವುದು ಉತ್ತಮ.

ವೃಶ್ಚಿಕ: ಗಂಡ ಹೆಂಡತಿಯರ ನಡುವೆ ನಡೆಯುವ ವಾಗ್ಸಮರದಲ್ಲಿ ಮಧ್ಯ ಪ್ರವೇಶ ಮಾಡಿ ಸಮಸ್ಯೆಯನ್ನು ಬಿಗಡಾಯಿಸುವಿರಿ. ಆಫೀಸಿನಲ್ಲಿ ಬೇಕು ಬೇಡಗಳನ್ನು ಪೂರೈಸಿಕೊಳ್ಳುವಲ್ಲಿ ಬುದ್ಧಿವಂತಿಕೆ ಉಪಯೋಗಿಸುವಿರಿ.

ಧನು: ರಾತ್ರಿ ವೇಳೆ ಪ್ರಯಾಣ ಮಾಡಿದ ಕಾರಣದಿಂದಾಗಿ ಹಗಲು ಹೊತ್ತಿನಲ್ಲಿ ದೇಹಾಯಾಸ ಉಂಟಾಗಬಹುದು. ಜನ್ಮದಿನದ ಸಲುವಾಗಿ ವಸ್ತ್ರ ಖರೀದಿ ಮಾಡಬಹುದು. ಕುಟುಂಬದ ಸರ್ವತೋಮುಖ ಬೆಳವಣಿಗೆ ಕಾಣುವಿರಿ.

ಮಕರ: ಮಾತಿನ ಚತುರತೆಯಿಂದ ಕೆಲಸಗಳು ಸರಾಗವಾಗಿ ನೆರವೇರುವುದು. ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದು. ಪೊಲೀಸ್ ಅಧಿಕಾರಿಗಳಿಗೆ ಶಿಕ್ಷೆಯ ವರ್ಗಾವಣೆಯಾಗುವ ಸಂಭವವಿದೆ.

ಕುಂಭ: ಸತಿ ಪತಿಯರ ನಡುವೆ ಉಡುಗೊರೆ ವಿನಿಮಯದಿಂದಾಗಿ ಸಂಬಂಧಗಳು ಗಟ್ಟಿಯಾಗುವುದು. ದಿನಕ್ಕೆ ಒಂದೊಂದು ಕಡೆ ಕೆಲಸ ಮಾಡುವವರಿಗೆ ಸ್ವಲ್ಪ ಮಟ್ಟಿಗಿನ ಅನಿಶ್ಚಿತತೆ ಕಾಡಲಿದೆ.

ಮೀನ: ಅಮೂಲ್ಯವಾದ ವಸ್ತು, ವಿಚಾರದ ನಷ್ಟವು ಮನಸ್ಸಿಗೆ ನೋವು ಉಂಟುಮಾಡಲಿದೆ. ಸಾಂಸ್ಕೃತಿಕ ರಂಗದಲ್ಲಿ ಮೇಲ್ಮಟ್ಟದ ಸಾಧನೆಯನ್ನು ಮಾಡಬಹುದು. ಸಾಲ ಮಾಡುವುದು ಸರಿಯಲ್ಲ.

ಪದಬಂಧ 5902

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನೇರವಾಗಿರುವ ಗುಣ (3)
5.ಸಮಯ ಸೂಚಕ ಯಂತ್ರ (4)
6.ನಗಿಸಲೆಂದೇ ಬಂದವನಿವನು (4)
8.ಕೆಲವರು ಮಾಡುವ ಕಾರ್ಯ (3)
11.ಭಾಗಲಬ್ಧ ಗೊತ್ತಿರದ ಜಿಪುಣ! (3)
13.ಶ್ರೇಷ್ಠವಾದ ನೆಲೆ (4)
17.ನೀರು ಧುಮ್ಮಿಕ್ಕುವ ಸ್ಥಳ (4)
18.ಲೆಕ್ಕ ಮಾಡಲು ಬಳಸಿದ ಪೆನ್ನು (3)

ಮೇಲಿಂದ ಕೆಳಕ್ಕೆ
1.ಯಜ್ಞ ಪುರೋಹಿತನನ್ನು ಹೀಗೂ ಕರೆವರು (3)
2.ಹೊಗಳಿಕೆಯ ವಿರುದ್ಧ ಪದ (4)
3. ಗುಬ್ಬಚ್ಚಿ ಇಲ್ಲಿದೆ (3)
4.ಚಿನ್ನ ಬೆಳ್ಳಿಗಳನ್ನು ಪರೀಕ್ಷಿಸುವ ಕಲ್ಲು (3)
7.ದೇವರ ಮುಂದೆ ಉರಿಸುವ ಸುಗಂಧ ದ್ರವ್ಯ (3)
9.ವಾಲುತ್ತಾ ಕೇಳಿದ ಪ್ರಶ್ನೆ (3)
10.ತಾಪವಿರುವಾಗ ತೋಡಿಕೊಂಡ ಬೇಗುದಿ (3)
12.ಕಲೆಯೊಳಗಿರುವ ಗುರಾಣಿ (4)
14.ಸಂತೋಷಗೊಳಿಸುವ ಅಲೋಹ ಮೂಲಧಾತು (3)
15.ಮಜವಾಗಿ ತಲುಪಿರುವ ಘಟ್ಟ (3)
16.ಗೋಜಾತಿಯ ಪ್ರಾಣಿಗಳ ತ್ಯಾಜ್ಯ ಉತ್ಪನ್ನ (3)



5901ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ರಸನ 3.ಉತ್ತರ 5.ಭಾವ 6.ಸರಿ 8.ನಸುಕು 9.ತವಕ 11.ಕಮರಿ 12.ವಿಕೃತ 13.ಗುಲಾಮ 15.ಪಾದುಕೆ 17.ಯಮ 19.ಹಾನಿ 20.ತಿಲಕ 21.ರುಮಾಲು

ಮೇಲಿಂದ ಕೆಳಕ್ಕೆ:
1.ರವ 2.ನಯನ 3.ಉಸುಕು 4.ರಸ 5.ಭಾರತ 7.ರಿಪೇರಿ 10.ಕಡಿತ 11.ಕಣಗು 12.ವಿಷಯ 14.ಮಯನಿ 15.ಪಾತಕ 16.ಕೆಸರು 18.ಮತಿ 19.ಹಾಲು

ಸುಡೊಕು 6287

	7	9			3		8	1
				8		2		9
8	1	5	2	6		7	3	
	8					1		5
	9	2	8	1	5		6	
5						8		
9		7	5					6
	5				2		4	
4	3		6		1			2

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6286 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ನಿಯಮ, ಕಾನೂನು ಬಿಟ್ಟು ನಾವು ಏನನ್ನೂ ಮಾಡುವುದಿಲ್ಲ • ಸಭಾಪತಿ ಬಸವರಾಜ ಹೊರಟ್ಟಿ ಸ್ಪಷ್ಟನೆ

‘ಸಿಐಡಿ ತನಿಖೆ ಪರಿಷತ್ ವ್ಯಾಪ್ತಿಗೆ ಬರದು’

ಪ್ರಜಾವಾಣಿ ವಾರ್ತೆ

ಬಸವರಾಜ ಹೊರಟ್ಟಿ

ಹುಬ್ಬಳ್ಳಿ: ‘ಸಿ.ಟಿ.ರವಿ ಪ್ರಕರಣವನ್ನು ರಾಜ್ಯ ಸರ್ಕಾರ ಸಿಐಡಿಗೆ ಆದೇಶಿಸಿರುವುದು ವಿಧಾನ ಪರಿಷತ್ ವ್ಯಾಪ್ತಿಗೆ ಬರುವುದಿಲ್ಲ. ನಮ್ಮ ನಿಯಮಗಳೇ ಬೇರೆ, ಸರ್ಕಾರದ ನಿಯಮಗಳೇ ಬೇರೆ. ನಮ್ಮ ನಿಯಮ, ಕಾನೂನು ಬಿಟ್ಟು ನಾವು ಏನೂ ಮಾಡುವುದಿಲ್ಲ’ ಎಂದು ಸಭಾಪತಿ ಬಸವರಾಜ ಹೊರಟ್ಟಿ ಸ್ಪಷ್ಟಪಡಿಸಿದರು.

ಮಂಗಳವಾರ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಪ್ರಕರಣ ಸಿಐಡಿಗೆ ಆದೇಶಿಸಿರುವುದಾಗಿ ಗೃಹ ಸಚಿವರು ನನಗೆ ಹೇಳುತ್ತಿದ್ದಾರೆ. ಸ್ಥಳ ಮಹಜರು ಕುರಿತು ಪೊಲೀಸ್ ಕಮಿಷನರ್ ಪತ್ರ ಬರೆದಿದ್ದಾರೆ. ಅಂತಹ ಪರಿಸ್ಥಿತಿ ಎದುರಾದರೆ ನಮ್ಮಲ್ಲೇ ಆದ ನಿಯಮದ ಪ್ರಕಾರ ಅವಕಾಶ ಮಾಡಿಕೊಡುತ್ತೇವೆ. ನಮ್ಮ ಅಧಿಕಾರಿಗಳ ಜೊತೆ ಹಾಗೂ ಅಡ್ವೊಕೇಟ್ ಜನರಲ್, ಪರಿಷತ್‌ನ ಕಾರ್ಯದರ್ಶಿ ಮತ್ತು ಕಾನೂನು ಪಂಡಿತರ ಜೊತೆಯೂ ಚರ್ಚೆ ನಡೆಸುತ್ತಿದ್ದೇವೆ’ ಎಂದರು.

‘ಪ್ರಕರಣ ಸಿಐಡಿಗೆ ವಹಿಸುವಾಗ ಪೊಲೀಸರು ವಿಧಾನ ಪರಿಷತ್‌ನಲ್ಲಿ ನಡೆದ ಘಟನೆ ಎಂದು ಉಲ್ಲೇಖಿಸಿದ್ದು ತಪ್ಪು. ಅದನ್ನು ಪರಿಶೀಲಿಸುತ್ತಿದ್ದೇವೆ. ನಾವು ಈಗಾಗಲೇ ರೂಲಿಂಗ್ ಕೊಟ್ಟು ಪ್ರಕರಣ ಮುಕ್ತಾಯಗೊಳಿಸಿದ್ದೇವೆ. ಹೆಬ್ಬಾಳ್ಕರ್ ಮೇಲೆ ದೌರ್ಜನ್ಯ ಎಂದು ಆರೋಪಿಸಿದ್ದ ಪ್ರಕರಣ ದಾಖಲಾಗಿದೆ. ಕಲಾಪ ಮುಂದೂಡಿದಾಗಲೂ ಅದು ವಿಧಾನ ಪರಿಷತ್ ಆಗಿರುತ್ತದೆ. ಅಲ್ಲಿ ಏನೇ ಆದರೂ, ಏನೇ ಕ್ರಮ ಕೈಗೊಳ್ಳಬೇಕಿದ್ದರೂ ಸಭಾಪತಿ ಅನುಮತಿ ಪಡೆಯಬೇಕು’ ಎಂದು ತಿಳಿಸಿದರು.

‘ಲಕ್ಷ್ಮಿ ಹೆಬ್ಬಾಳಕರ ಅವರನ್ನು ಸಚಿವರಾಗಿಯಷ್ಟೇ ಅಲ್ಲ; ಮಹಿಳೆಯಾಗಿಯೂ ನಾವು ನೋಡಬೇಕು. ಅಲ್ಲದೆ, ಸಿ.ಟಿ. ರವಿ ಅವರನ್ನು ಪೊಲೀಸರು ಅಮಾನುಷವಾಗಿ ವಶಕ್ಕೆ ಪಡೆದು ಹೋಗಿದ್ದು ತಪ್ಪು. ಸದನದ ಸದಸ್ಯರಾಗಿ ಅವರ ಕುರಿತು ಅವರು ದೂರು ನೀಡಿದರೆ ಪರಿಶೀಲಿಸಲು ಸಮಿತಿ ಮುಂದೆ ಕರೆಯುತ್ತೇವೆ. ಚರ್ಚಿಸಿ ತಪ್ಪಿತಸ್ಥರೆಂದು ಕಂಡು ಬಂದರೆ ಕ್ರಮ ಕೈಗೊಳ್ಳುತ್ತೇವೆ’ ಎಂದರು.

‘ಪ್ರಕರಣ ನಮ್ಮ ವ್ಯಾಪ್ತಿಗೆ ಬಂದಾಗ ತೀರ್ಮಾನ ಕೈಗೊಂಡು ಮುಗಿಸಲಾಗಿತ್ತು. ಅದಕ್ಕಾಗಿ ಮುಗಿದ ಅಧ್ಯಾಯ ಎಂದಿದ್ದು. ಮತ್ತೆ ಹೊಸದಾಗಿ ಲಕ್ಷ್ಮಿ ಹೆಬ್ಬಾಳಕರ ಅಥವಾ ಇನ್ಯಾರೇ ದೂರು ನೀಡಿದರೂ ಎಫ್‌ಎಸ್‌ಎಲ್‌ಗೆ ಕಳುಹಿಸಿ, ವರದಿ ಆಧರಿಸಿ ಸಮಿತಿ ಎದುರು ಕರೆಯುತ್ತೇವೆ’ ಎಂದು ಹೇಳಿದರು.

‘ಜೋಶಿ ಅಸಮರ್ಥರೆಂದರೆ ಸಮಂಜಸವೇ?’

ಜಿ.ಪರಮೇಶ್ವರ

ಹುಬ್ಬಳ್ಳಿ: ‘ಪ್ರಲ್ಹಾದ ಜೋಶಿ ಅಸಮರ್ಥ ಕೇಂದ್ರ ಸಚಿವ ಎಂದರೆ ಸಮಂಜಸವಾಗುತ್ತದೆಯೇ? ಜೋಶಿ ಅವರಿಗೆ ನನ್ನ ಸಾಮರ್ಥ್ಯ ಗೊತ್ತಿಲ್ಲ’ ಎಂದು ಗೃಹ ಸಚಿವ ಪರಮೇಶ್ವರ ತಿರುಗೇಟು ನೀಡಿದರು.

‘ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ವಿರುದ್ಧ ಪ್ರಕರಣ ದಾಖಲಾದ ನಂತರದ ಬೆಳವಣಿಗೆಯ ಮಾಹಿತಿ ಪಡೆಯುವಲ್ಲಿ ಗೃಹಸಚಿವರು ಅಸಮರ್ಥರಾಗಿದ್ದಾರೆ’ ಎನ್ನುವ ಜೋಶಿ ಹೇಳಿಕೆಗೆ ಅವರು ಸುದ್ದಿಗಾರರಿಗೆ ಪ್ರತಿಕ್ರಿಯೆ ನೀಡಿದರು.

ಸಭಾಪತಿ, ಗೃಹ ಸಚಿವರು, ಡಿಜಿಪಿಗೆ ಪತ್ರ

‘ಇಡೀ ಪ್ರಕರಣದ ಬಗ್ಗೆ ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಗೃಹ ಸಚಿವ ಜಿ.ಪರಮೇಶ್ವರ ಮತ್ತು ಪೊಲೀಸ್ ಮಹಾನಿರ್ದೇಶಕರಿಗೆ ಸಿ.ಟಿ.ರವಿ ದೂರು ಸಲ್ಲಿಸಿದ್ದಾರೆ. ಸದನದಲ್ಲಿ ನಡೆದ ಘಟನೆ, ಪೊಲೀಸರು ನಡೆಸಿಕೊಂಡ ರೀತಿ ಕುರಿತು ಎಳೆ ಎಳೆಯಾಗಿ ದೂರು ಸಲ್ಲಿಸಿದ್ದಾರೆ.

‘ಕಲಾಪ ಮುಂದೂಡಿಕೆಯಾದ ಬಳಿಕ ಪರಿಷತ್ತಿನ ಒಳಗೆ ಮತ್ತು ಹೊರಗೆ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ಲಕ್ಷ್ಮಿ ಹೆಬ್ಬಾಳಕರ, ಬೋಸರಾಜು, ಪರಿಷತ್ ಸದಸ್ಯರಾದ ನಜೀರ್ ಅಹಮದ್, ಬಸನಗೌಡ ಬಾದರ್ಲಿ, ಚನ್ನರಾಜ ಹಟ್ಟಿಹೊಳಿ ಅವರು ನನಗೆ ಮತ್ತು ನನ್ನ ಕುಟುಂಬಕ್ಕೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಹೊರಗೆ ಬಾ ನೋಡಿಕೊಳ್ಳುತ್ತೇವೆ ಎಂದು ಜೀವ ಬೆದರಿಕೆ ಹಾಕಿದ್ದಾರೆ. ಅವರ ಬೆಂಬಲಿಗರು ನನ್ನ ಮೇಲೆ ಹಲ್ಲೆ ನಡೆಸಿದ್ದಾರೆ’ ಎಂದು ವಿವರಿಸಿದ್ದಾರೆ.

ರವಿ ಅವರನ್ನು ಬಂಧಿಸಿದ ಬಳಿಕ ರಸ್ತೆಯಲ್ಲೇ ಸುತ್ತಾಡಿಸಿದ್ದಾರೆ. ಠಾಣೆಯಲ್ಲಿ ಭದ್ರತೆ ನೀಡಲು ಸಾಧ್ಯವಿಲ್ಲ ಎಂದಾದರೆ ಬೀದಿಯಲ್ಲಿ ಭದ್ರತೆ ಸಾಧ್ಯವೇ?
ಎಸ್.ಎಲ್.ಭೋಜೇಗೌಡ, ವಿಧಾನ ಪರಿಷತ್ ಸದಸ್ಯ

ಸಭಾಪತಿ ನಿರ್ಧರಿಸುವ ವಿಚಾರದಲ್ಲಿ ಪೊಲೀಸರು ಮಧ್ಯ ಪ್ರವೇಶಿಸಿದ್ದಾರೆ. ಸಭಾಪತಿ ಅಧಿಕಾರದ ಮೇಲೆ, ಪ್ರಜಾಪ್ರಭುತ್ವದ ಮೇಲೆ ನಡೆದ ದಾಳಿ ಎಂದೇ ಹೇಳಬೇಕಾಗುತ್ತದೆ
ಆಯನೂರು ಮಂಜುನಾಥ್, ಕೆಪಿಸಿಸಿ ವಕ್ತಾರ

‘ಧರ್ಮಸ್ಥಳಕ್ಕೆ ಬಂದು ಆಣೆ ಮಾಡಲಿ’

ಲಕ್ಷ್ಮಿ ಹೆಬ್ಬಾಳಕರ

ಬೆಳಗಾವಿ: ‘ರಾಮಾಯಣ, ಮಹಾಭಾರತ ಯುದ್ಧಗಳು ನಡೆದಿದ್ದು ಮಹಿಳೆಯರನ್ನು ಅಪಮಾನ ಮಾಡಿದ್ದಕ್ಕೆ. ಅಲ್ಲಿ ಅಪಮಾನ ಮಾಡಿದ ಎಲ್ಲರಿಗೂ ಶಿಕ್ಷೆ ಆಗಿದೆ. ಇಲ್ಲಿಯೂ ಆಗುತ್ತದೆ. ಸಿ.ಟಿ.ರವಿ ‘ಆ’ ಮಾತು ಹೇಳಿಲ್ಲ ಎಂದಾದರೆ ಧರ್ಮಸ್ಥಳಕ್ಕೆ ಬಂದು ಆಣೆ, ಪ್ರಮಾಣ ಮಾಡಲಿ. ಆಣೆ ಮಾಡಲು ನಾನೂ ನನ್ನ ಕುಟುಂಬ ಸಮೇತನಾಗಿ ಬರುತ್ತೇನೆ’ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಸವಾಲು ಹಾಕಿದರು.

ಮಾಧ್ಯಮದೊಂದಿಗೆ ಮಂಗಳವಾರ ಮಾತನಾಡಿದ ಅವರು, ‘ಸದನದಲ್ಲಿ ನಿಂತು ನಾನು ಅಂಥ ಸುಳ್ಳು ಹೇಳಲು ಆಗುವುದೇ? ಸುಳ್ಳು ಹೇಳಲು ನನಗೇನು ಹುಚ್ಚಾ? ಅವರು ಆ ಪದ ಬಳಸಿದ್ದಕ್ಕೆ ಆಡಿಯೊ, ವಿಡಿಯೊ ದಾಖಲೆ ಇದೆ’ ಎಂದೂ ಹೇಳಿದರು.

‘ಸಿ.ಟಿ.ರವಿ ಅಪಘಾತ ಮಾಡಿದ ವಿಡಿಯೊ ಕೂಡ ನನ್ನ ಬಳಿ ಇದೆ. ಅದಕ್ಕಾಗಿಯೇ ನಾನು ಅವರನ್ನು ‘ಕೊಲೆಗಾರ’ ಅಂದಿದ್ದೇನೆ. ನಾನು ಗಾಂಧಿ ಹಾಕಿಕೊಟ್ಟ ಮಾರ್ಗದಲ್ಲಿ ನಡೆಯುತ್ತಿದ್ದೇನೆ. ಗೋಡ್ಸೆ ಮಾರ್ಗದಲ್ಲಿ ನಡೆಯುವಂಥವಳಲ್ಲ’ ಎಂದರು.

ಹೀರೋ ಆಗಲು ಹೇಳಿಕೆ: ‘ಸಿ.ಟಿ.ರವಿ ಮಾತನಾಡಿದ್ದು ದೊಡ್ಡ ತಪ್ಪು, ಅವರಿಗೆ ಬಾಯಿ ಮೇಲೆ ಹಿಡಿತ ಇಲ್ಲ. ಏನೇ ಮಾತನಾಡಿದರೂ ನಾವು ಹೀರೋ ಆಗುತ್ತೇವೆ ಎಂಬ ಚಪಲದಲ್ಲಿ ಮಾತನಾಡಿದ್ದಾರೆ’ ಎಂದು ಶಾಸಕ ವಿನಯ ಕುಲಕರ್ಣಿ ಟೀಕಿಸಿದರು.

ಆಣೆ ಮಾಡಲು ಸಿ.ಟಿ.ರವಿ ನಿರಾಕರಣೆ

ಸಿ.ಟಿ.ರವಿ

ಚಿಕ್ಕಮಗಳೂರು: ಧರ್ಮಸ್ಥಳಕ್ಕೆ ಬಂದು ಆಣೆ ಮಾಡುವಂತೆ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಅವರು ಹಾಕಿರುವ ಸವಾಲನ್ನು ಸ್ವೀಕರಿಸಲು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ನಿರಾಕರಿಸಿದರು.

‘ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ನನಗೆ ರಾತ್ರಿಯಿಡೀ ಹಿಂಸೆ ನೀಡಿದ ಬಳಿಕ ಆಣೆ ಮಾಡುವುದು ಅಪ್ರಸ್ತುತ. ಅವರು ನನ್ನನ್ನು ಕೊಲೆಗಡುಕ ಎಂದು ಕರೆದಿದ್ದಾರೆ. ಅದನ್ನು ಲಕ್ಷ್ಮಿ ಹೆಬ್ಬಾಳಕರ ಅವರೇ ಒಪ್ಪಿಕೊಂಡಿದ್ದಾರೆ. ಹಾಗಾದರೆ ನಾನು ಯಾರನ್ನು ಕೊಲೆ ಮಾಡಿದ್ದೀನಿ’ ಎಂದು ಪ್ರಶ್ನಿಸಿದರು.

‘ಸೋಮವಾರ ನನ್ನ ಮನೆಗೆ ಬಂದಿದ್ದ ಹಿರಿಯರೊಬ್ಬರು ‘ಕೆಸರು ನಿನ್ನ ಮೇಲೆ ಬಿದ್ದರೂ, ನೀನೇ ಕೆಸರಲ್ಲಿ ಬಿದ್ದರೂ ಸ್ನಾನ ಮಾಡಬೇಕಿರುವುದು ನೀನೇ’ ಎಂದು ಹೇಳಿದರು. ಅಷ್ಟನ್ನೇ ಹೇಳಲು ಬಯಸುತ್ತೇನೆ’ ಎಂದು ಪ್ರತಿಕ್ರಿಯಿಸಿದರು.

‘ಈ ಪ್ರಕರಣವನ್ನು ರಾಜಕೀಯವಾಗಿ ಮತ್ತು ಕಾನೂನಾತ್ಮಕವಾಗಿಯೂ ಎದುರಿಸುತ್ತೇನೆ. ಈಗ ಸಿಐಡಿ ತನಿಖೆಗೆ ಒಪ್ಪಿಸಿದ್ದಾರೆ. ಒತ್ತಡ ಇಲ್ಲದೆ ಕೆಲಸ ಮಾಡುವುದಾದರೆ ಸಿಐಡಿ ತನಿಖೆ ಬೇಕಿಲ್ಲ, ಹಿರೇಬಾಗೇವಾಡಿಯ ಒಬ್ಬ ಪೊಲೀಸ್ ಕಾನ್‌ಸ್ಟೆಬಲ್ ಸಾಕು. ಒತ್ತಡ ಇದ್ದರೆ ಎಲ್ಲೂ ನ್ಯಾಯ ಸಿಗುವುದಿಲ್ಲ’ ಎಂದರು.

‘ಆದ್ದರಿಂದ ಹಾಲಿ ನ್ಯಾಯಾಧೀಶರ ನೇತೃತ್ವದಲ್ಲಿ ಸಿಐಡಿ ತನಿಖೆ ನಡೆಸಬೇಕು. ಸಿಐಡಿ ತನಿಖೆಯ ಮೇಲುಸ್ತುವಾರಿಯನ್ನು ನ್ಯಾಯಾಧೀಶರಿಗೆ ವಹಿಸಬೇಕು. ಅವರಿಗೆ ವರದಿ ಸಲ್ಲಿಕೆಯಾಗಬೇಕು. ಆಗ ನ್ಯಾಯ ಸಿಗಲಿದೆ, ಸತ್ಯ ಹೊರಗೆ ಬರಲಿದೆ’ ಎಂದು ಹೇಳಿದರು. ತಲೆಗೆ ಕಟ್ಟಿದ್ದ ಬಿಳಿಯ ಬ್ಯಾಂಡೇಜ್ ಅನ್ನು ಅವರು ಮಂಗಳವಾರ ಬಿಚ್ಚಿದ್ದು, ಗಾಯಕ್ಕೆ ಮುಲಾಮು ಹಚ್ಚಿದ್ದರು.

ಬೆಳಕಿನ ಸೊಬಗು... ಕ್ರಿಸ್‌ಮಸ್ ಅಂಗವಾಗಿ ಮೈಸೂರಿನ ಸೇಂಟ್ ಫಿಲೋಮಿನಾ ಚರ್ಚ್ ವಿದ್ಯುತ್ ಬೆಳಕಿನಿಂದ ಕಂಗೊಳಿಸಿತು
ಪ್ರಜಾವಾಣಿ ಚಿತ್ರ: ಅನೂಪ್ ರಾಘ ಟಿ.

ರವಿ ಪ್ರಕರಣ: ನ್ಯಾಯಾಂಗ ತನಿಖೆಗೆ ರಾಜ್ಯಪಾಲರಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆ ನಡೆಸಲು ಸರ್ಕಾರಕ್ಕೆ ಸೂಚನೆ ನೀಡಬೇಕೆಂದು ರಾಜ್ಯಪಾಲರಿಗೆ ಮನವಿ ಮಾಡಿದ್ದೇವೆ’ ಎಂದು ವಿರೋಧಪಕ್ಷದ ನಾಯಕ ಆರ್.ಅಶೋಕ ಹೇಳಿದರು.

ರಾಜ್ಯಪಾಲರನ್ನು ಮಂಗಳವಾರ ಭೇಟಿ ಮಾಡಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, ‘ರವಿ ಅವರಿಗೆ ಮಾಡಿರುವ ಅಪಮಾನದ ಬಗ್ಗೆ ಮಾಹಿತಿ ನೀಡಿದ್ದೇವೆ. ರವಿ ಅವರಿಗೆ ಮುಸ್ಲಿಂ ಉಗ್ರವಾದಿಗಳು ಮತ್ತು ನಕ್ಸಲರಿಂದ ಬೆದರಿಕೆ ಇದೆ. ರಕ್ಷಣೆ ನೀಡಬೇಕು ಎಂದು ಕೋರಿದ್ದೇವೆ’ ಎಂದರು.

‘ಪೊಲೀಸರು ರವಿ ಅವರಿಗೆ ಇನ್ನಿಲ್ಲದ ಕಿರುಕುಳ ನೀಡಿದರು. ರವಿ ಅವರಿಗೇ ಹೀಗಾದರೆ ಇನ್ನು ಸಾಮಾನ್ಯರ ಪಾಡೇನು ಎಂಬ ಪ್ರಶ್ನೆ ಮೂಡುತ್ತದೆ. ಇದು ರಾಜ್ಯ ಸರ್ಕಾರಕ್ಕೆ ಒಂದು ಕಪ್ಪು ಚುಕ್ಕೆ. ಅದಕ್ಕಾಗಿ ರಾಜ್ಯಪಾಲರು ಈ ವಿಷಯದಲ್ಲಿ ಕ್ರಮ ಕೈಗೊಳ್ಳಬೇಕೆಂದು ಮನವಿ ಮಾಡಿದ್ದೇವೆ’ ಎಂದರು.

‘ಪೊಲೀಸರು ಜವಾಬ್ದಾರಿಯಿಂದ ವರ್ತಿಸಿಲ್ಲ. ಅದಕ್ಕಾಗಿ ನ್ಯಾಯಾಂಗ ತನಿಖೆಗೆ ಆಗ್ರಹ ಪಡಿಸುತ್ತಿದ್ದೇವೆ. ನ್ಯಾಯಾಂಗ ತನಿಖೆಯಲ್ಲಿ ಯಾವುದೇ ತೀರ್ಪು ಬಂದರೂ ಒಪ್ಪಿಕೊಳ್ಳುತ್ತೇವೆ’ ಎಂದು ಹೇಳಿದರು.

ಸಂಸದ ಬಸವರಾಜ ಬೊಮ್ಮಾಯಿ ಮಾತನಾಡಿ, ವಿಧಾನಪರಿಷತ್ತಿನ ಒಳಗಿನ ವಿಚಾರಗಳಿಗೆ ಸಭಾಪತಿ ತೀರ್ಮಾನವೇ ಬಹಳ ಮುಖ್ಯ ಮತ್ತು ಅಂತಿಮ ಎಂದು ಹೇಳಿದರು.

‘ರವಿ ಅವರಿಗೆ ವಿಧಾನಸೌಧದ ಆವರಣದಲ್ಲಿ ಹಲ್ಲೆ ಯತ್ನ ಮಾಡಿದ್ದು ಯಾರು? ಧಮಕಿ ಹಾಕಿದ್ದು ಯಾರು? ಪೊಲೀಸರು ಒಳಕ್ಕೆ ಬಂದು ಬಂಧಿಸಲು ಯಾರು ಅನುಮತಿ ಕೊಟ್ಟರು? ಸುತ್ತಾಡಿಸಿದ್ದು ಮತ್ತು ಚಿತ್ರ ಹಿಂಸೆ ನೀಡಿದ ಬಗ್ಗೆ ತನಿಖೆ ಆಗಬೇಕು’ ಎಂದು ಒತ್ತಾಯಿಸಿದರು.

ಪರಿಷತ್ ವಿರೋಧಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕರಾದ ಜನಾರ್ದನ ರೆಡ್ಡಿ, ಮುನಿರಾಜು, ಎಸ್.ರಘು, ವಿಧಾನಪರಿಷತ್ ಸದಸ್ಯರಾದ ಎನ್. ರವಿಕುಮಾರ್, ಕೇಶವ ಪ್ರಸಾದ್, ಗೋಪಿನಾಥ ರೆಡ್ಡಿ ನಿಯೋಗದಲ್ಲಿದ್ದರು.

ಚಿನ್ನ ವಾಪಸ್ ಕೊಟ್ಟ ವರ್ತೂರು ಪ್ರಕಾಶ್

ಆಪ್ತೆ ಸೋಗಿನಲ್ಲಿ ಮಹಿಳೆಯಿಂದ ವಂಚನೆ ಪ್ರಕರಣ • ಪೊಲೀಸರಿಂದ ಮಾಜಿ ಸಚಿವರ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಾಭರಣ ಪಡೆದು ಅಂಗಡಿ ಮಾಲೀಕರಿಗೆ ₹2.42 ಕೋಟಿ ವಂಚಿಸಿದ್ದ ಪ್ರಕರಣದ ಸಂಬಂಧ ಮಾಜಿ ಸಚಿವ ವರ್ತೂರು ಪ್ರಕಾಶ್ ಅವರನ್ನು ಪೊಲೀಸರು ಮಂಗಳವಾರ ವಿಚಾರಣೆ ನಡೆಸಿದರು.

ಕಮರ್ಷಿಯಲ್ ಸ್ಟ್ರೀಟ್ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ವಂಚನೆ ಪ್ರಕರಣದಲ್ಲಿ ಬಾಗಲಗುಂಟೆ ನಿವಾಸಿ ಶ್ವೇತಾ ಗೌಡ ಅವರನ್ನು ಬಂಧಿಸಲಾಗಿತ್ತು. ಆಕೆಯ ಹೇಳಿಕೆ ಆಧರಿಸಿ ವಿಚಾರಣೆಗೆ ಬರುವಂತೆ ವರ್ತೂರು ಪ್ರಕಾಶ್ ಅವರಿಗೆ ಪೊಲೀಸರು ಮೂರು ನೋಟಿಸ್ ಜಾರಿ ಮಾಡಿದ್ದರು. ಮಂಗಳವಾರ ವಿಚಾರಣೆಗೆ ಬಂದಿದ್ದ ಪ್ರಕಾಶ್ ಅವರನ್ನು ಭಾರತಿ

ವರ್ತೂರು ಪ್ರಕಾಶ್

ಶ್ವೇತಾ ಗೌಡ

ನಗರ ಠಾಣೆಯಲ್ಲಿ ಪುಲಕೇಶಿನಗರ ಉಪ ವಿಭಾಗದ ಎಸಿಪಿ ಗೀತಾ, ಹಲವು ಪ್ರಶ್ನೆಗಳನ್ನು ಕೇಳಿ ಹೇಳಿಕೆ ದಾಖಲಿಸಿಕೊಂಡರು ಎಂದು ಗೊತ್ತಾಗಿದೆ.

ವರ್ತೂರು ಪ್ರಕಾಶ್ ಆಪ್ತೆ ಎಂದು ಪರಿಚಯಿಸಿಕೊಂಡಿದ್ದ ಶ್ವೇತಾ ಗೌಡ ಅವರು ಕಮರ್ಷಿಯಲ್ ಸ್ಟ್ರೀಟ್‌ನ ನವರತ್ನ ಜ್ಯುವೆಲ್ಲರ್ಸ್ ಮಾಲೀಕ ಸಂಜಯ್ ಬಾಫ್ನಾ ಅವರಿಂದ ಸುಮಾರು 2.945 ಕೆ.ಜಿ. ಚಿನ್ನ ಪಡೆದು ವಂಚಿಸಿದ್ದರು. ದೂರು ಆಧರಿಸಿ ಮೈಸೂರಿನಲ್ಲಿ ಆರೋಪಿಯನ್ನು ಬಂಧಿಸಲಾಗಿತ್ತು.

‘ಶ್ವೇತಾ ಅವರು ನಿಮಗೆ ಹೇಗೆ ಪರಿಚಯ? ಇಬ್ಬರೂ ಎಲ್ಲಾದರೂ ಸುತ್ತಾಟ ಮಾಡಿದ್ದೀರಾ? ಮಹಿಳೆ ತಮಗೆ ಏನೆಲ್ಲಾ ಉಡುಗೊರೆ ಕೊಟ್ಟಿದ್ದರು? ಉಡುಗೊರೆ ಕೊಡಲು ಕಾರಣ ಏನು? ಎಂದು ವರ್ತೂರು ಅವರಿಗೆ ಪ್ರಶ್ನಿಸಿ ಹೇಳಿಕೆ ದಾಖಲು ಮಾಡಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಶ್ವೇತಾ ಅವರಿಗೆ ಚಿನ್ನ ನೀಡುವಂತೆ ಅಂಗಡಿ ಮಾಲೀಕರಿಗೆ ಶಿಫಾರಸು ಮಾಡಿಲ್ಲ. ನನ್ನ ಹೆಸರು ಬಳಸಿಕೊಂಡು ಚಿನ್ನಾಭರಣ ಖರೀದಿ ಮಾಡಿಕೊಂಡಿದ್ದಾರೆ. ವಂಚನೆ ಪ್ರಕರಣದಲ್ಲಿ ನನ್ನ ಪಾತ್ರವಿಲ್ಲ’ ಎಂದು ವರ್ತೂರು ಪ್ರಕಾಶ್ ಹೇಳಿದ್ದಾರೆ ಎಂದು ಗೊತ್ತಾಗಿದೆ.

‘ಈ ಘಟನೆಯಿಂದ ನನ್ನ ಮನಸ್ಸಿಗೆ ನೋವಾಗಿದೆ. ಚಿನ್ನದ ಅಂಗಡಿಯವರು ಅಷ್ಟು ಮೊತ್ತದ ಚಿನ್ನವನ್ನು ಹೇಗೆ ನೀಡಿದ್ದಾರೆ ಎಂಬುದು ಗೊತ್ತಿಲ್ಲ. ಇನ್ನೂ ಕೆಲವು ರಾಜಕಾರಣಿಗಳು ಹೆಸರು, ಫೋಟೊ ತೆಗೆದುಕೊಂಡು ಆಕೆ ವಂಚನೆ ಮಾಡಿದ್ದಾರೆ’ ಎಂದು ಪ್ರಕಾಶ್ ಹೇಳಿಕೆ ನೀಡಿದ್ದಾರೆ.

ಆರೋಪಿ ಮಹಿಳೆ ನೀಡಿದ್ದ ಚಿನ್ನದ ಉಡುಗೊರೆಗಳನ್ನು ವರ್ತೂರು ಪ್ರಕಾಶ್ ಅವರು ಪೊಲೀಸರಿಗೆ ಒಪ್ಪಿಸಿದ್ದಾರೆ.

‘ನಗದು, ಚಿನ್ನಾಭರಣ ವಾಪಸ್ ನೀಡಿದ್ದಾರೆ. ಅದರ ಮೌಲ್ಯ ಅಂದಾಜಿಸಲಾಗುತ್ತಿದೆ. ವಾಪಸ್ ನೀಡಿದ ಚಿನ್ನವನ್ನು ನ್ಯಾಯಾಲಯಕ್ಕೆ ಒಪ್ಪಿಸಲಾಗುವುದು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಂಜಯ್ ಬಾಫ್ನಾ ಅವರ ಮಳಿಗೆಗೆ ಬರುತ್ತಿದ್ದ ಮಹಿಳೆ, ‘ಮಾಜಿ ಸಚಿವ ವರ್ತೂರು ಪ್ರಕಾಶ್ ಅವರ ಆಪ್ತೆ’ ಎಂದು ಪರಿಚಯಿಸಿಕೊಂಡಿದ್ದರು. ‘ನಾನು ಚಿನ್ನಾಭರಣ ವ್ಯಾಪಾರ ಆರಂಭಿಸುತ್ತಿದ್ದು, ನಿಮ್ಮಿಂದಲೇ ಆಭರಣ ಖರೀದಿಸುತ್ತೇನೆ’ ಎಂದಿದ್ದರು. ಸಂಜಯ್ ಸಹ ಇದಕ್ಕೆ ಒಪ್ಪಿದ್ದರು. ಮನೆಯವರಿಗೆ ತೋರಿಸಿಕೊಂಡು ಬರುವುದಾಗಿ ಅನುಮತಿ ಪಡೆದು ಮಹಿಳೆ ತನ್ನ ಮನೆಗೆ ಆಭರಣ ಒಯ್ದಿದ್ದರು.

ವರ್ತೂರು ಪ್ರಕಾಶ್ ಅವರ ಪುತ್ರನ ಜತೆಗೆ ಆರೋಪಿ ಮಹಿಳೆ ಸುತ್ತಾಟ ನಡೆಸಿರುವುದು ಗೊತ್ತಾಗಿದೆ. ಹೀಗಾಗಿ ವಿಚಾರಣೆಗೆ ಬರುವಂತೆ ಅವರಿಗೂ ನೋಟಿಸ್ ನೀಡಲಾಗಿದೆ.

ಮೈಸೂರು ಪಾಕ್, ಜಾಮೂನ್, ರಸಗುಲ್ಲಾ...

‘ಆರು ತಿಂಗಳ ಹಿಂದೆ ಶ್ವೇತಾ ಅವರು ವರ್ತೂರು ಪ್ರಕಾಶ್ ಅವರಿಗೆ ಫೇಸ್‌ಬುಕ್‌ನಲ್ಲಿ ಪರಿಚಯ ಆಗಿದ್ದರು. ಮಹಿಳೆಯೇ ‘ರಿಕ್ವೆಸ್ಟ್’ ಕಳುಹಿಸಿದ್ದರು. ಬಳಿಕ ಇಬ್ಬರೂ ಮೆಸೆಂಜರ್‌ನಲ್ಲಿ ಚಾಟಿಂಗ್ ನಡೆಸುತ್ತಿದ್ದರು. ಮೊಬೈಲ್ ನಂಬರ್ ಬದಲಾವಣೆ ಮಾಡಿಕೊಂಡು ವಾಟ್ಸ್ ಆ್ಯಪ್‌ನಲ್ಲಿ ಚಾಟಿಂಗ್ ಮುಂದುವರೆಸಿದ್ದರು. ಶ್ವೇತಾ ಅವರು ವರ್ತೂರು ಪ್ರಕಾಶ್ ನಂಬರ್ ಅನ್ನು ‘ಗುಲಾಬ್ ಜಾಮೂನ್’ ಎಂಬ ಹೆಸರಿನಿಂದ ಸೇವ್ ಮಾಡಿಕೊಂಡಿದ್ದರು. ಇನ್ನೂ ಕೆಲವರ ಮೊಬೈಲ್ ನಂಬರ್‌ಗಳನ್ನು ‘ರಸಗುಲ್ಲಾ’, ‘ಮೈಸೂರು ಪಾಕ್’ ಹೆಸರಿನಲ್ಲಿ ಸೇವ್ ಮಾಡಿಕೊಂಡಿದ್ದರು ಎಂಬುದು ತನಿಖೆ ವೇಳೆ ಗೊತ್ತಾಗಿದೆ’ ಎಂದು ಮೂಲಗಳು ತಿಳಿಸಿವೆ.

ಪರಪ್ಪನ ಅಗ್ರಹಾರ ಜೈಲಿಗೆ ಆರೋಪಿ

ಶ್ವೇತಾ ಗೌಡ ಅವರನ್ನು ಕಸ್ಟಡಿಗೆ ಪಡೆದು ವಿಚಾರಣೆ ನಡೆಸಲಾಗಿದೆ. ಆರೋಪಿಯನ್ನು ನ್ಯಾಯಾಲಯವು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಕಳುಹಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಸಾಮಾಜಿಕ ಚಟುವಟಿಕೆಗಳಲ್ಲಿ ಗುರುತಿಸಿಕೊಂಡಿದ್ದ ಶ್ವೇತಾ ಗೌಡ, ಈ ಮೊದಲು ಇದೇ ರೀತಿ ಚಿನ್ನದ ವ್ಯಾಪಾರಿಗೆ ಮೋಸ ಮಾಡಿದ್ದ ಆರೋಪದಡಿ ಯಲಹಂಕ ಠಾಣೆ ಪೊಲೀಸರು ಆರೋಪಿಯನ್ನು ಬಂಧಿಸಿದ್ದರು.

ಇಬ್ಬರೂ ಅಂಗಡಿಗೆ ಬಂದಿದ್ದರು: ದೂರುದಾರ

‘ವರ್ತೂರು ಪ್ರಕಾಶ್ ಜತೆಗೆ ಆಕೆಯೂ ನಮ್ಮ ಅಂಗಡಿಗೆ ಬಂದಿದ್ದರು. ಚಿನ್ನ ಮಾರಾಟ ಮಾಡಿ ದುಡ್ಡು ತಂದುಕೊಡುತ್ತೇನೆ ಎಂದಿದ್ದರು. ಮೊದಲು ವ್ಯಾಪಾರ ಮಾಡಿದ್ದ ಹಣ ಕೊಟ್ಟಿದ್ದರು. ವರ್ತೂರು ಪ್ರಕಾಶ್ ಮನೆ ಬಳಿಯೂ ಚಿನ್ನಾಭರಣವನ್ನು ತಲುಪಿಸಿದ್ದೆವು. ಶ್ವೇತಾ ಗೌಡ 2 ಕೆ.ಜಿ 945 ಗ್ರಾಂ. ಚಿನ್ನದ ಹಣವನ್ನು ಕೊಟ್ಟಿಲ್ಲ. ಈ ವಿಚಾರವನ್ನು ವರ್ತೂರು ಪ್ರಕಾಶ್ ಬಳಿ ಹೇಳಿದ್ದೆ. ಆಗ ವರ್ತೂರು ಪ್ರಕಾಶ್ ನಮಗೆ ಗೊತ್ತಿಲ್ಲ ಎಂದು ಹೇಳಿದ್ದರು’ ಎಂದು ದೂರುದಾರ ಸಂಜಯ್ ಭಾಪ್ನಾ ಪ್ರತಿಕ್ರಿಯಿಸಿದ್ದಾರೆ.

1,205 ಎಎನ್‌ಎಂ ಹುದ್ದೆಗೆ ನೇಮಕಾತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 1,205 ಕಿರಿಯ ಮಹಿಳಾ ಆರೋಗ್ಯ ಸಹಾಯಕಿ (ಎಎನ್‌ಎಂ) ಮತ್ತು 300 ಆರೋಗ್ಯ ನಿರೀಕ್ಷಣಾಧಿಕಾರಿ (ಎಚ್‌ಐಒ) ಹುದ್ದೆಗಳ ಭರ್ತಿಗೆ ಆರೋಗ್ಯ ಇಲಾಖೆಯು ಆದೇಶ ಹೊರಡಿಸಿದೆ.

ಗುತ್ತಿಗೆ ಆಧಾರದಲ್ಲಿ ನೇಮಕಾತಿ ನಡೆಯಲಿದೆ. ಹಿಂದಿನ ಅನುಭವವನ್ನು ಪರಿಗಣಿಸದೆ, ವೃಂದ ಮತ್ತು ನೇಮಕಾತಿ ನಿಯಮಗಳ ಅನ್ವಯ ಖಾಲಿ ಹುದ್ದೆಭರ್ತಿ ಮಾಡಬೇಕು. ನೇಮಕವಾದವರನ್ನು ಕನಿಷ್ಠ 5 ಸಾವಿರ, 15 ಸಾವಿರ ಹಾಗೂ 20 ಸಾವಿರ ಜನಸಂಖ್ಯೆಗೆ ಅನುಗುಣವಾಗಿ ನಿಯೋಜಿಸಬೇಕು. ನಿಗದಿತ ಕಾಲಮಿತಿಯೊಳಗೆ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಬೇಕು ಎಂದು ಇಲಾಖೆ ತಿಳಿಸಿದೆ.

ಟ್ರಕ್ ಟರ್ಮಿನಲ್ ಅಕ್ರಮ ಎನ್.ವಿ. ಪ್ರಸಾದ್ ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್ ನಿಯಮಿತದಲ್ಲಿ(ಡಿಡಿಯುಟಿಟಿಎಲ್) ನಡೆದಿದ್ದ ₹47.10 ಕೋಟಿ ಅಕ್ರಮ ಪ್ರಕರಣದ ತನಿಖೆ ನಡೆಸುತ್ತಿರುವ ಸಿಐಡಿ ಪೊಲೀಸರು, ಸಾರಿಗೆ ಇಲಾಖೆ ಕಾರ್ಯದರ್ಶಿ ಎನ್. ವಿ.ಪ್ರಸಾದ್ ಅವರನ್ನು ವಿಚಾರಣೆಗೆ ಒಳಪಡಿಸಿದರು. ವಿಚಾರಣೆಗೆ ಬರುವಂತೆ ಸಿಐಡಿ ಪೊಲೀಸರು, ಪ್ರಸಾದ್ ಅವರಿಗೆ ಕೆಲವು ದಿನಗಳ ಹಿಂದೆ ಸೂಚಿಸಿದ್ದರು. ಅವರನ್ನು ಸೋಮವಾರ ಸುಮಾರು ಮೂರು ತಾಸು ವಿಚಾರಣೆಗೆ ಒಳಪಡಿಸಿದ್ದಾರೆ ಎಂದು ಗೊತ್ತಾಗಿದೆ.

ಡಿಡಿಯುಟಿಟಿಎಲ್‌ನಿಂದ 2021 ರಿಂದ 2023ರ ನಡುವೆ 821 ಕಾಮಗಾರಿ ನಡೆಸಲು ಅನುಮತಿ ನೀಡಲಾಗಿತ್ತು. ಅದರಲ್ಲಿ 153 ಕಾಮಗಾರಿ ಮುಕ್ತಾಯವಾಗಿತ್ತು. ಉಳಿದ 668ಕ್ಕೆ ಕಾಮಗಾರಿ ನಡೆಸದೇ ನಕಲಿ ಬಿಲ್ ಸೃಷ್ಟಿಸಿ ಗುತ್ತಿಗೆ ಏಜೆನ್ಸಿಗಳಿಗೆ ಹಣ ಬಿಡುಗಡೆ ಮಾಡಿದ್ದು, ಲೆಕ್ಕ ಪರಿಶೋಧನೆ ವೇಳೆ ಪತ್ತೆಯಾಗಿತ್ತು.

‘ಅಂದು ಅಧಿಕಾರ ವಹಿಸಿಕೊಂಡಿದ್ದ ವ್ಯವಸ್ಥಾಪಕ ನಿರ್ದೇಶಕರು, ಅಕ್ರಮದ ಮಾಹಿತಿ ಸಂಗ್ರಹಿಸಿದ್ದರು. ತನಿಖೆ ಮಾಡಿಸುವುದು ಸೂಕ್ತವೆಂದು

ಎನ್.ವಿ. ಪ್ರಸಾದ್

ಶಿಫಾರಸು ಮಾಡಿ ಸಾರಿಗೆ ಇಲಾಖೆ ಕಾರ್ಯದರ್ಶಿಗೆ ಸಲ್ಲಿಸಿದರು. ಆಗಲೂ ಪ್ರಸಾದ್ ಅವರೇ ಸಾರಿಗೆ ಇಲಾಖೆ ಕಾರ್ಯದರ್ಶಿ ಆಗಿದ್ದರು. ಹೀಗಾಗಿ ಪ್ರಕರಣದ ಸಂಬಂಧ ಮಾಹಿತಿ ಪಡೆಯಲು ವಿಚಾರಣೆ ನಡೆಸಲಾಯಿತು’ ಎಂದು ಸಿಐಡಿ ಮೂಲಗಳು ಹೇಳಿವೆ.

‘ವ್ಯವಸ್ಥಾಪಕ ನಿರ್ದೇಶಕರ ಶಿಫಾರಸುಗಳನ್ನು ಸಾರಿಗೆ ಕಾರ್ಯದರ್ಶಿ ಕಡೆಗಣಿಸಿದ್ದರು ಎಂಬ ಆರೋಪ ಇದೆ. ಅನಾಮಧೇಯ ಪತ್ರ ಆಧರಿಸಿ ತನಿಖೆಗೆ ಶಿಫಾರಸು ಮಾಡಿದ್ದರು ಎಂಬ ಆರೋಪವಿದ್ದು, ಈ ಬಗ್ಗೆ ಮಾಹಿತಿ ಕಲೆ ಹಾಕಲಾಗುತ್ತಿದೆ. ಪ್ರಸಾದ್ ಅವರು ಕೆಲವು ದಾಖಲೆಗಳನ್ನು ಸಿಐಡಿಗೆ ಸಲ್ಲಿಸಿದ್ದು ಅದನ್ನು ಪರಿಶೀಲಿಸಲಾಗುತ್ತಿದೆ’ ಎಂದು ಮೂಲಗಳು ಹೇಳಿವೆ.

ಅಕ್ರಮದ ಬಗ್ಗೆ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್.ಶಿವಪ್ರಕಾಶ್ ವಿಲ್ಸನ್ ಗಾರ್ಡನ್ ಠಾಣೆಗೆ ದೂರು ನೀಡಿದ್ದು, ಎಫ್‌ಐಆರ್ ದಾಖಲಾಗಿತ್ತು. ಪ್ರಕರಣದ ತನಿಖೆಯನ್ನು ಸರ್ಕಾರ ಸಿಐಡಿಗೆ ವರ್ಗಾಯಿಸಿತ್ತು.

ಹವಾಲಾ ಪ್ರಕರಣ: ಇಬ್ಬರ ಬಂಧನ

ಡಿಡಿಯುಟಿಟಿಎಲ್‌ನಲ್ಲಿ ವ್ಯವಸ್ಥಾಪಕ ನಿರ್ದೇಶಕರಾಗಿ ಕಾರ್ಯ ನಿರ್ವಹಿಸಿದ್ದ ಎಸ್.ಶಂಕರಪ್ಪ ಅವರಿಗೆ ಇದೇ ಪ್ರಕರಣದಲ್ಲಿ ಹವಾಲಾ ಮೂಲಕ ಹಣ ತಲುಪಿಸಿದ್ದ ಬಾಣಸವಾಡಿ ನಿವಾಸಿ ರಾಕೇಶ್, ರಾಜಸ್ಥಾನದ ರಮೇಶ್ ಅವರನ್ನು ಸಿಐಡಿ ಪೊಲೀಸರು ಕೆಲ ದಿನಗಳ ಹಿಂದೆ ಬಂಧಿಸಿದ್ದು, ಇಬ್ಬರೂ ಜಾಮೀನಿನ ಮೇಲೆ ಬಿಡುಗಡೆ ಆಗಿದ್ದಾರೆ.

‘ಇವರಿಬ್ಬರೂ ₹23 ಕೋಟಿ ತಲುಪಿಸಿದ್ದರು ಎಂಬುದು ತನಿಖೆಯಿಂದ ಗೊತ್ತಾಗಿದೆ. ನಡೆಯದ ಕಾಮಗಾರಿಗಳಿಗೆ ಸಾಮಗ್ರಿ ಖರೀದಿಸಿದಂತೆ ನಕಲಿ ಬಿಲ್ ಸೃಷ್ಟಿಸಲಾಗಿತ್ತು. ಬಳಿಕ ಇಬ್ಬರು ಸಂಬಂಧಿಸಿದವರಿಗೆ ಹಣ ತಲುಪಿಸಿದ್ದರು’ ಎಂದು ಸಿಐಡಿ ಮೂಲಗಳು ಹೇಳಿವೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ
ಸಂಖ್ಯೆ 16 ಸಿ–1, ಮಿಲ್ಲರ್ಸ್ ಟ್ಯಾಂಕ್ ಬೆಡ್ ಏರಿಯಾ, ವಸಂತನಗರ, ಬೆಂಗಳೂರು–560052. ಫೋನ್: 080–22268677/78/79, ಫ್ಯಾಕ್ಸ್: 080–22268667
ಇಮೇಲ್: kerc-ka@nic.in ವೆಬ್‌ಸೈಟ್: https://kerc.karnataka.gov.in
ನಂ: ಕವಿನಿಆ–1–ಸಿಓಎನ್–2023–24–ಎಫ್–18/1214 ದಿನಾಂಕ: 23.12.2024
ಸೂಚನೆ
ವಿಷಯ: ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಹಸಿರು ಇಂಧನಕ್ಕಾಗಿ ಮುಕ್ತ ಅವಕಾಶಕ್ಕೆ ನಿಬಂಧನೆ ಮತ್ತು ಷರತ್ತುಗಳು) (ಒಂದನೇ ತಿದ್ದುಪಡಿ) ವಿನಿಯಮಗಳು, 2024 ಬಗ್ಗೆ.
ಕರಡು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಹಸಿರು ಇಂಧನಕ್ಕಾಗಿ ಮುಕ್ತ ಅವಕಾಶಕ್ಕೆ ನಿಬಂಧನೆ ಮತ್ತು ಷರತ್ತುಗಳು) (ಒಂದನೇ ತಿದ್ದುಪಡಿ) ವಿನಿಯಮಗಳು, 2024 ಅನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ದಿನಾಂಕ: 19.12.2024 ರಂದು ಪ್ರಕಟಿಸಲಾಗಿದೆ. ಕ.ವಿ.ನಿ.ಆ.ದ ವೆಬ್‌ಸೈಟ್ https://kerc.karnataka.gov.in ನಲ್ಲಿ ಕರಡು ವಿನಿಯಮಗಳು ಲಭ್ಯವಿದೆ. ಆಸಕ್ತರು ಕರಡು ವಿನಿಯಮಗಳ ಬಗ್ಗೆ ತಮ್ಮ ಲಿಖಿತ ಅಭಿಪ್ರಾಯ / ವಿಮರ್ಶೆ / ಸಲಹೆಗಳು ಇದ್ದಲ್ಲಿ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಕಾರ್ಯದರ್ಶಿಯವರಿಗೆ ಮೇಲೆ ತಿಳಿಸಿದಂತೆ ಕರಡು ವಿನಿಯಮಗಳು ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗೆ ಸಲ್ಲಿಸಲು ಕೋರಲಾಗಿದೆ.
ಸಹಿ/– ಕಾರ್ಯದರ್ಶಿ
DIPR/CP/3961/2024-25 ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಪರವಾಗಿ

Government of Karnataka
NATIONAL HEALTH MISSION
District Health & F.W.Society Office,
Near KC Park Haliyal Road,Dharwad.
DHARWAD – 580 008, OFFICE PHONE NO. 0836-2441484
E-mail : dpmodharwad1@gmail.com
Ref:NHM/NPCB&VI/93.4&94.4/SPECTACLES/2024-25 Date:24/12/2024
ಪತ್ರಿಕಾ ಪ್ರಕಟಣೆ
2024–25 ನೇ ಸಾಲಿಗೆ ರಾಷ್ಟ್ರೀಯ ಆರೋಗ್ಯ ಅಭಿಯಾನ, ರಾಷ್ಟ್ರೀಯ ಅಂಧತ್ವ ನಿಯಂತ್ರಣಾ ಕಾರ್ಯಕ್ರಮದಡಿಯಲ್ಲಿ ಶಾಲಾಮಕ್ಕಳ ಹಾಗೂ ವಯೋವೃದ್ಧರ ಕನ್ನಡಕಗಳ ಪೂರೈಕೆಗಾಗಿ ಇ–ಪ್ರೋಕ್ಯೂರ್ ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ ರೂ.86.80 ಲಕ್ಷಗಳು ಹಾಗೂ ಇ.ಎಂ.ಡಿ. ಮೊತ್ತ ರೂ.1,73,600=00, ಇ–ಟೆಂಡರ್ ಸಲ್ಲಿಸಲು ಪ್ರಾರಂಭದ ದಿನಾಂಕ:23/12/2024 ಮತ್ತು ಇ–ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 06/01/2025 ರ ಸಂಜೆ 5.30 ಗಂಟೆಯವರೆಗೆ, ಮಾದರಿ ಕನ್ನಡಕಗಳನ್ನು ಸಲ್ಲಿಸುವ ದಿನಾಂಕ: 04/01/2025 ಸಂಜೆ 5.30 ರೊಳಗಾಗಿ ಹೆಚ್ಚಿನ ಮಾಹಿತಿಗಾಗಿ ಇ–ಪ್ರೊಕ್ಯೂರಮೆಂಟ ವೆಬ್ ಸೈಟ್ https://kppp.karnataka.gov.in ಮೂಲಕ ಇ–ಟೆಂಡರ್ ಸಂಖ್ಯೆ/DHFWS/ 2024-25/IND1195 DT:23/12/2024 ಬಳಸಿಕೊಂಡು ಪರಿಶೀಲಿಸಬಹುದಾಗಿದೆ. ಹೆಚ್ಚಿನ ವಿವರಗಳಿಗಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿ, ಧಾರವಾಡ ಇಲ್ಲಿ ಕೆಲಸದ ಅವಧಿಯಲ್ಲಿ ಅಥವಾ ಇ–ಮೇಲ್ ಮುಖಾಂತರ dhodharwad@gmail.com ಸಂಪರ್ಕಿಸಬಹುದಾಗಿರುತ್ತದೆ.
ಸಹಿ/– ಉಪಾಧ್ಯಕ್ಷರು,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಧಾರವಾಡ.
ವಾ.ಸಾ.ಇ/ಧಾರವಾಡ/785/ದೇಶಪಾಂಡೆಪಬ್ಲಿಸಿಟಿ/2024–25

ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ ಉತ್ತರ ಕನ್ನಡ
ಉಪನಿರ್ದೇಶಕರು(ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಶಿಕ್ಷಣ ಕರ್ನಾಟಕ, ಶಾಲಾ ಶಿಕ್ಷಣ ಇಲಾಖೆ, ಉತ್ತರ ಕನ್ನಡ ಜಿಲ್ಲೆ, ಕಾರವಾರ.
E-mail: ssakarwar@gmail.com Phone: 08382-295486
ಸಂಖ್ಯೆ ಆ1:ಸ.ಶಿ.ಕ/ಕ.ಪ.ಶಾ./ಕ.ಸಾ/2024–25 ದಿನಾಂಕ: 20–12–2024
ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ
2023–24 ನೇ ಸಾಲಿನ ಆಯವ್ಯಯ ಘೋಷಣೆಯಂತೆ ಉತ್ತರ ಕನ್ನಡ, ಕಾರವಾರ ಜಿಲ್ಲೆಯ 08 ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ICT Smart Class ಹಾಗೂ Computer Labs ಸ್ಥಾಪಿಸುವ ಸಂಬಂಧ ಅಧಿಕೃತ ಇಲಾಖೆಯಲ್ಲಿ ನೊಂದಾಯಿಸಲ್ಪಟ್ಟ ಸಂಸ್ಥೆಗಳಿಂದ ಷರತ್ತಿಗೊಳಪಟ್ಟು ಅಲ್ಪಾವಧಿ ಇ–ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ನಮೂನೆಗಳಿಗಾಗಿ ಹಾಗೂ ಇ.ಎಂ.ಡಿ. ಮತ್ತು ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳನ್ನು ವೆಬ್‌ಸೈಟ್ www.kppp.karnataka.gov.in ನಲ್ಲಿ ನೋಡಬಹುದಾಗಿದೆ.
ಸಹಿ/– ಉಪನಿರ್ದೇಶಕರು(ಆಡಳಿತ) ಹಾಗೂ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಸಮಗ್ರ ಶಿಕ್ಷಣ ಕರ್ನಾಟಕ, ಉತ್ತರ ಕನ್ನಡ, ಕಾರವಾರ.
DIPR/KWR/KSMCA/663/24-25 Dt.23.12.2024

ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ
ಡಾ. ಶಿವರಾಮ ಕಾರಂತ ಪಿಲಿಕುಳ ನಿಸರ್ಗಧಾಮ
ಆಡಳಿತ ಕಚೇರಿ: ಮೂಡುಶೆಡ್ಡೆ, ಮಂಗಳೂರು–575028,
ದೂರವಾಣಿ: 0824–2263565 ವೆಬ್‌ಸೈಟ್: https://pilikula.karnataka.gov.in
ಸಂಖ್ಯೆ: ಪಿಡಿಎ.(1)ಸಿಆರ್.34/Tender- Security/2024–25 ದಿನಾಂಕ: 24.12.2024
ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ
(through https://kppp.karnataka.gov.in)
ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ವ್ಯಾಪ್ತಿಯಲ್ಲಿರುವ ಜೈವಿಕ ಉದ್ಯಾನವನ, ಪ್ರಾದೇಶಿಕ ವಿಜ್ಞಾನ ಕೇಂದ್ರ, ಕರಕುಶಲ ಗ್ರಾಮ, ಲೇಕ್ ಗಾರ್ಡನ್, ಗುತ್ತು ಮನೆ, ತಾರಾಲಯ, ಕಛೇರಿ, ಹಾಗೂ ಇನ್ನಿತರ ವಿಭಾಗಗಳ ಸುರಕ್ಷತಾ ದೃಷ್ಟಿಯಿಂದ ಹೊರಗುತ್ತಿಗೆ ಆಧಾರದಲ್ಲಿ 51 ಭದ್ರತಾ ಸಿಬ್ಬಂದಿಗಳನ್ನು 1 ವರ್ಷದ ಅವಧಿಗೆ ನೇಮಿಸಿಕೊಳ್ಳಲು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಅಂದಾಜು ಮೊತ್ತ: ರೂ. 149.60 ಲಕ್ಷ, ಇಎಂಡಿ ಮೊತ್ತ: ರೂ. 2.25 ಲಕ್ಷ. ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ: 31.12.2024 ಸಂಜೆ 5.30 ಗಂಟೆಯವರೆಗೆ. ಹೆಚ್ಚಿನ ವಿವರಗಳಿಗಾಗಿ ಮೇಲಿನ ದೂರವಾಣಿ ಮೂಲಕ ಪಡೆಯಬಹುದು.
ಸಹಿ/– ಆಯುಕ್ತರು
DIPR/MNG/KSMCA/1070/24-25 dt. 24.12.2024

ತುಮಕೂರು ಮಹಾನಗರ ಪಾಲಿಕೆ, ತುಮಕೂರು
ದೂ–2271200, 2272200, ಫ್ಯಾಕ್ಸ್: 2275106,
ಇ–ಮೇಲ್: itstaff_ulb_tumkur@yahoo.com
ವೆಬ್‌ಸೈಟ್: www.tumkurcity.mrc.gov.in
ಸಂ:ತುಮಪಾ/ತಾಂಶಾ/ಸಿವಿಲ್ ಶಾಖೆ/ಸಿಆರ್–14/2024–25 ದಿನಾಂಕ 19.12.2024
ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿನ ಪಾರದರ್ಶಕತೆಯ ಅಧ್ಯಾದೇಶ 1999–2000 2000ರ ನಿಯಮದಂತೆ ಮಹಾನಗರ ಪಾಲಿಕೆ ನಿಧಿ, 2024–25ನೇ ಸಾಲಿನ 15ನೇ ಹಣಕಾಸು ಅನುದಾನ ಹಾಗೂ ಸ್ವಚ್ಛ ಭಾರತ್ ಮಿಷನ್ (ನಗರ)2.0 ಯೋಜನೆಯಡಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಸ್ಟ್ಯಾಂಡರ್ ಟೆಂಡರ್ ಡಾಕ್ಯುಮೆಂಟ್‌ನ ಕೆಪಿಪಿಪಿ ಪೋರ್ಟಲ್ ಮುಖಾಂತರ ಟೆಂಡರ್‌ನ್ನು ಈ ಕೆಳಕಂಡ ಸಹಿ ಮಾಡಿರುವವರು ಆಹ್ವಾನಿಸಿರುತ್ತಾರೆ. ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್ https://Kppp.karnataka.gov.in ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಲು ಆಹ್ವಾನಿಸಲಾಗಿದ್ದು, ಹೆಚ್ಚಿನ ವಿವರಗಳಿಗೆ ಈ ಕಛೇರಿಯ www.tumkurcity.mrc.gov.in ವೆಬ್‌ಸೈಟ್‌ನಲ್ಲಿ ನೋಡಬಹುದು.
ಇ–ಪ್ರಕ್ಯೂರ್‌ಮೆಂಟ್ ವ್ಯವಸ್ಥೆಯಡಿ ಟೆಂಡರ್ ಷೆಡ್ಯೂಲ್ ದಿನಾಂಕಗಳು ಈ ಕೆಳಕಂಡಂತಿವೆ.
1. ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳು ಚಾಲ್ತಿಗೆ ಬರುವ ದಿನಾಂಕ: 20–12–2024ರಿಂದ ದಿನಾಂಕ: 04–01–2025 ರವರೆಗೆ. 2. ಪ್ರೀ–ಬಿಡ್ ಮೀಟೀಮಗ್ ದಿನಾಂಕ: 26–12–2024 ಬೆಳಿಗ್ಗೆ 11.00ಗಂಟೆಗೆ. 3. ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 04–01–2024 ರಂದು ಸಾಯಂಕಾಲ 4.30 ಗಂಟೆವರೆಗೆ. 4. ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ:06–01–2025 ರ ಸಾಯಂಕಾಲ 4.35 ಗಂಟೆಗೆ. 3. ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: 09–01–2025ರ ಬೆಳಿಗ್ಗೆ 11.00ಗಂಟೆಗೆ. 4. ಟೆಂಡರ್‌ನ ಯಶಸ್ವಿ ಬಿಡ್‌ದಾರರು ಕಾರ್ಯಾದೇಶ ಪಡೆಯುವ ಸಮಯದಲ್ಲಿ ಅಂದಾಜು ದರಕ್ಕಿಂತ ಕಡಿಮೆ ದರ ನಮೂದಿಸಿದ ಸಂದರ್ಭದಲ್ಲಿ ವ್ಯತ್ಯಾಸದ ಮೊತ್ತವನ್ನು ಪಾವತಿಸುವುದು.
ಸಹಿ/–ಕಾರ್ಯಪಾಲಕ ಅಭಿಯಂತರರು, ತುಮಕೂರು ಮಹಾನಾಗರ ಪಾಲಿಕೆ, ತುಮಕೂರು.
DIPR/TUM/501/KSMCA/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಚಿಕ್ಕಪೇಟೆ ವಿಭಾಗ, 8ನೇ ಮುಖ್ಯ ರಸ್ತೆ, 2ನೇ ಬ್ಲಾಕ್, ಜಯನಗರ, ಕನಕನಪಾಳ್ಯ, ಬೆಂಗಳೂರು– 560 011.
ಸಂ: ಕಾಪಾಅ/ಚಿಪೇ/ಇ–ಪ್ರೊಕ್/07/2024–25 ದಿನಾಂಕ:23.12.2024
ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ಜಿಒಕೆ ಕೆಪಿಪಿ ಪೋರ್ಟಲ್ ಮೂಲಕ ಮಾತ್ರ) (ದ್ವಿ–ಲಕೋಟೆ ಪದ್ಧತಿ)
ಕಾರ್ಯಪಾಲಕ ಅಭಿಯಂತರರು, ಚಿಕ್ಕಪೇಟೆ ವಿಭಾಗ ಇವರು ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ	ಕಾಮಗಾರಿ ವಿವರ
1.	ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ವಿ.ವಿ. ಪುರಂ ಮತ್ತು ಧರ್ಮರಾಯಸ್ವಾಮಿ ದೇವಾಲಯ ಉಪವಿಭಾಗಳಲ್ಲಿ ರಸ್ತೆಗಳು, ಚರಂಡಿಗಳು, ಬೃಹತ್ ಕಲ್ವರ್ಟ್‌ಗಳು, ಪಾದಚಾರಿ ಮಾರ್ಗಗಳು, ಮಳೆ ನೀರು ಚರಂಡಿಗಳು, ಉದ್ಯಾನವನಗಳು, ಆಟದ ಮೈದಾನಗಳು ಮತ್ತು ಕಟ್ಟಡಗಳ ಸಮಗ್ರ ಅಭಿವೃದ್ಧಿ ಕಾಮಗಾರಿ ಹಾಗೂ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳ ಹಾಳಾದ ರಸ್ತೆಗಳ ಡಾಂಬರೀಕರಣ ಮತ್ತು ಕಾಂಕ್ರೀಟ್ ಮಾಡುವ ಕಾಮಗಾರಿ. ಟೆಂಡರಿಗಿಟ್ಟ ಅಂದಾಜು ಮೊತ್ತ: ರೂ. 800.00 ಲಕ್ಷಗಳು. ಇ.ಎಂ.ಡಿ : ರೂ. 1 ಲಕ್ಷ ಇ–ಪೇಮೆಂಟ್ ಮೂಲಕ ಮತ್ತು ರೂ. 11,00,000 ಬ್ಯಾಂಕ್ ಗ್ಯಾರಂಟಿ ಮೂಲಕ ಪಾವತಿಸುವುದು.
2.	ವಾರ್ಡ್ ಸಂಖ್ಯೆ 161, ಸಿಲ್ವರ್ ಜುಬಿಲಿ ಪಾರ್ಕ್‌ನಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಕಾಮಗಾರಿ. ಟೆಂಡರಿಗಿಟ್ಟ ಅಂದಾಜು ಮೊತ್ತ: ರೂ. 100.00 ಲಕ್ಷಗಳು. ಇ.ಎಂ.ಡಿ : ರೂ. 1 ಲಕ್ಷ ಇ–ಪೇಮೆಂಟ್ ಮೂಲಕ ಮತ್ತು ರೂ. 1,50,000 ಬ್ಯಾಂಕ್ ಗ್ಯಾರಂಟಿ ಮೂಲಕ ಪಾವತಿಸುವುದು.
3.	ವಾರ್ಡ್ ಸಂಖ್ಯೆ 162, ಸುಂಕೇನಹಳ್ಳಿಯಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಪಾದಚಾರಿ ಮಾರ್ಗಗಳ ಸಮಗ್ರ ಅಭಿವೃದ್ಧಿ ಕಾಮಗಾರಿ. ಟೆಂಡರಿಗಿಟ್ಟ ಅಂದಾಜು ಮೊತ್ತ: ರೂ. 100.00 ಲಕ್ಷಗಳು. ಇ.ಎಂ.ಡಿ : ರೂ. 1 ಲಕ್ಷ ಇ–ಪೇಮೆಂಟ್ ಮೂಲಕ ಮತ್ತು ರೂ. 1,50,000 ಬ್ಯಾಂಕ್ ಗ್ಯಾರಂಟಿ ಮೂಲಕ ಪಾವತಿಸುವುದು.

1) ಟೆಂಡರ್ ಡಾಕ್ಯುಮೆಂಟ್‌ಗಳನ್ನು ಕೆಪಿಪಿ ಪೋರ್ಟಲ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್ ಡಾಕ್ಯುಮೆಂಟ್ ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 17.01.2025ರ ಸಂಜೆ 4.00 ಗಂಟೆಯವರೆಗೆ. 3) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 18.01.2025 ಸಂಜೆ 4.30 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: https://kppp.karnataka.gov.in ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ಚಿಕ್ಕಪೇಟೆ ವಿಭಾಗ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ರಾಜರಾಜೇಶ್ವರಿನಗರ ವಿಭಾಗ, ಮತ್ತಿಕೆರೆ, ಬೆಂಗಳೂರು–560 054.
ಸಂಖ್ಯೆ: ಕಾಪಾಅ/ರಾರಾನವಿ/ಪಿಆರ್/374/2024–25 ದಿನಾಂಕ: 21.12.2024
ತಿದ್ದುಪಡಿ ಪ್ರಕಟಣೆ
(Through GOK KPP Portal https://kppp.karnataka.gov.in only)
ವಿಷಯ: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ರಾಜರಾಜೇಶ್ವರಿನಗರ ವಿಭಾಗ ವ್ಯಾಪ್ತಿಯಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಹೊರಡಿಸಿರುವ ಅಲ್ಪಾವಧಿ ಟೆಂಡರ್ ಪ್ರಕಟಣೆಯನ್ನು ಮುಂದೂಡುವ ಬಗ್ಗೆ.
ಉಲ್ಲೇಖ: ಅಲ್ಪಾವಧಿ ಟೆಂಡರ್ ನೋಟಿಫಿಕೇಷನ್ ಸಂ:ಕಾಪಾಅ/ರಾರಾನವಿ/ಟೆಂಡರ್/04/2024–25, ದಿನಾಂಕ: 07.12.2024
ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಉಲ್ಲೇಖ ರೀತ್ಯಾ ಟೆಂಡರ್ ಕರೆಯಲಾಗಿದ್ದು, ತಾಂತ್ರಿಕ ಕಾರಣಗಳಿಂದ ಕೆಪಿಪಿ ಪೋರ್ಟಲ್ ಮೂಲಕ ಪ್ರಿಬಿಡ್ ಟೆಂಡರನ್ನು ಸಲ್ಲಿಸುವ ಅಂತಿಮ ದಿನಾಂಕ, ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ, ತಾಂತ್ರಿಕ ಮತ್ತು ಆರ್ಥಿಕ ಬಿಡ್‌ನ್ನು ದಿನಾಂಕಗಳನ್ನು ಮುಂದೂಡಲಾಗಿದ್ದು, ಮುಂದೂಡಿದ ದಿನಾಂಕಗಳು ಈ ಕೆಳಕಂಡಂತಿವೆ.
ಮಾರ್ಪಾಡಾದ ಟೆಂಡರ್ ವೇಳಾಪಟ್ಟಿ
(1) ಬಿಡ್ ಪೂರ್ವಭಾವಿ ಸಭೆಯನ್ನು ಮುಖ್ಯ ಅಭಿಯಂತರರ ಕಚೇರಿ, ರಾಜರಾಜೇಶ್ವರಿನಗರ ವಲಯದಲ್ಲಿ ದಿನಾಂಕ 26.12.2024ರ ಬೆಳಿಗ್ಗೆ 11:00 ಗಂಟೆಗೆ ನಡೆಸಲಾಗುವುದು. (2) ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್‌ನಲ್ಲಿ ದಿನಾಂಕ 01.01.2025ರ ಸಂಜೆ 4:00 ಗಂಟೆಯೊಳಗೆ ಸಲ್ಲಿಸುವುದು. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 02.01.2025ರ ಸಂಜೆ 4:30 ಗಂಟೆಗೆ ಅಥವಾ ನಂತರ ತೆರೆಯಲಾಗುವುದು. (5) ಆರ್ಥಿಕ ಬಿಡ್‌ಗಳನ್ನು ದಿನಾಂಕ 03.01.2025ರ ಸಂಜೆ 4:30 ಗಂಟೆಗೆ ಅಥವಾ ನಂತರ ತೆರೆಯಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ರಾಜರಾಜೇಶ್ವರಿನಗರ ವಿಭಾಗ

90 ಸಬ್‌ರಿಜಿಸ್ಟ್ರಾರ್‌ಗಳ ಎತ್ತಂಗಡಿ

ಒಂದನೇ ಪುಟದಿಂದ...
ವರ್ಗಾವಣೆಯಲ್ಲಿ ಪಾರದರ್ಶಕತೆ ತರುವ ಉದ್ದೇಶದಿಂದ ಇದೇ ಮೊದಲ ಬಾರಿ ಕೌನ್ಸೆಲಿಂಗ್ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿತ್ತು.

ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ (ಬಿಎಂಆರ್‌ಡಿಎ) ಹಾಗೂ ಮಹಾನಗರ ಪಾಲಿಕೆ ಕೇಂದ್ರ ಸ್ಥಾನಗಳ ಹುದ್ದೆಗಳನ್ನು ಕೌನ್ಸೆಲಿಂಗ್ ಮೂಲಕ ಆಯ್ಕೆ ಮಾಡಿಕೊಳ್ಳಲು ಷರತ್ತುಗಳನ್ನು ವಿಧಿಸಿರುವ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಉಪ ನೋಂದಣಾಧಿಕಾರಿಗಳು, ಹಿರಿಯ ಉಪ ನೋಂದಣಾಧಿಕಾರಿಗಳು, ಹೆಚ್ಚುವರಿ ಉಪ ನೋಂದಣಾಧಿಕಾರಿಗಳು, ಕೇಂದ್ರ ಸ್ಥಾನ ಸಹಾಯಕರು ಕರ್ನಾಟಕ ಆಡಳಿತ ನ್ಯಾಯಮಂಡಳಿ ಹಾಗೂ ಹೈಕೋರ್ಟ್ ಮೆಟ್ಟಿಲೇರಿದ್ದರು.

ಕೆಎಟಿ ತೀರ್ಪಿನ ಪ್ರಕಾರ, ವರ್ಗಾವಣೆ ಆದೇಶದಲ್ಲಿನ ನ್ಯೂನತೆ ಸರಿಪಡಿಸಿ ಎರಡು ವಾರಗಳ ಹಿಂದೆ ವರ್ಗಾವಣೆಗೆ ಸಿದ್ಧತೆ ನಡೆಸಲಾಗಿತ್ತು. ಆದರೆ, ಕೆಲವರ ವರ್ಗಾವಣೆಗೆ ಹೈಕೋರ್ಟ್ ತಡೆ ನೀಡಿದ್ದರಿಂದ ಪ್ರಕ್ರಿಯೆಗಳು ಮತ್ತೆ ಸ್ಥಗಿತವಾಗಿದ್ದವು. ಈಗ ಹೈಕೋರ್ಟ್‌ನ ಮಧ್ಯಂತರ ಆದೇಶದಂತೆ ದೀರ್ಘ ಸಮಯ ಠಿಕಾಣಿ ಹೂಡಿದ್ದ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ವರ್ಗಾವಣೆ ಮಾಡಲಾಗಿದೆ.

'ಮಹಾನಗರ' ಮೋಹ: ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳ (ಬಿಎಂಆರ್‌ಡಿಎ ವ್ಯಾಪ್ತಿ) ಉಪ ನೋಂದಣಾಧಿಕಾರಿಗಳ ಕಚೇರಿಯಲ್ಲಿ ಐದು ವರ್ಷ ಪೂರ್ಣಗೊಳಿಸಿರುವ ಹಾಗೂ ಮಹಾನಗರ ಪಾಲಿಕೆಗಳಾದ ಬೆಳಗಾವಿ, ಬಳ್ಳಾರಿ, ದಾವಣಗೆರೆ, ಹುಬ್ಬಳ್ಳಿ-ಧಾರವಾಡ, ಕಲಬುರಗಿ, ಮಂಗಳೂರು, ಮೈಸೂರು, ಶಿವಮೊಗ್ಗ, ತುಮಕೂರು ಹಾಗೂ ವಿಜಯಪುರ ಕೇಂದ್ರ ಸ್ಥಾನದ ತಾಲ್ಲೂಕುಗಳಲ್ಲಿ ನಾಲ್ಕು ವರ್ಷ ಮೇಲ್ಪಟ್ಟು ಕಾರ್ಯನಿರ್ವಹಿಸಿದವರು ಮತ್ತೆ ಅದೇ ವ್ಯಾಪ್ತಿಯ ಕಚೇರಿಗಳನ್ನು ಆಯ್ಕೆ ಮಾಡಿಕೊಳ್ಳುವಂತಿಲ್ಲ. ಅಂಥವರು ತಾಲ್ಲೂಕು ಕೇಂದ್ರಗಳಿಗೆ ತೆರಳಬೇಕು ಎಂದು ವರ್ಗಾವಣೆಯ ಹೊಸ ಆದೇಶದಲ್ಲಿ ಉಲ್ಲೇಖಿಸಲಾಗಿತ್ತು. ಶೇ 99ರಷ್ಟು ಅಧಿಕಾರಿಗಳು 8–10 ವರ್ಷಗಳಿಗೂ ಮೇಲ್ಪಟ್ಟು ಈ ವ್ಯಾಪ್ತಿಯ ಪ್ರದೇಶದಲ್ಲೇ ಕೆಲಸ ಮಾಡುತ್ತಿದ್ದರು. ಮಹಾನಗರ ತೊರೆಯಲು ನಿರಾಕರಿಸಿ, ಸರ್ಕಾರದ ವಿರುದ್ಧ ಕೋರ್ಟ್ ಮೊರೆಹೋಗಿದ್ದರು.

ಮಂಗಳೂರು ವಚನ ಸಾಹಿತ್ಯ ಸಮ್ಮೇಳನಕ್ಕೆ ಅರವಿಂದ ಜತ್ತಿ ಅಧ್ಯಕ್ಷ

ಮಂಗಳೂರು: ನಗರದಲ್ಲಿ 2025ರ ಜನವರಿ 4ರಂದು ನಡೆಯುವ ರಾಜ್ಯಮಟ್ಟದ ವಚನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಬಸವ ಸಮಿತಿ ಅಧ್ಯಕ್ಷ ಅರವಿಂದ ಜತ್ತಿ ಅವರನ್ನು ಆಯ್ಕೆಮಾಡಲಾಗಿದೆ ಎಂದು ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷ ಎಸ್. ಪ್ರದೀಪಕುಮಾರ ಕಲ್ಕೂರ ಮತ್ತು ಅಕ್ಕಮಹಾದೇವಿ ವೀರಶೈವ ಮಹಿಳಾ ಸಂಘದ ಅಧ್ಯಕ್ಷೆ ಸುಮಾ ಅರುಣ್ ಮಾನ್ವಿ ತಿಳಿಸಿದ್ದಾರೆ.

ಸುಧಾ, ಮಯೂರ ಓದಿರಿ

ಕರ್ನಾಟಕ ಸರ್ಕಾರ

ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

Phone No:0836-2373348

ಕ್ರಸಂ.: ಕೆಎಂಸಿಆರ್‌ಆಯ್/ಎಸ್.ಯು.ಪಿ.(5)/EQP/Neuro/67/2024–25 ದಿನಾಂಕ: 24–12–2024
ಕ್ರಸಂ.: ಕೆಎಂಸಿಆರ್‌ಆಯ್/ಎಸ್.ಯು.ಪಿ.(5)/EQP/Surgical Oncology/79/2024–25 ದಿನಾಂಕ: 24–12–2024

Tender Notification (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ನಿರ್ದೇಶಕರು, ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿಯ Neuro Surgery & Surgical Oncology ವಿಭಾಗಕ್ಕೆ ಅವಶ್ಯವಿರುವ ಉಪಕರಣ ಪೂರೈಸುವುದಕ್ಕಾಗಿ ಅರ್ಹ ಟೆಂಡರದಾರರಾದ ಉತ್ಪಾದಕರು / ಅಧಿಕೃತ ಏಜೆಂಟ್ಸ್ / ಅಧಿಕೃತ ವಿತರಕರಿಂದ ಪೂರೈಸುವುದಕ್ಕಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ಅಧಿನಿಯಮ 1999–2000 ಅನ್ವಯ ಇ–ಟೆಂಡರ್ ಪ್ರಕಟಣೆ ಆಹ್ವಾನಿಸಲಾಗಿದೆ.

01	Tenders may be uploaded from	25-12-2024
02	Last date for Tender Queries (will be considered in writing letter pad)	30-12-2024
03	Pre-bid Meeting	31-12-2024
04	Last date for uploading the tenders	15-01-2025 before 5-00 PM

ಟೆಂಡರ್ ದಾಖಲೆಗಳು, ಪ್ರೊಸೆಸಿಂಗ್ ಶುಲ್ಕ, ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ www.kppp.karnataka.gov.in ಮೂಲಕ ಮಾಹಿತಿ ಪಡೆಯಬಹುದು ಅಥವಾ ಕೆಲಸದ ವೇಳೆಯಲ್ಲಿ ಮಾನ್ಯ ನಿರ್ದೇಶಕರು ಕೆ.ಎಂ.ಸಿ.ಆರ್.ಆಯ್. ಹುಬ್ಬಳ್ಳಿ ಇವರನ್ನು ಸಂಪರ್ಕಿಸಬಹುದು. ಈ ಕೆಳಗೆ ಸಹಿ ಮಾಡಿದ ಅಧಿಕಾರಿಯು ಟೆಂಡರನ್ನು ಒಪ್ಪುವ ಅಥವಾ ಯಾವುದೇ ಸಮಯದಲ್ಲಿ ಯಾವುದೇ ಕಾರಣ ನೀಡದೇ ಟೆಂಡರನ್ನು ತಿರಸ್ಕರಿಸುವ ಅಧಿಕಾರವನ್ನು ಹೊಂದಿರುತ್ತಾರೆ.

ಸಹಿ/– (ನಿರ್ದೇಶಕರು)
ಕರ್ನಾಟಕ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಹುಬ್ಬಳ್ಳಿ

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ

ಜಿಲ್ಲಾ ಸರ್ವೇಕ್ಷಣಾ ಘಟಕ, ಮೈಸೂರು ಜಿಲ್ಲೆ, ಮೈಸೂರು.

ಎನ್.ಪಿ.ಸಿ. ಆಸ್ಪತ್ರೆ ಆವರಣ, ನಜ಼ರ್‌ಬಾದ್, ಮೈಸೂರು–570010.
ದೂರವಾಣಿ ಸಂಖ್ಯೆ: 0821–2971847/2443178
E-Mail Id: dsomysuru@gmail.com/ dhomysore@gmail.com

ಸಂಖ್ಯೆ:ಎನ್.ಹೆಚ್.ಎಂ/ಡಿ.ಎಸ್.ಯು/15ನೇಹಣಕಾಸು/ಮೈ/03/2023–24
ದಿನಾಂಕ: 21.12.2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

15ನೇ ಹಣಕಾಸು ಆಯೋಗದಡಿಯಲ್ಲಿ ರಾಷ್ಟ್ರೀಯ ಉಚಿತ ರೋಗ ಪತ್ತೆ ಸೇವೆಗಳ ಕಾರ್ಯಕ್ರಮಕ್ಕೆ ಮೈಸೂರು ಜಿಲ್ಲೆಯ 118 ಪ್ರಾಥಮಿಕ ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಿಗೆ ಹಾಗೂ 396 ಉಪಕೇಂದ್ರ–ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳಿಗೆ ಅಗತ್ಯವಿರುವ ರೋಗ ಪತ್ತೆ ಕಿಟ್‌ಗಳನ್ನು, ರಾಸಾಯನಿಕಗಳನ್ನು ಮತ್ತು ಪರಿಕರಗಳನ್ನು ಖರೀದಿಸಲು ಅಲ್ಪಾವದಿ ಇ–ಟೆಂಡರ್ ಆಹ್ವಾನಿಸಿರುವ ಬಗ್ಗೆ. ಅಧಿಸೂಚನೆ ಸಂಖ್ಯೆ: ಎನ್.ಹೆಚ್.ಎಂ/ಡಿ.ಎಸ್.ಯು/15ನೇಹಣಕಾಸು/ಮೈ/03/2023–24 ದಿನಾಂಕ: 20.02.2024. ಇ–ಟೆಂಡರ್ ಅಂದಾಜು ಮೊಬಲಗು ರೂ.2,03,86,000/– ಇ.ಎಂ.ಡಿ ರೂ.4,07,720/–

ಇ–ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಅಂದಾಜು ಮೌಲ್ಯ ರೂ.2,03,86,000=00 **2)** ಇ.ಎಂ.ಡಿ ಮೊಬಲಗು (2%) ರೂ.4,07,720=00 **3)** ಭದ್ರತಾ ಠೇವಣಿ (3%) ರೂ.6,11,580=00 **4)** ಟೆಂಡರ್ ಅಪ್‌ಲೋಡ್ ಮಾಡಲು ಪ್ರಾರಂಭ ದಿನಾಂಕ ಮತ್ತು ಸಮಯ ದಿ: 21.12.2024 ರಂದು ಮಧ್ಯಾಹ್ನ 03:00 ಗಂಟೆಗೆ. **5)** ಪ್ರೀಬಿಡ್ ಸಭೆ ನಡೆಯುವ ದಿನಾಂಕ ಮತ್ತು ಸಮಯ ದಿ: 30.12.2024 ರಂದು ಬೆಳಿಗ್ಗೆ 11:00 ಗಂಟೆಗೆ. **6)** ಟೆಂಡರ್ ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ ದಿ: 08.01.2025 ರಂದು ಸಂಜೆ 04:30 ಗಂಟೆಗೆ. **7)** ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ ದಿ: 10.01.2025 ರಂದು ಸಂಜೆ 05:00 ಗಂಟೆಗೆ. **8)** ಮಾದರಿ ಪರೀಕ್ಷೆಗಳನ್ನು ಸಲ್ಲಿಸುವ ದಿ: 13.01.2025 ರಂದು ಬೆಳಗ್ಗೆ 10:00 ಗಂಟೆಗೆ ಅಥವಾ ನಂತರ. **9)** ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ ದಿ: 17.01.2025 ರಂದು ಸಂಜೆ 05:30 ಗಂಟೆಗೆ ಅಥವಾ ನಂತರ. **10)** ಟೆಂಡರ್ ತೆರೆಯುವ ಸ್ಥಳ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ, ನಜರ್‌ಬಾದ್, ಮೈಸೂರು

ಹೆಚ್ಚಿನ ಮಾಹಿತಿಗಾಗಿ: ಜಿಲ್ಲಾ ಆರೋಗ್ಯ ಮತ್ತು ಕಲ್ಯಾಣ ಸೊಸೈಟಿ, ಜಿಲ್ಲಾ ಆರೋಗ್ಯ ಮತ್ತು ಕಲ್ಯಾಣಾಧಿಕಾರಿಗಳ ಕಛೇರಿ, ಎನ್.ಪಿ.ಸಿ ಆಸ್ಪತ್ರೆ ಆವರಣ, ನಜರ್‌ಬಾದ್, ಮೈಸೂರು–10 ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/– ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು/ಕಾರ್ಯಕ್ರಮಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು.

DIPR/DDMYS/1007/KSMCA/675/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ,
ಶಿವಾಜಿನಗರ ವಿಭಾಗ, ತಿಮ್ಮಯ್ಯ ರಸ್ತೆ, ಕ್ವೀನ್ಸ್ ರಸ್ತೆ, ಬೆಂಗಳೂರು – 560052.

ಸಂಖ್ಯೆ:ಕಾ.ಅ.(ಎಸ್‌ಜೆಎನ್)/ಕೆಪಿಪಿಪಿ/ಟೆಂಡರ್/16/2024–25 ದಿನಾಂಕ: 24–12–2024

ಅಲ್ಪಾವಧಿ ಟೆಂಡರ್ ಆಹ್ವಾನಿಸುವ ಪ್ರಕಟಣೆ (ಎನ್‌ಐಟಿ)

(ದ್ವಿ–ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಶಿವಾಜಿನಗರ ವಿಭಾಗ), ಪೂರ್ವ ವಲಯ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಬಿಬಿಎಂಪಿ / ಕೆಪಿಡಬ್ಲ್ಯೂಡಿ / ಸಿಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ – ಕೆಡಬ್ಲ್ಯೂ–01 ಮತ್ತು ಕೆಡಬ್ಲ್ಯೂ–03)

ಕ್ರ. ಸಂ.	ಕಾಮಗಾರಿಯ ಹೆಸರು / ಪ್ರವರ್ಗ
1	ವಾರ್ಡ್ ಸಂಖ್ಯೆ. 91 ರ ಭಾರತಿನಗರದ ಶಿವಣ್ಣಶೆಟ್ಟಿ ಗಾರ್ಡನ್ ಇಲ್ಲಿ ಸಮಗ್ರ ಅಭಿವೃದ್ಧಿಶೀಲ ಕಾಮಗಾರಿಗಳು. (ಎಸ್.ಸಿ) – **ಬಿಬಿಎಂಪಿ/2024–25/ಓಡಬ್ಲ್ಯೂ/ ವರ್ಕ್_ಇಂಡೆಂಟ್3953/ಕರೆ–2, ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 100.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): ರೂ. 1,00,000.00**
2	ವಾರ್ಡ್ ಸಂಖ್ಯೆ. 92 ರ ಶಿವಾಜಿನಗರದ ನೆಹರುಪುರಂ ಇಲ್ಲಿ ಸಮಗ್ರ ಅಭಿವೃದ್ಧಿಶೀಲ ಕಾಮಗಾರಿಗಳು. (ಎಸ್.ಸಿ) – **ಬಿಬಿಎಂಪಿ/2024–25/ಓಡಬ್ಲ್ಯೂ/ ವರ್ಕ್_ಇಂಡೆಂಟ್ 3954/ಕರೆ–2, ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 100.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): ರೂ. 1,00,000.00**
3	ವಾರ್ಡ್ ಸಂಖ್ಯೆ. 90 ಇಲ್ಲಿನ ಗಾರ್ಬೇಜ್ ಬ್ಲಾಕ್ ಸ್ಪಾಟ್‌ಗಳಲ್ಲಿ ಸಿ.ಸಿ. ಕ್ಯಾಮರಾ ಒದಗಿಸುವ ಕಾಮಗಾರಿ. **(ಸಾಮಾನ್ಯ) – ಬಿಬಿಎಂಪಿ/2024–25/ಓಡಬ್ಲ್ಯೂ/ ವರ್ಕ್_ಇಂಡೆಂಟ್ 3938/ಕರೆ–2, ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 10.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): ರೂ. 25,000.00**
4	ವಾರ್ಡ್ ಸಂಖ್ಯೆ. 117 (ಹಳೇ ವಾರ್ಡ್ ಸಂಖ್ಯೆ. 93), ವಸಂತನಗರ ಇಲ್ಲಿನ ಶಿವಾಜಿನಗರದ ಎಂಎಲ್ಎ ಕಛೇರಿ ಯುಎನ್‌ಐ ಕಟ್ಟಡದಲ್ಲಿ ಸ್ವಚ್ಛತಾ ಸೌಲಭ್ಯವನ್ನು ಒದಗಿಸುವ ಕಾಮಗಾರಿ. **(ಸಾಮಾನ್ಯ) – ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 10.20, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): ರೂ. 25,500.00**
5	ವಾರ್ಡ್ ಸಂಖ್ಯೆ. 117 (ಹಳೇ ವಾರ್ಡ್ ಸಂಖ್ಯೆ. 93) , ವಸಂತನಗರ ಇಲ್ಲಿನ ಬ್ಲಾಕ್ ಸಂಖ್ಯೆ. 50 ರಲ್ಲಿ ಎಸ್‌ಸಿಪಿ ಮತ್ತು ಟಿಎಸ್‌ಪಿ ಅನುದಾನದಡಿಯಲ್ಲಿ ಸೋಲಾರ್ ಸ್ಟ್ರೀಟ್ ಲೈಟ್ ಒದಗಿಸುವ ಕಾಮಗಾರಿ. (ಎಸ್.ಸಿ) – **ಬಿಬಿಎಂಪಿ/2023–24/ಓಡಬ್ಲ್ಯೂ/ ವರ್ಕ್_ಇಂಡೆಂಟ್2248/ಕರೆ–3, ಕಾಮಗಾರಿಯ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 3.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): ರೂ. 3,750.00**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **26–12–2024 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಬಿಡ್ ಪೂರ್ವಭಾವಿ ಸಭೆ ದಿನಾಂಕ: **02–01–2025 ರಂದು ಅಪರಾಹ್ನ 12.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಶಿವಾಜಿನಗರ ವಿಭಾಗ, ಕ್ವೀನ್ಸ್ ರಸ್ತೆ, ಬೆಂಗಳೂರು – 560052 ಇಲ್ಲಿ ನಡೆಯುತ್ತದೆ.** 3) ಭರ್ತಿ ಮಾಡಿದ ಟೆಂಡರ್ ಡಾಕ್ಯೂಮೆಂಟ್‌ನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **03–01–2025 ರಂದು ಸಂಜೆ 4.00 ಗಂಟೆಯವರೆಗೆ.** 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ: **04–01–2025 ರಂದು ಸಂಜೆ 4.30 ಗಂಟೆಗೆ (ಸಾಧ್ಯವಾದಲ್ಲಿ ಅಥವಾ ಮುಂದಿನ ಕೆಲಸದ ದಿನದಂದು).** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಶಿವಾಜಿನಗರ ವಿಭಾಗ, ಬಿಬಿಎಂಪಿ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ: ದಾವಣಗೆರೆ ವಿಭಾಗ: ದಾವಣಗೆರೆ

ಸಂ: ಕರಾಸಾ:ದಾವಿ:ಸಂ:ವಾ:2759:2024–25 ದಿನಾಂಕ: 23.12.2024

ಇ–ಟೆಂಡರ್ ಪ್ರಕಟಣೆ ಸಂಖ್ಯೆ: 10/2024–25 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಕ.ರಾ.ರ.ಸಾ.ನಿಗಮ, ದಾವಣಗೆರೆ ವಿಭಾಗದ ವ್ಯಾಪ್ತಿಗೆ ಬರುವ ಸ್ಮಾರ್ಟ್ ಸಿಟಿ ದಾವಣಗೆರೆ ಬಸ್ ನಿಲ್ದಾಣದಲ್ಲಿರುವ ತಳ ಅಂತಸ್ತು (ಪಾರ್ಕಿಂಗ್ ಸ್ಥಳ), ನೆಲ ಅಂತಸ್ತು, ಮೊದಲ ಅಂತಸ್ತು, ಎರಡನೇ ಅಂತಸ್ತು ಮತ್ತು ಮೂರನೇ ಅಂತಸ್ತು ಒಟ್ಟು ಸೇರಿ ಒಂದೇ ಪರವಾನಿಗೆ ನೀಡುವ ಸಲುವಾಗಿ "As is where is basis" ಆಧಾರದಲ್ಲಿ ಏಕೈಕ ಪರವಾನಿಗೆಗೆ 06 ವರ್ಷದ ಅವಧಿಗೆ (ಪ್ರತಿ ವರ್ಷ ಶೇ. 05ರಷ್ಟು ಪರವಾನಿಗೆ ಶುಲ್ಕದ ಹೆಚ್ಚಳದೊಂದಿಗೆ) ಪರವಾನಿಗೆ ನೀಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಅರ್ಜಿಯನ್ನು ಆಹ್ವಾನಿಸಲಾಗಿದೆ. ಇ–ಟೆಂಡರ್ ದಸ್ತಾವೇಜುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ https://kppp.karnataka.gov.in ನಿಂದ ಹಾಗೂ ನಿಗಮದ ವೆಬ್‌ಸೈಟ್: ksrtc.karnataka.gov.in ನಿಂದ ದಿನಾಂಕ: **23.12.2024 ರಿಂದ** ಡೌನ್‌ಲೋಡ್ ಮಾಡಿಕೊಳ್ಳಬಹುದು. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **13.01.2025ರ ಸಂಜೆ 5.00 ಗಂಟೆವರೆಗೆ.** ಸಾಮಾನ್ಯ ಸ್ಥಾಯಿ ಆದೇಶ ಸಂಖ್ಯೆ: 787/2017, 794/2018 ಮತ್ತು 809/2021 ಹಾಗೂ ಅದರ ತಿದ್ದುಪಡಿ ಆದೇಶದಂತೆ ಇ–ಟೆಂಡರ್ ವಿವರ.

ಕ್ರ.ಸಂ.	ಬಸ್ ನಿಲ್ದಾಣದ ಹೆಸರು	ಮಳಿಗೆಯ ವಿವರ	ವಿಸ್ತೀರ್ಣ (ಚ.ಅ)	ಪರವಾನಿಗೆ ಅವಧಿ	ಕನಿಷ್ಠ ಮಾಸಿಕ ಪರವಾನಿಗೆ ಶುಲ್ಕ (ಜಿಎಸ್‌ಟಿ ಹಾಗೂ ಇನ್ನಿತರ ಶುಲ್ಕ ಒಳಗೊಂಡಿರುವುದಿಲ್ಲ (ರೂ.ಗಳಲ್ಲಿ)	ಡಿ.ಡಿ. ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಇ.ಎಂ.ಡಿ. ಮೊತ್ತ (ರೂ.ಗಳಲ್ಲಿ)	ಕೆಪಿಪಿ ಪೋರ್ಟಲ್ ಮೂಲಕ ಪಾವತಿಸಬೇಕಾದ ಇ.ಎಂ.ಡಿ ಮೊತ್ತ (ರೂ.ಗಳಲ್ಲಿ)	ಡಿಡಿ ಮೂಲಕ ಈ ಕಛೇರಿಗೆ ಸಲ್ಲಿಸಬೇಕಾದ ಅರ್ಜಿ ಶುಲ್ಕ + ಜಿಎಸ್‌ಟಿ (ರೂ.ಗಳಲ್ಲಿ)
01	ಸ್ಮಾರ್ಟ್ ಸಿಟಿ ದಾವಣಗೆರೆ ಬಸ್ ನಿಲ್ದಾಣ	ಶಾಪಿಂಗ್ ಮಾಲ್ ಏರಿಯಾ	130862.37	06 ವರ್ಷ	54,87,000/–	1,64,60,500/–	500/–	3540/–

ಸಂಪರ್ಕಿಸುವ ದೂರವಾಣಿ ಸಂಖ್ಯೆ: **ವಿಭಾಗ ಸಂಚಾರ ಅಧಿಕಾರಿ – 7760990452, ಸಹಾಯಕ ಸಂಚಾರ ಅಧೀಕ್ಷಕಿ – 7022030183**

ಸಹಿ/–
ವಿಭಾಗೀಯ ನಿಯಂತ್ರಣಾಧಿಕಾರಿ,
ಕ.ರಾ.ರ.ಸಾ.ನಿಗಮ: ದಾವಣಗೆರೆ ವಿಭಾಗ

ವಾಸಾಸಂಇ/ವಾ.ಪ್ರ/3968/ಎಂಎಎ/24–25

ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ಕಂಪನಿ ನಿಯಮಿತ

ನೋಂದಣಿ ಕಛೇರಿ: 30/1, 1ನೇ ಹಾಗೂ 2ನೇ ಮಹಡಿ, ಯುಎನ್‌ಐ ಕಟ್ಟಡ, ತಿಮ್ಮಯ್ಯ ರಸ್ತೆ, ಮಿಲ್ಲರ್ಸ್ ಟ್ಯಾಂಕ್ ಬಂಡ್ ಏರಿಯಾ, ವಸಂತನಗರ, ಬೆಂಗಳೂರು–560 051. ಇ–ಮೇಲ್ ಐಡಿ: bluruswml2021@gmail.com

ಸಂಖ್ಯೆ: ಉಪ್ರವ್ಯ–3/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್–07/ತಿದ್ದುಪಡಿ–01/2024–25 ದಿನಾಂಕ: 24.12.2024

ತಿದ್ದುಪಡಿ–01

ವಿಷಯ: ಟೆಂಡರ್ ಪ್ರಕಟಣೆಯ ವೇಳಾ ಪಟ್ಟಿ ವಿಸ್ತರಣೆ
ಉಲ್ಲೇಖ: ಈ ಕಛೇರಿ ಟೆಂಡರ್ ಪ್ರಕಟಣೆ ಸಂಖ್ಯೆ: ಉಪ್ರವ್ಯ–3/ಬಿಎಸ್‌ಡಬ್ಲ್ಯೂಎಂಎಲ್/ಟೆಂಡರ್/07/ತಿದ್ದುಪಡಿ–01/2024–25 ದಿನಾಂಕ: 12.12.2024

******

ಮೇಲಿನ ವಿಷಯಕ್ಕೆ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, ಮೇಲಿನ ಟೆಂಡರ್ ಪ್ರಕಟಣೆಯ ವೇಳಾ ಪಟ್ಟಿಯನ್ನು ಆಡಳಿತ ಹಾಗೂ ತಾಂತ್ರಿಕ ಕಾರಣಗಳಿಂದಾಗಿ ವಿಸ್ತರಿಸಲಾಗಿದೆ

ನಿಗಧಿತ ಅವಧಿ / ವೇಳಾ ಪಟ್ಟಿ

ಕ್ರಮ ಸಂಖ್ಯೆ	ವಿವರ	ಟೆಂಡರ್ ಪ್ರಕಟಣೆ ಪ್ರಕಾರ	ವಿಸ್ತರಿಸಲಾದ ದಿನಾಂಕಗಳನ್ನು ಓದಿಕೊಳ್ಳುವುದು
1	ಕೆಪಿಪಿ ಪೋರ್ಟಲ್‌ನಲ್ಲಿ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ	26.12.2024 ರಂದು 16:00 ಗಂಟೆಗೆ ಮುಂಚಿತವಾಗಿ	02.01.2025 ರಂದು 16:00 ಗಂಟೆಗೆ ಮುಂಚಿತವಾಗಿ
2	ಕೆಪಿಪಿ ಪೋರ್ಟಲ್‌ನಲ್ಲಿ ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ	27.12.2024 ರಂದು 16:30 ಗಂಟೆಯ ನಂತರ	03.01.2025 ರಂದು 16:30 ಗಂಟೆಯ ನಂತರ

ಹೆಚ್ಚಿನ ವಿವರಗಳಿಗಾಗಿ ಜಿಓಕೆ ಕೆಪಿಪಿ ಪೋರ್ಟಲ್ ವೆಬ್‌ಸೈಟ್ **www.kppp.karnataka.gov.in** ಗೆ ಭೇಟಿ ನೀಡಿ

ಸಹಿ/–
ಉಪ ಪ್ರಧಾನ ವ್ಯವಸ್ಥಾಪಕರು–03
ಬಿಎಸ್‌ಡಬ್ಲ್ಯೂಎಂಎಲ್

ವಾಸಾಸಂಇ/ವಾಪ್ರ/3971/ಆಕಾರ್/2024–25

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.
ದೂರವಾಣಿ ಸಂಖ್ಯೆ: 080-22265383. email: cdoce2@kiadb.in, Website: www.kiadb.in

ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಇಎನ್‌ಟಿಡಿ–ಡಿಪಿಆರ್–01/1889/2024–25 ದಿನಾಂಕ:23.12.2024

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ವಿವರವಾದ ಯೋಜನಾ ವರದಿ ಸೇವೆಗಾಗಿ (ಡಿಪಿಆರ್)
(ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಆರ್ಥಿಕ ವಿಶ್ಲೇಷಣೆ, ಸಮೀಕ್ಷೆ, ಯೋಜನಾ ವಿನ್ಯಾಸ, ಸಮಾಲೋಚನೆ ಸೇವೆಗಳೊಂದಿಗೆ ವಿವರವಾದ ಯೋಜನಾ ವರದಿ (ಡಿಪಿಆರ್) ತಯಾರಿಸಲು ಬೆಂಗಳೂರಿನಲ್ಲಿ ಕಛೇರಿ ಹೊಂದಿರುವ ಹಾಗೂ ಇದೇ ರೀತಿಯ ಕೆಲಸದ ಅನುಭವ ಹೊಂದಿರುವ ಅರ್ಹ ಸಲಹೆಗಾರರು/ಸಂಸ್ಥೆಗಳಿಂದ ದ್ವಿಲಕೋಟೆ ಪದ್ಧತಿಯಡಿಯಲ್ಲಿ ಸಂಪೂರ್ಣ ಟರ್ನ್‌ಕೀ ಆಧಾರದ ಮೇಲೆ ಟೆಂಡರನ್ನು ಆಹ್ವಾನಿಸಲಾಗಿದೆ. ರಾಯಚೂರು ಜಿಲ್ಲೆಯ ರಾಯಚೂರು ತಾಲೂಕಿನ ಕೃಷ್ಣಾ ನದಿಯಿಂದ ರಾಯಚೂರು ಗ್ರೌತ್ ಏರಿಯಾ, ದೇವಸೂಗೂರು 2ನೇ ಹಂತದ ವಸತಿ ಬಡಾವಣೆ, ಯರಮಾರಸ್ ಹಾಗೂ ರಾಯಚೂರು ಕೈಗಾರಿಕಾ ಪ್ರದೇಶಕ್ಕೆ 31 ಎಂಎಲ್‌ಡಿ ಎಕ್ಸ್‌ಟರ್ನಲ್ ನೀರು ಸರಬರಾಜು ಯೋಜನೆಯ ಅನುಷ್ಠಾನಕ್ಕೆ ಮತ್ತು ಕಲಬುರಗಿ ಜಿಲ್ಲೆಯ ಭೀಮಾ ನದಿಯಿಂದ ನಂದೂರು ಕೈಗಾರಿಕಾ ಪ್ರದೇಶದ 1ನೇ ಹಂತ, 2ನೇ ಹಂತ, 3ನೇ ಹಂತದ ಪ್ರದೇಶ, ಕಪ್ನೂರ್ ಕೈಗಾರಿಕಾ ಪ್ರದೇಶ 1ನೇ ಹಂತ, 2ನೇ ಹಂತ ಮತ್ತು 3ನೇ ಹಂತದ ಪ್ರದೇಶಕ್ಕೆ 20 ಎಂಎಲ್‌ಡಿ ಎಕ್ಸ್‌ಟರ್ನಲ್ ನೀರು ಸರಬರಾಜು ಯೋಜನೆಯ ಅನುಷ್ಠಾನ ಕಾಮಗಾರಿಗೆ ವಿವರವಾದ ಯೋಜನಾ ವರದಿಯನ್ನು ಒದಗಿಸುವುದು.

ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **07.01.2025ರ ಸಂಜೆ 4.00 ಗಂಟೆಯವರೆಗೆ.**

ಟೆಂಡರ್‌ದಾರರು ಬಿಡ್ಡಿಂಗ್ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–2

ವಾಸಾಸಂಇ/ವಾಪ್ರ/ಜಿಎ/3936/2024–25

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)

ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ವಿಭಾಗ, ಯಾದಗಿರಿ

ಸಂ.ಕಾನಿಅ/ಲೋಇ/ಯಾವಿ/ತಾಶಾ–1&2/ಇ–ಟೆಂಡರ್ ಪ್ರಕಟಣೆ/2024–25/ 2583, ದಿ:23.12.2024

ಅಲ್ಪಾವಧಿ ಇ –ಟೆಂಡರ್ ಅಧಿಸೂಚನೆ

1) ಕಾಮಗಾರಿ ವಿವರ: ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ, ಇಲಾಖೆ, ಯಾದಗಿರಿ ವಿಭಾಗ ಕಾರ್ಯಾಲಯದಿಂದ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮದಂತೆ ಸ್ಟ್ಯಾಂಡರ್ಡ ಬಿಡ್ ಡಾಕ್ಯುಮೆಂಟ್ ಕೆಡಬ್ಲ್ಯೂ–2, 3 ಮತ್ತು 4 ರಂತೆ ದ್ವಿ–ಲಕೋಟೆ ಪದ್ಧತಿಯಲ್ಲಿ ಈ ವಿಭಾಗ ವ್ಯಾಪ್ತಿಯಲ್ಲಿ ಬರುವ 2024–25 ನೇ ಸಾಲಿನ ಲೆಕ್ಕಶೀರ್ಷಿಕೆ ಅಪೆಂಡಿಕ್ಸ್–ಇ ಯೋಜನೆ, ಕೆ.ಕೆ.ಆರ್.ಡಿ.ಬಿ. ಯೋಜನೆ ಮತ್ತು ಕೆ.ಪಿ.ಎಸ್. ಶಾಲೆಗಳು ಅಡಿಯಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಯಾದಗಿರಿ ಜಿಲ್ಲೆ ಸುರಪೂರ ಉಪ–ವಿಭಾಗ (1)14496/2ನೇ ಕರೆ, (2)16002/2ನೇ ಕರೆ, (3)15830/2ನೇ ಕರೆ, (4)16083, (5)16082, (6)16953, (7)16812 ಹಾಗೂ (8)16792 ಮತ್ತು ಶಹಾಪೂರ ಉಪ–ವಿಭಾಗ (1)16907, (2)16694, (3)16691, (4)16689, (5)16693, (6)16690 ಮತ್ತು (7)15581 ಒಟ್ಟು 15 (ಹದಿನೈದು) ಕಾಮಗಾರಿಗಳಿಗೆ ಟೆಂಡರ್ ಆಹ್ವಾನಿಸಲಾಗಿದೆ. **2) ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ ರೂ.16.00 ಲಕ್ಷಗಳು ಹಾಗೂ ಗರಿಷ್ಠ ರೂ:400.00 ಲಕ್ಷಗಳು **3) ಗುತ್ತಿಗೆದಾರರ ಅರ್ಹತೆ ವಿವರ:** ಸಿವಿಲ್ 4ನೇ ದರ್ಜೆ ಹಾಗೂ ಮೇಲ್ಪಟ್ಟು **4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ:** ಅರ್ಜಿ ಬೆಲೆ, ಇ.ಎಮ್.ಡಿ ಮತ್ತು ಕಾಲಾವಧಿ kppp portal ನಂತೆ, **5) ಪ್ರೀ ಬಿಡ್ ಮೀಟಿಂಗ್ ದಿನಾಂಕ:** 01.01.2025 (11.30 ಗಂಟೆ ನಂತರ)(ಕೆಡಬ್ಲ್ಯೂ–4ರ ಕಾಮಗಾರಿಗಳಿಗೆ ಮಾತ್ರ) **6) ಟೆಂಡರ ಬಗ್ಗೆ ಮಾಹಿತಿ ಹಾಗೂ ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ:** 03.01.2025 (17.30 ಗಂಟೆವರೆಗೆ) **7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ:** 07.01.2025 (16.00 ಗಂಟೆವರೆಗೆ) **8) ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್:** 08.01.2025 (16.30 ಗಂಟೆ ನಂತರ) **9) ಆರ್ಥಿಕ ಬಿಡ್ ತೆರೆಯುವ ದಿನಾಂಕ:** 10.01.2025 (11.30 ಗಂಟೆ ನಂತರ) **10) ಹೆಚ್ಚಿನ ವಿವರಗಳಿಗೆ:** ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ ಯಾದಗಿರಿ ಕಚೇರಿ **11) ಅಂತರ್ಜಾಲ ತಾಣದ ವಿಳಾಸ:** https://kppp.karnataka.gov.in

ವಿಶೇಷ ಸೂಚನೆಃ ತಾಂತ್ರಿಕ ಕಾರಣಗಳಿಂದ ತಿದ್ದುಪಡಿ/ಬದಲಾವಣೆಯಾದಲ್ಲಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಮಾತ್ರ ಗಮನಿಸಬಹುದಾಗಿದೆ

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ,
ವಿಭಾಗ: ಯಾದಗಿರಿ.

ವಾ.ಸಾ.ಸಂ.ಇ/ಯಾದಗಿರಿ/372/ಕೆ.ಎಸ್.ಎಂ.ಸಿ.&ಎ/2024–25

ಬೆವಿಕಂ BESCOM

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಸಂಪೂರ್ಣವಾಗಿ ಕರ್ನಾಟಕ ರಾಜ್ಯ ಸರ್ಕಾರ ಸ್ವಾಮ್ಯಕ್ಕೆ ಒಳಪಟ್ಟಿದೆ)
(CIN-U04010KA2002SGC030438)

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿಪಿ ಮೂಲಕ ಮಾತ್ರ)

ಅಧೀಕ್ಷಕ ಇಂಜಿನಿಯರ್(ವಿ)., ಬೆವಿಕಂ, ತುಮಕೂರು ರವರು ತುಮಕೂರು ವೃತ್ತ, ಕಾರ್ಯ ವ್ಯಾಪ್ತಿಯಲ್ಲಿ ಬರುವ ಈ ಕೆಳಕಂಡ ಸಿವಿಲ್ ಕಾಮಗಾರಿಗಳಿಗೆ ಕೆಪಿಪಿಪಿ ಅಡಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ: (ಎರಡು ಕವರ್ ವ್ಯವಸ್ಥೆ)

ಕ್ರ. ಸಂ	ಕಾಮಗಾರಿಯ ಹೆಸರು	ಅಂದಾಜು ಪಟ್ಟಿ ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)	ವರ್ಗ
1	ಗುಬ್ಬಿಯ ಉಪವಿಭಾಗ ಕಚೇರಿ ಕಟ್ಟಡದ 1ನೇ ಮಹಡಿಯಲ್ಲಿ ಸಭಾಂಗಣ ನಿರ್ಮಾಣ ಮತ್ತು ಇತರ ಸಂಬಂಧಿತ ಕೆಲಸಗಳು.	42.36	84,720/-	ಇತರೆ
2	ತಿಪಟೂರಿನಲ್ಲಿ ಹೊಸದಾಗಿ ನಿರ್ಮಿಸಲಾದ ಉಪ ವಿಭಾಗ ಕಚೇರಿಗೆ ಹೆಚ್ಚುವರಿ ರೆಕಾರ್ಡ್ ರೂಂ / ಮೀಟಿಂಗ್ ಹಾಲ್ ಮತ್ತು ಇತರ ಸಂಬಂಧಿತ ಕಾರ್ಯಗಳ ನಿರ್ಮಾಣ.	42.20	84,400/-	ಇತರೆ
3	ಪಾವಗಡದ ಉಪವಿಭಾಗ ಕಚೇರಿ ಕಟ್ಟಡಕ್ಕೆ 1ನೇ ಮಹಡಿಯಲ್ಲಿ ಸಭಾಂಗಣ ನಿರ್ಮಾಣ ಮತ್ತು ಇತರ ಸಂಬಂಧಿತ ಕೆಲಸಗಳು.	40.67	81,340/-	ಇತರೆ
4	ತುಮಕೂರಿನ ಬೆಸ್ಕಾಂ ಆವರಣದಲ್ಲಿರುವ ಗ್ರಾಮೀಣ ಉಪವಿಭಾಗ ಕಚೇರಿ ಕಟ್ಟಡಕ್ಕೆ ಲಿಫ್ಟ್ ಮತ್ತು ಇತರ ಸಂಪರ್ಕಿತ ಸಿವಿಲ್ ಕಾಮಗಾರಿಗಳನ್ನು ಒದಗಿಸುವುದು.	29.66	59,320/-	ಇತರೆ

ಇಚ್ಛೆಯುಳ್ಳ ಅರ್ಹ ಗುತ್ತಿಗೆದಾರರು ಕರ್ನಾಟಕ ಸರ್ಕಾರದ ಕೆಪಿಪಿಪಿ ವೆಬ್‌ಸೈಟ್ **https://kppp.karnataka.gov.in** ಅಡಿಯಲ್ಲಿ ದಿನಾಂಕ: 31.12.2024ರ ನಂತರ ತಮ್ಮ ಬಳಕೆ ಐ.ಡಿ ರಿಜಿಸ್ಟರ್ ಮಾಡಿ ಲಾಗಿನ್ ಆಗುವ ಮೂಲಕ ಟೆಂಡರ್‌ನಲ್ಲಿ ಭಾಗವಹಿಸಲು ಕೋರಲಾಗಿದೆ.

ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912
ಬೆಸ್ಕಾಂ ಮಿತ್ರ Mobile APP ಡೌನ್‌ಲೋಡ್ ಮಾಡಿಕೊಳ್ಳಿ.

ಸಹಿ/– ಅಧೀಕ್ಷಕ ಇಂಜಿನಿಯರ್, (ವಿ),
ವಾ, ಕಾ ಮತ್ತು ಪಾ ವೃತ್ತ, ಬೆವಿಕಂ, ತುಮಕೂರು.

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ

ಕರ್ನಾಟಕ ಸರ್ಕಾರದ ಸಚಿವಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು

ಸಂ:ಅಪಜೀ 545 ಇಪಿಸಿ 2024 (ಭಾಗ–2) ದಿನಾಂಕ: 24.12.2024

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (KSPCB), ಬೆಂಗಳೂರು ಅಧ್ಯಕ್ಷರ ಹುದ್ದೆಯ ನಾಮನಿರ್ದೇಶನಕ್ಕಾಗಿ ಸರ್ಕಾರದ ಅಧಿಸೂಚನೆ ಸಂಖ್ಯೆ. ಅಪಜೀ 526 ಇಪಿಸಿ 2024 (ಭಾಗ–1), ದಿನಾಂಕ:18.12.2024ರಲ್ಲಿ ಹೊರಡಿಸಲಾದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ (ನಾಮನಿರ್ದೇಶನದ ವಿಧಾನ ಮತ್ತು ಇತರ ನಿಯಮಗಳು ಮತ್ತು ಅಧ್ಯಕ್ಷರು ಮತ್ತು ಸದಸ್ಯರ ಸೇವಾ ಷರತ್ತುಗಳು ಮತ್ತು ಸದಸ್ಯ ಕಾರ್ಯದರ್ಶಿಯ ನೇಮಕಾತಿ) ನಿಯಮಗಳು 2024ರ ನಿಯಮ 3 ರ ಉಪ ನಿಯಮ (7) ರ ಅನುಸಾರ ಪೂರ್ಣಕಾಲಿಕವಾಗಿ ನಾಮನಿರ್ದೇಶನದ ದಿನಾಂಕದಿಂದ 3 ವರ್ಷಗಳ ಅವಧಿಗೆ ನಾಮನಿರ್ದೇಶನ ಮಾಡಲು ಜಲ (ಮಾಲಿನ್ಯ ತಡೆ ಹಾಗೂ ನಿಯಂತ್ರಣ) ಕಾಯ್ದೆ 1974 ರ. ಸೆಕ್ಷನ್ 4 ರಲ್ಲಿ ನಿರ್ದಿಷ್ಟಪಡಿಸಿದ ಅರ್ಹತೆ ಹೊಂದಿರುವ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಆಹ್ವಾನಿಸಲಾಗಿದೆ.

2. ನಿಗದಿತ ಅರ್ಜಿಯ ನಮೂನೆ ವಿವರಗಳು ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯ ವೆಬ್‌ಸೈಟ್ **http://forest.karnataka.gov.in** ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವೆಬ್‌ಸೈಟ್ **http://kspcb.gov.in** ಗಳಲ್ಲಿ ಲಭ್ಯವಿರುತ್ತವೆ.

3. ಈ ಸಾರ್ವಜನಿಕ ಪ್ರಕಟಣೆ ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧ್ಯಕ್ಷರ ಹುದ್ದೆಯ ಅನುವರ್ತಿ ನಾಮನಿರ್ದೇಶನವು ಕೇಂದ್ರ ಸರ್ಕಾರದಿಂದ ಹಾಗೂ ರಾಜ್ಯ ಸರ್ಕಾರದಿಂದ ಹಾಗೂ ನ್ಯಾಯಾಲಯಗಳಿಂದ ಹೊರಡಿಸಲಾದ ಆದೇಶಗಳಿಗೆ ಒಳಪಟ್ಟಿರುತ್ತದೆ.

4. ಆಸಕ್ತ ಮತ್ತು ಅರ್ಹ ಅಭ್ಯರ್ಥಿಗಳು ತಮ್ಮ ಅರ್ಜಿಗಳನ್ನು (4 ಸೆಟ್ ಗಳಲ್ಲಿ) ನಿಗದಿತ ನಮೂನೆಯಲ್ಲಿ, ಈ ಸಾರ್ವಜನಿಕ ಪ್ರಕಟಣೆಯನ್ನು ಪ್ರಕಟಿಸಿದ ದಿನಾಂಕದಿಂದ 30 ದಿನಗಳೊಳಗೆ (ಸಾಮಾನ್ಯ ರಜಾ ದಿನಗಳನ್ನು ಒಳಗೊಂಡಂತೆ) ಈ ಕೆಳಗಿನ ವಿಳಾಸಕ್ಕೆ ಸಲ್ಲಿಸಲು ಕೋರಲಾಗಿದೆ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ ಕೊಠಡಿ ಸಂಖ್ಯೆ:448, 4ನೇ ಮಹಡಿ, 3ನೇ ಗೇಟ್, ಬಹುಮಹಡಿ ಕಟ್ಟಡ, ಬೆಂಗಳೂರು–560001

5. ಅಪೂರ್ಣ ಮತ್ತು ನಿರ್ದಿಷ್ಟಪಡಿಸಲಾದ ನಮೂನೆಯಲ್ಲಿರದ ಹಾಗೂ ನಿಗದಿತ ಅವಧಿ/ ಗಡುವು ಮುಕ್ತಾಯವಾದ ನಂತರ ಸ್ವೀಕೃತವಾಗುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅಂಚೆ ಅಥವಾ ಇತರೆ ಸ್ವರೂಪದ ವಿಳಂಬಗಳಿಗೆ ಈ ಕಛೇರಿಯು ಜವಾಬ್ದಾರವಾಗುವುದಿಲ್ಲ.

6. ನೇಮಕಾತಿ ಪ್ರಕ್ರಿಯೆಯಲ್ಲಿ ಅನುಚಿತ ಪ್ರಭಾವ ಬೀರಲು ಪ್ರಯತ್ನಿಸುವ ವ್ಯಕ್ತಿಗಳ ಅಭ್ಯರ್ಥಿತ್ವವನ್ನು ರದ್ದುಗೊಳಿಸಲಾಗುವುದು

ಸಹಿ/–
(ಅಂಜುಮ್ ಪರ್ವೇಜ್)
ಆಯ್ಕೆ ಸಮಿತಿಯ ಪದನಿಮಿತ್ತ ಸದಸ್ಯ ಕಾರ್ಯದರ್ಶಿ
ಹಾಗೂ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಅರಣ್ಯ ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ.

ವಾಸಾಸಂಇ/ವಾಪ್ರ/ಜಿಎ/3970/2024–25

ಜಿಲ್ಲಾಧಿಕಾರಿಗಳ ಕಛೇರಿ, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ಜಿಲ್ಲೆ, ತುಮಕೂರು.

ಟೆಲಿಫೋನ್ ನಂ.0816–2955247
ಇ–ಮೇಲ್: ka.tumakuru.dudc@gmail.com, dudc_tkr@yahoo.co.in

ನಂಡಿ.ಯು.ಡಿ.ಸಿ/ನಗರೋತ್ಥಾನ (ಮುನ್ಸಿಪಾಲಿಟಿ) ಹಂತ–4/ಸಿಆರ್/01/2022–23 ದಿನಾಂಕ: 23–12–2024

ಟೆಂಡರ್ ಪ್ರಕಟಣೆ

ಕಾರ್ಯಪಾಲಕ ಅಭಿಯಂತರರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಛೇರಿ, ತುಮಕೂರು ರವರಿಂದ ಏಕ ಮತ್ತು ದ್ವಿ–ಲಕೋಟೆ ಪದ್ಧತಿಯಡಿ ಅರ್ಹ ಬಿಡ್‌ದಾರರಿಂದ ಮಾನ್ಯ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ (ಮುನ್ಸಿಪಾಲಿಟಿ) ಯೋಜನೆ (ಹಂತ– 04) ಯ ಬದಲಿ ಕ್ರಿಯಾ ಯೋಜನೆಯಂತೆ ಶಿರಾ ನಗರಸಭಾ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾಮಗಾರಿಗಳಿಗೆ ಕೆಳಗಿನಂತೆ ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ.

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಇಂಡೆಂಟ್ ನಂ	ಟೆಂಡರ್‌ಗಿಟ್ಟ ಮೊತ್ತ	ಇ.ಎಂ.ಡಿ	ಗುತ್ತಿಗೆದಾರರ ದರ್ಜೆ
1	ಶಿರಾ ನಗರಸಭೆಯ ವ್ಯಾಪ್ತಿಯಲ್ಲಿ ಸಮುದಾಯ ಭವನ ನಿರ್ಮಾಣ, ಕಟ್ಟಡಗಳು, ಉದ್ಯಾನವನಗಳು ಮತ್ತು ಸ್ಮಶಾನಗಳ ಅಭಿವೃದ್ಧಿ ಕಾಮಗಾರಿ. (ಇಂಡೆಟ್ ಸಂ: **DMA/2024-25/BD/WORK_INDENT32184**)	369.94	5.55	01 ನೇ ದರ್ಜೆ

ಬಿಡ್‌ದಾರರು ಎಲ್ಲಾ ದಾಖಲಾತಿಗಳ ಮತ್ತು ಇತರೆ ವಿವರಗಳ ಮಾಹಿತಿಗಾಗಿ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

1	ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ ಮತ್ತು ಅವಧಿ	:	**21–12–2024 ರಿಂದ 21–01–2025 ರವರೆಗೆ ಸಮಯ: 17:00 ಗಂಟೆ**
2	ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:	:	**21–01–2025 ರವರೆಗೆ ಸಮಯ: 17:00 ಗಂಟೆ**
3	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:	:	**22–01–2025 ಸಮಯ 17:30 ಗಂಟೆಗೆ ಡಿ.ಯು.ಡಿ.ಸಿ, ತುಮಕೂರು.**

ಮೇಲ್ಕಂಡ ದಿನಾಂಕಗಳು ಹಾಗೂ ಟೆಂಡರ್ ದಸ್ತಾವೇಜಿನ ಯಾವುದೇ ತಿದ್ದುಪಡಿ ಇದ್ದಲ್ಲಿ ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು, ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

(ರೂ.ಲಕ್ಷಗಳಲ್ಲಿ)

ಕ್ರ. ಸಂ	ಇಂಡೆಂಟ್ ನಂ	ಟೆಂಡರ್‌ಗಿಟ್ಟ ಮೊತ್ತ	ಇ.ಎಂ.ಡಿ	ಗುತ್ತಿಗೆದಾರರ ದರ್ಜೆ
1	ಶಿರಾ ನಗರಸಭೆಯ ವ್ಯಾಪ್ತಿಯಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ. **(INDENT No: DMA/2024-25/ RD/ WORK_INDENT32512)**	50.91	1.02	03ನೇ ದರ್ಜೆ & ಮೇಲ್ಪಟ್ಟು
2	ಶಿರಾ ನಗರಸಭೆಯ ವ್ಯಾಪ್ತಿಯಲ್ಲಿ ನೀರು ಸರಬರಾಜು ಕಾಮಗಾರಿಗಳಿಗೆ ಪೈಪ್‌ಲೈನ್‌ಗಳನ್ನು ಅಳವಡಿಸುವ ಕಾಮಗಾರಿ. **(INDENT No: DMA/2024-25/WS/WORK_INDENT 32523)**	50.00	1.00	03ನೇ ದರ್ಜೆ & ಮೇಲ್ಪಟ್ಟು
3	ಶಿರಾ ನಗರಸಭೆಯ ವ್ಯಾಪ್ತಿಯಲ್ಲಿ ಟ್ರಾಫಿಕ್ ಸಿಗ್ನಲ್‌ಗಳನ್ನು ಮತ್ತು ಸಿ.ಸಿ.ಟಿ.ವಿ ಕ್ಯಾಮೆರಾಗಳನ್ನು ಅಳವಡಿಸುವ ಕಾಮಗಾರಿ. **(INDENT No: DMA/2024-25/OW/WORK_INDENT 32562)**	37.00	0.37	03ನೇ ದರ್ಜೆ & ಮೇಲ್ಪಟ್ಟು

ಬಿಡ್‌ದಾರರು ಎಲ್ಲಾ ದಾಖಲಾತಿಗಳ ಮತ್ತು ಇತರೆ ವಿವರಗಳ ಮಾಹಿತಿಗಾಗಿ **https://kppp.karnataka.gov.in** ವೆಬ್‌ಸೈಟ್‌ನಲ್ಲಿ ಪಡೆಯಬಹುದಾಗಿದೆ.

1	ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ ಮತ್ತು ಅವಧಿ	:	**21–12–2024 ರಿಂದ 06–01–2025 ರವರೆಗೆ ಸಮಯ: 17:00 ಗಂಟೆ**
2	ಭರ್ತಿ ಮಾಡಿದ ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:	:	**06–01–2025 ರವರೆಗೆ ಸಮಯ: 17:00 ಗಂಟೆ**
3	ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ:	:	**07–01–2025 ಸಮಯ 17:30 ಗಂಟೆಗೆ ಡಿ.ಯು.ಡಿ.ಸಿ, ತುಮಕೂರು.**

ಮೇಲ್ಕಂಡ ದಿನಾಂಕಗಳು ಹಾಗೂ ಟೆಂಡರ್ ದಸ್ತಾವೇಜಿನ ಯಾವುದೇ ತಿದ್ದುಪಡಿ ಇದ್ದಲ್ಲಿ ಕರ್ನಾಟಕ ಪಬ್ಲಿಕ್ ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಚುರಪಡಿಸಲಾಗುವುದು. ಪತ್ರಿಕೆಯಲ್ಲಿ ಪ್ರಕಟಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ಜಿಲ್ಲೆ.

DIPR/TUM/RO-127/24-25/Oysters

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	23,753
ಇಂದಿನ ಅಂತ್ಯ	23,727
▼	25
ದಿನದ ಕನಿಷ್ಠ	23,685

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹600
12 ಕ್ಕೆ	₹80
ಮೈಸೂರು	
100ಕ್ಕೆ	₹600

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಕಿ.ಜಿ)	₹349-623
ದ್ವಿತಳಿ (ಕಿ.ಜಿ)	₹271-766

ವಿನಿಮಯ ದರ

$ ಡಾಲರ್	85.15
£ ಪೌಂಡ್	106.80
€ ಯುರೊ	88.55
¥ ಯೆನ್ (100ಕ್ಕೆ)	54

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1460 (1460)
ಸೋಯಾ (ರಿಫೈನ್ಡ್)	₹1240 (1230)
ಸೂರ್ಯಕಾಂತಿ (ರಿಫೈನ್ಡ್)	₹1340 (1340)
ಪಾಮೊಲಿನ್	₹1340 (1330)

ಆನ್‌ಲೈನ್‌ನಲ್ಲಿ ಇಎಸ್‌ಐ ಸೇವೆ

ನವದೆಹಲಿ (ಪಿಟಿಐ): ಕಾರ್ಮಿಕರ ರಾಜ್ಯ ವಿಮಾ ನಿಗಮದ (ಇಎಸ್‌ಐಸಿ) ಐಟಿ ವ್ಯವಸ್ಥೆಯನ್ನು ಮೇಲ್ದರ್ಜೆಗೆ ಏರಿಸಲಾಗಿದೆ. ಆಸ್ಪತ್ರೆಯಲ್ಲಿ ವೈದ್ಯರ ಭೇಟಿಗೆ ಸಮಯ ನಿಗದಿ ಸೇರಿ ಹಲವು ಸೇವೆಗಳು ಆನ್‌ಲೈನ್‌ನಲ್ಲಿಯೇ ಚಂದಾದಾರರಿಗೆ ದೊರೆಯಲಿವೆ ಎಂದು ಕೇಂದ್ರ ಕಾರ್ಮಿಕ ಸಚಿವಾಲಯ ತಿಳಿಸಿದೆ.

ಡಿಸೆಂಬರ್ 22ಕ್ಕೆ ನಿಗಮದ ಐಟಿ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸುವ ಪ್ರಕ್ರಿಯೆಯು ಪೂರ್ಣಗೊಳ್ಳಲಿದೆ. ಆ ಬಳಿಕ ಚಂದಾದಾರರಿಗೆ ಯಾವುದೇ ಅಡೆತಡೆ ಇಲ್ಲದೆ ಸೇವೆ ಲಭಿಸಲಿದೆ ಎಂದು ಹೇಳಿದೆ.

ನಿಗಮವು ಇಎಸ್‌ಐ ಯೋಜನೆಯಡಿ ಚಂದಾದಾರರು ಹಾಗೂ ಅವರ ಕುಟುಂಬದ ಸದಸ್ಯರಿಗೆ ಆರೋಗ್ಯ ವಿಮೆ ಮತ್ತು ವೈದ್ಯಕೀಯ ಸೇವೆ ನೀಡುತ್ತದೆ. ದೇಶದಾದ್ಯಂತ ಇಎಸ್‌ಐ ಆಸ್ಪತ್ರೆಗಳನ್ನು ಹೊಂದಿದೆ.

ಆಸ್ಪತ್ರೆಗಳಲ್ಲಿ ರೋಗಿಗಳ ನೋಂದಣಿ, ಠೇವಣಿ ಮೊತ್ತದ ಜಮೆ ಸೇರಿದಂತೆ ಎಲ್ಲಾ ವಹಿವಾಟುಗಳು ವೇಗವಾಗಿ ನಡೆಯಲಿವೆ. ಮೂರು ವರ್ಷದವರೆಗೆ ಇದರ ಕಾರ್ಯಾಚರಣೆ ಮತ್ತು ಮೇಲ್ವಿಚಾರಣೆಗೆ ₹312 ಕೋಟಿ ನಿಗದಿಪಡಿಸಲಾಗಿದೆ. ಅಲ್ಲದೆ, ಇಎಸ್‌ಐಸಿ ಮೊಬೈಲ್ ಆ್ಯಪ್ ಅನ್ನು ಬಳಕೆದಾರ ಸ್ನೇಹಿಯಾಗಿ ಅಭಿವೃದ್ಧಿಪಡಿಸಲಾಗಿದೆ ಎಂದು ತಿಳಿಸಿದೆ.

ನೋಂದಣಿಗೆ ಸಿದ್ಧತೆ ಕೈಗೊಳ್ಳಿ: ಸಚಿವ ಶಿವಾನಂದ ಪಾಟೀಲ ಸೂಚನೆ

ತೊಗರಿ, ಕಡಲೆ ಖರೀದಿಗೆ ಅಸ್ತು

ಪ್ರಜಾವಾಣಿ ವಾರ್ತೆ


ಶಿವಾನಂದ ಪಾಟೀಲ

ಬೆಂಗಳೂರು: ರಾಜ್ಯದಲ್ಲಿ ಕನಿಷ್ಠ ಬೆಂಬಲ ಬೆಲೆಯಡಿ ತೊಗರಿ ಮತ್ತು ಕಡಲೆ ಖರೀದಿಗೆ ಕೇಂದ್ರ ಸರ್ಕಾರ ಒಪ್ಪಿಗೆ ನೀಡಿದೆ.

ಪ್ರತಿ ಕ್ವಿಂಟಲ್ ತೊಗರಿಗೆ ₹7,550 ಹಾಗೂ ಕಡಲೆಗೆ ₹5,650 ಬೆಂಬಲ ಬೆಲೆ ನಿಗದಿಪಡಿಸಿದೆ.

ರಾಜ್ಯದಲ್ಲಿ 15.02 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ತೊಗರಿ ಬೆಳೆಯಲಾಗುತ್ತಿದೆ. ಅಂದಾಜು 11.96 ಲಕ್ಷ ಟನ್ ಉತ್ಪಾದನೆಯನ್ನು ನಿರೀಕ್ಷಿಸಲಾಗಿದೆ. ಕಲಬುರಗಿ, ಯಾದಗಿರಿ, ಬೀದರ್, ರಾಯಚೂರು, ವಿಜಯಪುರ, ಕೊಪ್ಪಳ, ಬೆಳಗಾವಿ, ಬಳ್ಳಾರಿ, ವಿಜಯನಗರ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಖರೀದಿ ಕೇಂದ್ರ ಆರಂಭಿಸಲು ಸಿದ್ಧತೆ ನಡೆದಿದೆ.

'ರಾಜ್ಯ ಸರ್ಕಾರದ ಮನವಿ ಮೇರೆಗೆ ಕೇಂದ್ರ ಸರ್ಕಾರವು 3,06,150 ಟನ್ ತೊಗರಿ ಖರೀದಿಗೆ ಅನುಮತಿ ನೀಡಿದೆ' ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.

ಕಡಲೆ ಖರೀದಿ ಎಷ್ಟು?: ಪ್ರಸ್ತುತ 10.03 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಕಡಲೆ ಬೆಳೆಯಲಾಗುತ್ತಿದ್ದು, 6.63 ಲಕ್ಷ ಟನ್ ಉತ್ಪಾದನೆಯನ್ನು ಅಂದಾಜಿಸಲಾಗಿದೆ.

ಧಾರವಾಡ, ಕೊಪ್ಪಳ, ಬಳ್ಳಾರಿ, ಚಿತ್ರದುರ್ಗ, ಗದಗ, ಬೆಳಗಾವಿ, ವಿಜಯಪುರ ಕಲಬುರಗಿ, ಯಾದಗಿರಿ, ಬೀದರ್, ಬಾಗಲಕೋಟೆ, ದಾವಣಗೆರೆ, ಚಿಕ್ಕಮಗಳೂರು ಮತ್ತು ರಾಯಚೂರು ಜಿಲ್ಲೆಯಲ್ಲಿ ಖರೀದಿ ಕೇಂದ್ರ ಆರಂಭಿಸಲಾಗುವುದು ಎಂದು ಸಚಿವರು ತಿಳಿಸಿದ್ದಾರೆ. ಬೆಂಬಲ ಬೆಲೆಯಲ್ಲಿ 96,498 ಟನ್ ಕಡಲೆ ಖರೀದಿ ಮಾಡಲಾಗುವುದು. ನೋಂದಣಿ ಮತ್ತು ಖರೀದಿ ಕೇಂದ್ರ ಆರಂಭಿಸಲು ಸಿದ್ಧತೆ ಮಾಡಿಕೊಳ್ಳುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಹೇಳಿದ್ದಾರೆ.

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	20000-27500
ಹಳತು	45000-48500
ಚಿತ್ರದುರ್ಗ	
ಅಪಿ	49319-49729
ಬೆಟ್ಟೆ	29149-29589
ಕೆಂಪುಗೋಟು	25109-25510
ರಾಶಿ	48839-49269
ಶಿವಮೊಗ್ಗ	
ಬೆಟ್ಟೆ	44000-57349
ಗೊರಬಲು	18129-36899
ಹೊಸತು	30410-49689
ರಾಶಿ	31300-50569
ಸರಕು	47099-87100

ಬಂದ್‌ನಿಂದಾಗಿ ಭಣಗುಡುತ್ತಿರುವ ಬಳ್ಳಾರಿ ಎಪಿಎಂಸಿ ಪ್ರಾಂಗಣ

ಬಳ್ಳಾರಿ ಎಪಿಎಂಸಿ ಬಂದ್

(ಬಳ್ಳಾರಿ ವರದಿ): ಸರ್ಕಾರವು ಬಜೆಟ್‌ನಲ್ಲಿ ಘೋಷಣೆ ಮಾಡಿದಂತೆ ಬಳ್ಳಾರಿ ಹೊರವಲಯದ ಆಲದಹಳ್ಳಿಯಲ್ಲಿ ಒಣ ಮೆಣಸಿನಕಾಯಿ ಮಾರುಕಟ್ಟೆ ಸ್ಥಾಪಿಸಬೇಕು ಎಂದು ಒತ್ತಾಯಿಸಿ ಮಂಗಳವಾರ ವಿವಿಧ ಸಂಘಟನೆಗಳಿಂದ ನಗರದಲ್ಲಿ ಪ್ರತಿಭಟನೆ ನಡೆಯಿತು.

ಬಳ್ಳಾರಿ ಕೃಷಿ ಉತ್ಪನ್ನ ಮತ್ತು ಮಾರುಕಟ್ಟೆ ಸಮಿತಿಯ (ಎಪಿಎಂಸಿ) ವರ್ತಕರು, ದಲ್ಲಾಳಿಗಳು, ಹಮಾಲರು, ಕೂಲಿಗಳ ಸಂಘ- ಹೋರಾಟಕ್ಕೆ ಬೆಂಬಲ ನೀಡಿದ್ದವು. ಹೀಗಾಗಿ, ಎಪಿಎಂಸಿ ಬಂದ್ ಮಾಡಲಾಗಿತ್ತು. ಎಪಿಎಂಸಿಯಲ್ಲಿ ನಿತ್ಯ ಸಾವಿರಾರು ಚೀಲದಷ್ಟು ಕೃಷಿ ಹುಟ್ಟುವಳಿಗಳ ವಹಿವಾಟು ನಡೆಯುತ್ತದೆ. ವಹಿವಾಟು ಸ್ಥಗಿತಗೊಂಡಿದ್ದರಿಂದ ಲಕ್ಷಾಂತರ ರೂಪಾಯಿ ನಷ್ಟವಾಗಿದೆ.

ಆಲದಹಳ್ಳಿಯಲ್ಲಿ ಮೀಸಲಿಟ್ಟಿರುವ 23.25 ಎಕರೆ ಜಮೀನಿನಲ್ಲಿ ಒಣ ಮೆಣಸಿನಕಾಯಿ ಮಾರುಕಟ್ಟೆಯನ್ನು ಸದ್ಯಕ್ಕೆ ನಿರ್ಮಿಸುವುದಿಲ್ಲ. ಬದಲಿಗೆ ಅದೇ ಸ್ಥಳದಲ್ಲಿ ₹11.75 ಕೋಟಿ ಅಂದಾಜು ವೆಚ್ಚದ 2,300 ಟನ್ ಸಾಮರ್ಥ್ಯದ ಕೋಲ್ಡ್ ಸ್ಟೋರೇಜ್ ನಿರ್ಮಿಸಲಾಗುವುದು ಎಂದು ಸರ್ಕಾರ ಇತ್ತೀಚೆಗೆ ವಿಧಾನ ಮಂಡಲದ ಅಧಿವೇಶನದಲ್ಲಿ ಹೇಳಿತ್ತು.

ಆಕಾಸಾ ಏರ್‌ಗೆ ₹10 ಲಕ್ಷ ದಂಡ ವಿಧಿಸಿದ ಡಿಜಿಸಿಎ

ಮುಂಬೈ (ಪಿಟಿಐ): ಪ್ರಯಾಣಿಕರಿಗೆ ಸಕಾಲದಲ್ಲಿ ಪರಿಹಾರ ಮೊತ್ತ ವಿತರಿಸುವಲ್ಲಿ ಲೋಪ ಎಸಗಿದ ಆರೋಪದ ಮೇರೆಗೆ ಆಕಾಸಾ ಏರ್ ವಿಮಾನಯಾನ ಕಂಪನಿಗೆ ನಾಗರಿಕ ವಿಮಾನಯಾನ ಮಹಾನಿರ್ದೇಶನಾಲಯವು (ಡಿಜಿಸಿಎ) ₹10 ಲಕ್ಷ ದಂಡ ವಿಧಿಸಿದೆ.

ಸೆಪ್ಟೆಂಬರ್ 6ರಂದು ಏಳು ಪ್ರಯಾಣಿಕರು ಬೆಂಗಳೂರಿನಿಂದ ಪುಣೆಗೆ ಟಿಕೆಟ್ ಬುಕಿಂಗ್ ಮಾಡಿದ್ದರು. ಸೀಟುಗಳ ಬದಲಾವಣೆ, ಕೆಲವು ತಾಂತ್ರಿಕ ಕಾರಣದ ನೆಪವೊಡ್ಡಿ ಈ ಪ್ರಯಾಣಿಕರ ಸಂಚಾರಕ್ಕೆ ಕಂಪನಿಯು ಅನುಮತಿ ನಿರಾಕರಿಸಿತ್ತು. ಬಳಿಕ ನಿಗದಿತ ಸಮಯಕ್ಕಿಂತ ಒಂದು ಗಂಟೆ ತಡವಾಗಿ ಈ ಪ್ರಯಾಣಿಕರು ಇಂಡಿಗೊ ವಿಮಾನದಲ್ಲಿ ಪ್ರಯಾಣಿಸಿದ್ದಾರೆ. ಆದರೆ, ಅವರಿಗೆ ಪರಿಹಾರ ಮೊತ್ತ ವಿತರಿಸಿರಲಿಲ್ಲ ಎಂದು ಮೂಲಗಳು ತಿಳಿಸಿವೆ.

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹13700-14400
ಬೆಂಗಳೂರು	₹20000-25000
ಹನೂರು	₹4500-4500

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹184
ಆರ್‌ಎಸ್‌ಎಸ್-5	₹179
ಗುಡ್ ಲಾಟ್	₹173

(ಪ್ರತಿ ಕೆ.ಜಿಗೆ)

'ಉದ್ಯೋಗ ಸೃಷ್ಟಿಗೆ ಒತ್ತು ನೀಡಿ'

ನವದೆಹಲಿಯಲ್ಲಿ ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಅವರು ಅರ್ಥಶಾಸ್ತ್ರಜ್ಞರು ಹಾಗೂ ವಿವಿಧ ವಲಯದ ತಜ್ಞರೊಟ್ಟಿಗೆ ಬಜೆಟ್ ಪೂರ್ವ ಸಮಾಲೋಚನೆ ನಡೆಸಿದರು. ಸಚಿವೆ ನಿರ್ಮಲಾ ಸೀತಾರಾಮನ್ ಹಾಜರಿದ್ದರು —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಉದ್ಯೋಗ ಸೃಷ್ಟಿ, ಕೃಷಿ ಉತ್ಪಾದಕತೆ ಹೆಚ್ಚಳ ಹಾಗೂ ಮೂಲಸೌಕರ್ಯ ಅಭಿವೃದ್ಧಿಗಾಗಿ ಸಾರ್ವಜನಿಕ ನಿಧಿ ಸಂಗ್ರಹಕ್ಕೆ ಒತ್ತು ನೀಡಬೇಕು ಎಂದು ಅರ್ಥಶಾಸ್ತ್ರಜ್ಞರು, ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಿದ್ದಾರೆ.

2025–26ನೇ ಸಾಲಿನ ಬಜೆಟ್ ಅಂಗವಾಗಿ ಮಂಗಳವಾರ ಪ್ರಧಾನಿ ನರೇಂದ್ರ ಮೋದಿ ಅವರು ನೀತಿ ಆಯೋಗದ ಕಚೇರಿಯಲ್ಲಿ ಅರ್ಥಶಾಸ್ತ್ರಜ್ಞರು ಹಾಗೂ ವಿವಿಧ ವಲಯದ ತಜ್ಞರೊಟ್ಟಿಗೆ ಸಮಾಲೋಚನೆ ನಡೆಸಿದರು.

ಜಾಗತಿಕ ಮಟ್ಟದಲ್ಲಿ ತಲೆದೋರಿರುವ ಬಿಕ್ಕಟ್ಟು ಹಾಗೂ ಅದರಿಂದ ಭಾರತದ ಆರ್ಥಿಕತೆ ಬೆಳವಣಿಗೆಯ ಮೇಲೆ ಆಗುವ ಪರಿಣಾಮಗಳ ಬಗ್ಗೆ ಅರ್ಥಶಾಸ್ತ್ರಜ್ಞರು ಮಾಹಿತಿ ಹಂಚಿಕೊಂಡರು. ಎಲ್ಲಾ ವಲಯದಲ್ಲೂ ಉದ್ಯೋಗ ಸೃಷ್ಟಿಗೆ ಸರ್ಕಾರ ಕ್ರಮವಹಿಸಬೇಕು. ಆ ಮೂಲಕ ಯುವಜನರ ಸಬಲೀಕರಣಕ್ಕೆ ಒತ್ತು ನೀಡಬೇಕು ಎಂದು ಸಲಹೆ ನೀಡಿದರು. ಉದ್ಯೋಗ ಸೃಷ್ಟಿಗೆ ಪೂರಕವಾಗಿ ಶಿಕ್ಷಣ ಮತ್ತು ಕೌಶಲ ತರಬೇತಿ ನೀಡಬೇಕು. ಕೃಷಿ ಚಟುವಟಿಕೆಗಳ ಹೆಚ್ಚಳಕ್ಕೆ ಅಗತ್ಯವಿರುವ ಕಾರ್ಯಕ್ರಮ ರೂಪಿಸಬೇಕು ಎಂದು ಹೇಳಿದರು.

ಸುದ್ದಿ 2 ನಿಮಿಷ

ಹೆದ್ದಾರಿ ಬದಿ ಗೋಶಾಲೆ ನಿರ್ಮಾಣ



ನವದೆಹಲಿ (ಪಿಟಿಐ): ರಾಷ್ಟ್ರೀಯ ಹೆದ್ದಾರಿಗಳಲ್ಲಿ ಬಿಡಾಡಿ ದನಗಳಿಂದ ಆಗುತ್ತಿರುವ ಅಪಘಾತ ತಪ್ಪಿಸುವ ನಿಟ್ಟಿನಲ್ಲಿ ಹೆದ್ದಾರಿ ಬದಿಯಲ್ಲಿ ಪ್ರಾಯೋಗಿಕವಾಗಿ ಗೋಶಾಲೆ ತೆರೆಯಲು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (ಎನ್‌ಎಚ್‌ಎಐ) ಮುಂದಾಗಿದೆ.

ಬಿಡಾಡಿ ದನಗಳ ಹಾವಳಿಯಿಂದ ಪ್ರಯಾಣಿಕರ ಸುಗಮ ಸಂಚಾರಕ್ಕೆ ತೊಂದರೆಯಾಗಿದೆ. ದನಗಳು ಹಾಗೂ ಇತರ ಪ್ರಾಣಿಗಳಿಂದ ವಾಹನಗಳ ಸಂಚಾರಕ್ಕೆ ಆಗುತ್ತಿರುವ ತೊಂದರೆ ತಪ್ಪಿಸಲು ಈ ಕ್ರಮಕ್ಕೆ ಮುಂದಾಗಲಾಗಿದೆ ಎಂದು ಪ್ರಾಧಿಕಾರವು ಮಂಗಳವಾರ ತಿಳಿಸಿದೆ.

0.21ರಿಂದ 2.29 ಹೆಕ್ಟೇರ್ ಪ್ರದೇಶದಲ್ಲಿ ಗೋಶಾಲೆ ನಿರ್ಮಿಸಲಾಗುವುದು ಎಂದು ಹೇಳಿದೆ.

ದೇಶದ ಎಲ್ಲಾ ಹೆದ್ದಾರಿಗಳ ವ್ಯಾಪ್ತಿಯಲ್ಲಿ ಗೋಶಾಲೆ ತೆರೆಯಲಾಗುತ್ತದೆ.

ಆರಂಭದಲ್ಲಿ ಉತ್ತರ ಪ್ರದೇಶ/ಹರಿಯಾಣದ ಗಡಿ ಭಾಗದಲ್ಲಿ ಹಾದುಹೋಗಿರುವ ರಾಷ್ಟ್ರೀಯ ಹೆದ್ದಾರಿ 334ಬಿ ವ್ಯಾಪ್ತಿಯಲ್ಲಿ ಗೋಶಾಲೆ ತೆರೆಯಲಾಗುತ್ತದೆ. ಈ ಕುರಿತು ಗವಾರ್ ಕನ್‌ಸ್ಟ್ರಕ್ಷನ್ ಕಂಪನಿ ಜೊತೆಗೆ ಒಡಂಬಡಿಕೆಗೆ ಸಹಿ ಹಾಕಲಾಗಿದೆ ಎಂದು ತಿಳಿಸಿದೆ.

ಈ ಗೋಶಾಲೆಗಳಲ್ಲಿ ತುರ್ತು ಚಿಕಿತ್ಸೆ, ಮೇವು, ನೀರಿನ ಸೌಲಭ್ಯ ಕಲ್ಪಿಸಲಾಗುತ್ತದೆ. ಅಲ್ಲದೆ, ಅವುಗಳ ಆರೋಗ್ಯದ ಮೇಲೆ ನಿಗಾ ಇಡಲು ಸಿಬ್ಬಂದಿಯನ್ನು ನೇಮಿಸಲಾಗುತ್ತದೆ ಎಂದು ತಿಳಿಸಿದೆ.

ಅಪಘಾತದಿಂದ ಗಾಯಗೊಳ್ಳುವ ಪ್ರಾಣಿಗಳ ಚಿಕಿತ್ಸೆಗೆ, ಅಲ್ಲದೆ ಪ್ರತಿ 50 ಕಿ.ಮೀ. ಅಂತರದಲ್ಲಿ ಪಶು ಚಿಕಿತ್ಸಾ ಕೇಂದ್ರಗಳನ್ನು ತೆರೆಯಲಾಗುತ್ತದೆ. ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆಯಡಿ ಈ ಸೌಲಭ್ಯ ಒದಗಿಸಲಾಗುತ್ತದೆ ಎಂದು ವಿವರಿಸಿದೆ.

ಮ್ಯೂಚುವಲ್ ಫಂಡ್ ಸಂಪತ್ತು ವೃದ್ಧಿ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದಲ್ಲಿ ಮ್ಯೂಚುವಲ್ ಫಂಡ್ ಉದ್ಯಮದ ನಿರ್ವಹಣಾ ಸಂಪತ್ತಿಗೆ ₹17 ಲಕ್ಷ ಕೋಟಿ ಸೇರ್ಪಡೆಯಾಗಿದೆ ಎಂದು ಭಾರತೀಯ ಮ್ಯೂಚುವಲ್ ಫಂಡ್ ಕಂಪನಿಗಳ ಒಕ್ಕೂಟ (ಎಎಂಎಫ್‌ಐ) ತಿಳಿಸಿದೆ.

ಷೇರು ಮಾರುಕಟ್ಟೆಯು ಏರಿಕೆ ಕಂಡಿದೆ. ದೇಶದ ಆರ್ಥಿಕತೆ ಬೆಳವಣಿಗೆ ಸದೃಢವಾಗಿದೆ. ಮ್ಯೂಚುವಲ್ ಫಂಡ್‌ನಲ್ಲಿ ಹೂಡಿಕೆ ಮಾಡುವವರ ಸಂಖ್ಯೆ ಹೆಚ್ಚಾಗುತ್ತಿದೆ. ಹಾಗಾಗಿ, ನಿರ್ವಹಣಾ ಸಂಪತ್ತು ಕೂಡ ವೃದ್ಧಿಯಾಗಿದೆ. ಮುಂದಿನ ವರ್ಷವೂ ಇದೇ ಬೆಳವಣಿಗೆ ಮುಂದುವರಿಯಲಿದೆ ಎಂದು ಹೇಳಿದೆ.

ಈಕ್ವಿಟಿ ಫಂಡ್‌ಗಳಲ್ಲಿ ಸಣ್ಣ ಹೂಡಿಕೆದಾರರು ಹೆಚ್ಚು ಹೂಡಿಕೆ ಮಾಡುತ್ತಿದ್ದಾರೆ. ವ್ಯವಸ್ಥಿತ ಹೂಡಿಕೆ ಯೋಜನೆ (ಎಸ್‌ಐಪಿ) ಮೂಲಕವೂ ಹೂಡಿಕೆ ಹೆಚ್ಚುತ್ತಿದೆ ಎಂದು ಹೇಳಿದೆ.

ಪ್ರಸಕ್ತ ವರ್ಷದಲ್ಲಿ ಹೂಡಿಕೆದಾರರ ಸಂಖ್ಯೆ 5.6 ಕೋಟಿ ಹೆಚ್ಚಳವಾಗಿದೆ. ಎಸ್‌ಐಪಿ ಮೂಲಕ ₹2.40 ಲಕ್ಷ ಕೋಟಿ ಹೂಡಿಕೆಯಾಗಿದೆ ಎಂದು ವಿವರಿಸಿದೆ.

2023ರಲ್ಲಿ ಮ್ಯೂಚುವಲ್ ಫಂಡ್ ಉದ್ಯಮದ ಸಂಪತ್ತಿನ ನಿರ್ವಹಣಾ ಮೌಲ್ಯವು (ಎಯುಎಂ) ₹50.78 ಲಕ್ಷ ಕೋಟಿ ಇತ್ತು. ಈ ವರ್ಷದ ನವೆಂಬರ್ ಅಂತ್ಯಕ್ಕೆ ₹68 ಲಕ್ಷ ಕೋಟಿಗೆ ಮುಟ್ಟಿದೆ. ಒಟ್ಟಾರೆ ಶೇ 33ರಷ್ಟು ಏರಿಕೆಯಾಗಿದೆ. ಕಳೆದ ನಾಲ್ಕು ವರ್ಷದಲ್ಲಿ ಸಂಪತ್ತಿನ ನಿರ್ವಹಣಾ ಮೌಲ್ಯಕ್ಕೆ ₹30 ಲಕ್ಷ ಕೋಟಿ ಸೇರ್ಪಡೆಯಾಗಿದೆ ಎಂದು ತಿಳಿಸಿದೆ.

ಅನಪೇಕ್ಷಿತ ಕರೆ ತಡೆಗೆ ಮಾರ್ಗಸೂಚಿ

ನವದೆಹಲಿ (ಪಿಟಿಐ): ಗ್ರಾಹಕರಿಗೆ ಅನಪೇಕ್ಷಿತ ಕರೆಗಳು ಮತ್ತು ಸಂದೇಶಗಳಿಂದ ಆಗುತ್ತಿರುವ ತೊಂದರೆ ತಪ್ಪಿಸುವ ಬಗ್ಗೆ ಜನವರಿಯಲ್ಲಿ ಹೊಸ ಮಾರ್ಗಸೂಚಿಯನ್ನು ಪ್ರಕಟಿಸಲಾಗುವುದು ಎಂದು ಕೇಂದ್ರ ಗ್ರಾಹಕ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ನಿಧಿ ಖರೆ ತಿಳಿಸಿದ್ದಾರೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಕರಡು ನಿಯಮಾವಳಿಗಳನ್ನು ಸಿದ್ಧಪಡಿಸಲಾಗಿದೆ. ಇದನ್ನು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರದ (ಟ್ರಾಯ್) ನಿಯಮಾವಳಿಗಳೊಂದಿಗೆ ಸಮನ್ವಯಗಳಿಸಿದ ಬಳಿಕ ಅಧಿಕೃತವಾಗಿ ಪ್ರಕಟಿಸಲಾಗುವುದು' ಎಂದು ತಿಳಿಸಿದರು.

ಟ್ರಾಯ್ ಅಧ್ಯಕ್ಷ ಅನಿಲ್ ಕುಮಾರ್ ಲಹೋಟಿ ಮಾತನಾಡಿ, 'ಗ್ರಾಹಕ ಸಚಿವಾಲಯವು ರೂಪಿಸಿರುವ ಮಾರ್ಗಸೂಚಿಗಳು ದೂರಸಂಪರ್ಕ ಕಂಪನಿಗಳ ಪಾತ್ರ ಹಾಗೂ ಜವಾಬ್ದಾರಿಗೆ ಸೀಮಿತವಾಗಿವೆ. ಗ್ರಾಹಕರ ದೂರುಗಳ ಆಧಾರದ ಮೇಲೆ ಪ್ರಾಧಿಕಾರವು ಪ್ರತ್ಯೇಕವಾಗಿ ನಿಯಮಾವಳಿಗಳನ್ನು ರೂಪಿಸಲಿದೆ' ಎಂದರು.

ಎಐ ಗ್ರಾಹಕ ಸಹಾಯವಾಣಿಗೆ ಚಾಲನೆ

ನವದೆಹಲಿ (ಪಿಟಿಐ): ಗ್ರಾಹಕರ ಹಿತರಕ್ಷಣೆ ದೃಷ್ಟಿಯಿಂದ ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಆಧರಿತ ಸಹಾಯವಾಣಿ ಸೇರಿ 'ಇ-ಕಾಮರ್ಸ್' ಸುರಕ್ಷತಾ ಕ್ರಮಗಳಿಗೆ ಕೇಂದ್ರ ಆಹಾರ ಹಾಗೂ ಗ್ರಾಹಕ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಅವರು, ಮಂಗಳವಾರ ನಡೆದ ರಾಷ್ಟ್ರೀಯ ಗ್ರಾಹಕ ದಿನಾಚರಣೆಯಲ್ಲಿ ಚಾಲನೆ ನೀಡಿದರು.

ಎಐ ಆಧರಿತ ರಾಷ್ಟ್ರೀಯ ಗ್ರಾಹಕ ಸಹಾಯವಾಣಿ, ಇ-ಮ್ಯಾಪ್ ಪೋರ್ಟಲ್ ಹಾಗೂ 'ಜಾಗೋ ಗ್ರಾಹಕ ಜಾಗೋ' ಮೊಬೈಲ್ ಅಪ್ಲಿಕೇಷನ್‌ಗೆ ಚಾಲನೆ ಸಿಕ್ಕಿದೆ. ಗ್ರಾಹಕರ ರಕ್ಷಣೆಗಾಗಿ ಸರ್ಕಾರದ ಈ ಸುರಕ್ಷತಾ ಕ್ರಮಗಳನ್ನು ಅಳವಡಿಸಿ ಕೊಳ್ಳಲು ರಿಲಯನ್ಸ್ ರಿಟೇಲ್, ಟಾಟಾ ಸನ್ಸ್ ಮತ್ತು ಜೊಮಾಟೊ ಕಂಪನಿ ಪ್ರತಿಜ್ಞೆ ಸ್ವೀಕರಿಸಿವೆ.

ಗ್ರಾಹಕರ ವಿವಾದಗಳ ತ್ವರಿತ ಇತ್ಯರ್ಥಕ್ಕೆ ಸಂಬಂಧಿಸಿದಂತೆ ಸರ್ಕಾರ ಅಗತ್ಯ ಕ್ರಮವಹಿಸಿದೆ ಎಂದು ಸಚಿವ ಜೋಶಿ ತಿಳಿಸಿದ್ದಾರೆ.

ಪ್ರಸ್ತುತ ಡಿಜಿಟಲ್ ಕ್ರಾಂತಿ ಯಿಂದಾಗಿ ಸಾಕಷ್ಟು ಅವಕಾಶಗಳು ಲಭಿಸುತ್ತಿವೆ. ಗ್ರಾಹಕರು ಆತ್ಮವಿಶ್ವಾಸದಿಂದ ತಮ್ಮ ಇಚ್ಛೆಗೆ ಅನುಸಾರ ಆಯ್ಕೆ ಮಾಡಿಕೊಳ್ಳುವ ವಾತಾವರಣ ಸೃಷ್ಟಿಸಲು ಸರ್ಕಾರ ಕ್ರಮವಹಿಸಿದೆ ಎಂದು ಹೇಳಿದ್ದಾರೆ.

ಗ್ರಾಹಕರನ್ನು ದಾರಿ ತಪ್ಪಿಸುವ ಜಾಹೀರಾತುಗಳಿಗೆ ಕಡಿವಾಣ ಹಾಕುವ ಬಗ್ಗೆ ಕೇಂದ್ರ ಗ್ರಾಹಕ ಹಿತರಕ್ಷಣಾ ಪ್ರಾಧಿಕಾರವು (ಸಿಸಿಪಿಎ) ಹೊಸ ಕರಡು ನಿಯಮಾವಳಿಗಳನ್ನು ರೂಪಿಸುತ್ತಿದೆ. ಹಾಲಿ ಇರುವ ನಿಯಮಾವಳಿಗಳನ್ನು ಉಲ್ಲಂಘಿಸಿರುವ 13 ಕಂಪನಿಗಳಿಗೆ ನೋಟಿಸ್ ನೀಡಲಾಗಿದೆ ಎಂದು ತಿಳಿಸಿದ್ದಾರೆ.

2 ರಾಜ್ಯಗಳಿಗೆ ರಾಜ್ಯಪಾಲರ ನೇಮಕ ಮೂವರು ರಾಜ್ಯಪಾಲರ ವರ್ಗಾವಣೆ

ಅಜಯ್ ಕುಮಾರ್ ಭಲ್ಲಾ

ವಿ.ಕೆ. ಸಿಂಗ್

ನವದೆಹಲಿ (ಪಿಟಿಐ): ಕೇಂದ್ರದ ಮಾಜಿ ಗೃಹ ಕಾರ್ಯದರ್ಶಿ ಅಜಯ್ ಕುಮಾರ್ ಭಲ್ಲಾ ಅವರನ್ನು ಮಣಿಪುರಕ್ಕೆ ಮತ್ತು ಕೇಂದ್ರದ ಮಾಜಿ ಸಚಿವ ವಿ.ಕೆ. ಸಿಂಗ್ ಅವರನ್ನು ಮಿಜೋರಾಂ ರಾಜ್ಯಪಾಲರನ್ನಾಗಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಂಗಳವಾರ ನೇಮಕ ಮಾಡಿದ್ದಾರೆ.

ಮಿಜೋರಾಂ ರಾಜ್ಯಪಾಲರಾಗಿದ್ದ ಡಾ. ಹರಿ ಬಾಬು ಕಂಬಂಪತಿ ಅವರನ್ನು ಒಡಿಶಾಕ್ಕೆ, ಬಿಹಾರದ ರಾಜ್ಯಪಾಲ ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಅವರನ್ನು ಕೇರಳಕ್ಕೆ, ಕೇರಳದ ರಾಜ್ಯಪಾಲರಾಗಿದ್ದ ಆರಿಫ್ ಮೊಹಮ್ಮದ್ ಖಾನ್ ಅವರನ್ನು ಬಿಹಾರದ ರಾಜ್ಯಪಾಲರಾಗಿ ವರ್ಗಾವಣೆ ಮಾಡಿದ್ದಾರೆ.

ಇದೇ ವೇಳೆ ಒಡಿಶಾದ ರಾಜ್ಯಪಾಲ ರಘುವರ್ ದಾಸ್ ಅವರ ರಾಜೀನಾಮೆಯನ್ನು ರಾಷ್ಟ್ರಪತಿ ಅಂಗೀಕರಿಸಿದ್ದಾರೆ. 1984ರ ಬ್ಯಾಚ್‌ನ ಐಎಎಸ್ ಅಧಿಕಾರಿ ಆಗಿದ್ದ ಭಲ್ಲಾ ಅವರು 2019ರ ಆಗಸ್ಟ್‌ನಲ್ಲಿ ಗೃಹ ಕಾರ್ಯದರ್ಶಿಯಾಗಿ ನೇಮಕವಾಗಿದ್ದರು.

ಸಂಕ್ಷಿಪ್ತ ಸುದ್ದಿ

ಅಮೆರಿಕ ಅಧಿಕಾರಿಗಳ ಜೊತೆ ವಿಕ್ರಮ್ ಮಿಸ್ರಿ ಸಭೆ

ಸ್ಯಾನ್‌ಫ್ರಾನ್ಸಿಸ್ಕೊ (ಪಿಟಿಐ): ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರ ಭೇಟಿಗೆ ಪೂರ್ವಭಾವಿಯಾಗಿ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರು, ಅಮೆರಿಕದ ಉನ್ನತ ರಾಜತಾಂತ್ರಿಕ ಅಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿದರು.

ದ್ವಿಪಕ್ಷೀಯ ಮತ್ತು ಪ್ರಾದೇಶಿಕ ವಿಚಾರಗಳ ಬಗ್ಗೆ ವಿಸ್ತೃತ ಮಾತುಕತೆ ನಡೆಸಿದರು. ಅಮೆರಿಕದ ವಿದೇಶಾಂಗ ಇಲಾಖೆಯ ಉಪ ಕಾರ್ಯದರ್ಶಿಗಳಾದ ಕರ್ಟ್ ಕ್ಯಾಂಪ್‌ಬೆಲ್, ರಿಚರ್ಡ್ ವರ್ಮಾ, ಭಾರತದ ರಾಯಭಾರಿ ವಿನಯ್ ಮೋಹನ್ ಕ್ವಾತ್ರಾ ಭಾಗಿಯಾಗಿದ್ದರು. ಜೈಶಂಕರ್ ಅವರು ಡಿಸೆಂಬರ್ 24–29ರವರೆಗೆ ಅಮೆರಿಕಕ್ಕೆ ಭೇಟಿ ನೀಡಲಿದ್ದಾರೆ.

ಹಮಾಸ್ ನಾಯಕರಂತೆಯೇ ಹೂಥಿ ನಾಯಕರ ಅಂತ್ಯ ಇಸ್ರೇಲ್ ಎಚ್ಚರಿಕೆ

ಜೆರುಸಲೇಂ (ಎ.ಪಿ): 'ಹಮಾಸ್ ಬಂಡುಕೋರರ ಗುಂಪಿನ ಉನ್ನತ ನಾಯಕರ ಹತ್ಯೆ ಮಾಡಿದಂತೆಯೇ, ಯೆಮೆನ್‌ನ ಹೂಥಿ ಬಂಡುಕೋರರ ಗುಂಪಿನ ನಾಯಕರ ವಿರುದ್ಧವೂ ಕಠಿಣ ಕ್ರಮ ನಿಶ್ಚಿತ' ಎಂದು ಇಸ್ರೇಲ್‌ನ ರಕ್ಷಣಾ ಸಚಿವರು ಎಚ್ಚರಿಕೆ ನೀಡಿದ್ದಾರೆ.

ಈ ಹೇಳಿಕೆಯ ಮೂಲಕ ಸಚಿವ ಇಸ್ರೇಲಿ ಕಾಟ್ಜ್ ಅವರು, ಸೇನೆಯೇ ಹಮಾಸ್ ಬಂಡುಕೋರ ಗುಂಪಿನ ನಾಯಕ ಇಸ್ಮಾಯಿಲ್ ಹನಿಯೇ ಹತ್ಯೆ ನಡೆಸಿತ್ತು ಎಂದು ದೃಢಪಡಿಸಿದ್ದಾರೆ. ಕಳೆದ ಜೂನ್‌ನಲ್ಲಿ ಇರಾನ್‌ನಲ್ಲಿ ಸಂಭವಿಸಿದ್ದ ಸ್ಫೋಟದಲ್ಲಿ ಹನಿಯೇ ಸತ್ತಿದ್ದರು. ಈ ಸ್ಫೋಟದ ಹಿಂದೆ ಇಸ್ರೇಲ್ ಸೇನೆಯ ಪಾತ್ರವಿದೆ ಎಂದು ಈ ಹಿಂದೆ ಬಲವಾಗಿ ಪ್ರತಿಪಾದಿಸಲಾಗಿತ್ತು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to: https://homages.deccanherald.com
or
Scan QR code to access booking form

ವೈಕುಂಠ ಸಮಾರಾಧನೆ

ಶ್ರೀಯುತ ಜಿ.ನರಸಿಂಹಸ್ವಾಮಿರವರು
ಇವರು 26-12-2024 ರಂದು ಗುರುವಾರ ಮಧ್ಯಾಹ್ನ 12 ...
ದುಃಖತಪ್ತರು: ... ಕುಟುಂಬದವರು ಹಾಗೂ ಜಿ.ನರಸಿಂಹಸ್ವಾಮಿ ಅಭಿಮಾನಿಗಳು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಟಾಟಾ ACE ಗೆ ಅಗತ್ಯವಿರುವ ಚಾಲಕ ಬೇಕಾಗಿದ್ದಾರೆ, ಪೀಣ್ಯ ಬೆಂಗಳೂರು ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: 94486 84912

General

ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಕಂಪನಿಗಳಿಗೆ ಬೇಕಾಗಿದ್ದಾರೆ. ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ, TVSಗಳಿಗೆ SSLC, PUC,Degree, ITI,Diplomaದವರು. 18,000/- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9902643405

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಯನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು. ಉಚಿತ ಊಟ ವಸತಿ ಸಂಬಳ 15,000/-, 20,000/-. ESI, PF ಸೌಲಭ್ಯವಿರುತ್ತದೆ. ಬೆಂಗಳೂರು-76. ತಕ್ಷಣಸಂಪರ್ಕಿಸಿ: 9008835841, 9900859248

ಭವಿಷ್ಯ

Astrology

★॥ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್॥★ ಕೇರಳ_ಅಘೋರಿ_ನಾಗಸಾಧು. ಕಾಳಿಕಾದೇವಿ ದಿವ್ಯಶಕ್ತಿಯಿಂದ ನಿಮ್ಮ_ಸಮಸ್ಯೆಗಳಿಗೆ ಶೀಘ್ರದಲ್ಲಿ ಪರಿಹಾರ. ಇದು`ನಿಜ_ನಂಬಿ`ಕರೆಮಾಡಿ. ಪಂಡಿತ್. ಅಮರ್‌ನಾಥ್‌ಭಟ್. 9972407122

ಭಾರತದ ಪ್ರಖ್ಯಾತ ಬುಡಬುಡಿಕಿ ಜನಾಂಗದ ಲಕ್ಷಾಂತರ ಸಂತುಷ್ಟ ಗ್ರಾಹಕರ ಪರಮಶ್ರೇಷ್ಠ ಬಾಬಾ.ಶ್ರೀ.ದೇವಾನಂದನರವರಿಂದ ನಿಮ್ಮೆಲ್ಲಾ ಸರ್ವಸಂಕಷ್ಟಗಳಿಗೆ ಪರಿಹಾರ. ಮಹಮ್ಮಾಯಿ, ಮನ್ಮೋಹಿನಿಮೋಡಿ ವಶೀಕರಣಗಳಿಗೆ #100,ರಾಹೇಜಪಾರ್ಕ್ ಎದುರು,ಮಾಗಡಿ ರಸ್ತೆ ಬೆಂಗಳೂರು.9845005009

ಸ್ತ್ರೀ- ಪುರುಷ ವಶೀಕರಣ, ಮಾಟ ಮಂತ್ರ, ಶತ್ರು ನಾಶ,ಏನೇ ಸಮಸ್ಯೆಗಳಿದ್ದರೂ, 3 ದಿನದಲ್ಲಿ ಪರಿಹಾರ. ಕೇರಳದ ಜ್ಯೋತಿಷ್ಯರು, ಸುಮಂತ್: 8722756967.

ರಿಯಲ್ ಎಸ್ಟೇಟ್ ಸೆಲ್ಲಿಂಗ್

Farm House/ Land/ Resorts

General

URGENT SALE (Financial Emergency): House with 12 cents land. Kodagu. Call: 9482017179

ಪ್ರವಾಸ

Travel Agencies

ನೇಪಾಳ ಪ್ರವಾಸ ಮುಕ್ತಿನಾಥ ಪಶುಪತಿನಾಥ ಪೋಕ್ರ ಕಟ್ಮಂಡು ಅಯೋಧ್ಯ 9 ದಿನಗಳು 18/01/25 ಶ್ರೀಲಂಕಾ ಪ್ರವಾಸ ರಾಮಾಯಣ ಸ್ಥಳಗಳು ಸೇರಿ 8 ದಿನಗಳು 18/01/25 ಸುವರ್ಣಯಾತ್ರ 6360146483/ 9019462508

Travel

25.1.2025 ರಿಂದ 4ದಿನಗಳ ರಾಮೇಶ್ವರ ಮತ್ತು 9ನವಗ್ರಹ ದೇವಾಲಯಗಳ ದರ್ಶನ. 30.1.2025 ರಿಂದ 4 ದಿನಗಳ ಧರ್ಮಸ್ಥಳ, ಕೊಲ್ಲೂರು, ಹೊರನಾಡು, ಶೃಂಗೇರಿ, ಮುರಡೇಶ್ವರ. 20.2.2025 ರಿಂದ 10ದಿನಗಳ ವೈಷ್ಣೋದೇವಿ, ಕುಲುಮನಾಲಿ, ಸಿಮ್ಲಾ, ದೆಹಲಿ, ವಾಘಬಾರ್ಡರ್. 12.3.2025 ರಿಂದ 5 ದಿನಗಳ ಕಾಶಿ, ಅಯೋಧ್ಯ, ಗಯಾ, ಪ್ರಯಾಗರಾಜ್. 12.5.2025 ರಿಂದ 7ದಿನಗಳ ಸಿಂಗಾಪೂರ, ಮಲೇಷಿಯಾ. ಶ್ರೀ ಗುರುರಾಜ ಟ್ರಾವಲ್ಸ್. ಕೋಲಾರ. 9449652555, 9611082432, 8123099913

21.01.2025 ಕುಂಭಮೇಳ ಪ್ರಯುಕ್ತ ರಿಯಯಿತಿ`ದರದಲ್ಲಿ 6ದಿನ ವಿಮಾನದಲ್ಲಿ`ಕಾಶಿ`ಗಯಾ` ಅಯೋಧ್ಯಾ ಅಲಹಾಬದ್ (ಕೆಲವೇ ಸೀಟುಗಳಿವೆ) 06/03/2025, 10/14ದಿನಗಳು ರೈಲು/ವಿಮಾನದಲ್ಲಿ`ದೆಹಲಿ ಮಥುರ`ಆಗ್ರ` ಅಲಹಾಬದ್ ಕಾಶಿ,ಗಯಾ,ಅಯೋಧ್ಯೆ ಹರಿದ್ವರ, ಇತ್ಯಾದಿ ಜನವರಿ ಫೆಬ್ರುವರಿಯಲ್ಲಿ ಅಂಡಮಾನ್`Royal Package "ಶ್ರೀಸಾಯಿ`ರಾಘವೇಂದ್ರ ಟ್ರಾವೆಲ್ಸ್" -9739847429/ 9845560219

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಸಾರ್ವಜನಿಕ ಪ್ರಕಟಣೆ
BOOK YOUR PUBLIC NOTICE ADS IN PRAJAVANI ALL KARNATAKA, ON ALL DAYS
@500/-* PER SQCM
www.dhclassifieds.com
BOOK NOW
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9886213331 | +91 9731810277
+91 9901641752 | 9845114560
*Conditions apply

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ್ ಹಾವೇರಿ
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ
ಜಿಲ್ಲಾಡಳಿತ ಭವನ–ಹಾವೇರಿ
Email: dhohaveri@gmail.com Ph: 08375-249049 Fax: 08375-249009

ಕ್ರಸಂ/ಜಿಆಕುಕಅಹಾ/ಆಡಳಿತ/1761/2024–25 ದಿನಾಂಕ: 24–12–2024

ಅಲ್ಪಾವಧಿ ಇ–ಟೆಂಡರ ಪ್ರಕಟಣೆ

SAST ಮುಖಾಂತರ ಕ್ಯಾನ್ಸರ್ ರೋಗಿಗಳಿಗೆ ಚಿಕಿತ್ಸೆ ನೀಡಲು EXPRESSION OF INTEREST ಕುರಿತು ಅರ್ಹ ಸಂಸ್ಥೆಗಳಿಂದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಎರಡು ಟೆಂಡರ್ ಡಾಕ್ಯೂಮೆಂಟ್ ಸಿಸ್ಟಂನಲ್ಲಿ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಉಚಿತ ಟೆಂಡರ್ ನಮೂನೆಗಳಿಗಾಗಿ, ಟೆಂಡರ್ ಬಗ್ಗೆ ಹೆಚ್ಚಿನ ಮಾಹಿತಿಗಳಿಗಾಗಿ ವೆಬ್ ಸೈಟ್ https://kppp.karnataka.gov.in ನಲ್ಲಿ ನೋಡಬಹುದಾಗಿದೆ.

ಕ್ರಸಂ	ಟೆಂಡರ್ ಸಂಖ್ಯೆ	DHFWS/2024-25/PREQUAL TENDER_NUMBER_3
1	ಟೆಂಡರ್ ಅಪ್‌ಲೋಡ್ ಮಾಡುವ ಪ್ರಾರಂಭ ದಿನಾಂಕ	24–12–2024
2	ಟೆಂಡರ್ ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ ಮತ್ತು ವೇಳೆ	31–12–2024 ಸಂಜೆ 04:00 ಗಂಟೆಗೆ
3	ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ	01–01–2025ರ ಸಂಜೆ 04.30 ಗಂಟೆಗೆ
4	ಹಣಕಾಸಿನ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ	ಸೂಚಿಸಲಾಗುವುದು.
5	ಸ್ಯಾಂಪಲ್ ನೀಡುವ ದಿನಾಂಕ:	ಸೂಚಿಸಲಾಗುವುದು
6	ವ್ಯವಹರಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ (ರಜಾ ದಿನಗಳನ್ನು ಹೊರತುಪಡಿಸಿ)	ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಛೇರಿ, ಜಿಲ್ಲಾಡಳಿತ ಭವನ, ದೇವಗಿರಿ ಹಾವೇರಿ ದೂರವಾಣಿ ಸಂಖ್ಯೆ: 08375–249049
7	ವೆಬ್ ಸೈಟ್ ವಿಳಾಸ:	http://kppp.karnataka.gov.in

DIPR/HVR/DIPO/437/2024-25
ಸಹಿ/– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು, ಹಾವೇರಿ,

ಕರ್ನಾಟಕ ಸರ್ಕಾರ ಕಂದಾಯ ಇಲಾಖೆ
ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.
ಒನಕೆ ಓಬವ್ವ ವೃತ್ತ, ದೂ. ಸಂಖ್ಯೆ: 08194–222811, 222538 FAX NO:08194-224355
ಸಂ. ಗ್ರಾಲೆ:ಸಿಬ್ಬಂದಿ:ಸಿಆರ್–66/2023–24 ದಿನಾಂಕ: 23.12.2024

ಪ್ರಕಟಣೆ

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ನೇಮಕಾತಿ ಅಧಿಸೂಚನೆ ಸಂಖ್ಯೆ:ಇಡಿ/ಕೆಇಎ/ಆಡಳಿತ/ಸಿಆರ್–04(ಕೆಕೆ) ದಿನಾಂಕ:21.02.2024 ಮತ್ತು ಇಡಿ/ಕೆಇಎ/ಆಡಳಿತ/ಸಿಆರ್–04/2024 (ಆರ್‌ಪಿಸಿ) ದಿ:21.02.2024 ಮತ್ತು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಪ್ರಕಟಣೆ ಸಂಖ್ಯೆ:ಇಡಿ/ಕೆಇಎ/ಆಡಳಿತ/ಸಿಆರ್–03/2023–24 ರಲ್ಲಿ ಗ್ರಾಮ ಆಡಳಿತಾಧಿಕಾರಿ ಹುದ್ದೆಗಳಿಗೆ ನಡೆಸಲಾದ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಗಳಿಸಿರುವ ಅಂತಿಮ ಅಂಕಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ. ಸರ್ಕಾರದ ಪತ್ರ ಸಂಖ್ಯೆ:ಕಂಇ 240 ಬಿಎಸ್ ಸಿ 2022 ದಿ:17.12.2024ರಲ್ಲಿ ಗ್ರಾಮ ಆಡಳಿತ ಅಧಿಕಾರಿಗಳ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸುವಂತೆ ಸೂಚಿಸಲಾಗಿರುತ್ತದೆ, ಆದರಂತೆ ಚಿತ್ರದುರ್ಗ ಜಿಲ್ಲಾ ಕಂದಾಯ ಘಟಕದಲ್ಲಿ ಖಾಲಿ ಇರುವ 32 ಅನುಮೋದನೆಯಾಗಿರುವ ಹುದ್ದೆಗಳಿಗೆ ಕರ್ನಾಟಕ ನಾಗರೀಕ ಸೇವಾ (ನೇರ ನೇಮಕಾತಿ)(ಸಾಮಾನ್ಯ) ನಿಯಮಗಳು 2021 ರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸುವ ಸಂಬಂಧ ಪ್ರಾಧಿಕಾರ ನೀಡಿರುವ ಮೆರಿಟ್ ಪಟ್ಟಿಯಲ್ಲಿ 1:3 ಅನುಪಾತದಂತೆ ದಾಖಲಾತಿಗಳ ಪರಿಶೀಲನೆ ಸಂಬಂಧ ಜಿಲ್ಲಾಧಿಕಾರಿಗಳ ಕಛೇರಿಯ ವೆಬ್‌ಸೈಟ್ https://chitradurga.nic.in ನಲ್ಲಿ ಮತ್ತು ಚಿತ್ರದುರ್ಗ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಸೂಚನಾಫಲಕದಲ್ಲಿ ಪ್ರಕಟಿಸಲಾಗಿರುತ್ತದೆ.

ದಿನಾಂಕ	ಚಟುವಟಿಕೆ
ದಿನಾಂಕ:20.12.2024	ಅಧಿಸೂಚನೆಯಲ್ಲಿ ನಿಗಧಿಯಾಗಿರುವ ಹುದ್ದೆಗಳ ಎದುರಾಗಿ 1:3 ಅನುಪಾತದಂತೆ ಅಭ್ಯರ್ಥಿಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ.
ದಿನಾಂಕ:04.01.2025 ರಂದು ಬೆಳಿಗ್ಗೆ 10:30 ಗಂಟೆಯಿಂದ	1:3 ಅನುಪಾತದಲ್ಲಿನ ಅಭ್ಯರ್ಥಿಗಳ ದಾಖಲೆಗಳನ್ನು ಪರಿಶೀಲನೆ ಮತ್ತು ವಿಕಲ ಚೇತನ ಅಭ್ಯರ್ಥಿಗಳ ವೈದ್ಯಕೀಯ ಪರೀಕ್ಷೆ ನಡೆಸಲಾಗುವುದು.
ದಿನಾಂಕ:15.01.2025	ತಾತ್ಕಾಲಿಕ 1:1 ಆಯ್ಕೆ ಪಟ್ಟಿ ಮತ್ತು ಹೆಚ್ಚುವರಿ ಆಯ್ಕೆ ಪಟ್ಟಿ ಪ್ರಕಟಿಸಲಾಗುವುದು.
ದಿನಾಂಕ:16.01.2025 ರಿಂದ 23.01.2025 ರವರೆಗೆ	ತಾತ್ಕಾಲಿಕ ಆಯ್ಕೆ ಪಟ್ಟಿ ಮತ್ತು ಹೆಚ್ಚುವರಿ ಆಯ್ಕೆ ಪಟ್ಟಿಗೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.
ದಿನಾಂಕ:27.01.2025	ಅಂತಿಮ ಆಯ್ಕೆ ಪಟ್ಟಿ ಮತ್ತು ಹೆಚ್ಚುವರಿ ಆಯ್ಕೆ ಪಟ್ಟಿ ಪ್ರಕಟಿಸಲಾಗುವುದು.

1.ಅಭ್ಯರ್ಥಿಗಳು ಹೆಚ್ಚಿನ ವಿವರಗಳಿಗಾಗಿ ಜಿಲ್ಲಾಧಿಕಾರಿಗಳ ಕಾರ್ಯಾಲಯ, ಚಿತ್ರದುರ್ಗ ಸಂಪರ್ಕಿಸುವುದು.
2.ಆಕ್ಷೇಪಣೆಗಳನ್ನು ಸರ್ಕಾರಿ ರಜೆ ದಿನಗಳನ್ನು ಹೊರತುಪಡಿಸಿ ಉಳಿದಂತೆ ಕಛೇರಿ ವೇಳೆಯಲ್ಲಿ ಸಲ್ಲಿಸುವುದು.
3.ಅಭ್ಯರ್ಥಿಗಳ ದಾಖಲೆಗಳ ಪರಿಶೀಲನೆಯನ್ನು ಚಿತ್ರದುರ್ಗ ಜಿಲ್ಲಾಧಿಕಾರಿಗಳ ಕಛೇರಿಯ ಸಭಾಂಗಣದಲ್ಲಿ ನಡೆಸಲಾಗುವುದು.

RO.No.457:DIPR/CTA/MCA/2024-25
ಸಹಿ/– ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ.

ಶ್ಯಾಮ್ ಬೆನಗಲ್ ಅಂತ್ಯಕ್ರಿಯೆ

ಮುಂಬೈ (ಪಿಟಿಐ): ಸೋಮವಾರ ಇಲ್ಲಿ ನಿಧನರಾದ ಖ್ಯಾತ ಚಲನಚಿತ್ರ ನಿರ್ದೇಶಕ ಶ್ಯಾಮ್ ಬೆನಗಲ್ (90) ಅವರ ಅಂತ್ಯಕ್ರಿಯೆ ಸಕಲ ಸರ್ಕಾರಿ ಗೌರವಗಳೊಂದಿಗೆ ಮಂಗಳವಾರ ನೆರವೇರಿತು.

ದಾದರ್‌ನ ಶಿವಾಜಿ ಪಾರ್ಕ್ ಚಿತಾಗಾರದಲ್ಲಿ ಮಧ್ಯಾಹ್ನ 3 ಗಂಟೆ ಸುಮಾರಿಗೆ ಅಂತ್ಯಕ್ರಿಯೆ ನಡೆಯಿತು. ಈ ವೇಳೆ ಪೊಲೀಸರು ಮೂರು ಸುತ್ತು ಗುಂಡು ಹಾರಿಸಿ, ಗೌರವ ಸಲ್ಲಿಸಿದರು.

ಇದಕ್ಕೂ ಮೊದಲು ಅವರ ಪಾರ್ಥಿವ ಶರೀರಕ್ಕೆ ರಾಷ್ಟ್ರಧ್ವಜ ಹೊದಿಸಿ, ಹೂಮಾಲೆಗಳಿಂದ ಅಲಂಕರಿಸಿ ಸಾರ್ವಜನಿಕರ ದರ್ಶನಕ್ಕೆ ಇಡಲಾಗಿತ್ತು.

ಶ್ಯಾಮ್ ಅವರ ಪತ್ನಿ ನೀರಾ ಬೆನಗಲ್ ಮತ್ತು ಪುತ್ರಿ ಪಿಯಾ ಬೆನಗಲ್ ಸೇರಿದಂತೆ ಸಿನಿಮಾ ರಂಗದಲ್ಲಿನ ಬೆನಗಲ್ ಅವರ ಸಮಕಾಲೀನರು, ಸಹೋದ್ಯೋಗಿಗಳು, ನಟ–ನಟಿಯರು ಹಾಗೂ ಕಲಾವಿದರು ಅಂತಿಮ ಗೌರವ ಸಲ್ಲಿಸಿದರು.

ಬೆನಗಲ್ ಅವರ ಹಲವು ಚಿತ್ರಗಳಲ್ಲಿ ನಟಿಸಿರುವ ನಾಸಿರುದ್ದೀನ್ ಶಾ, ರಜಿತ್ ಕಪೂರ್, ಕುಲಭೂಷಣ್ ಖರಬಂದ ಮತ್ತು ಇಲಾ ಅರುಣ್ ಅವರು ಅಂತ್ಯಕ್ರಿಯೆ ವೇಳೆ ಪಾಲ್ಗೊಂಡಿದ್ದರು.

‘ಬೆನಗಲ್ ಅವರೊಂದಿಗಿನ ಒಡನಾಟವನ್ನು ಪದಗಳಲ್ಲಿ ವ್ಯಕ್ತಪಡಿಸಲು ಸಾಧ್ಯವಿಲ್ಲ’ ಎಂದು ನಾಸಿರುದ್ದೀನ್ ಶಾ ಭಾವುಕರಾಗಿ ನುಡಿದರು.

ಚುನಾವಣೆ ನಿಯಮಗಳನ್ನು ಮಾರ್ಪಾಡು ಮಾಡಿರುವ ಕೇಂದ್ರ ಸರ್ಕಾರ

ಬದಲಾವಣೆ ಪ್ರಶ್ನಿಸಿ ಕಾಂಗ್ರೆಸ್ ಅರ್ಜಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ‘ಚುನಾವಣೆ ನಿರ್ವಹಣೆ ನಿಯಮ–1961’ಕ್ಕೆ ಈಚೆಗೆ ತಂದಿರುವ ತಿದ್ದುಪಡಿಯನ್ನು ಕಾಂಗ್ರೆಸ್ ಪಕ್ಷವು ಸುಪ್ರೀಂಕೋರ್ಟ್‌ನಲ್ಲಿ ಮಂಗಳವಾರ ಪ್ರಶ್ನಿಸಿದೆ. ಚುನಾವಣಾ ಪ್ರಕ್ರಿಯೆ ಮೇಲಿನ ವಿಶ್ವಾಸವು ಬಹಳ ವೇಗವಾಗಿ ಕುಸಿಯುತ್ತಿದ್ದು, ಅದನ್ನು ಪುನರ್ ಸ್ಥಾಪಿಸುವಲ್ಲಿ ನ್ಯಾಯಾಲಯವು ನೆರವಾಗಲಿದೆ ಎಂಬ ವಿಶ್ವಾಸವನ್ನು ಪಕ್ಷವು ವ್ಯಕ್ತಪಡಿಸಿದೆ.

ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳು, ವೆಬ್‌ಕಾಸ್ಟಿಂಗ್ ದೃಶ್ಯಾವಳಿ ಮತ್ತು ಅಭ್ಯರ್ಥಿಗಳ ವಿಡಿಯೊ ದಾಖಲೆಗಳನ್ನು ಸಾರ್ವಜನಿಕರು ಪರಿಶೀಲಿಸುವುದನ್ನು ತಡೆಯಲು ಕೇಂದ್ರ ಸರ್ಕಾರವು ನಿಯಮಗಳಲ್ಲಿ ಬದಲಾವಣೆ ತಂದಿದೆ. ಅವುಗಳ ದುರ್ಬಳಕೆಯನ್ನು ತಡೆಯಲು ಹೀಗೆ ಮಾಡಲಾಗಿದೆ ಎಂದು ಅದು ಹೇಳಿದೆ.

ನಿಯಮಗಳಲ್ಲಿ ಬದಲಾವಣೆ ತಂದಿರುವುದನ್ನು ಎಐಸಿಸಿ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದಾರೆ. ಕೋರ್ಟ್‌ಗೆ ಅರ್ಜಿ ಸಲ್ಲಿಸಿರುವುದನ್ನು ರಮೇಶ್ ಅವರು ‘ಎಕ್ಸ್’ ಮೂಲಕ ತಿಳಿಸಿದ್ದಾರೆ.

ತಿದ್ದುಪಡಿಗೆ ಕಾರಣವೇನು?

ಮತಗಟ್ಟೆಯ ಒಳಗಿನ ಸಿಸಿಟಿವಿ ಕ್ಯಾಮೆರಾ ದೃಶ್ಯಾವಳಿಗಳನ್ನು ಕೃತಕ ಬುದ್ಧಿಮತ್ತೆ ಬಳಸಿ ದುರ್ಬಳಕೆ ಮಾಡುವ ಸಾಧ್ಯತೆಯನ್ನು ಗುರುತಿಸಿ, ಮತದಾನದ ಗೋಪ್ಯತೆ ಉಲ್ಲಂಘನೆಯ ಗಾಂಭೀರ್ಯವನ್ನು ಪರಿಗಣಿಸಿ ನಿಯಮಗಳಲ್ಲಿ ಬದಲಾವಣೆ ತರಲಾಗಿದೆ ಎಂದು ಆಯೋಗದ ಮೂಲಗಳು ಹೇಳಿವೆ.

ಪಾರದರ್ಶಕತೆ ಮೇಲೆ ಪರಿಣಾಮ: ನಿಯಮಗಳಿಗೆ ತಂದಿರುವ ಬದಲಾವಣೆಯು ಚುನಾವಣಾ ಪ್ರಕ್ರಿಯೆಯ ಪಾರದರ್ಶಕತೆ ಮೇಲೆ ಪರಿಣಾಮ ಉಂಟುಮಾಡುತ್ತದೆ ಎಂದು ಸಾಮಾಜಿಕ ಕಾರ್ಯಕರ್ತರು ಕಳವಳ ವ್ಯಕ್ತಪಡಿಸಿದ್ದರು.

ಇದು ಚುನಾವಣಾ ಆಯೋಗದ ಸಾಂಸ್ಥಿಕ ಪ್ರಾಮಾಣಿಕತೆಯನ್ನು ಹಾಳುಮಾಡುವ ಪಿತೂರಿಯ ಭಾಗವಾಗಿ ನಡೆದಿರುವ ಇನ್ನೊಂದು ದಾಳಿ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ

ಚುನಾವಣೆಗಳನ್ನು ಮುಕ್ತವಾಗಿ ಹಾಗೂ ನ್ಯಾಯಸಮ್ಮತವಾಗಿ ನಡೆಸುವ ಹೊಣೆ ಹೊತ್ತಿರುವ ಚುನಾವಣಾ ಆಯೋಗವು ಬಹಳ ಮುಖ್ಯವಾದ ನಿಯಮಗಳನ್ನು ಸಾರ್ವಜನಿಕ ಸಮಾಲೋಚನೆ ಇಲ್ಲದೆ, ಏಕಪಕ್ಷೀಯವಾಗಿ ಬದಲಾಯಿಸಲು ಅವಕಾಶ ಕೊಡಲಾಗದು ಎಂದು ಅವರು ಹೇಳಿದ್ದಾರೆ.

ಚುನಾವಣಾ ಆಯೋಗದ ಶಿಫಾರಸು ಆಧರಿಸಿ ಕೇಂದ್ರ ಗೃಹ ಸಚಿವಾಲಯವು ‘ಚುನಾವಣೆ ನಿರ್ವಹಣೆ ನಿಯಮ–1961’ಕ್ಕೆ ಬದಲಾವಣೆ ತಂದಿದೆ. ಸಾರ್ವಜನಿಕರು ಪರಿಶೀಲಿಸಬಹುದಾದ ದಾಖಲೆಗಳ ಮೇಲೆ ನಿರ್ಬಂಧ ಇರಬೇಕು ಎಂದು ಶಿಫಾರಸಿನಲ್ಲಿ ಹೇಳಲಾಗಿತ್ತು.

ಈಚೆಗೆ ನಡೆದ ಹರಿಯಾಣ ವಿಧಾನಸಭಾ ಚುನಾವಣೆಯ ವೇಳೆ ಮತಗಟ್ಟೆಯೊಂದರಲ್ಲಿ ಆಗಿರುವ ಮತದಾನಕ್ಕೆ ಸಂಬಂಧಿಸಿದ ವಿಡಿಯೊ ದಾಖಲೆಗಳು ಹಾಗೂ ಇತರ ಕೆಲವು ದಾಖಲೆಗಳನ್ನು ವಕೀಲ ಮಹಮ್ಮದ್ ಪ್ರಾಚಾ ಅವರಿಗೆ ನೀಡಬೇಕು ಎಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್, ಚುನಾವಣಾ ಆಯೋಗಕ್ಕೆ ಸೂಚನೆ ನೀಡಿದ ಎರಡು ವಾರಗಳ ನಂತರ ಈ ತಿದ್ದುಪಡಿ ತರಲಾಗಿದೆ.

ಮತದಾರರ ಪಟ್ಟಿಯಲ್ಲಿ ಮನಸೋಇಚ್ಛೆ ಬದಲಾವಣೆ ಇಲ್ಲ: ಚುನಾವಣಾ ಆಯೋಗ

ನವದೆಹಲಿ (ಪಿಟಿಐ): ಈಚೆಗೆ ವಿಧಾನಸಭಾ ಚುನಾವಣೆ ನಡೆದ ಮಹಾರಾಷ್ಟ್ರದಲ್ಲಿ ಮತದಾರರ ಹೆಸರನ್ನು ಮನಸೋಇಚ್ಛೆ ಸೇರಿಸಿದ್ದಾಗಲಿ, ಅವರ ಹೆಸರನ್ನು ಮನಸ್ಸಿಗೆ ಬಂದಂತೆ ಅಳಿಸಿಹಾಕಿದ್ದಾಗಲಿ ನಡೆದಿಲ್ಲ ಎಂದು ಚುನಾವಣಾ ಆಯೋಗವು ಮಂಗಳವಾರ ಹೇಳಿದೆ.

ಕಾಂಗ್ರೆಸ್ಸಿಗೆ ಬರೆದಿರುವ ಪ್ರತಿಕ್ರಿಯೆಯಲ್ಲಿ ಆಯೋಗವು, 5 ಗಂಟೆಗೆ ನೀಡಿದ ಮತದಾನದ ಪ್ರಮಾಣವನ್ನು ಮತದಾನದ ಅಂತಿಮ ಪ್ರಮಾಣದ ಜೊತೆ ಹೋಲಿಸುವುದು ಸರಿಯಲ್ಲ ಎಂದು ಹೇಳಿದೆ.

ಸಂಜೆ 5 ಗಂಟೆಯ ನಂತರ ರಾತ್ರಿ 11.45ರವರೆಗೆ ಮತದಾನದ ಪ್ರಮಾಣದಲ್ಲಿ ಹೆಚ್ಚಳ ಆಗಿದ್ದುದು ಏಕೆ ಸಹಜ, ಮತದಾನ ಮಾಡಿದವರ ಒಟ್ಟು ಸಂಖ್ಯೆಯನ್ನು ಕಲೆಹಾಕುವ ಪ್ರಕ್ರಿಯೆಯ ಭಾಗ ಅದು, ಚಲಾವಣೆಯಾದ ಮತ ಹಾಗೂ ಎಣಿಕೆಯಾದ ಮತಗಳ ನಡುವೆ ವ್ಯತ್ಯಾಸ ಏಕೆ ಇರಬಹುದು ಎಂಬುದನ್ನು ಆಯೋಗವು ವಿವರಿಸಿದೆ.

ಮತದಾನ ಅಂತ್ಯಗೊಳ್ಳುವ ಹೊತ್ತಿಗೆ ಮತದಾನ ಕೇಂದ್ರಗಳಲ್ಲಿ ಅಭ್ಯರ್ಥಿಗಳ ಅಧಿಕೃತ ಏಜೆಂಟರ ಬಳಿ ಫಾರ್ಮ್–17ಸಿ (ಮತದಾನದ ವಿವರ ಇರುವ ಫಾರ್ಮ್) ಇರುತ್ತದೆಯಾದ ಕಾರಣಕ್ಕೆ, ವಾಸ್ತವ ಮತದಾನ ಪ್ರಮಾಣವನ್ನು ಬದಲಾಯಿಸುವುದು ಸಾಧ್ಯವೇ ಇಲ್ಲ ಎಂದು ಆಯೋಗವು ಸ್ಪಷ್ಟಪಡಿಸಿದೆ.

ಮಹಾರಾಷ್ಟ್ರದಲ್ಲಿ ಮತದಾರರ ಪಟ್ಟಿ ಸಿದ್ಧಪಡಿಸುವಾಗ ನಿಯಮ ಆಧಾರಿತ ಪ್ರಕ್ರಿಯೆಯನ್ನು ಪಾರದರ್ಶಕವಾಗಿ ಅನುಸರಿಸಲಾಗಿತ್ತು, ಮತದಾರರ ಹೆಸರು ಅಳಿಸುವಲ್ಲಿ ಅಕ್ರಮವಾಗಿ ಏನೂ ನಡೆದಿಲ್ಲ. ಮತದಾರರ ಪಟ್ಟಿ ಸಿದ್ಧಪಡಿಸುವಾಗ ಕಾಂಗ್ರೆಸ್ಸಿನ ಪ್ರತಿನಿಧಿಗಳ ಪಾಲ್ಗೊಳ್ಳುವಿಕೆ ಸೇರಿದಂತೆ ಎಲ್ಲ ಪ್ರಕ್ರಿಯೆಗಳನ್ನು ಪಾಲಿಸಲಾಗಿದೆ ಎಂದು ಆಯೋಗ ಹೇಳಿದೆ.

‘ಲೈಂಗಿಕ ಅಪರಾಧ ಸಂತ್ರಸ್ತರಿಗೆ ಚಿಕಿತ್ಸೆ ನಿರಾಕರಿಸುವಂತಿಲ್ಲ’

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ಆಸ್ಪತ್ರೆಗಳು ಹಾಗೂ ಖಾಸಗಿ ಆಸ್ಪತ್ರೆಗಳು ಲೈಂಗಿಕ ಅಪರಾಧ ಕೃತ್ಯಗಳ ಸಂತ್ರಸ್ತರಿಗೆ ಚಿಕಿತ್ಸೆ ನೀಡದೆ ವಾಪಸ್ ಕಳುಹಿಸುವಂತೆ ಇಲ್ಲ ಎಂದು ದೆಹಲಿ ಹೈಕೋರ್ಟ್ ಮಹತ್ವದ ನಿರ್ದೇಶನ ನೀಡಿದೆ. ಆ ಸಂತ್ರಸ್ತರಿಗೆ ಆಸ್ಪತ್ರೆಗಳು ಉಚಿತವಾಗಿ ಚಿಕಿತ್ಸೆ ನೀಡಬೇಕು, ಇಲ್ಲದಿದ್ದರೆ ಕ್ರಿಮಿನಲ್ ಕ್ರಮ ಎದುರಿಸಬೇಕಾಗುತ್ತದೆ ಎಂದು ಕೋರ್ಟ್ ಎಚ್ಚರಿಸಿದೆ.

ತುರ್ತು ಚಿಕಿತ್ಸೆಗಾಗಿ ಇಂತಹ ಸಂತ್ರಸ್ತರನ್ನು ಕರೆತಂದಾಗ ಆಸ್ಪತ್ರೆಗಳು ಗುರುತಿನ ಚೀಟಿ ತೋರಿಸುವಂತೆ ಒತ್ತಾಯಿಸುತ್ತ ಇರಬಾರದು ಎಂದು ನ್ಯಾಯಮೂರ್ತಿಗಳಾದ ಪ್ರತಿಭಾ ಎಂ. ಸಿಂಗ್ ಮತ್ತು ಅಮಿತ್ ಶರ್ಮ ಅವರು ಇರುವ ವಿಭಾಗೀಯ ಪೀಠವು ಹೇಳಿದೆ. ವೈದ್ಯಕೀಯ ವೃತ್ತಿಯಲ್ಲಿರುವ ಯಾವುದೇ ವ್ಯಕ್ತಿಯು ಇಂತಹ ಸಂತ್ರಸ್ತರಿಗೆ ಅಗತ್ಯ ಚಿಕಿತ್ಸೆ ಒದಗಿಸಲು ನಿರಾಕರಿಸುವುದು ಶಿಕ್ಷಾರ್ಹ ಅಪರಾಧ, ಅದರ ಬಗ್ಗೆ ದೂರನ್ನು ಪೊಲೀಸರು ತಕ್ಷಣವೇ ದಾಖಲಿಸಿಕೊಳ್ಳಬೇಕು ಎಂದು ಪೀಠವು ಹೇಳಿದೆ.

ಅತ್ಯಾಚಾರ, ಸಾಮೂಹಿಕ ಅತ್ಯಾಚಾರ, ಆ್ಯಸಿಡ್ ದಾಳಿ ಸಂತ್ರಸ್ತರು ಮತ್ತು ಲೈಂಗಿಕ ದೌರ್ಜನ್ಯಕ್ಕೆ ಗುರಿಯಾಗುವ ಬಾಲಕ, ಬಾಲಕಿಯರ ವಿಚಾರವಾಗಿ ಪೀಠವು ಈ ಆದೇಶ ನೀಡಿದೆ. ಕಾನೂನು ಜಾರಿಯಲ್ಲಿ ಇದ್ದರೂ ಈ ಸಂತ್ರಸ್ತರು ಉಚಿತ ಚಿಕಿತ್ಸೆ ಪಡೆದುಕೊಳ್ಳುವಲ್ಲಿ ಸಮಸ್ಯೆ ಎದುರಿಸುತ್ತಿದ್ದಾರೆ ಎಂದು ಹೇಳಿದೆ.

‘ಇಲ್ಲಿ ಹೇಳಿರುವ ಅಪರಾಧ ಕೃತ್ಯಗಳ ಸಂತ್ರಸ್ತರು ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆ, ಚಿಕಿತ್ಸಾ ಕೇಂದ್ರ, ರೋಗಪತ್ತೆ ಕೇಂದ್ರಕ್ಕೆ ಬಂದಾಗ ಅವರಿಗೆ ಉಚಿತ ಚಿಕಿತ್ಸೆ ಒದಗಿಸದೆ ಹಿಂದಕ್ಕೆ ಕಳುಹಿಸುವಂತಿಲ್ಲ’ ಎಂದು ಪೀಠವು ಆದೇಶದಲ್ಲಿ ಸ್ಪಷ್ಟಪಡಿಸಿದೆ.

ಚಿಕಿತ್ಸೆ ಅಂದರೆ ಪ್ರಥಮಚಿಕಿತ್ಸೆ ಮಾತ್ರವೇ ಅಲ್ಲ, ಅದು ಆಸ್ಪತ್ರೆಗೆ ದಾಖಲು ಮಾಡಿಕೊಳ್ಳುವುದು, ಹೊರರೋಗಿಗಳಿಗೆ ನೆರವು ಮುಂದುವರಿಸುವುದು, ವಿವಿಧ ತಪಾಸಣೆಗಳು, ಪ್ರಯೋಗಾಲಯದಲ್ಲಿ ನಡೆಸಬೇಕಿರುವ ಪರೀಕ್ಷೆಗಳು, ಆಪ್ತಸಮಾಲೋಚನೆ ನಡೆಸುವುದು, ಮನಃಶಾಸ್ತ್ರದ ನೆಲೆಯಲ್ಲಿ ನೆರವು ಒದಗಿಸುವುದು, ಕುಟುಂಬದ ಸದಸ್ಯರಿಗೆ ಆಪ್ತಸಮಾಲೋಚನೆ ನಡೆಸುವುದು ಕೂಡ ಸೇರಿದೆ ಎಂದು ಪೀಠವು ಹೇಳಿದೆ.

ಸಂತ್ರಸ್ತರು ಉಚಿತ ಚಿಕಿತ್ಸೆ ಪಡೆಯಲು ರಾಜ್ಯ ಅಥವಾ ಜಿಲ್ಲಾ ಮಟ್ಟದ ಕಾನೂನು ಸೇವಾ ಪ್ರಾಧಿಕಾರದ ಶಿಫಾರಸು ಇರಬೇಕು ಎಂದೇನೂ ಇಲ್ಲ ಎಂಬುದನ್ನು ಕೋರ್ಟ್ ಸ್ಪಷ್ಟಪಡಿಸಿದೆ. ಸಂತ್ರಸ್ತರಿಗೆ ಉಚಿತ ಚಿಕಿತ್ಸೆ ಲಭ್ಯವಿರುತ್ತದೆ ಎಂಬ ಫಲಕವನ್ನು ಆಸ್ಪತ್ರೆಗಳು ತಮ್ಮ ಪ್ರವೇಶದ್ವಾರದಲ್ಲಿ ಹಾಗೂ ಸ್ವಾಗತಕಾರರು ಕುಳಿತಿರುವಲ್ಲಿ ಪ್ರದರ್ಶಿಸಬೇಕು ಎಂದು ಸೂಚಿಸಿದೆ.

ಸರ್ಕಾರದ ಕುಂಭಕರ್ಣ ನಿದ್ದೆ: ರಾಹುಲ್

ನವದೆಹಲಿ (ಪಿಟಿಐ): ‘ಬೆಲೆ ಏರಿಕೆಯಿಂದಾಗಿ ಜನರು ಸಂಕಷ್ಟ ಎದುರಿಸುತ್ತಿದ್ದಾರೆ. ನಿತ್ಯದ ತಮ್ಮ ಬೇಕು–ಬೇಡಗಳನ್ನು ಅದುಮಿಟ್ಟುಕೊಂಡು ಬದುಕಬೇಕಾದ ಸ್ಥಿತಿ ನಿರ್ಮಾಣವಾಗಿದೆ. ಆದರೆ, ಸರ್ಕಾರ ಮಾತ್ರ ಕುಂಭಕರ್ಣನಂತೆ ನಿದ್ರಿಸುತ್ತಿದೆ’ ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಮಂಗಳವಾರ ದೂರಿದರು.

ಬೆಲೆ ಏರಿಕೆ

ಇಲ್ಲಿನ ಗಿರಿ ನಗರದಲ್ಲಿರುವ ತರಕಾರಿ ಮಾರುಕಟ್ಟೆಗೆ ಇತ್ತೀಚೆಗೆ ಭೇಟಿ ನೀಡಿದ್ದ ರಾಹುಲ್, ಗೃಹಿಣಿಯರೊಂದಿಗೆ ಖರೀದಿಗೆ ತೆರಳಿದ್ದರು. ಬಳಿಕ ಹಲವು ಮಹಿಳೆಯ ಜೊತೆ ಬೆಲೆಏರಿಕೆಯ ಕುರಿತು ಮಾತುಕತೆ ನಡೆಸಿದ್ದರು. ಮಹಿಳೆಯರು ತಮ್ಮ ಕಷ್ಟಗಳನ್ನು ಅವರೊಂದಿಗೆ ಹಂಚಿಕೊಂಡಿದ್ದರು. ಈ ವಿಡಿಯೊವನ್ನು ರಾಹುಲ್ ಮಂಗಳವಾರ ಬಿಡುಗಡೆ ಮಾಡಿದ್ದಾರೆ.

ಮೋದಿ ಸರ್ಕಾರವು ಘೋಷಿಸಿದ್ದ ಬುಲೆಟ್ ರೈಲು ಬರಲಿಲ್ಲ. ಆದರೆ, ಬೆಲೆಏರಿಕೆಯು ಬುಲೆಟ್ ರೈಲಿನ ವೇಗಕ್ಕಿಂತಲೂ ವೇಗವಾಗಿ ಮೇಲೇರುತ್ತಿದೆ

ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

‘ನಾನು ಇತ್ತೀಚೆಗೆ ಸ್ಥಳೀಯ ತರಕಾರಿ ಮಾರುಕಟ್ಟೆಗೆ ಭೇಟಿ ನೀಡಿದ್ದೆ. ಈ ಹಿಂದೆ ಬೆಳ್ಳುಳ್ಳಿ ಬೆಲೆಯು ಕೆ.ಜಿಗೆ ₹40 ಇತ್ತು. ಈಗ ಇದರ ಬೆಲೆ ₹400ಕ್ಕೆ ಏರಿಕೆಯಾಗಿದೆ. ಹಸಿಬಟಾಣಿ ಬೆಲೆಯು ಈಗ ಕೆ.ಜಿಗೆ ₹120 ತಲುಪಿದೆ. ಇಂಥ ಬೆಲೆಏರಿಕೆಯು ಜನರ ಬಜೆಟ್ ಅನ್ನು ಬುಡಮೇಲು ಮಾಡಿದೆ’ ಎಂದು ವಿಡಿಯೊದೊಂದಿಗೆ ಪೋಸ್ಟ್‌ವೊಂದನ್ನು ಅವರು ಹಂಚಿಕೊಂಡಿದ್ದಾರೆ.

‘ನಿಮಗೆ ಮಾರುಕಟ್ಟೆಯ ಬಗ್ಗೆ ತಿಳಿದಿದೆ. ಬೆಲೆಏರಿಕೆಯಿಂದ ನೀವು ಅನುಭವಿಸುತ್ತಿರುವ ಸಂಕಷ್ಟಗಳನ್ನು, ನಿಮ್ಮ ಸಮಸ್ಯೆಗಳನ್ನು ನಮ್ಮ ಬಳಿ ಹಂಚಿಕೊಳ್ಳಿ’ ಎಂದು ಅವರು ಜನರಿಗೆ ಕರೆ ನೀಡಿದ್ದಾರೆ.

ನವದೆಹಲಿಯಲ್ಲಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರು ತರಕಾರಿ ಖರೀದಿಸಿದರು —ಪಿಟಿಐ ಚಿತ್ರ

ತರಕಾರಿಗಳ ಬೆಲೆಯು ಏರಿಕೆಯಾಗಿದ್ದಕ್ಕೆ ನಾವು ನಮ್ಮ ಊಟದ ಪ್ರಮಾಣವನ್ನೇ ತಗ್ಗಿಸಿಕೊಂಡಿದ್ದೇವೆ. ಮೊದಲು ಖರೀದಿಸುತ್ತಿದ್ದ ತರಕಾರಿಗಳನ್ನು ಈಗ ಖರೀದಿಸಲು ಸಾಧ್ಯವಾಗುತ್ತಿಲ್ಲ. ವಿವಿಧ ವಸ್ತುಗಳ ಬೆಲೆಗಳು ಏರಿಕೆಯಾಗುತ್ತಲೇ ಇದೆ. ಆದರೆ, ನಮ್ಮ ಸಂಬಳ ಮಾತ್ರ ಏರಿಕೆಯಾಗದೆಯೇ ಉಳಿದುಬಿಟ್ಟಿದೆ

ರಾಹುಲ್ ಅವರು ಹಂಚಿಕೊಂಡ ವಿಡಿಯೊದಲ್ಲಿ ಮಹಿಳೆಯರು ಹೇಳಿದ್ದು

ಮೋಹನ್ ಭಾಗವತ್ ಹೇಳಿಕೆಗೆ ಕಾಂಗ್ರೆಸ್ ನಾಯಕರ ಪ್ರತಿಕ್ರಿಯೆ

‘ಬಿಜೆಪಿ–ಆರ್‌ಎಸ್‌ಎಸ್ ಇಬ್ಬಗೆ ನೀತಿ’

ಪ್ರಜಾವಾಣಿ ವಾರ್ತೆ

ನವದೆಹಲಿ: ‘ನರೇಂದ್ರ ಮೋದಿ ಮೊದಲ ಬಾರಿ ಪ್ರಧಾನಿಯಾದಾಗ, ಸಂಸತ್ತಿನ ಹೊಸ್ತಿಲಿಗೆ ನಮಸ್ಕರಿಸಿದ್ದರು. ಆಮೇಲೆ ಸಂಸತ್ತಿಗೆ ಹೊಸ ಕಟ್ಟಡ ನಿರ್ಮಿಸಿದರು. ಮೂರನೇ ಬಾರಿಗೆ ಪ್ರಧಾನಿಯಾಗಿ ಆಯ್ಕೆಯಾದ ಬಳಿಕ ಸಂವಿಧಾನಕ್ಕೆ ನಮಸ್ಕರಿಸಿದರು. ಅವರಿಗೆ ಈಗ ಹೊಸ ಸಂವಿಧಾನ ರಚಿಸುವ ಆಸೆ. ಬಿಜೆಪಿ ಹಾಗೂ ಆರ್‌ಎಸ್‌ಎಸ್‌ನ ಇಂಥ ಇಬ್ಬಗೆ ನೀತಿಗೆ ಮಿತಿಯೇ ಇಲ್ಲ’ ಎಂದು ಕಾಂಗ್ರೆಸ್ ಮಂಗಳವಾರ ದೂರಿದೆ.

‘ಮಸೀದಿ ಕೆಳಗೆ ದೇವಸ್ಥಾನ ಹುಡುಕುವುದನ್ನು ನಿಲ್ಲಿಸಿ’ ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಇತ್ತೀಚೆಗೆ ನೀಡಿದ್ದ ಹೇಳಿಕೆ ಕುರಿತು ಪತ್ರಿಕಾಗೋಷ್ಠಿಯೊಂದರಲ್ಲಿ ಕಾಂಗ್ರೆಸ್ ನಾಯಕರು ಪ್ರತಿಕ್ರಿಯಿಸಿದ್ದಾರೆ.

ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಮಾತನಾಡಿ, ‘ಯಾವಾಗೆಲ್ಲಾ ತಮ್ಮ ಮೃದು ಧೋರಣೆಯನ್ನು ಪ್ರದರ್ಶಿಸಬೇಕು ಎಂದು ಬಿಜೆಪಿ ನಿರ್ಧರಿಸುತ್ತದೆಯೊ, ಆಗ ಭಾಗವತ್ ಅವರನ್ನು ಮುಂದೆ ಮಾಡಿ ಅವರಿಂದ ಎಲ್ಲರಿಗೂ ಪ್ರಿಯವಾಗುವಂಥ ಹೇಳಿಕೆಗಳನ್ನು ಹೇಳಿಸುತ್ತದೆ. ನಂತರ ಇದಕ್ಕೆ ವಿರುದ್ಧವಾಗಿರುವ ಕೆಲಸವನ್ನೇ ಬಿಜೆಪಿ ಮಾಡುತ್ತದೆ’ ಎಂದರು.

‘ಎಲ್.ಕೆ. ಅಡ್ವಾಣಿ ಎದುರು ಮೋದಿ ಅವರು ಈ ಹಿಂದೆ ತಲೆಬಾಗುತ್ತಿದ್ದರು. ಈಗ ಅಡ್ವಾಣಿ ಅವರು ಆಸ್ಪತ್ರೆಯಲ್ಲಿದ್ದಾರೆ. ಆದರೆ, ಪ್ರತಾಪ್ ಸಾರಂಗಿ (ಸಂಸತ್ ಆವರಣದಲ್ಲಿ ನಡೆದ ತಳ್ಳಾಟದಲ್ಲಿ ಗಾಯಗೊಂಡಿದ್ದಾರೆ ಎಂದು ಆಸ್ಪತ್ರೆ ಸೇರಿದ್ದ ಸಂಸದ) ಅವರನ್ನು ಮಾತ್ರ ನೋಡಲು ಬಿಜೆಪಿಯವರು ಆಸ್ಪತ್ರೆಗೆ ದೌಡಾಯಿಸಿದರು’ ಎಂದು ಪಕ್ಷದ ಮಾಧ್ಯಮ ಹಾಗೂ ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಹೇಳಿದರು.

‘ಮೃದು ವ್ಯಕ್ತಿತ್ವವೆಲ್ಲ ಮುಖವಾಡ’

‘ಅಟಲ್ ಬಿಹಾರಿ ವಾಜಪೇಯಿ ಅವರನ್ನು ಮೃದು ವ್ಯಕ್ತಿತ್ವದವರು ಎಂದು ಮುಂದು ಮಾಡಿದಾಗ, ಅವರ ಹಿಂದೆ ಅಡ್ವಾಣಿ ಅವರಿದ್ದರು. ಅಡ್ವಾಣಿ ಅವರನ್ನು ಮುಂದು ಮಾಡಿದಾಗ ಅವರ ಹಿಂದೆ ಮೋದಿ ಇದ್ದರು. ಮೋದಿ ಹಾಗೂ ಭಾಗವತ್ ಅವರನ್ನು ಮೃದು ವ್ಯಕ್ತಿತ್ವದವರು ಎನ್ನುತ್ತಿರುವಾಗ ಇವರ ಹಿಂದೆ ಯೋಗಿ ಆದಿತ್ಯನಾಥ ಮತ್ತು ಸಾರಂಗಿ ಅವರಿದ್ದಾರೆ. ಹೀಗೆ ಬಿಜೆಪಿ–ಆರ್‌ಎಸ್‌ಎಸ್‌ನವರು ಮುಖವಾಡ ಹಾಕಿಕೊಂಡೇ ಇರುತ್ತಾರೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಹೇಳಿದರು.

‘ಕ್ಯಾಥೊಲಿಕ್ ಬಿಷಪ್ಸ್ ಕಾನ್ಫರೆನ್ಸ್ ಆಫ್ ಇಂಡಿಯಾದವರು ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ಜರ್ಮನಿಯಲ್ಲಿ ಕ್ರಿಶ್ಚಿಯನ್ನರ ಮೇಲಾಗುತ್ತಿರುವ ದಾಳಿಗಳ ಬಗ್ಗೆ ಮಾತನಾಡಿದರು. ಆದರೆ, ಮಣಿಪುರದ ಕುರಿತು ಅವರು ಮೌನ ತಾಳಿದ್ದಾರೆ’ ಎಂದರು.

‘ಪ್ರಧಾನಿ ಅವರು ಕ್ರಿಶ್ಚಿಯನ್ನರ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ. ಆದರೆ, ಕೇರಳದ ಶಾಲೆವೊಂದರಲ್ಲಿ ಕ್ರಿಸ್ ಮಸ್ ಆಚರಿಸುವುದನ್ನು ವಿಶ್ವ ಹಿಂದೂ ಪರಿಷತ್ ವಿರೋಧಿಸುತ್ತದೆ’ ಎಂದರು.

3 ತಾಸು ಅಲ್ಲು ವಿಚಾರಣೆ

ಹೈದರಾಬಾದ್ (ಪಿಟಿಐ): ಡಿ.4ರಂದು ‘ಪುಷ್ಪ 2: ದಿ ರೂಲ್’ ಸಿನಿಮಾದ ಪ್ರೀಮಿಯರ್ ಪ್ರದರ್ಶನ ನಡೆಯುತ್ತಿದ್ದಾಗ ಉಂಟಾದ ನೂಕುನುಗ್ಗಲು ಮತ್ತು ಕಾಲ್ತುಳಿತದಲ್ಲಿ ಮಹಿಳೆಯೊಬ್ಬರು ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ತೆಲುಗು ನಟ ಅಲ್ಲು ಅರ್ಜುನ್ ಅವರು ಚಿಕ್ಕಡಪಲ್ಲಿ ಠಾಣೆಯ ಪೊಲೀಸರ ಮುಂದೆ ಮಂಗಳವಾರ ವಿಚಾರಣೆಗೆ ಹಾಜರಾದರು.

ಮಂಗಳವಾರ ಬೆಳಿಗ್ಗೆ 11 ಗಂಟೆ ಒಳಗಾಗಿ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನೀಡಲಾಗಿತ್ತು. ಹೀಗಾಗಿ, ಅಲ್ಲು ಮನೆ ಮುಂದೆ ಹಾಗೂ ಚಿಕ್ಕಡಪಲ್ಲಿ ಠಾಣೆಯ ಮುಂದೆ ಹೆಚ್ಚಿನ ಭದ್ರತೆ ಕಲ್ಪಿಸಲಾಗಿತ್ತು. ಮನೆಯಿಂದ ಹೊರಡುವ ಮುನ್ನ, ಅಭಿಮಾನಿಗಳತ್ತ ಕೈಬೀಸಿದರು. ಠಾಣೆಗೆ ತೆರಳುವ ಮಾರ್ಗದ ಕೆಲವೆಡೆ ನಿರ್ಬಂಧ ವಿಧಿಸಲಾಗಿತ್ತು.

‘ಪೊಲೀಸರ ವಿಚಾರಣೆಗೆ ಸಹಕರಿಸುತ್ತೇನೆ’ ಎಂದು ಈ ಹಿಂದೆಯೇ ಅಲ್ಲು ಅರ್ಜುನ್ ತಿಳಿಸಿದ್ದರು.

ತಂದೆ ಅಲ್ಲು ಅರವಿಂದ್, ಮಾವ ಚಂದ್ರಶೇಖರ್ ರೆಡ್ಡಿ, ಆಪ್ತ ಬನ್ನಿ ವಾಸು, ವಕೀಲ ಅಶೋಕ್ ರೆಡ್ಡಿ ಜೊತೆಗೆ 11 ಗಂಟೆ ನಂತರ ಠಾಣೆಗೆ ಹಾಜರಾದರು. ಮಧ್ಯಾಹ್ನ 2.45ರವರೆಗೆ ಸೆಂಟ್ರಲ್ ವಲಯದ ಡಿಸಿಪಿ ಅಕ್ಷಾಂಶ್ ಯಾದವ್ ಅವರು ಅಲ್ಲು ಅವರ ವಿಚಾರಣೆ ನಡೆಸಿದರು. ಕಾಲ್ತುಳಿತಕ್ಕೆ ಸಂಬಂಧಿಸಿದಂತೆ ಪೊಲೀಸರು 20 ಪ್ರಶ್ನೆಗಳನ್ನು ಕೇಳಿದರು. ಈ ಪೈಕಿ ಹಲವು ಪ್ರಶ್ನೆಗಳಿಗೆ ಉತ್ತರಿಸಿದರು. ಘಟನೆ ನಡೆದ ಸ್ಥಳದಲ್ಲಿ ಸಂಗ್ರಹಿಸಿದ ವಿಡಿಯೊ ದೃಶ್ಯಾವಳಿಗಳನ್ನು ತೋರಿಸಿದರು.

‘ಮಹಿಳೆಯೊಬ್ಬರು ಮೃತಪಟ್ಟಿದ್ದು, ಜನದಟ್ಟಣೆ ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ, ಕೂಡಲೇ ಸ್ಥಳ ತೆರವುಗೊಳಿಸಬೇಕು ಎಂದು ಅಲ್ಲು ಅರ್ಜುನ್‌ಗೆ ತಿಳಿಸಲಾಗಿತ್ತು’ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದರು. ಆದರೆ, ಯಾವ ಅಧಿಕಾರಿಯೂ ಸಂಪರ್ಕಿಸಿರಲಿಲ್ಲ, ಮಹಿಳೆ ಮೃತಪಟ್ಟ ವಿಚಾರ ಮರುದಿನ ಗೊತ್ತಾಗಿತ್ತು ಎಂದು ಅಲ್ಲು ಅರ್ಜುನ್ ತಿಳಿಸಿದ್ದರು.

ಕಾಲ್ತುಳಿತದ ವೇಳೆ ಮಹಿಳೆ ಮೃತಪಟ್ಟ ವಿಚಾರದ ಕುರಿತು ಮಾಹಿತಿ ನೀಡಿದ ಅಧಿಕಾರಿಯನ್ನು ಗುರುತು ಹಿಡಿಯುವಂತೆ ವಿಚಾರಣೆ ವೇಳೆ ಸೂಚಿಸಲಾಯಿತು.

ಮಂಗಳವಾರ ನಟ ನೀಡಿದ ಹೇಳಿಕೆಯನ್ನು ದಾಖಲಿಸಲಾಗಿದ್ದು, ಅಗತ್ಯಬಿದ್ದರೆ ಮತ್ತೊಮ್ಮೆ ಕರೆಸಿಕೊಳ್ಳಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಆ್ಯಂಟನಿ ಬಂಧನ: ಅರ್ಜುನ್ ಅವರ ಭದ್ರತೆ ಹಾಗೂ ಬೌನ್ಸರ್‌ಗಳ ಮೇಲುಸ್ತುವಾರಿ ವಹಿಸಿದ್ದ ಆ್ಯಂಟನಿಯನ್ನು ಪೊಲೀಸರು ಬಂಧಿಸಿದ್ದಾರೆ. ಘಟನೆ ನಡೆದ ದಿನದಂದು ಆ್ಯಂಟನಿ ಕೂಡ ಸ್ಥಳದಲ್ಲಿದ್ದರು. ಪೊಲೀಸರು ಆ್ಯಂಟನಿಯನ್ನು ಸಂಧ್ಯಾ ಚಿತ್ರಮಂದಿರಕ್ಕೆ ಕರೆದೊಯ್ದು ಅಂದಿನ ಘಟನೆಯನ್ನು ಮರುಸೃಷ್ಟಿ ಮಾಡಿದರು.

ಅಲ್ಲು ಅರ್ಜುನ್ ಅವರು ಮಂಗಳವಾರ ಹೈದರಾಬಾದ್‌ನ ಚಿಕ್ಕಡಪಲ್ಲಿ ಠಾಣೆಗೆ ವಿಚಾರಣೆಗೆ ಹಾಜರಾದರು —ಪಿಟಿಐ ಚಿತ್ರ

ಅಗೌರವ: ನಟ, ನಿರ್ದೇಶಕ, ನಿರ್ಮಾಪಕರ ವಿರುದ್ಧ ದೂರು

‘ಪುಷ್ಪ 2’ ಸಿನಿಮಾದ ಕೆಲವು ದೃಶ್ಯಗಳಲ್ಲಿ ಪೊಲೀಸ್ ಅಧಿಕಾರಿಗಳನ್ನು ಅವಮಾನಕರವಾಗಿ ತೋರಿಸಲಾಗಿದೆ ಎಂದು ಆರೋಪಿಸಿ ತೆಲಂಗಾಣದ ವಿಧಾನ ಪರಿಷತ್ ಸದಸ್ಯ ಚಿಂತಾಪಂಡು ನವೀನ್ ಅವರು ನಟ, ನಿರ್ದೇಶಕ, ನಿರ್ಮಾಪಕರ ವಿರುದ್ಧ ರಾಚಕೊಂಡ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಪೊಲೀಸ್ ಅಧಿಕಾರಿಗಳನ್ನು ಭ್ರಷ್ಟರೆಂದು ಬಿಂಬಿಸಲಾಗಿದೆ ಎಂದು ದೂರಿ ಕೆಲವು ದೃಶ್ಯಗಳನ್ನು ಉಲ್ಲೇಖಿಸಿ ಸೋಮವಾರ ದೂರು ದಾಖಲಿಸಿದ್ದಾರೆ.

‘ಐಪಿಎಸ್ ಅಧಿಕಾರಿಯೊಬ್ಬರು ಈಜುಕೊಳದಲ್ಲಿದ್ದ ವೇಳೆ ಸಿನಿಮಾದ ನಾಯಕ ನಟ ಕೊಳದಲ್ಲಿ ಮೂತ್ರ ವಿಸರ್ಜನೆ ಮಾಡುವ ದೃಶ್ಯವಿದ್ದು, ಆ ಮೂಲಕ ಪೊಲೀಸ್ ಸಿಬ್ಬಂದಿಯನ್ನೇ ಅವಮಾನಿಸಲಾಗಿದೆ’ ಎಂದು ವಿವರಿಸಿದ್ದಾರೆ.

ಬಾಲ ಪುರಸ್ಕಾರ ವಿವಿಧ ರಾಜ್ಯಗಳ 17 ಮಕ್ಕಳು ಆಯ್ಕೆ

ನವದೆಹಲಿ (ಪಿಟಿಐ): ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ‘ವಿಶ್ವ ಬಾಲ ದಿನ’ದ ಅಂಗವಾಗಿ 17 ಮಕ್ಕಳಿಗೆ ‘ಪ್ರಧಾನ ಮಂತ್ರಿ ರಾಷ್ಟ್ರೀಯ ಬಾಲ ಪುರಸ್ಕಾರ’ವನ್ನು ಡಿ.26ರಂದು ದೆಹಲಿಯ ಭಾರತ ಮಂಟಪ ಸಭಾಂಗಣದಲ್ಲಿ ನಡೆಯಲಿರುವ ಕಾರ್ಯಕ್ರಮದಲ್ಲಿ ಪ್ರದಾನ ಮಾಡಲಿದ್ದಾರೆ.

ಕೇಂದ್ರಾಡಳಿತ ಪ್ರದೇಶಗಳು, 14 ರಾಜ್ಯಗಳ ಒಟ್ಟು 17 ಮಕ್ಕಳನ್ನು ಈ ಬಾರಿಯ ಪುರಸ್ಕಾರಕ್ಕೆ ಆಯ್ಕೆ ಮಾಡಲಾಗಿದ್ದು, ಇವರಲ್ಲಿ 10 ಬಾಲಕಿಯರು ಹಾಗೂ ಏಳು ಬಾಲಕರು ಇದ್ದಾರೆ.

ಈ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯವು ಹೇಳಿಕೆ ಬಿಡುಗಡೆ ಮಾಡಿದೆ. ಕಲೆ, ಸಂಸ್ಕೃತಿ, ಶೌರ್ಯ, ನಾವಿನ್ಯ, ವಿಜ್ಞಾನ ಮತ್ತು ತಂತ್ರಜ್ಞಾನ, ಸಮಾಜ ಸೇವೆ, ಕ್ರೀಡೆ ಹಾಗೂ ಪರಿಸರ ಎಂಬ ಏಳು ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ನೀಡಲಾಗುತ್ತಿದೆ. ಪದಕ, ಪ್ರಮಾಣಪತ್ರ ಹಾಗೂ ಹೊತ್ತಗೆಯೊಂದನ್ನು ಪ್ರಶಸ್ತಿಯು ಒಳಗೊಂಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರೂ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.ಈ ಸಂದರ್ಭದಲ್ಲಿ ‘ಸುಪೋಷಣ್ ಪಂಚಾಯತ್’ ಯೋಜನೆಯನ್ನು ಅವರು ಉದ್ಘಾಟಿಸಲಿದ್ದಾರೆ. ತಳಮಟ್ಟದಲ್ಲಿಯೇ ಮಕ್ಕಳಲ್ಲಿ ಪೌಷ್ಟಿಕತೆಯನ್ನು ಹೆಚ್ಚಿಸುವ ದೃಷ್ಟಿಯಿಂದ ಈ ಯೋಜನೆಯನ್ನು ರೂಪಿಸಲಾಗಿದೆ.

ಕಾರ್ಯಕ್ರಮಕ್ಕೂ ಮೊದಲು ಪ್ರಶಸ್ತಿ ಪುರಸ್ಕೃತರೂ ಸೇರಿದಂತೆ ಸುಮಾರು 3,500 ಮಕ್ಕಳು ಮೆರವಣಿಗೆ ನಡೆಸಲಿದ್ದಾರೆ. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳೂ ನಡೆಯಲಿವೆ.

ದೇವಪುತ್ರ ಯೇಸು

● ಸಿ. ಮರಿಜೋಸೆಫ್

ನಮ್ಮ ಹಳ್ಳಿಗಳಲ್ಲಿನ ಕ್ರೈಸ್ತ ಜನಪದರು ಕೋಲಾಟವಾಡುವಾಗ ಹೀಗೆ ಹಾಡುತ್ತಾರೆ:

‘ಅಗೊಸ್ತುಸ್ ರಾಯನಿಂದ ಬಂದ ಆಣತಿಯ ಮೇರೆಗೆ
ದಾವಿದ್ ಕುಲದ ಜೋಸೆಫ್ ತನ್ನ ಪತ್ನಿಯೊಂದಿಗೆ
ಬೆತ್ಲೆಹೇಮ್ ಗ್ರಾಮಕ್ಕೆ ಈರ್ವರೂ ತ್ವರೆಯೊಳು ಬಂದರು
ಮನೆಗಳು ಸಿಕ್ಕದೆ ದನಗಳ ಕೊಟ್ಟಿಗೆಯೊಂದಲಿ ತಂಗಿದರು
ಡಿಸೆಂಬರ್ ತಿಂಗಳಿನ ಇಪ್ಪತ್ತೈದನೇ ಸುದಿನದಲಿ
ಮಧ್ಯರಾತ್ರಿ ದೇವಪುತ್ರ ಯೇಸು ಜನಿಸಿದನು’

ಹೀಗೆ ಪ್ರತಿ ವರ್ಷವೂ ಇಡೀ ಜಗತ್ತಿನಾದ್ಯಂತ ಕ್ರಿಸ್ಮಸ್ ಆಚರಣೆ ಡಿಸೆಂಬರ್ 25 ಎಂದು ಜನಜನಿತವಾಗಿದೆ.

ಆದರೆ ನಿಜವಾಗಿಯೂ ಕ್ರಿಸ್ತ ಹುಟ್ಟಿದ್ದು ಎಂದು?

ಪ್ರಾಚೀನ ರೋಮನ್ ಚಕ್ರಾಧಿಪತ್ಯದ ಜೂಲಿಯನ್ ಕ್ಯಾಲೆಂಡರಿನ ಪ್ರಕಾರ ಡಿಸೆಂಬರ್ 24ರ ನಡುರಾತ್ರಿ ಸೂರ್ಯನು ಮಕರ ಸಂಕ್ರಾಂತಿಯನ್ನು ದಾಟುವ ಸಂದರ್ಭ ಕತ್ತಲಿನಿಂದ ಬೆಳಕಿನೆಡೆಗೆ ಸಾಗುವ ಬೆಳಕಿನ ಹಬ್ಬವಾಗಿತ್ತು. ಯೇಸುಕ್ರಿಸ್ತರ ಶುಭಸಂದೇಶವನ್ನು ಸಾರುತ್ತಾ ಅವರ ಶಿಷ್ಯರು ದೇಶವಿದೇಶಗಳಲ್ಲಿ ಸಂಚರಿಸುತ್ತಾ ಸಾಗಿದಂತೆ ಕ್ರಿಸ್ತತತ್ವವನ್ನು ಅನುಸರಿಸುವ ಅಪಾರ ಅನುಯಾಯಿಗಳು ಹುಟ್ಟಿಕೊಂಡರು. ಇಸ್ರೇಲಿನ ಮೂಡಣ ನಾಡುಗಳಲ್ಲಿ ಸಾಂಸ್ಕೃತಿಕವಾಗಿ ಸಮೃದ್ಧವಾಗಿದ್ದ ಗ್ರೀಕ್, ಸಿರಿಯಾ ಮುಂತಾದ ದೇಶಗಳಲ್ಲಿ ಡಿಸೆಂಬರ್ 25ರಿಂದ ಪ್ರಾರಂಭವಾಗಿ ಒಂದು ವಾರ ಆಚರಿಸಲಾಗುತ್ತಿದ್ದ ಸೂರ್ಯದೇವರ ಜಾತ್ರೆ ಪ್ರಮುಖವಾಗಿತ್ತು.

ಇಂದು ಕ್ರಿಸ್‌ಮಸ್

ಕ್ರಿಸ್ತಶಕ 306ರಲ್ಲಿ ರೋಮ್ ಚಕ್ರವರ್ತಿಯಾದ ಕಾನ್‌ಸ್ಟಂಟೈನ್ ಮಹಾರಾಜನು ಕ್ರೈಸ್ತಧರ್ಮವನ್ನು ಅಪ್ಪಿಕೊಂಡಮೇಲೆ ಕ್ರೈಸ್ತಧರ್ಮವು ರಾಜಧರ್ಮವಾಯಿತು. ಅದೇ ಸಂದರ್ಭದಲ್ಲಿ ಪ್ರಜೆಗಳ ನೆಚ್ಚಿನ ವರ್ಷಾಂತ್ಯದ ಜಾನಪದ ಜಾತ್ರೆಯಾಗಿದ್ದ ಸೂರ್ಯನ ಹಬ್ಬವು ರೋಮಿನೊಳಗೂ ಕಾಲಿಟ್ಟು ಜಗದ ಹಬ್ಬವಾಯಿತು. ಕ್ರೈಸ್ತಧರ್ಮಪೀಠದ ಅಧಿಕಾರಿಯೂ ಆಗಿದ್ದ ಕಾನ್‌ಸ್ಟಂಟೈನ್ ಚಕ್ರವರ್ತಿಯು ಕ್ರಿಸ್ತಶಕ 325ರಲ್ಲಿ ನೈಸಿಯಾ ಪಟ್ಟಣದಲ್ಲಿ ವಿಶ್ವ ಕ್ರೈಸ್ತ ಅಧಿವೇಶನವನ್ನು ಆಯೋಜಿಸಿ, ಅದರಲ್ಲಿ ಕೆಲವು ನಿರ್ಣಯಗಳನ್ನು ಅಂಗೀಕರಿಸಿದ. ‘ಮನುಷ್ಯನಾಗಿ ಜನಿಸಿ ನಮ್ಮ ಜೊತೆಯಲ್ಲೇ ಬಾಳಿದ ಯೇಸುಕ್ರಿಸ್ತರೇ ಜಗತ್ತಿಗೆಲ್ಲ ಪ್ರೀತಿಶಾಂತಿಯ ಬೆಳಕನ್ನು ನೀಡುವ ನೈಜ ಸೂರ್ಯ’ – ಎಂಬುದು ಒಂದು ಪ್ರಮುಖ ನಿರ್ಣಯವಾಗಿತ್ತು. ಹೀಗೆ ಸೂರ್ಯನ ಹಬ್ಬವು ಕ್ರಿಸ್ತಜಯಂತಿಯಾಯಿತು, ಡಿಸೆಂಬರ್ 25ರಂದೇ ಕ್ರಿಸ್ತನು ಉದಯಿಸಿದ ಎಂಬುದನ್ನು ಜಗತ್ತು ಒಪ್ಪಿಕೊಂಡಿತು.

ಯೇಸುಕ್ರಿಸ್ತನ ನಾಡಿನಲ್ಲಿದ್ದ ಯೆಹೂದ್ಯ ಜನಾಂಗವು ತಮ್ಮ ಇತಿಹಾಸದುದ್ದಕ್ಕೂ ಫರೋಹ, ಹಮ್ಮುರಾಬಿ, ನೆಬುಕದ್ನೆಜರ್ ಮುಂತಾದವರ ಅಧೀನದಲ್ಲಿ ನಲುಗಿ ಯೇಸುಕ್ರಿಸ್ತರ ಕಾಲಕ್ಕಾಗಲೇ ರೋಮನ್ ಚಕ್ರಾಧಿಪತ್ಯದ ಅಧೀನಕ್ಕೆ ಒಳಗಾಗಿದ್ದರು. ಅಲ್ಲದೆ ಅವರು ತಮ್ಮ ಶತ್ರುಗಳನ್ನು ಹೊಡೆದೋಡಿಸಬಲ್ಲ ಸಮರ್ಥ ನಾಯಕನ ನಿರೀಕ್ಷೆಯಲ್ಲಿದ್ದರು. ಈ ಸಂದರ್ಭದಲ್ಲಿ ಮರಿಯಾ ಮತ್ತು ಜೋಸೆಫರು ಚಕ್ರವರ್ತಿ ಅಗಸ್ತುಸನ ಆದೇಶಕ್ಕೆ ತಲೆಬಾಗಿ ಜನಗಣತಿಯಲ್ಲಿ ತಮ್ಮ ಹೆಸರು ದಾಖಲಿಸಲು ಹುಟ್ಟೂರು ಬೆತ್ಲೆಹೇಮ್ ಗ್ರಾಮವನ್ನು ತಲಪಿ ಮನೆಮನೆಯ ಬಾಗಿಲು ಬಡಿದು ನಿರಾಶರಾಗಿ ಕೊನೆಗೆ ದನಗಳ ಕೊಟ್ಟಿಗೆಯಲ್ಲಿ ತಂಗುತ್ತಾರೆ. ಆ ರಾತ್ರಿ ತುಂಬುಗರ್ಭಿಣಿ ಮರಿಯಳು ದೈವೀ ಕಂದನನ್ನು ಹಡೆಯುತ್ತಾಳೆ. ಕರುಗಳು ಹುಲ್ಲು ತಿನ್ನುವ ಬೋಗುಣಿಯಾಕಾರದ ಮರದ ಗೋದಲಿಯಲ್ಲಿ ಹುಲ್ಲುಹಾಸಿನ ನಡುವೆ ಬೆಚ್ಚಗಿನ ಬಟ್ಟೆಗಳನ್ನು ಸುತ್ತಿ ಮಗುವನ್ನು ಮಲಗಿಸಲಾಗುತ್ತದೆ.

ಅಜ್ಞಾತನಾಗಿಯೇ ಬೆಳೆಯುವ ಯೇಸುವು ಮೂವತ್ತು ವರ್ಷ ಪ್ರಾಯಸ್ತನಾಗುತ್ತಿದ್ದಂತೆಯೇ ಕ್ರಾಂತಿಪುರುಷನಾಗಿ ಹೊರಹೊಮ್ಮುತ್ತಾರೆ. ‘ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು ಅಲ್ಲ’, ‘ನಿನ್ನ ಬಲಗೆನ್ನೆಗೆ ಹೊಡೆದವಗೆ ಎಡಗೆನ್ನೆ ತೋರು’ ಎಂದು ಸಾರುತ್ತಾರೆ. ಹಾದರಗಿತ್ತಿ ಹೆಣ್ಣನ್ನು ಸಾರ್ವಜನಿಕವಾಗಿ ಹೊಡೆದು ಕೊಲ್ಲಬೇಕೆಂಬ ನೀತಿಗೆ ಅವರ ಪ್ರತಿಕ್ರಿಯೆ ವಿನೂತನವಾಗಿತ್ತು. ಹಾದರದಲ್ಲಿ ಪುರುಷನ ಪಾತ್ರವೂ ಇರಬೇಕಲ್ಲವೇ? ಅವನೂ ಸಮಾನ ತಪ್ಪಿತಸ್ಥನಲ್ಲವೇ? – ಎಂಬುದನ್ನು ಸೂಚ್ಯವಾಗಿ ತಿಳಿಸಿ ಮಹಿಳೆಗೆ ಕ್ಷಮಾದಾನದೊಂದಿಗೆ ಜೀವದಾನವನ್ನೂ ಮಾಡಿದರು.

ಕೇಡಕು ಮಾಡುವವರನ್ನು ಕ್ಷಮಿಸು; ಇತರರ ತಪ್ಪನ್ನು ತೋರುವ ಮೊದಲು ನಿನ್ನ ಕಣ್ಣನ್ನು ಸ್ವಚ್ಛಪಡಿಸಿಕೋ; ಹೃದಯವನ್ನು ಪವಿತ್ರವಾಗಿಸಿಕೊಂಡವನು ದೇವರನ್ನು ಕಾಣುವನು – ಎಂಬುದೇ ಯೇಸುಕ್ರಿಸ್ತರ ಬೋಧನೆಯ ಸಾರ. ❖

ಪಶ್ಚಿಮ ಬಂಗಾಳ ಸರ್ಕಾರದ ವಿರುದ್ಧ ಲೇಖಕಿ ಆರೋಪ

ಲೇಖಕರ ಧ್ವನಿ ಹತ್ತಿಕ್ಕುತ್ತಿದೆ: ತಸ್ಲೀಮಾ

ತಸ್ಲೀಮಾ ನಸ್ರೀನ್

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಸರ್ಕಾರವು ಕಲಾವಿದರು, ಲೇಖಕರ ಧ್ವನಿಯನ್ನು ಹತ್ತಿಕ್ಕುತ್ತಿದೆ ಎಂದು ಬಾಂಗ್ಲಾದೇಶದಿಂದ ಗಡೀಪಾರಾಗಿರುವ ಲೇಖಕಿ ತಸ್ಲೀಮಾ ನಸ್ರೀನ್ ಆರೋಪಿಸಿದ್ದಾರೆ.

ಎರಡು ನಾಟಕೋತ್ಸವಗಳಲ್ಲಿ ತಮ್ಮ ಕಾದಂಬರಿ ಆಧಾರಿತ ‘ಲಜ್ಜಾ’ ನಾಟಕದ ಪ್ರದರ್ಶನವನ್ನು ಬಲವಂತವಾಗಿ ರದ್ದು ಮಾಡಲಾಗಿದೆ ಎಂದು ಸಾಮಾಜಿಕ ಮಾಧ್ಯಮದಲ್ಲಿ ಹೇಳಿಕೊಂಡಿದ್ದಾರೆ.

ಉತ್ತರ ಪರಗಣದ ಗೋಬರ್ಡಂಗಾ ನಾಟಕೋತ್ಸವ ಮತ್ತು ಹೂಗ್ಲಿಯ ಪಾಂಡುವಾ ನಾಟಕೋತ್ಸವದಲ್ಲಿ ಪ್ರದರ್ಶನಗೊಳ್ಳಲಿದ್ದ ನಾಟಕವನ್ನು ರದ್ದು ಮಾಡುವಂತೆ ಪೊಲೀಸರು ಆಯೋಜಕರಿಗೆ ಸೂಚಿಸಿದ್ದರು. ನಾಟಕವು ಕೋಮು ಗಲಭೆಗೆ ಕಾರಣವಾಗಬಹುದು ಎಂದು ಪೊಲೀಸರು ಹೇಳಿದ್ದಾರೆ ಎಂದು ದೂರಿದ್ದಾರೆ.

‘ನಾಟಕ ಪ್ರದರ್ಶನ ವಿಚಾರವನ್ನು ಎರಡು ತಿಂಗಳ ಹಿಂದೆಯೇ ಘೋಷಿಸಲಾಗಿದೆ. ಆದರೆ ಪೊಲೀಸರು ಈಗ ಏಕಾಏಕಿ ಬಂದು, ಪ್ರದರ್ಶನಗೊಳ್ಳುವ ನಾಟಕಗಳ ಪಟ್ಟಿಯಿಂದ ‘ಲಜ್ಜಾ’ವನ್ನು ತೆಗೆದುಹಾಕುವಂತೆ ಒತ್ತಡ ಹೇರಿದ್ದಾರೆ. ಇದೇ ನಾಟಕವು ದೆಹಲಿಯಲ್ಲಿ ಮೂರು ಬಾರಿ ಪ್ರದರ್ಶನಗೊಂಡಿದೆ ಎಂದು ನೆನಪಿಸಲು ಬಯಸುತ್ತೇನೆ’ ಎಂದು ಅವರು ಹೇಳಿದ್ದಾರೆ.

ಪಶ್ಚಿಮ ಬಂಗಾಳದ ಆಡಳಿತವು ನಾಟಕವು ಹಿಂಸಾಚಾರಕ್ಕೆ ಕಾರಣವಾಗಬಹುದು ಎಂಬ ನೆಪ ಹೇಳುತ್ತಿದೆ ಎಂದು ಟೀಕಿಸಿದ್ದಾರೆ.

ಈ ಮಧ್ಯೆ ತಸ್ಲೀಮಾ ಅವರನ್ನು ಬಿಜೆಪಿ ಬೆಂಬಲಿಸಿದೆ. ಕೇಂದ್ರ ಸಚಿವ ಸುಕಾಂತ್ ಮುಜುಂದಾರ್ ಅವರು, ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಇಬ್ಬಗೆಯ ನೀತಿ ಅನುಸರಿಸುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಮುಖ್ಯಾಂಶಗಳು

- ‘ಲಜ್ಜಾ’ ನಾಟಕದ ಪ್ರದರ್ಶನಕ್ಕೆ ಅಡ್ಡಿ: ಲೇಖಕಿ
- ‘ಹಿಂಸಾಚಾರಕ್ಕೆ ಕಾರಣ ಆಗಬಹುದು ಎಂಬುದು ನೆಪವಷ್ಟೆ’

ಆರೋಪ ಅಲ್ಲಗಳೆದ ಪೊಲೀಸರು

ತಸ್ಲೀಮಾ ಅವರ ಆರೋಪವನ್ನು ಅಲ್ಲಗಳೆದಿರುವ ಪೊಲೀಸರು, ‘ಲಜ್ಜಾ’ ನಾಟಕ ಪ್ರದರ್ಶನವನ್ನು ರದ್ದು ಮಾಡಲು ಜಿಲ್ಲಾಡಳಿತ ಅಥವಾ ಪೊಲೀಸ್ ಇಲಾಖೆ ಹೇಳಿಲ್ಲ. ಅದು ಆಯೋಜಕರ ನಿರ್ಧಾರ ಎಂದು ಹೇಳಿದ್ದಾರೆ.

‘ಹೂಗ್ಲಿ ಗ್ರಾಮೀಣ ಪ್ರದೇಶದಲ್ಲಿ ಆಯೋಜಿಸಿರುವ ನಾಟಕ ಪ್ರದರ್ಶನ ವಿಚಾರವಾಗಿ ಯಾರೊಂದಿಗೂ ಮಾತನಾಡಿಲ್ಲ. ಪೊಲೀಸ್ ಇಲಾಖೆಗೂ ಇದಕ್ಕೂ ಸಂಬಂಧ ಇಲ್ಲ’ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಎನ್‌ಎಚ್‌ಆರ್‌ಸಿ ಅಧ್ಯಕ್ಷರ ನೇಮಕ ದೋಷಪೂರಿತ’

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗದ (ಎನ್‌ಎಚ್‌ಆರ್‌ಸಿ) ಅಧ್ಯಕ್ಷರ ಹಾಗೂ ಸದಸ್ಯರ ಆಯ್ಕೆ ಪ್ರಕ್ರಿಯೆಯನ್ನು ‘ದೋಷಪೂರಿತ’ ಹಾಗೂ ‘ಪೂರ್ವನಿರ್ಧರಿತ ಕಸರತ್ತು’ ಎಂದು ಕರೆಯುವ ಮೂಲಕ ವಿರೋಧ ಪಕ್ಷದ ನಾಯಕರಾದ ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಎನ್‌ಎಚ್‌ಆರ್‌ಸಿ ಅಧ್ಯಕ್ಷರಾಗಿದ್ದ ಅರುಣ್ ಕುಮಾರ್ ಮಿಶ್ರಾ ಅಧಿಕಾರಾವಧಿ ಜೂನ್ 1ಕ್ಕೆ ಕೊನೆಗೊಂಡಿತ್ತು. ಹೀಗಾಗಿ ಆಯೋಗದ ಅಧ್ಯಕ್ಷರ ಹಾಗೂ ಸದಸ್ಯರ ಆಯ್ಕೆ ಸಂಬಂಧ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಉನ್ನತ ಮಟ್ಟದ ಸಮಿತಿಯು ಡಿಸೆಂಬರ್ 18ರಂದು ಸಭೆ ಸೇರಿ ಚರ್ಚಿಸಿತ್ತು. ಈ ಸಭೆಯಲ್ಲಿ ರಾಹುಲ್ ಹಾಗೂ ಖರ್ಗೆ ಭಾಗಿಯಾಗಿದ್ದರು. ಸಭೆಯ ತೀರ್ಮಾನದ ಬಗ್ಗೆ ಉಭಯ ನಾಯಕರು ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಅಧ್ಯಕ್ಷ ಹುದ್ದೆಗೆ ನಿವೃತ್ತ ನ್ಯಾಯಮೂರ್ತಿಗಳಾದ ರೋಹಿಂಗ್ಟನ್ ಫಾಲಿ ನಾರಿಮನ್ ಹಾಗೂ ಕೆ.ಎಂ. ಜೋಸೆಫ್ ಅವರ ಹೆಸರನ್ನು ವಿಪಕ್ಷ ನಾಯಕರು ಸೂಚಿಸಿದ್ದರು. ಸದಸ್ಯರ ಸ್ಥಾನಗಳಿಗೆ ನ್ಯಾಯಮೂರ್ತಿಗಳಾದ ಎಸ್. ಮುರಳೀಧರ್, ಅಖಿಲ್ ಖುರೇಷಿ ಹೆಸರನ್ನು ಶಿಫಾರಸು ಮಾಡಿದ್ದರು. ‘ಕೇಂದ್ರ ಸರ್ಕಾರವು ನಮ್ಮ ಅಭಿಪ್ರಾಯ ಕಡೆಗಣಿಸಿ ಏಕಪಕ್ಷೀಯ ತೀರ್ಮಾನ ತೆಗೆದುಕೊಂಡಿದೆ. ಇದು ಖಂಡನೀಯ’ ಎಂದು ತಿಳಿಸಿದ್ದಾರೆ.

ಆಯೋಗದ ನೂತನ ಅಧ್ಯಕ್ಷರನ್ನಾಗಿ ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ.ರಾಮಸುಬ್ರಮಣಿಯನ್ ಅವರನ್ನು ಕೇಂದ್ರ ಸರ್ಕಾರ ಸೋಮವಾರ ನೇಮಿಸಿತ್ತು. ಜತೆಗೆ, ಇಬ್ಬರು ಸದಸ್ಯರನ್ನು ನೇಮಿಸಲಾಗಿತ್ತು.

28ರಂದು ರಾಷ್ಟ್ರವ್ಯಾಪಿ ಪ್ರತಿಭಟನೆ

ನವದೆಹಲಿ: ಡಾ.ಬಿ.ಆರ್. ಅಂಬೇಡ್ಕರ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿರುವ ಗೃಹ ಸಚಿವ ಅಮಿತ್ ಶಾ ರಾಜೀನಾಮೆ ನೀಡಬೇಕು, ಅವರು ತಮ್ಮ ಹೇಳಿಕೆಗೆ ಕ್ಷಮೆಯಾಚಿಸಬೇಕು ಎಂದು ಒತ್ತಾಯಿಸಿ ದಲಿತ ಮತ್ತು ಆದಿವಾಸಿ ಸಂಘಟನೆಗಳು ಶನಿವಾರ ರಾಷ್ಟ್ರವ್ಯಾಪಿ ಪ್ರತಿಭಟನೆ ನಡೆಸಲಿವೆ.

ಉದ್ಯೋಗ ವಾಣಿ

HAL Education Committee®
HAL Management Academy (Old Campus), Vimanapura Post, Bangalore 560017.

Invites applications for the following positions at HAL schools, Bangalore.

Position	School	No.of Posts
Principal	HAL Public School	1
Head Mistress/ Head Master	HAL East Primary & High School (Karnataka State Board)	1

Detailed notification containing eligibility criteria such as qualification, age, experience, pay, mode of applying etc. are available at careers section on school websites **(www.halec.co.in, www.halpublicschool.com, www.hnps.co.in, www.halgnanajyoti.co.in,)** and HAL website **(www.hal-india.com)**. Applications can be submitted through ‘online’ mode only from 24.12.2024 to 14.01.2025. Corrigendum / Addendum, if any will be published on HAL / School websites only.

Sd/-
Secretary

ಸೀನಿಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್: ದೇವಿಕಾಗೆ ಮಹಿಳಾ ಸಿಂಗಲ್ಸ್ ಕಿರೀಟ

ಕರ್ನಾಟಕದ ರಘು ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆತಿಥೇಯ ಕರ್ನಾಟಕ ಆಟಗಾರರ ವ್ಯವಹಾರವಾಗಿದ್ದ ಫೈನಲ್‌ನ ನಿರ್ಣಾಯಕ ಗೇಮ್‌ನಲ್ಲಿ ಮೂರು ಸಲ ಮ್ಯಾಚ್ ಪಾಯಿಂಟ್ ಉಳಿಸಿಕೊಂಡ ಎಂ.ರಘು, ಮಾಜಿ ಚಾಂಪಿಯನ್ ಮಿಥುನ್ ಮಂಜುನಾಥ್ ಅವರನ್ನು ಸೋಲಿಸಿ 86ನೇ ಸೀನಿಯರ್ ರಾಷ್ಟ್ರೀಯ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು.

ಕರ್ನಾಟಕ ಬ್ಯಾಡ್ಮಿಂಟನ್ ಸಂಸ್ಥೆ (ಕೆಬಿಎ) ಸಭಾಂಗಣದಲ್ಲಿ ಮಂಗಳವಾರ ನಡೆದ ಫೈನಲ್‌ನಲ್ಲಿ, 26 ವರ್ಷ ವಯಸ್ಸಿನ ರಘು 14–21, 21–14, 24–22 ರಿಂದ ಮಿಥುನ್ ಅವರ ಸವಾಲನ್ನು ಹಿಮ್ಮೆಟ್ಟಿಸಿ ಮೊದಲ ಬಾರಿ ರಾಷ್ಟ್ರೀಯ ಚಾಂಪಿಯನ್ ಕಿರೀಟ ಧರಿಸಿದರು. ಮಂಡ್ಯದ ರಘು ಸೆಮಿಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ಸತೀಶ್ ಕುಮಾರ್ ಅವರನ್ನು ಹಿಮ್ಮೆಟ್ಟಿಸಿದ್ದರು.

ತೆಲಂಗಾಣದ ಶ್ರೀಯಾನ್ಶಿ ವಲಿಶೆಟ್ಟಿ ಅವರ ಯಶಸ್ಸಿನ ಓಟಕ್ಕೆಅಂತ್ಯ ಹಾಡಿದ ಹರಿಯಾಣದ ದೇವಿಕಾ ಸಿಹಾಗ್ ಮಹಿಳಾ ಸಿಂಗಲ್ಸ್ ಕಿರೀಟ ಮುಡಿಗೇರಿಸಿಕೊಂಡರು. 13ನೇ ಶ್ರೇಯಾಂಕದ ದೇವಿಕಾ 21–15, 21–16ರಲ್ಲಿ ನೇರ ಗೇಮ್‌ಗಳಿಂದ 12ನೇ ಶ್ರೇಯಾಂಕದ ಶ್ರೀಯಾನ್ಶಿ ಮೇಲೆ ಜಯಗಳಿಸಿದರು.

ಎರಡು ವರ್ಷ ಹಿಂದೆ ಇದೇ ಚಾಂಪಿಯನ್‌ಷಿಪ್‌ನಲ್ಲಿ ವಿಜೇತರಾಗಿದ್ದ ಮಿಥುನ್ ಮೊದಲ ಗೇಮ್‌ನಲ್ಲಿ ಮೇಲುಗೈ ಸಾಧಿಸಿ ಅದನ್ನು ತಮ್ಮದಾಗಿಸಿಕೊಂಡರು. ಆದರೆ 26 ವರ್ಷ ವಯಸ್ಸಿನ ರಘು ಎರಡನೇ ಗೇಮ್‌ನಲ್ಲಿ ಸುಧಾರಿಸಿಕೊಂಡು ಮೇಲುಗೈ ಪಡೆಯುವುದರೊಂದಿಗೆ ಪಂದ್ಯ ನಿರ್ಣಾಯಕ ಗೇಮ್‌ಗೆ ಬೆಳೆಯಿತು. ಬಾಲ್ಯ ಸ್ನೇಹಿತರ ಉತ್ತಮ ಹೋರಾಟದ ಈ ಗೇಮ್‌ನ ಒಂದು ಹಂತದಲ್ಲಿ ರಘು 15–19ರಲ್ಲಿ ಹಿನ್ನಡೆಯಲ್ಲಿದ್ದರೂ, ಸಂಯಮ ವಹಿಸಿ 19–19ರಲ್ಲಿ ಸಮ ಮಾಡಿಕೊಂಡರು.

26 ವರ್ಷ ವಯಸ್ಸಿನ ಮಿಥುನ್ ಮತ್ತೆ ಮುನ್ನಡೆದು ಮೂರು ಬಾರಿ ಮ್ಯಾಚ್ ಪಾಯಿಂಟ್ ಅವಕಾಶವನ್ನೂ ಗಳಿಸಿದರು. ಆದರೆ ನಿರ್ಣಾಯಕ ಹಂತದಲ್ಲಿ ಎಡವಿ ನಿರಾಸೆ ಅನುಭವಿಸಬೇಕಾಯಿತು. ಒತ್ತಡದ ಸಂದರ್ಭವನ್ನು ನಿಭಾಯಿಸಿದ ರಘು ಸುಮಾರು ಒಂದು ಗಂಟೆಯ ಸೆಣಸಾಟದಲ್ಲಿ ಗೆಲುವು ಪಡೆದರು.

ಸಂಸ್ಕಾರ್‌–ಅರ್ಷ್‌ಗೆ ಡಬಲ್ಸ್ ಕಿರೀಟ :ಜೂನಿಯರ್ ರಾಷ್ಟ್ರೀಯ ಚಾಂಪಿಯನ್ನರಾದ ಸಂಸ್ಕಾರ್ ಸಾರಸ್ವತ್ (ರಾಜಸ್ಥಾನ)– ಅರ್ಷ್ ಮೊಹಮ್ಮದ್ (ಉತ್ತರ ಪ್ರದೇಶ), ಸೀನಿಯರ್ ರಾಷ್ಟ್ರೀಯ ವಿಭಾಗದಲ್ಲೂ ಮೊದಲ ಬಾರಿ ಚಾಂಪಿಯನ್ ಆದರು. ಈ ಜೋಡಿ ಫೈನಲ್‌ನಲ್ಲಿ ಅಗ್ರ ಶ್ರೇಯಾಂಕದ ನವೀನ್ ಪಿ. ಮತ್ತು ಲೋಕೇಶ್ ವಿ ಅವರಿಗೆ 12–21, 21–12, 21–19 ರಿಂದ ಆಘಾತ ನೀಡಿತು.

ಆದರೆ ಇತರ ಎರಡು ಡಬಲ್ಸ್‌ಫೈನಲ್‌ಗಳಲ್ಲಿ ಅನುಭವವು, ಯುವೋತ್ಸಾಹವನ್ನು ಹಿಮ್ಮೆಟ್ಟಿಸಿತು. ಮಿಶ್ರ ಡಬಲ್ಸ್‌ನಲ್ಲಿ ಎಂಟನೇ ಶ್ರೇಯಾಂ ಕದ ರೋಹನ್ ಕಪೂರ್– ರುತ್ವಿಕಾ ಶಿವಾನಿ ಪ್ರಶಸ್ತಿ ತಮ್ಮದಾಗಿಸಿಕೊಂಡರು.

ಮಹಿಳಾ ಡಬಲ್ಸ್‌ನಲ್ಲಿ ಎರಡನೇ ಶ್ರೇಯಾಂಕದ ಆರತಿ ಸಾರಾ ಸುನೀಲ್ (ಕೇರಳ)– ವರ್ಷಿಣಿ ವಿ.ಎಸ್ (ತಮಿಳುನಾಡು) ಜೋಡಿ ಫೈನಲ್‌ನಲ್ಲಿ 21–18, 20–22, 21–17 ರಿಂದ ಎಂಟನೇ ಶ್ರೇಯಾಂಕದ ಪ್ರಿಯಾದೇವಿ ಕೊಂಜೆಂಗ್ಬಾಮ್ (ಮಣಿಪುರ)– ಶ್ರುತಿ ಮಿಶ್ರಾ (ಉತ್ತರ ಪ್ರದೇಶ) ಜೋಡಿಯನ್ನು ಸೋಲಿಸಿ ಪ್ರಶಸ್ತಿ ಜಯಿಸಿತು.

ಮಿಶ್ರ ಡಬಲ್ಸ್ ಫೈನಲ್‌ನಲ್ಲಿ ಆಯುಷ್ ಅಗರವಾಲ್– ಶ್ರುತಿ ಮಿಶ್ರಾ (ಉತ್ತರ ಪ್ರದೇಶ) ಜೋಡಿ 21–17, 21–18 ರಿಂದ ಎಂಟನೇ ಶ್ರೇಯಾಂಕದ ರೋಹನ್ ಕಪೂರ್ (ದೆಹಲಿ)– ರುತ್ವಿಕಾ ಶಿವಾನಿ ಜೋಡಿಯನ್ನು ಮಣಿಸಿತು.



ಮಹಿಳೆಯರ ಸಿಂಗಲ್ಸ್ ಪ್ರಶಸ್ತಿ ಗೆದ್ದ ಹರಿಯಾಣದ ದೇವಿಕಾ ಸಿಹಾಗ್ ಹಾಗೂ ಪುರುಷರ ಸಿಂಗಲ್ಸ್ ಚಾಂಪಿಯನ್ ಆದ ಕರ್ನಾಟಕ ಎಂ.ರಘು ಟ್ರೋಫಿ, ಚಿನ್ನದ ಪದಕದೊಂದಿಗೆ. ಪ್ರಜಾವಾಣಿ ಚಿತ್ರ / ಕಿಶೋರ್ ಕುಮಾರ್ ಬೋಳಾರ್

ಕ್ರಿಕೆಟಿಗ ಕಾಂಬ್ಳಿಗೆ ಜ್ವರ, ಸ್ಥಿತಿ ಸ್ಥಿರ

ಠಾಣಾ (ಪಿಟಿಐ): ಮೂತ್ರನಾಳದ ಸೋಂಕಿಗಾಗಿ ಭಿವಂಡಿ ಬಳಿಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮಾಜಿ ಕ್ರಿಕೆಟ್ ತಾರೆ ವಿನೋದ್ ಕಾಂಬ್ಳಿ ಅವರಿಗೆ ಮಂಗಳವಾರ ಜ್ವರ ಕಾಣಿಸಿಕೊಂಡಿದೆ. ಆದರೆ ಅವರ ಆರೋಗ್ಯ ಸ್ಥಿರವಾಗಿದೆ ಎಂದು ವೈದ್ಯರ ತಂಡ ತಿಳಿಸಿದೆ.

ಶನಿವಾರ 52 ವರ್ಷ ವಯಸ್ಸಿನ ಆಟಗಾರನನ್ನು ಆಕೃತಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಅವರು ಚಿಕಿತ್ಸೆಗೆ ಸ್ಪಂದಿಸುತ್ತಿದ್ದಾರೆ.

ಈ ಹಿಂದೆ ನಡೆಸಲಾದ ಪರೀಕ್ಷೆಗಳಲ್ಲಿ ಅವರಿಗೆ ಮಿದುಳಿನಲ್ಲಿ ರಕ್ತ ಹೆಪ್ಪುಗಟ್ಟಿರುವುದು ಪತ್ತೆಯಾಗಿತ್ತು. ಹೀಗಾಗಿ ಅವರಿಗೆ ಎಂಆರ್‌ಐ ಸ್ಕ್ಯಾನಿಂಗ್ ನಡೆಸಲು ಡಾ.ವಿವೇಕ್ ತ್ರಿವೇದಿ ನೇತೃತ್ವದ ವೈದ್ಯರ ತಂಡ ಯೋಚಿಸಿತ್ತು. ಆದರೆ ಜ್ವರ ಇರುವುದರಿಂದ ಎಂಆರ್‌ಐ ನಂತರ ನಡೆಸಲು ನಿರ್ಧರಿಸಲಾಗಿದೆ. ಅವರನ್ನು ಒಂದೆರಡು ದಿನಗಳಲ್ಲಿ ಐಸಿಯುನಿಂದ ಸ್ಥಳಾಂತರಿಸಿ,ನಾಲ್ಕು ದಿನಗಳಲ್ಲಿ ಡಿಸ್ಚಾರ್ಜ್ ಮಾಡಲಾಗುವುದು ಎಂದು ಡಾ.ತ್ರಿವೇದಿ ತಿಳಿಸಿದ್ದಾರೆ



ಅತ್ಯುನ್ನತ ನಿರ್ದೇಶಕನಿಗೆ ಗೌರವ ನಮನ !

ಇಬ್ಬರು ಸ್ಪಿನ್ನರ್‌ಗಳಿಗೆ ಅವಕಾಶ ಸಾಧ್ಯತೆ; ಯುವ ಆಟಗಾರರಿಗೆ ಕಿವಿಮಾತು

ಫಿಟ್ ರೋಹಿತ್ ಮುಂದೆ ತಂಡ ಸಂಯೋಜನೆ ಸವಾಲು

ಮೆಲ್ಬರ್ನ್ (ಪಿಟಿಐ): ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಅವರು ಮಂಗಳವಾರ ನೆಟ್ಸ್‌ನಲ್ಲಿ ಬಹಳ ಹೊತ್ತು ಬ್ಯಾಟಿಂಗ್ ಅಭ್ಯಾಸ ನಡೆಸಿದರು. ಬೇರೆ ಬೇರೆ ಬೌಲರ್‌ಗಳು ಹಾಗೂ ಥ್ರೋಡೌನ್ ಪರಿಣತರು ಪ್ರಯೋಗಿಸಿದ ಎಸೆತಗಳನ್ನು ಸುರಳಿತವಾಗಿ ಎದುರಿಸಿದರು. ಇದರೊಂದಿಗೆ ತಾವು ಗಾಯಮುಕ್ತರಾಗಿರುವ ಸೂಚನೆಯನ್ನು ನೀಡಿದರು.

ಇದೇ ಸಂದರ್ಭದಲ್ಲಿ ರೋಹಿತ್, ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಹಾಗೂ ಉಪನಾಯಕ ಜಸ್‌ಪ್ರೀತ್ ಬೂಮ್ರಾ ಅವರು ಮೆಲ್ಬರ್ನ್ ಕ್ರಿಕೆಟ್ ಕ್ರೀಡಾಂಗಣದ ಪಿಚ್ ಸಮೀಕ್ಷೆ ನಡೆಸಿದರು. ಇದೇ 26ರಿಂದ ಆರಂಭವಾಗಲಿರುವ ಬಾರ್ಡರ್–ಗಾವಸ್ಕರ್ ಸರಣಿಯ ನಾಲ್ಕನೇ ಟೆಸ್ಟ್ ಪಂದ್ಯಕ್ಕೆನಿಗದಿಯಾಗಿರುವ ಪಿಚ್ ಅನ್ನು ಬಹಳಷ್ಟು ಹೊತ್ತು ಅವಲೋಕಿಸಿದ ಅವರು ದೀರ್ಘ ಸಮಾಲೋಚನೆ ನಡೆಸಿದ್ದು ಕಂಡುಬಂದಿತು.

ಪಂದ್ಯದ ಮೊದಲ ದಿನವಾದ ಗುರುವಾರ ಬಿಸಿಗಾಳಿಗೆ ಪಿಚ್ ಬೇಗನೆ ಶುಷ್ಕವಾಗಬಹುದು ಅದರಿಂದಾಗಿ ಸ್ಪಿನ್ನರ್‌ಗಳನ್ನು ಬೇಗನೆ ಬೌಲಿಂಗ್‌ಗೆ ಇಳಿಸುವ ಸಾಧ್ಯತೆ ಇದೆ. ಅದರಿಂದಾಗಿ ರೋಹಿತ್ ಅವರು ತಂಡಕ್ಕೆ ಇಬ್ಬರು ಸ್ಪಿನ್ನರ್‌ಗಳನ್ನು ಕಣಕ್ಕಿಳಿಸಬಹುದು.

‘ನಾನು ಪಿಚ್ ನೋಡಿದೆ. ಅದರ ಮೇಲೆ ಸ್ವಲ್ಪ ಮಟ್ಟಿಗೆ ಹುಲ್ಲು ಆವರಿಸಿದೆ. ವಾತಾವರಣವನ್ನೂ ಗಮನದಲ್ಲಿಟ್ಟುಕೊಳ್ಳುತ್ತೇವೆ. ಎಲ್ಲ ಅಂಶಗಳನ್ನೂ ಪರಿಶೀಲಿಸಿ ತಂಡ ಸಂಯೋಜನೆ ನಿರ್ಣಯಿಸುತ್ತೇವೆ. ಇಲ್ಲಿಯ ಸ್ಥಿತಿಗನುಗುಣವಾಗಿ 11 ಆಟಗಾರರ ಉತ್ತಮ ಸಂಯೋಜನೆಯನ್ನೇ ಆಯ್ಕೆ ಮಾಡಲಾಗುವುದು’ ಎಂದು ರೋಹಿತ್ ಸುದ್ದಿಗಾರರಿಗೆ ಹೇಳಿದರು.

ತಂಡವು ಶನಿವಾರ, ಭಾನುವಾರ ಮತ್ತು ಮಂಗಳವಾರ ಕಡ್ಡಾಯ ತಾಲೀಮು ನಡೆಸಿದವು. ಬುಧವಾರ ಐಚ್ಛಿಕ ಅಭ್ಯಾಸ ದಿನವಾಗಿದೆ.

ಶಾಂತವಾಗಿರಿ, ಮುಂದೆ ಸಾಗಿ: ರೋಹಿತ್ ಅಸ್ಥಿರ ಲಯದಲ್ಲಿರುವ ತಮ್ಮ ತಂಡದ ಯುವ ಬ್ಯಾಟರ್‌ಗಳಿಗೆ ನಾಯಕ ರೋಹಿತ್ ಅವರು, ‘ಶಾಂತವಾಗಿರಿ. ಮುಂದೆ ಸಾಗುತ್ತಿರಿ’ ಎಂದು ಕಿವಿಮಾತು ಹೇಳಿದ್ದಾರೆ.

ಮೊದಲ ಪಂದ್ಯದಲ್ಲಿ 161 ರನ್ ಹೊಡೆಯುವ ಮೂಲಕ ಗಮನ ಸೆಳೆದಿದ್ದ ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್ ಅವರು ಕಳೆದೆರಡು ಟೆಸ್ಟ್‌ಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಆಡಿಲ್ಲ. ಸ್ವತಃ ರೋಹಿತ್ ಮತ್ತು ವಿರಾಟ್ ಕೊಹ್ಲಿ ಅವರೂ ಫಾರ್ಮ್ ಕೊರತೆ ಎದುರಿಸುತ್ತಿದ್ದಾರೆ. ಅಗ್ರಕ್ರಮಾಂಕದಲ್ಲಿ ಕೆ.ಎಲ್. ರಾಹುಲ್ ಮತ್ತು ಕೆಳಮಧ್ಯಮ ಕ್ರಮಾಂಕದಲ್ಲಿ ನಿತೀಶ ಕುಮಾರ ರೆಡ್ಡಿ ಮಾತ್ರ ಸ್ಥಿರವಾದ ಲಯ ಹೊಂದಿದ್ದಾರೆ.

‘ಈ ಎಲ್ಲ ಹುಡುಗರು, ಗಿಲ್ ಜೈಸ್ವಾಲ್ ಮತ್ತು ಪಂತ್ ಅವರು ಒಂದೇ ದೋಣಿಯ ಪಯಣಿಗರು. ಅವರಿಗೆ ತಮ್ಮ ಸಾಮರ್ಥ್ಯದ ಕುರಿತು ಚೆನ್ನಾಗಿ ಅರಿವಿದೆ. ಈ ವಿಷಯವನ್ನು ನಾವು ಜಟಿಲಗೊಳಿಸುವುದು ಬೇಡ. ಅವರಿಂದ ತಂಡಕ್ಕೆ ಏನು ನಿರೀಕ್ಷೆ ಇದೆ ಎಂದೂ ಗೊತ್ತಿದೆ. ಈ ಬಗ್ಗೆ ಹೆಚ್ಚು ಮಾತನಾಡುವ ಅಗತ್ಯವಿಲ್ಲವೆನಿಸುತ್ತದೆ. ಇದರಿಂದ ಅವರ ಮನೋಸ್ಥಿತಿಯನ್ನು ಗೊಂದಲಕ್ಕೀಡು ಮಾಡುವುದು ಸಲ್ಲ’ ಎಂದು ರೋಹಿತ್ ಅಭಿಪ್ರಾಯಪಟ್ಟರು.

ಜೈಸ್ವಾಲ್ ಅವರು ಪರ್ತ್ ಟೆಸ್ಟ್ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ ಶತಕ ಗಳಿಸಿದ್ದು ಬಿಟ್ಟರೆ ಉಳಿದ ನಾಲ್ಕು ಇನಿಂಗ್ಸ್‌ಗಳಲ್ಲಿ ಒಂದಂಕಿ ಗಳಿಸಿದ್ದಾರೆ.

‘ಜೈಸ್ವಾಲ್ ಅವರು ಇಲ್ಲಿಗೆ ಮೊದಲ ಬಾರಿಗೆ ಬಂದಿದ್ದಾರೆ. ಅವರು ತಾವೇನು ಮಾಡಬಲ್ಲರು ಎಂಬುದನ್ನು ಈಗಾಗಲೇ ತೋರಿಸಿದ್ದಾರೆ. ಅವರಿಗೆ ಅಪಾರವಾದ ಪ್ರತಿಭೆ ಇದೆ. ಅಂತಹ ಆಟಗಾರನಿಗೆ ಮಾನಸಿಕವಾಗಿ ಹೆಚ್ಚು ಒತ್ತಡ ಹಾಕುವ ಅಗತ್ಯವಿಲ್ಲ’ ಎಂದರು.

ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಮತ್ತು ನಾಯಕ ರೋಹಿತ್ ಶರ್ಮಾ ಅವರ ಮಾತುಕತೆ ಎಎಫ್‌ಪಿ ಚಿತ್ರ

ಚಾಂಪಿಯನ್ಸ್ ಟ್ರೋಫಿ ವೇಳಾಪಟ್ಟಿ ಬಿಡುಗಡೆ

ಫೆ.23 ಭಾರತ–ಪಾಕ್ ಹಣಾಹಣಿ

ದುಬೈ (ಪಿಟಿಐ): ಬದ್ಧ ಎದುರಾಳಿಗಳಾದ ಭಾರತ ಮತ್ತು ಪಾಕಿಸ್ತಾನ ತಂಡಗಳು ಮುಂದಿನ ವರ್ಷ ನಡೆಯಲಿರುವ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಒಂದೇ ಗುಂಪಿನಲ್ಲಿ ಕಣಕ್ಕಿಳಿಯಲಿವೆ. ಫೆಬ್ರುವರಿ 23ರಂದು ದುಬೈನಲ್ಲಿ ನಡೆಯುವ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ.

ಪಾಕಿಸ್ತಾನ ಆತಿಥ್ಯ ವಹಿಸಿರುವ ಈ ಟೂರ್ನಿಯಲ್ಲಿ ಭಾರತ ತಂಡವು ಆಡುವ ಎಲ್ಲ ಪಂದ್ಯಗಳೂ ತಟಸ್ಥ ತಾಣವಾದ ದುಬೈನಲ್ಲಿ ನಡೆಯಲಿವೆ. ಒಂದೊಮ್ಮೆ ಭಾರತವು ಸೆಮಿಫೈನಲ್ ಮತ್ತು ಫೈನಲ್ ತಲುಪಿದರೆ ಆ ಪಂದ್ಯಗಳಿಗೆ ದುಬೈ ಆತಿಥ್ಯ ವಹಿಸುವುದು. ಭಾರತ ಮತ್ತು ಪಾಕ್ ತಂಡಗಳು ಎ ಗುಂಪಿನಲ್ಲಿವೆ.. ಈ ಗುಂಪಿನಲ್ಲಿ ನ್ಯೂಜಿಲೆಂಡ್ ಮತ್ತು ಬಾಂಗ್ಲಾದೇಶ ತಂಡಗಳೂ ಇವೆ. ಬಿ ಗುಂಪಿನಲ್ಲಿ ದಕ್ಷಿಣ ಆಫ್ರಿಕಾ, ಆಸ್ಟ್ರೇಲಿಯಾ, ಅಫ್ಗಾನಿಸ್ತಾನ ಮತ್ತು ಇಂಗ್ಲೆಂಡ್ ತಂಡಗಳು ಆಡಲಿವೆ. ಭಾರತ ತಂಡವು ತನ್ನ ಎಲ್ಲ ಪಂದ್ಯಗಳನ್ನೂ ದುಬೈನಲ್ಲಿಯೇ ಆಡಲಿದೆ

ಟೂರ್ನಿಯು ಫೆಬ್ರುವರಿ 19ರಿಂದ ಆರಂಭವಾಗಲಿದೆ. ಕರಾಚಿಯಲ್ಲಿ ನಡೆಯುವ ಮೊದಲ ಪಂದ್ಯದಲ್ಲಿ ಪಾಕಿಸ್ತಾನ ಮತ್ತು ನ್ಯೂಜಿಲೆಂಡ್ ತಂಡಗಳು ಹಣಾಹಣಿ ನಡೆಸಲಿವೆ. ಫೈನಲ್ ಪಂದ್ಯವು ಮಾರ್ಚ್ 9ರಂದು ನಡೆಯುತ್ತದೆ. ಭಾರತ ತಂಡವು ತನ್ನ ಮೊದಲ ಪಂದ್ಯದಲ್ಲಿ ಬಾಂಗ್ಲಾದೇಶ (ಫೆ 20) ತಂಡವನ್ನು ಎದುರಿಸಲಿದೆ. ಈ ಏಕದಿನ ಕ್ರಿಕೆಟ್ ಟೂರ್ನಿಯಲ್ಲಿ 15 ಪಂದ್ಯಗಳು ನಡೆಯಲಿವೆ. ಅದರಲ್ಲಿ 10 ಪಂದ್ಯಗಳು ಪಾಕಿಸ್ತಾನದಲ್ಲಿ ಆಯೋಜನೆಗೊಳ್ಳಲಿವೆ. ರಾವಲ್ಪಿಂಡಿ, ಲಾಹೋರ್ ಮತ್ತು ಕರಾಚಿಯಲ್ಲಿ ಪಂದ್ಯಗಳು ನಡೆಯಲಿವೆ.

‘ಭಾರತ ತಂಡವು ಅರ್ಹತೆ ಗಿಟ್ಟಿಸದಿದ್ದರೆ ಫೈನಲ್ ಪಂದ್ಯವು ಲಾಹೋರ್‌ನಲ್ಲಿ ನಡೆಯುವುದು. ಫೈನಲ್ ಮತ್ತು ಸೆಮಿಫೈನಲ್ ಪಂದ್ಯಗಳಿಗೆ ಕಾಯ್ದಿಟ್ಟ ದಿನಗಳಿವೆ’ ಎಂದು ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಪ್ರಕಟಣೆಯಲ್ಲಿ ತಿಳಿಸಿದೆ.

ಚಾಂಪಿಯನ್ಸ್ ಟ್ರೋಫಿ ವೇಳಾಪಟ್ಟಿ

ದಿನಾಂಕ	ತಂಡಗಳು	ಸ್ಥಳ
ಫೆ.19	ಪಾಕಿಸ್ತಾನ–ನ್ಯೂಜಿಲೆಂಡ್	ಕರಾಚಿ
ಫೆ.20	ಬಾಂಗ್ಲಾದೇಶ–ಭಾರತ	ದುಬೈ
ಫೆ.21	ಅಫ್ಗಾನಿಸ್ತಾನ–ದಕ್ಷಿಣ ಆಫ್ರಿಕಾ	ಕರಾಚಿ
ಫೆ.22	ಆಸ್ಟ್ರೇಲಿಯಾ–ಇಂಗ್ಲೆಂಡ್	ಲಾಹೋರ್
ಫೆ.23	ಭಾರತ–ಪಾಕಿಸ್ತಾನ	ದುಬೈ
ಫೆ.24	ಬಾಂಗ್ಲಾದೇಶ–ನ್ಯೂಜಿಲೆಂಡ್	ರಾವಲ್ಪಿಂಡಿ
ಫೆ.25	ಆಸ್ಟ್ರೇಲಿಯಾ–ದಕ್ಷಿಣ ಆಫ್ರಿಕಾ	
ಫೆ.26	ಅಫ್ಗಾನಿಸ್ತಾನ–ಇಂಗ್ಲೆಂಡ್	ಲಾಹೋರ್
ಫೆ.27	ಪಾಕಿಸ್ತಾನ–ಬಾಂಗ್ಲಾದೇಶ	ರಾವಲ್ಪಿಂಡಿ
ಫೆ.28	ಅಫ್ಗಾನಿಸ್ತಾನ–ಆಸ್ಟ್ರೇಲಿಯಾ	ಲಾಹೋರ್
ಮಾ.1	ದಕ್ಷಿಣ ಆಫ್ರಿಕಾ–ಇಂಗ್ಲೆಂಡ್	ಕರಾಚಿ
ಮಾ.2	ನ್ಯೂಜಿಲೆಂಡ್–ಭಾರತ	ದುಬೈ
ಮಾ.4	ಸೆಮಿಫೈನಲ್ 1	ದುಬೈ
ಮಾ.5	ಸೆಮಿಫೈನಲ್ 2	ಲಾಹೋರ್
ಮಾ.9	ಫೈನಲ್	ಲಾಹೋರ್
ಮಾ.10	ಮೀಸಲು ದಿನ	

ಭಾರತ ಫೈನಲ್ ತಲುಪಿದರೆ ದುಬೈನಲ್ಲಿ ಪಂದ್ಯ ನಡೆಯಲಿದೆ

ರಾಜತಾಂತ್ರಿಕ ಕಾರಣಗಳಿಗಾಗಿ ಭಾರತ ತಂಡಕ್ಕೆ ಪಾಕಿಸ್ತಾನದಲ್ಲಿ ಆಡಲು ಕೇಂದ್ರಸರ್ಕಾರದಿಂದ ಅನುಮತಿ ದೊರೆತಿಲ್ಲ. ಆದ್ದರಿಂದ ಹೈಬ್ರಿಡ್ ಮಾದರಿಯಲ್ಲಿ ಟೂರ್ನಿ ನಡೆಯಲಿದೆ. ಹೋದ ವರ್ಷ ಭಾರತದ ಆತಿಥ್ಯದಲ್ಲಿ ಏಕದಿನ ವಿಶ್ವಕಪ್ ಟೂರ್ನಿ ನಡೆದ ಸಂದರ್ಭದಲ್ಲಿ ಪಾಕಿಸ್ತಾನ ತಂಡವು ಆಡಿತ್ತು.

ಪರ್ವ್ ಚೌಧರಿಗೆ 2 ಕಂಚಿನ ಪದಕ

ದೋಹಾ (ಪಿಟಿಐ): ಭಾರತದ ಪರ್ವ್ ಚೌಧರಿ, ಏಷ್ಯನ್ ಯೂತ್ ಮತ್ತು ಜೂನಿಯರ್ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ 96 ಕೆ.ಜಿ. ವಿಭಾಗದಲ್ಲಿ ಎರಡು ಕಂಚಿನ ಪದಕಗಳನ್ನು ಗೆದ್ದುಕೊಂಡರು. ಚೌಧರಿ ಅವರು ಕ್ಲೀನ್ ಮತ್ತು ಜರ್ಕ್ ವಿಭಾಗಗಳಲ್ಲಿ ಪದಕಗಳನ್ನು ಪಡೆದರು.

ಆರ್ಚರಿ: ಆಯ್ಕೆ ಟ್ರಯಲ್ಸ್ 29ರಂದು

ಬೆಂಗಳೂರು: ಕರ್ನಾಟಕ ಜೂನಿಯರ್ ಆರ್ಚರಿ ತಂಡದ ಆಯ್ಕೆ ಟ್ರಯಲ್ಸ್ ಇದೇ 29ರಂದು ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ.

ಪಶ್ಚಿಮ ಬಂಗಾಳದ ಬೋಲಾಪುರದಲ್ಲಿ ಮುಂದಿನ ವರ್ಷ ಫೆಬ್ರುವರಿಯಲ್ಲಿ ನಡೆಯಲಿರುವ ಎನ್‌ಟಿಪಿಸಿ ಜೂನಿಯರ್ ರಾಷ್ಟ್ರೀಯ ಆರ್ಚರಿ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸುವ ಕರ್ನಾಟಕ ತಂಡಗಳನ್ನು ಇಲ್ಲಿ ಆಯ್ಕೆ ಮಾಡಲಾಗುವುದು. 2004ರ ಜನವರಿ 1ರ ನಂತರ ಜನಿಸಿದವರು ಟ್ರಯಲ್ಸ್‌ನಲ್ಲಿ ಹಾಜರಾಗಬೇಕು. ವಿವರಗಳಿಗೆ ಕರ್ನಾಟಕ ಅಮೆಚೂರ್ ಆರ್ಚರಿ ಸಂಸ್ಥೆ ಕಾರ್ಯದರ್ಶಿ ಟಿ. ಅನಂತರಾಜು (080–22275656) ಅವರನ್ನು ಸಂಪರ್ಕಿಸಬೇಕು.

ಮಹಿಳಾ ಕ್ರಿಕೆಟ್: ಸ್ಮೃತಿ, ಪ್ರತೀಕಾ, ಜೆಮಿಮಾ ಅರ್ಧಶತಕ

ಹರ್ಲಿನ್ ಶತಕ: ಸರಣಿ ಭಾರತದ ಕೈವಶ

ವಡೋದರ (ಪಿಟಿಐ): ಹರ್ಲಿನ್ ಡಿಯೊಲ್ ಅಬ್ಬರದ ಶತಕದ ಬಲದಿಂದ ಭಾರತ ಮಹಿಳಾ ಕ್ರಿಕೆಟ್ ತಂಡವು ವೆಸ್ಟ್ ಇಂಡೀಸ್ ಎದುರಿನ ಎರಡನೇ ಏಕದಿನ ಪಂದ್ಯದಲ್ಲಿ ಜಯಭೇರಿ ಬಾರಿಸಿತು.

ಕೋತಂಬಿ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಹರ್ಲಿನ್ (115; 103ಎ, 4X16) ಅವರ ಶತಕದ ಬಲದಿಂದ ಭಾರತ ತಂಡವು 115 ರನ್‌ಗಳಿಂದ ಗೆದ್ದಿತು. ಮೂರು ಪಂದ್ಯಗಳ ಸರಣಿಯನ್ನು 2–0 ಯಿಂದ ಕೈವಶ ಮಾಡಿಕೊಂಡಿತು.

ಟಾಸ್ ಗೆದ್ದ ಆತಿಥೇಯ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ತಂಡವು 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 358 ರನ್ ಗಳಿಸಿತು. ಗುರಿ ಬೆನ್ನಟ್ಟಿದ ವಿಂಡೀಸ್ ತಂಡವು 46.2 ಓವರ್‌ಗಳಲ್ಲಿ 243 ರನ್ ಗಳಿಸಿ ಆಲೌಟ್ ಆಯಿತು. ನಾಯಕಿ ಹೆಯಲಿ ಮ್ಯಾಥ್ಯೂಸ್ (106; 109ಎ, 4X13) ಶತಕ ಬಾರಿಸಿದರು. ಆದರೆ ಉಳಿದ ಬ್ಯಾಟರ್‌ಗಳ ದೀರ್ಘ ಇನಿಂಗ್ಸ್ ಆಡಲಿಲ್ಲ.

ಭಾರತದ ಬ್ಯಾಟಿಂಗ್‌ಗೆ ದೀರ್ಘ ಜೊತೆಯಾಟಗಳು ಶಕ್ತಿ ತುಂಬಿದವು. ಆರಂಭಿಕ ಜೋಡಿ ಸ್ಮೃತಿ ಮಂದಾನ (53; 47ಎ) ಮತ್ತು ಪ್ರತೀಕಾ ರಾವಳ್ (76; 86ಎ) ಮೊದಲ ವಿಕೆಟ್ ಜೊತೆಯಾಟದಲ್ಲಿ 110 ರನ್ ಸೇರಿಸಿದರು. ಕಳೆದ ಪಂದ್ಯದಲ್ಲಿ ಸ್ಮೃತಿ ಶತಕ ಬಾರಿಸಿದ್ದರು. ಈ ಪಂದ್ಯದಲ್ಲಿಯೂ ಅವರು ಉತ್ತಮ ಲಯದಲ್ಲಿದ್ದರು. ಏಳು ಬೌಂಡರಿ ಮತ್ತು 2 ಸಿಕ್ಸರ್ ಬಾರಿಸಿದರು. ಆದರೆ 17ನೇ ಓವರ್‌ನಲ್ಲಿ ಫೀಲ್ಡರ್ ಕರಿಷ್ಮಾ ಮತ್ತು ಕ್ಯಾಂಪ್‌ಬೆಲ್ ಅವರ ಚುರುಕಾದ ಫೀಲ್ಡಿಂಗ್‌ನಲ್ಲಿ ಸ್ಮೃತಿ ರನ್‌ಔಟ್ ಆದರು.

ಕ್ರೀಸ್‌ಗೆ ಬಂದ ಹರ್ಲಿನ್ ಅವರು ಏಕದಿನ ಕ್ರಿಕೆಟ್‌ನಲ್ಲಿ ತಮ್ಮ ಚೊಚ್ಚಲ ಶತಕ ಗಳಿಸಿದರು. 16 ಬೌಂಡರಿ ಹೊಡೆದರು. ಅವರ ಆಟದ ಭರಾಟೆಗೆ ಬೌಲರ್‌ಗಳು ಬಸವಳಿದರು. ಹರ್ಲಿನ್ ಅವರು ಮೂರು ಜೊತೆಯಾಟಗಳಲ್ಲಿ ಪಾಲುದಾರರಾದರು.

2ನೇ ವಿಕೆಟ್ ಜೊತೆಯಾಟದಲ್ಲಿ ಹರ್ಲಿನ್ ಮತ್ತು ಪ್ರತೀಕಾ 62 ರನ್ ಸೇರಿಸಿದರು. 3ನೇ ವಿಕೆಟ್ ಜೊತೆಯಾಟದಲ್ಲಿ ಹರ್ಲಿನ್ ಮತ್ತು ನಾಯಕಿ ಹರ್ಮನ್‌ಪ್ರೀತ್ ಕೌರ್ ಜೊತೆಗೆ 43 ರನ್ ಸೇರಿಸಿದರು. ಹರ್ಮನ್ ಔಟಾದಾಗ ಕ್ರೀಸ್‌ಗೆ ಬಂದ ಜೆಮಿಮಾ ಅವರೊಂದಿಗೆ ಹರ್ಲಿನ್ ಶತಕದ ಜೊತೆಯಾಟ (116 ರನ್) ಆಡಿದರು. ಇದರಿಂದಾಗಿ ತಂಡದ ಮೊತ್ತವು ತ್ರಿಶತಕದ ಗಡಿ ದಾಟಿತು.

ಸಂಕ್ಷಿಪ್ತ ಸ್ಕೋರು: ಭಾರತ: 50 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 358 (ಸ್ಮೃತಿ ಮಂದಾನ 53, ಪ್ರತೀಕಾ ರಾವಳ್ 76, ಹರ್ಲಿನ್ ಡಿಯೊಲ್ 115, ಹರ್ಮನ್‌ಪ್ರೀತ್ ಕೌರ್ 22, ಜೆಮಿಮಾ ರಾಡ್ರಿಗಸ್ 52, ರಿಚಾ ಘೋಷ್ ಔಟಾಗದೆ 13, ದಿಯಾಂದ್ರ ಡಾಟಿನ್ 53ಕ್ಕೆ1, ಎಫೈ ಫ್ಲೆಚರ್ 38ಕ್ಕೆ1) ವೆಸ್ಟ್ ಇಂಡೀಸ್: 46.2 ಓವರ್‌ಗಳಲ್ಲಿ 243 (ಹೆಯಲಿ ಮ್ಯಾಥ್ಯೂಸ್ 106, ಕಿಯಾನಾ ಜೋಸೆಫ್ 15, ಶೆಮೈನ್ ಕ್ಯಾಂಪ್‌ಬೆಲ್ 38, ಝೈದಾ ಜೇಮ್ಸ್ 25, ಎಫೈ ಫ್ಲೆಚರ್ 22, ದೀಪ್ತಿ ಶರ್ಮಾ 40ಕ್ಕೆ2, ತಿತಾಸ್ ಸಾಧು 42ಕ್ಕೆ2, ಪ್ರಿಯಾ ಮಿಶ್ರಾ 49ಕ್ಕೆ3, ಪ್ರತೀಕಾ ರಾವಳ್ 37ಕ್ಕೆ2) ಫಲಿತಾಂಶ: ಭಾರತ ತಂಡಕ್ಕೆ 115 ರನ್ ಜಯ. **ಪಂದ್ಯದ ಆಟಗಾರ್ತಿ: ಹರ್ಲಿನ್ ಡಿಯೊಲ್**



ಹರ್ಲಿನ್ ಡಿಯೊಲ್

ಕಬಡ್ಡಿ: ಮೂರನೇ ಸ್ಥಾನಕ್ಕೇರಿದ ಯೋಧಾಸ್

ಪುಣೆ (ಪಿಟಿಐ): ಯು.ಪಿ. ಯೋಧಾಸ್ ತಂಡ ಪ್ರೊ ಕಬಡ್ಡಿ ಲೀಗ್‌ನ ತನ್ನ ಕೊನೆಯ ಲೀಗ್ ಪಂದ್ಯದಲ್ಲಿ 44–30 ಅಂಕಗಳಿಂದ ಬೆಂಗಳೂರು ಬುಲ್ಸ್ ತಂಡವನ್ನು ಮಣಿಸಿತು. ಈ ಮೂಲಕ ಯೋಧಾಸ್ ತಂಡ ಲೀಗ್‌ನಲ್ಲಿ 79 ಅಂಕಗಳೊಡನೆ ಮೂರನೇ ಸ್ಥಾನ ಪಡೆಯಿತು.

ಕೊನೆಯ ಸ್ಥಾನ ಪಡೆದ ಬುಲ್ಸ್ 22 ಪಂದ್ಯಗಳಲ್ಲಿ 19ನೇ ಸೋಲು ಕಂಡಿತು. ಆದರೆ ತಂಡದ ನಾಯಕ ಹಾಗೂ ಪಿಕೆಎಲ್ ದಂತಕತೆಯಾಗಿರುವ ಪ್ರದೀಪ್ ನರ್ವಾಲ್ 1,800 ರೇಡ್ ಪಾಯಿಂಟ್‌ಗಳ ಅಸಾಧಾರಣ ಮೈಲಿಗಲ್ಲು ತಲುಪಿದರು. ಈ ಪಂದ್ಯದಲ್ಲಿ ಅವರು 6 ಅಂಕ ಗಳಿಸಿದರು.

ಯೋಧಾಸ್ ತಂಡ ಈ ಪಂದ್ಯದಲ್ಲಿ ಪ್ರಮುಖ ರೇಡರ್ ಗಗನ್ ಗೌಡ ಅವರನ್ನು ಕಣಕ್ಕಿಳಿಸಲಿಲ್ಲ. ಶಿವಂ ಚೌಧರಿ ಆಲ್‌ರೌಂಡ್ ಪ್ರದರ್ಶನ ನೀಡಿ 13 ಅಂಕ ಗಳಿಸಿದರು.

ಯು ಮುಂಬಾ ಇನ್ನೊಂದು ಪಂದ್ಯದಲ್ಲಿ 36–27 ಅಂಕಗಳಿಂದ ಬೆಂಗಾಲ್ ವಾರಿಯರ್ಸ್ ತಂಡವನ್ನು ಸೋಲಿಸಿ 71 ಪಾಯಿಂಟ್‌ಗಳೊಡನೆ ಐದನೇ ಸ್ಥಾನ ಪಡೆಯಿತು.

ನಾಳೆ ಎಲಿಮಿನೇಟರ್ ಪಂದ್ಯಗಳು: ಯುಪಿ ಯೋಧಾಸ್ ಗುರುವಾರ ನಡೆಯುವ ಮೊದಲ ಎಲಿಮಿನೇಟರ್ ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ (70 ಅಂಕ) ವಿರುದ್ಧ ಆಡಲಿದೆ. ಯು ಮುಂಬಾ ತಂಡ ಎರಡನೇ ಎಲಿಮಿನೇಟರ್ ಪಂದ್ಯದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಪಟ್ನಾ ಪೈರೇಟ್ಸ್ (77 ಅಂಕ) ವಿರುದ್ಧ ಆಡಲಿದೆ. ಮತ್ತೊಂದು ಪಂದ್ಯದಲ್ಲಿ ಯು ಮುಂಬಾ ತಂಡ ಬೆಂಗಾಲ್ ವಾರಿಯರ್ಸ್ 36–27 ಅಂಗಳಿಂದ ಗೆದ್ದುಕೊಂಡಿತು.

ಬೆಂಗಳೂರು ಬುಲ್ಸ್ ಮತ್ತು ಯುಪಿ ಯೋಧಾಸ್ ನಡುವಣ ಪಂದ್ಯದ ದೃಶ್ಯ.

ನನ್ನಿಂದಲೇ ಲೋಪವಾಗಿರಬಹುದು: ಮನು

ನವದೆಹಲಿ (ಪಿಟಿಐ): ‘ಧ್ಯಾನಚಂದ್ ಖೇಲ್ ರತ್ನ ಪ್ರಶಸ್ತಿಗಾಗಿ ಅರ್ಜಿ ಸಲ್ಲಿಸುವ ಪ್ರಕ್ರಿಯೆಯಲ್ಲಿ ನನ್ನಿಂದಲೇ ಲೋಪವಾಗಿರಬಹುದು’ ಎಂದು ಒಲಿಂಪಿಯನ್ ಶೂಟರ್ ಮನು ಭಾಕರ್ ಅವರು ಒಪ್ಪಿಕೊಂಡಿದ್ದಾರೆ.

ಶೂಟಿಂಗ್ ಫೆಡರೇಷನ್ ಪ್ರಶಸ್ತಿಗಾಗಿ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದ ಶಿಫಾರಸು ಪಟ್ಟಿಯಲ್ಲಿ ಮನು ಅವರ ಹೆಸರು ಇರದ ಕಾರಣ ಸೋಮವಾರ ವಿವಾದ ಭುಗಿಲೆದ್ದಿತ್ತು. ಪ್ಯಾರಿಸ್ ಒಲಿಂಪಿಕ್ಸ್ ಶೂಟಿಂಗ್‌ನಲ್ಲಿ ಅವರು ಎರಡು ಕಂಚಿನ ಪದಕ ಜಯಿಸಿದ್ದರು. ಒಂದೇ ಒಲಿಂಪಿಕ್ ಕೂಟದಲ್ಲಿ ಎರಡು ಪದಕ ಜಯಿಸಿದ ಸ್ವತಂತ್ರ ಭಾರತ ಮೊದಲ ಕ್ರೀಡಾಪಟು ಎಂಬ ಹೆಗ್ಗಳಿಕೆ ಅವರದ್ದು. ಮನು ಭಾಕರ್ ಅವರ ತಂದೆ ಮತ್ತು ವೈಯಕ್ತಿಕ ಕೋಚ್ ಅಸಮಾಧಾನ ವ್ಯಕ್ತಪಡಿಸಿದ ನಂತರ ವ್ಯಾಪಕ ಚರ್ಚೆ ಆರಂಭವಾಗಿತ್ತು.

‘ಪ್ರತಿಷ್ಠಿತ ಖೇಲ್ ರತ್ನ ಪ್ರಶಸ್ತಿಗೆ ನನ್ನ ಹೆಸರು ಶಿಫಾರಸು ಮಾಡದ ಕಾರಣ ಈಗ ಚರ್ಚೆ ನಡೆಯುತ್ತಿದೆ. ಒಬ್ಬ ಅಥ್ಲೀಟ್ ಆಗಿ ನನ್ನ ಕೆಲಸ ಆಡುವುದು ಮತ್ತು ದೇಶಕ್ಕಾಗಿ ಸಾಧನೆ ಮಾಡುವುದು. ನನ್ನಿಂದ ಪ್ರಕ್ರಿಯೆಯಲ್ಲಿ ಆಗಿರುವ ಲೋಪದಿಂದಾಗಿ ಈ ರೀತಿಯಾಗಿರಬಹುದು. ಅದನ್ನು ಸರಿಪಡಿಸಬಹುದು’ ಎಂದು ಮನು ಎಕ್ಸ್‌ನಲ್ಲಿ ಬರೆದಿದ್ದಾರೆ.

‘ಪುರಸ್ಕಾರ ಮತ್ತು ಮಾನ್ಯತೆಗಳು ನನ್ನನ್ನು ಹುರಿದುಂಬಿಸುತ್ತವೆ. ಆದರೆ ಅವುಗಳೇ ನನ್ನ ಗುರಿ ಅಲ್ಲ. ಪ್ರಶಸ್ತಿ ಗಿಂತ ಇನ್ನಷ್ಟು ಸ್ಪರ್ಧೆಗಳಲ್ಲಿ ಪದಕ ಜಯಿಸುವುದು ನನ್ನ ಗುರಿ’ ಎಂದೂ ಉಲ್ಲೇಖಿಸಿದ್ದಾರೆ.

ಮನು ಭಾಕರ್

ಫುಟ್‌ಬಾಲ್ : ಸ್ಟೂಡೆಂಟ್ಸ್ ಗೆಲುವು

ಬೆಂಗಳೂರು: ಎಂಫಾರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವು ಇಲ್ಲಿ ನಡೆಯುತ್ತಿರುವ ಬಿಡಿಎಫ್‌ಎ ಅರ್ಬನೈಸ್ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಜಯಿಸಿತು.

ಬೆಂಗಳೂರು ಫುಟ್‌ಬಾಲ್ ಮೈದಾನದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಸ್ಟೂಡೆಂಟ್ಸ್ 2–1ರಿಂದ ಎಎಸ್‌ಸಿ ಆ್ಯಂಡ್ ಸೆಂಟರ್ ತಂಡವನ್ನು ಮಣಿಸಿತು. ಸ್ಟೂಡೆಂಟ್ಸ್ ತಂಡದ ಅಮೀನ್ ಖಾಜೀರ್ (21ನೇ ನಿ) ಮತ್ತು ಮಲ್ಸವಮ್ ದವಾಂಗ್ ಕಿಮಾ (68ನಿ) ಮತ್ತು ಎಎಸ್‌ಸಿಯ ಕೃಷ್ಣಕಾಂತ ಸಿಂಗ್ (60ನಿ) ಗೋಲು ಗಳಿಸಿದರು.

ಪ್ರೊ ಕಬಡ್ಡಿ: ಯು.ಪಿ. ಯೋಧಾಸ್ ತಂಡದಲ್ಲಿ ಮಿಂಚುತ್ತಿರುವ ರಿಪ್ಪನ್‌ಪೇಟೆಯ ಪ್ರತಿಭೆ

‘ಈ ಬಾರಿ ಕಪ್ ನಮ್ಮದೇ’ ಎಂದ ಗಗನ್

• ಪ್ರದೀಶ್ ಎಚ್. ಮರೋಡಿ

ಬೆಂಗಳೂರು: ‘ಕಾಲೇಜು ದಿನಗಳಲ್ಲೇ ನಾನು ಬೆಂಗಳೂರು ಬುಲ್ಸ್ ತಂಡದ ಅಪ್ಪಟ ಅಭಿಮಾನಿ. ಅದೇ ತಂಡಕ್ಕೆ ಆಡುವ ಬಯಕೆಯಿತ್ತು. ಆದರೆ, ಆಕಸ್ಮಿಕವಾಗಿ ಯು.ಪಿ. ಯೋಧಾಸ್ ಕುಟುಂಬ ಸೇರಿದೆ. ಅಲ್ಲಿಯೂ ಪ್ರತಿಭಾ ಪ್ರದರ್ಶನಕ್ಕೆ ಸೂಕ್ತ ವೇದಿಕೆ ದೊರಕಿದೆ. ಸತತ 9 ಪಂದ್ಯ ಗಳಿಂದ ಅಜೇಯವಾಗಿರುವ ನಮ್ಮ ತಂಡವು ಪ್ರೊ ಕಬಡ್ಡಿ ಲೀಗ್‌ನ 11ನೇ ಆವೃತ್ತಿಯಲ್ಲಿ ಚೊಚ್ಚಲ ಪ್ರಶಸ್ತಿಯನ್ನು ಎದುರು ನೋಡುತ್ತಿದೆ...’

ಇದು ಯು.ಪಿ. ಯೋಧಾಸ್ ತಂಡದ ಉದಯೋನ್ಮುಖ ರೇಡರ್, ಕನ್ನಡಿಗ ಗಗನ್ ಗೌಡ ಮಾತು. ಶಿವಮೊಗ್ಗ ಜಿಲ್ಲೆಯ ಹೊಸನಗರ ತಾಲ್ಲೂಕು ರಿಪ್ಪನ್‌ಪೇಟೆ ಸಮೀಪದ ಹಾಲುಗುಡ್ಡೆ ಗ್ರಾಮದ ಪ್ರತಿಭೆಯಾಗಿರುವ 21 ವರ್ಷ ವಯಸ್ಸಿನ ಗಗನ್, ಪ್ರಸ್ತುತ ಪ್ರೊ ಕಬಡ್ಡಿ ಲೀಗ್‌ನ 16 ಪಂದ್ಯಗಳಲ್ಲಿ 131 ಅಂಕ ಕಲೆಹಾಕಿ ಯಶಸ್ವಿ ರೇಡರ್ ಎನಿಸಿದ್ದಾರೆ. ಬೋನಸ್ ಕದಿಯುವುದರಲ್ಲಿ ನಿಸ್ಸೀಮನಾಗಿರುವ 6.4 ಅಡಿ ಎತ್ತರದ ಭರವಸೆಯ ಆಟಗಾರ, ಆರು ಬಾರಿ ‘ಸೂಪರ್ 10’ ಸಾಧನೆ ಮೆರೆದಿದ್ದಾರೆ. ಅವರೊಂದಿಗೆ ‘ಪ್ರಜಾವಾಣಿ’ ನಡೆಸಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ.

• ನಿಮಗೆ ಕಬಡ್ಡಿ ಕ್ರೀಡೆಯಲ್ಲಿ ಆಸಕ್ತಿ ಬೆಳೆದಿದ್ದು ಹೇಗೆ?

ನನ್ನ ಸಹೋದರರು ಕಬಡ್ಡಿ ಆಟಗಾರರು. ಸ್ಥಳೀಯ ಟೂರ್ನಿಗಳಲ್ಲಿ ಅವರು ಆಡುವಾಗ ನೋಡಲು ನಾನು ಹೋಗುತ್ತಿದ್ದೆ. ಕ್ರಮೇಣ ನನಗೂ ಈ ಆಟದಲ್ಲಿ ಆಸಕ್ತಿ ಬೆಳೆಯಿತು. 13 ವರ್ಷ ವಯಸ್ಸಿನಲ್ಲಿ ಆಡಲು ಆರಂಭಿಸಿದೆ. ಪ್ರೌಢಶಾಲೆಯಲ್ಲಿದ್ದಾಗ ಜಿಲ್ಲಾ ಮಟ್ಟ, ರಾಜ್ಯ ಮಟ್ಟವನ್ನು ಪ್ರತಿನಿಧಿಸಿದೆ. ನಂತರ ಪಿಯುಸಿಯಲ್ಲಿ ಉಜಿರೆಯ ಎಸ್.ಡಿ.ಎಂ ಕಾಲೇಜು ಸೇರಿದ ಬಳಿಕ ನನ್ನ ಕ್ರೀಡಾಸಕ್ತಿಗೆ ಮತ್ತಷ್ಟು ಪ್ರೋತ್ಸಾಹ ದೊರೆಯಿತು.

• ಯು.ಪಿ. ಯೋಧಾಸ್ ತಂಡಕ್ಕೆ ಆಯ್ಕೆಯಾಗಿದ್ದು ಹೇಗೆ?

ಎರಡು ವರ್ಷಗಳ ಹಿಂದೆ ಯುವ ಕಬಡ್ಡಿ ಸೀರಿಸ್‌ನಲ್ಲಿ ನಾನು ಹಂಪಿ ಹೀರೋಸ್ ತಂಡದಲ್ಲಿದ್ದೆ. ಅಲ್ಲಿ 23 ಪಂದ್ಯಗಳಲ್ಲಿ 262 ಪಾಯಿಂಟ್ಸ್ ಗಳಿಸಿದ್ದೆ. ಅದು ಎರಡನೇ ಗರಿಷ್ಠ ಸ್ಕೋರ್ ಆಗಿತ್ತು. ಅಲ್ಲಿ ನನ್ನ ಆಟವನ್ನು ಯೋಧಾಸ್ ತಂಡದವರು ನೋಡಿ, ಕಳೆದ ವರ್ಷ ತಂಡಕ್ಕೆ ಕರೆಸಿಕೊಂಡರು. ನಾನು ಬುಲ್ಸ್ ತಂಡಕ್ಕೆ ಆಡುವ ಕನಸು ಕಂಡವನು. ಅಲ್ಲಿ ಅವಕಾಶ ಸಿಗದಿದ್ದಾಗ ದೊರೆತ ಅವಕಾಶವನ್ನು ಬಳಸಿಕೊಂಡು, ಉತ್ತಮ ಪ್ರದರ್ಶನ ನೀಡಲು ಪ್ರಯತ್ನಿಸುತ್ತಿದ್ದೇನೆ.

• ಯೋಧಾಸ್ ತಂಡದಲ್ಲಿ ಪ್ರೋತ್ಸಾಹ ಹೇಗಿದೆ?

ತಂಡದಲ್ಲಿ ಎಲ್ಲಾ ಆಟಗಾರರಿಗೂ ಪ್ರೋತ್ಸಾಹದ ವಾತಾವರಣವಿದೆ. ಕಳೆದ ಆವೃತ್ತಿಯಲ್ಲೇ ನಾನು 13 ಪಂದ್ಯಗಳಿಂದ 92 ಅಂಕ ಗಳಿಸಿ ತಂಡದ ವಿಶ್ವಾಸ ಗಳಿಸಿದ್ದೆ. ಪ್ರಮುಖ ಆಟಗಾರರು ಟೂರ್ನಿಯ ವೇಳೆ ಗಾ ಯಗೊಂಡ ಕಾರಣ ತಂಡವು 11ನೇ ಸ್ಥಾನ ಪಡೆಯಿತು. ಆದರೆ, ಈ ಬಾರಿ ಉತ್ತಮ ಸಂಯೋಜನೆಯಿಂದ ಕೂಡಿದೆ. ನಾನೂ ತಂಡದ ಶಿಬಿರದಲ್ಲಿ ಆರು ತಿಂಗಳು ತರಬೇತಿ ಪಡೆದೆ. ಹೀಗಾಗಿ ಆತ್ಮವಿಶ್ವಾಸ ವೃದ್ಧಿಯಾಗಿ ಈ ಬಾರಿ ಉತ್ತಮ ಫಲಿತಾಂಶ ನೀಡಲು ಸಾಧ್ಯವಾಗಿದೆ.

• ಈ ಆವೃತ್ತಿಯಲ್ಲಿ ಯೋಧಾಸ್‌ಗೆ ಎಷ್ಟನೇ ಸ್ಥಾನ ನಿರೀಕ್ಷೆ ಮಾಡಬಹುದು?

ನಮ್ಮ ತಂಡವು ಗುಂಪು ಹಂತದ ಕೊನೆಯ ಪಂದ್ಯಗಳಲ್ಲಿ ಉತ್ತಮ ಪ್ರದರ್ಶನ ನೀಡುತ್ತಾ ಬಂದಿದೆ (ತಂಡವು 21ರಲ್ಲಿ 12 ಪಂದ್ಯ ಗೆದ್ದು 74 ಅಂಕ ಗಳಿಸಿ ಅಂಕಪಟ್ಟಿಯಲ್ಲಿ ನಾಲ್ಕನೇ ಸ್ಥಾನದಲ್ಲಿದೆ). ಸತತ 9 ಪಂದ್ಯಗಳಿಂದ ಅಜೇಯವಾಗಿದೆ. ಅಗ್ರಸ್ಥಾನದಲ್ಲಿರುವ ಹರಿಯಾಣ ಸ್ಟೀಲರ್ಸ್ ತಂಡವನ್ನೂ ಮಣಿಸಿದೆ. ಕೊನೆಯ ಲೀಗ್ ಪಂದ್ಯದಲ್ಲಿ ಬೆಂಗಳೂರು ಬುಲ್ಸ್ ವಿರುದ್ಧ ಗೆದ್ದು ಮೂರನೇ ಸ್ಥಾನಕ್ಕೇರಿದ್ದೇವೆ. ರೇಡಿಂಗ್, ಡಿಫೆಂಡಿಂಗ್ ಸೇರಿದಂತೆ ಎಲ್ಲಾ ವಿಭಾಗವು ಬಲಿಷ್ಠವಾಗಿರುವುದರಿಂದ ಚೊಚ್ಚಲ ಪ್ರಶಸ್ತಿಯ ನಿರೀಕ್ಷೆ ನಮ್ಮದು.

• ಪ್ರೊ ಕಬಡ್ಡಿ ಲೀಗ್ ಬಗ್ಗೆ ನಿಮ್ಮ ಅಭಿಪ್ರಾಯ?

ಪ್ರೊ ಕಬಡ್ಡಿ ಲೀಗ್ ಬಂದ ಬಳಿಕ ಕಬಡ್ಡಿ ಬಗ್ಗೆ ಜನರ ಮನಸ್ಥಿತಿ ಬದಲಾಗಿದೆ. ಆಟಗಾರರಿಗೂ ಸ್ಟಾರ್ ಪಟ್ಟ ದೊರೆಯುತ್ತಿದೆ. ಅಲ್ಲದೆ, ಸಾಕಷ್ಟು ಮಂದಿಗೆ ಇದರಿಂದ ಆದಾಯ, ಜೀವನ, ಉದ್ಯೋಗ ದೊರೆಯುತ್ತಿದೆ. ಇಲ್ಲಿ ಮಿಂಚಿದವರು ರಾಷ್ಟ್ರೀಯ ತಂಡಕ್ಕೂ ಆಯ್ಕೆಯಾಗುತ್ತಿದ್ದಾರೆ.



ಪ್ರೊ ಕಬಡ್ಡಿ ಪಂದ್ಯದಲ್ಲಿ ಗಗನ್ ಗೌಡ

ಕಿರ್ಮಾನಿಯ ‘ಸ್ಟಂಪ್ಡ್’ ಕೃತಿ ಬಿಡುಗಡೆ 29ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಕ್ರಿಕೆಟ್ ಕ್ಷೇತ್ರದ ದಿಗ್ಗಜ ವಿಕೆಟ್‌ಕೀಪರ್–ಬ್ಯಾಟರ್ ಸೈಯದ್ ಮುಜ್ತಾಬಾ ಹುಸೇನ್ ಕಿರ್ಮಾನಿ ಅವರು ಇದೇ ತಿಂಗಳು 29ರಂದು 75ನೇ ವಸಂತಕ್ಕೆ ಕಾಲಿಡಲಿದ್ದಾರೆ. ಈ ಸಂದರ್ಭದಲ್ಲಿ ಅವರ ಆತ್ಮಚರಿತ್ರೆ ‘ಸ್ಟಂಪ್ಡ್ –ಲೈಫ್ ಬಿಹೈಂಡ್ ಆ್ಯಂಡ್ ಬಿಯಾಂಡ್ ದ 22 ಯಾರ್ಡ್ಸ್’ ಲೋಕಾರ್ಪಣೆಗೊಳ್ಳಲಿದೆ.

1983ರ ಕ್ರಿಕೆಟ್ ವಿಶ್ವಕಪ್ ಜಯಿಸಿದ ಭಾರತ ತಂಡದಲ್ಲಿ ವಿಕೆಟ್ ಕೀಪರ್ ಆಗಿದ್ದ ಬೆಂಗಳೂರಿನ ಕಿರ್ಮಾನಿ ಅವರ ಹೆಸರಿನಲ್ಲಿ ಹಲವು ದಾಖಲೆಗಳು ಇವೆ. ಚಿನ್ನಸ್ವಾಮಿ ಕ್ರೀಡಾಂಗಣದ ಪಿ2 ಹಾಲ್‌ನಲ್ಲಿ ಇದೇ 29ರಂದು ಬೆಳಿಗ್ಗೆ 11 ಗಂಟೆಗೆ ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಯಲಿದೆ.

‘ನನ್ನ ಸಹ ಆಟಗಾರರು, ಸ್ನೇಹಿತರಲ್ಲಿ ಬಹುತೇಕರು ತಮ್ಮ ಆತ್ಮಕಥೆಗಳನ್ನು ಪ್ರಕಟಿಸಿದ್ದಾರೆ. ಸುನಿಲ್ ಗಾವಸ್ಕರ್ ಅದರಲ್ಲಿ ಪ್ರಥಮರು. ಆದರೆ ನಾನೊಬ್ಬ ಮಾತ್ರ ಇದುವರೆಗೆ ಪುಸ್ತಕ ಬರೆಯುವುದರ ಕುರಿತು ಹೆಚ್ಚು ಯೋಚಿಸಿರಲಿಲ್ಲ. ಆದರೆ ಇದೀಗ ನನ್ನ ವೃತ್ತಿಜೀವನ ಮತ್ತು ವೈಯಕ್ತಿಕ ಜೀವನದ ಕುರಿತು ಕೃತಿ ರಚಿಸಬೇಕು ಎಂದು ಆಪ್ತರು ಮತ್ತು ಕುಟುಂಬದ ಒತ್ತಾಯ ಹೆಚ್ಚಿತ್ತು. ಯುವಪೀಳಿಗೆಗೆ ನನ್ನ ಅನುಭವಗಳನ್ನು ಈ ಪುಸ್ತಕದ ಮೂಲಕ ಪರಿಚಯಿಸುವ ಪ್ರಯತ್ನ ಮಾಡಿರುವೆ. ಈ ಕೃತಿ ರಚನೆಯಲ್ಲಿ ಪತ್ರಕರ್ತ ದಕ್ಷೇಶ್ ಪಾಠಕ್ ಮತ್ತು ಸಂಶೋಧಕರೂ ಆಗಿರುವ ದೇಬಶೀಷ್ ಸೇನ್ ಗುಪ್ತಾ ಅವರು ಸಹಲೇಖಕರಾಗಿ ನನಗೆ ಸಹಾಯ ಮಾಡಿದ್ದಾರೆ’ ಎಂದು ಕಿರ್ಮಾನಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

‘ನಾನು ಹುಟ್ಟಿದ್ದು ಚೆನ್ನೈನಲ್ಲಿ. ಬೆಳೆದಿದ್ದು, ಶಿಕ್ಷಣ ಪಡೆದಿದ್ದು, ಕ್ರಿಕೆಟಿಗನಾಗಿದ್ದು ಬೆಂಗಳೂರಿನಲ್ಲಿ. ನಾನು ದೇಶಿ ಮತ್ತು ಅಂತರರಾಷ್ಟ್ರೀಯ ಕ್ರಿಕೆಟ್ ಆಡುವಾಗಿನ ಹತ್ತಾರು ಅನುಭವಗಳನ್ನು ಈ ಕೃತಿಯಲ್ಲಿ ಉಲ್ಲೇಖಿಸಿರುವೆ. ನನ್ನ ನೆನಪುಗಳನ್ನು ಧ್ವನಿಮುದ್ರಿಸಿ ಈ ಇಬ್ಬರು ಲೇಖಕರಿಗೆ ಕಳಿಸುತ್ತಿದ್ದೆ. ಅವರು ಅದನ್ನು ಅಕ್ಷರರೂಪಕ್ಕೆ ಇಳಿಸಿದ್ದಾರೆ’ ಎಂದರು.

‘ಪುಸ್ತಕಕ್ಕೆ ಸುನಿಲ್ ಗಾವಸ್ಕರ್ ಮುನ್ನುಡಿ ಬರೆದಿದ್ದಾರೆ. ಭಾರತ ತಂಡದ ಮಾಜಿ ನಾಯಕ ಕಪಿಲ್ ದೇವ್ ಪುಸ್ತಕ ಬಿಡುಗಡೆ ಮಾಡುವರು. ಬಿ.ಎಸ್. ಚಂದ್ರಶೇಖರ್, ಯರಪಲ್ಲಿ ಪ್ರಸನ್ನ, ಜಿ.ಆರ್. ವಿಶ್ವನಾಥ್, ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ, ಜಾವಗಲ್ ಶ್ರೀನಾಥ್ ಸೇರಿದಂತೆ ಗಣ್ಯ ಕ್ರಿಕೆಟಿಗರು ಹಾಜರಿರುವರು. ಮುಖ್ಯಮಂತ್ರಿ ಸಿದ್ಧರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನೂ ಆಹ್ವಾನಿಸಲಾಗಿದೆ’ ಎಂದರು.

ಈ ಸಂದರ್ಭದಲ್ಲಿ ಹಾಜರಿದ್ದ ಲೇಖಕ ದಕ್ಷೇಶ್, ‘ಅವರು ಆಡಿದ ಹಲವು ಪಂದ್ಯಗಳನ್ನು ನಾನು ನೋಡಿದ್ದೇನೆ. ವರದಿ ಮಾಡಿದ್ದೇನೆ. ಕಿರ್ಮಾನಿ ಅವರು ಮೊದಲಿನಿಂದಲೂ ನೇರ ನಡೆ, ನುಡಿ ಮತ್ತು ಶಿಸ್ತಿನ ವ್ಯಕ್ತಿತ್ವದವರು. ಅವರು ಜಗತ್ತಿನ ಅಗ್ರಮಾನ್ಯ ವಿಕೆಟ್‌ಕೀಪರ್ ಆಗಿದ್ದಾರೆ. ಅವರು ಆಡಿದ ಕಾಲಘಟ್ಟದಲ್ಲಿ ಬಿ.ಎಸ್. ಚಂದ್ರಶೇಖರ್, ಯರಪಲ್ಲಿ ಪ್ರಸನ್ನ, ವೆಂಕಟರಾಘವನ್, ಬಿಷನ್ ಸಿಂಗ್ ಬೇಡಿ, ಮಣಿಂದರ್ ಸಿಂಗ್, ಶಿವರಾಮಕೃಷ್ಣನ್ ಅವರಂತಹ ಶ್ರೇಷ್ಠ ಸ್ಪಿನ್ನರ್‌ಗಳಿದ್ದರು. ಅವರೆಲ್ಲರಿಗೂ ವಿಕೆಟ್‌ಕೀಪಿಂಗ್ ಮಾಡುವುದು ದೊಡ್ಡ ಸವಾಲಾಗಿತ್ತು. ಆದರೆ ಕಿರ್ಮಾನಿ ಅವರ ಚುರುಕುತನ ಮತ್ತು ನಿಖರತೆಯ ಮುಂದೆ ಅದೊಂದು ಸವಾಲೇ ಆಗಿರಲಿಲ್ಲ’ ಎಂದರು.

ಸೈಯದ್ ಕಿರ್ಮಾನಿ